prajavani.net prajavani
ಬುಧವಾರ, ಮಾರ್ಚ್ 25, 2026 | ಬೆಂಗಳೂರು | ₹ 7.00 | ಸಂಪುಟ 79 | ಸಂಚಿಕೆ 83 | ಪುಟ 18
www.prajavani.net

ಟಿ20 ತಂಡಕ್ಕೆ ಕಶ್ವೀ
ವೇಗದ ಬೌಲರ್ ಕಶ್ವೀ ಗೌತಮ್ ಅವರು ದಕ್ಷಿಣ ಆಫ್ರಿಕಾ ಪ್ರವಾಸ ಕೈಗೊಳ್ಳುವ ಭಾರತ ಮಹಿಳಾ ಟಿ20 ಕ್ರಿಕೆಟ್ ತಂಡಕ್ಕೆ ಆಯ್ಕೆಯಾಗಿದ್ದಾರೆ



ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ
ಸ್ಕ್ಯಾನ್ ಮಾಡಿ

ಸೆನ್ಸೆಕ್ಸ್ 74,068 | ನಿಫ್ಟಿ 22,912 | $/₹ 93.76

ಮತಾಂತರ: ಎಸ್‌ಸಿ ಸ್ಥಾನಮಾನ ನಷ್ಟ

ಆಂಧ್ರಪ್ರದೇಶ ಹೈಕೋರ್ಟ್ ಆದೇಶ ಎತ್ತಿ ಹಿಡಿದ ಸುಪ್ರೀಂ ಕೋರ್ಟ್

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ಪರಿಶಿಷ್ಟ ಜಾತಿಗೆ (ಎಸ್‌ಸಿ) ಸೇರಿದ ವ್ಯಕ್ತಿಯು ಹಿಂದೂ, ಬೌದ್ಧ ಅಥವಾ ಸಿಖ್ ಧರ್ಮ ಹೊರತುಪಡಿಸಿ ಇತರ ಧರ್ಮಗಳಿಗೆ ಮತಾಂತರ ಗೊಂಡಲ್ಲಿ ಆತ/ಆಕೆಯ ಎಸ್‌ಸಿ ಸ್ಥಾನಮಾನ ನಷ್ಟವಾಗಲಿದೆ ಎಂದು ಸುಪ್ರೀಂ ಕೋರ್ಟ್ ಮಂಗಳವಾರ ಮಹತ್ವದ ತೀರ್ಪು ನೀಡಿದೆ.

ಹಿಂದೂ, ಸಿಖ್ ಅಥವಾ ಬೌದ್ಧ ಧರ್ಮಗಳನ್ನು ಹೊರತುಪಡಿಸಿ ಇತರ ಧರ್ಮಗಳಲ್ಲಿ ಶ್ರದ್ಧೆ-ನಂಬಿಕೆ ಹೊಂದಿರುವುದಾಗಿ ಘೋಷಿಸಿಕೊಳ್ಳುವ ವ್ಯಕ್ತಿಯು ಪರಿಶಿಷ್ಟ ಜಾತಿಗೆ (ಎಸ್‌ಸಿ) ಸೇರಿದವರು ಎಂದು ಪರಿಭಾವಿಸುವಂತಿಲ್ಲ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಪರಿಶಿಷ್ಟ ಪಂಗಡದವರ (ಎಸ್‌ಟಿ) ಮತಾಂತರಕ್ಕೆ ಸಂಬಂಧಪಟ್ಟಂತೆ ಈ ಆದೇಶವು ಅನ್ವಯಿಸದು. ಏಕೆಂದರೆ, ಎಸ್‌ಟಿ ಸ್ಥಾನಮಾನವು ಧರ್ಮ ಆಧಾರಿತವಾಗಿಲ್ಲ. ಈ ಪಂಗಡಕ್ಕೆ ಸೇರಿದವರು ಅನುಸರಿಸುವ ಸಂಪ್ರದಾಯ, ಜೀವನ ಪದ್ಧತಿ ಮತ್ತು ಸಂಬಂಧಿಸಿದ ಬುಡಕಟ್ಟು ಗುಂಪು ಈ ಸಮುದಾಯವನ್ನು ಹೇಗೆ ಸ್ವೀಕರಿಸುತ್ತದೆ ಎಂಬುದರ ಮೇಲೆ ಎಸ್‌ಟಿ ಸ್ಥಾನಮಾನ ನಿರ್ಧಾರವಾಗುತ್ತದೆ ಎಂದೂ ನ್ಯಾಯಪೀಠ ಸ್ಪಷ್ಟಪಡಿಸಿದೆ.

‘ಪರಿಶಿಷ್ಟ ಜಾತಿಗೆ ಸೇರಿದ ವ್ಯಕ್ತಿಯು ಇತರ ಧರ್ಮಕ್ಕೆ ಮತಾಂತರಗೊಂಡಾಗ ಆ ಕ್ಷಣವೇ ಹಾಗೂ ಸಂಪೂರ್ಣವಾಗಿ ಆತ/ಆಕೆ ಎಸ್‌ಸಿ ಸ್ಥಾನಮಾನವನ್ನು ಕಳೆದುಕೊಳ್ಳುವರು’ ಎಂಬ ಆಂಧ್ರ ಪ್ರದೇಶ ಹೈಕೋರ್ಟ್ ಆದೇಶವನ್ನು ಎತ್ತಿ ಹಿಡಿದು ತೀರ್ಪು ನೀಡಿದ ವೇಳೆ ಸುಪ್ರೀಂ ಕೋರ್ಟ್ ಈ ಮಾತು ಹೇಳಿದೆ.

‘ಯಾವುದೇ ವ್ಯಕ್ತಿಯು ಕ್ರೈಸ್ತ ಧರ್ಮ ಸ್ವೀಕರಿಸಿ, ಆ ಧರ್ಮದಲ್ಲಿ ಶ್ರದ್ಧೆ ಹೊಂದಿದ್ದಾಗಿ ಘೋಷಿಸಿ ಹಾಗೂ ಅದನ್ನು ಪಾಲನೆ ಮಾಡುವುದನ್ನು ಆರಂಭಿಸಿದ ಬಳಿಕ ಆ ವ್ಯಕ್ತಿಯು ಪರಿಶಿಷ್ಟ ಜಾತಿ ಸಮುದಾಯಕ್ಕೆ ಸೇರಿದವರು ಎಂಬುದಾಗಿ ಪರಿಗಣಿಸಲಾಗದು’ ಎಂದು ಆಂಧ್ರ ಪ್ರದೇಶ ಹೈಕೋರ್ಟ್ ಕಳೆದ ವರ್ಷ ಏಪ್ರಿಲ್ 30ರಂದು ಆದೇಶಿಸಿತ್ತು.

▶11

ಪೀಠ ಹೇಳಿದ್ದು

- 1950ರ ಸಾಂವಿಧಾನಿಕ (ಪರಿಶಿಷ್ಟ ಜಾತಿ) ಆದೇಶದ ನಿಬಂಧನೆ 3ರಡಿ ನಿರ್ದಿಷ್ಟವಾಗಿ ಉಲ್ಲೇಖ ಮಾಡಿರದ ಯಾವುದೇ ಧರ್ಮಕ್ಕೆ ಮತಾಂತರಗೊಂಡಲ್ಲಿ, ವ್ಯಕ್ತಿಯು ಎಸ್‌ಸಿ ಸ್ಥಾನಮಾನವನ್ನು ಆ ಕ್ಷಣವೇ ಕಳೆದುಕೊಳ್ಳುತ್ತಾರೆ
- ಧರ್ಮದ ವಿಚಾರವಾಗಿ 1950ರ ಸಾಂವಿಧಾನಿಕ (ಪರಿಶಿಷ್ಟ ಜಾತಿ) ಆದೇಶದ ನಿಬಂಧನೆ 3ರಡಿ ಹೇರಲಾಗಿರುವ ನಿಷೇಧ/ನಿರ್ಬಂಧವು ಸ್ಪಷ್ಟ ಹಾಗೂ ಪರಿಪೂರ್ಣವಾಗಿದೆ
- ಒಬ್ಬ ವ್ಯಕ್ತಿಯು 1950ರ ಸಾಂವಿಧಾನಿಕ (ಪರಿಶಿಷ್ಟ ಜಾತಿ) ಆದೇಶದ ನಿಬಂಧನೆ 3ರಡಿ ಉಲ್ಲೇಖಿಸಲಾದ ಧರ್ಮದ ಬದಲಾಗಿ ಬೇರೆ ಧರ್ಮದಲ್ಲಿ ಶ್ರದ್ಧೆ-ನಂಬಿಕೆ ಹೊಂದಿದ್ದಲ್ಲಿ, ತಾನು ಪಾಲಿಸುವ ಧರ್ಮಕ್ಕೆ ಸೇರಿರುವ ಜೊತೆಗೆ ಎಸ್‌ಸಿ ಸಮುದಾಯಕ್ಕೂ ತಾನು ಸೇರಿದ್ದಾಗಿ ಹೇಳಿಕೊಳ್ಳಲು ಅವಕಾಶ ಇಲ್ಲ
- ವೈಯಕ್ತಿಕ, ಸಾಮಾಜಿಕ ಮತ್ತು ಆಧ್ಯಾತ್ಮಿಕ ಉದ್ದೇಶಗಳಿಗಾಗಿ ಬೇರೊಂದು ಧರ್ಮವನ್ನು ಪಾಲನೆ ಮಾಡುವ ವ್ಯಕ್ತಿಯು, ಶಾಸನಬದ್ಧ ಪ್ರಯೋಜನಗಳನ್ನು ಪಡೆಯುವುದಕ್ಕಾಗಿ ತಾನು ಪರಿಶಿಷ್ಟ ಜಾತಿಗೂ ಸೇರಿದ್ದಾಗಿ ಹೇಳಿಕೊಳ್ಳಲು ಕಾನೂನಿನಲ್ಲಿ ಅವಕಾಶ ಇಲ್ಲ. ಈ ರೀತಿ ಹೇಳುವುದು ಸಂವಿಧಾನದ ಆಶಯಕ್ಕೆ ವಿರುದ್ಧವಾದುದು
- ಈ ಪ್ರಕರಣದಲ್ಲಿ, ಮೇಲ್ಮನವಿದಾರ ಕ್ರೈಸ್ತ ಧರ್ಮ ಪಾಲನೆ ಮಾಡುತ್ತಿದ್ದಾರೆ. 1950ರ ಸಾಂವಿಧಾನಿಕ (ಪರಿಶಿಷ್ಟ ಜಾತಿ) ಆದೇಶದ ನಿಬಂಧನೆ 3ರಡಿ ಕ್ರೈಸ್ತ ಧರ್ಮವನ್ನು ಉಲ್ಲೇಖಿಸಿಲ್ಲ. ಹೀಗಾಗಿ, ಅವರ ಮೂಲ ಜಾತಿ ಮಾದಿಗ ಆಗಿದ್ದರೂ, ಈಗ ಅವರು ಪರಿಶಿಷ್ಟ ಜಾತಿಗೆ ಸೇರಿದವರು ಎಂದು ಪರಿಭಾವಿಸಲು ಸಾಧ್ಯ ಇಲ್ಲ



ಪ್ರಕರಣವೇನು?

ಪರಿಶಿಷ್ಟ ಜಾತಿಗೆ ಸೇರಿದ ಚಿಂತಾಡ ಆನಂದ ಅವರು ಕ್ರೈಸ್ತ ಧರ್ಮಕ್ಕೆ ಮತಾಂತರಗೊಂಡ ಬಳಿಕ, ಆಂಧ್ರ ಪ್ರದೇಶದ ಹಳ್ಳಿಯೊಂದರಲ್ಲಿ ಪಾದ್ರಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

‘ಗ್ರಾಮದಲ್ಲಿ ಭಾನುವಾರ ಪ್ರಾರ್ಥನಾ ಸಭೆ ನಡೆಸುತ್ತಿದ್ದ ವೇಳೆ ಅಕ್ಕಲ ರಾಮಿ ರೆಡ್ಡಿ ನನ್ನ ಮೇಲೆ ಹಲ್ಲೆ ನಡೆಸಿದ್ದರು. ನನ್ನನ್ನು ಜಾತಿಯಿಂದ ಕರೆದು ನಿಂದಿಸಿದ್ದರು. ನನಗೆ ಹಾಗೂ ನನ್ನ ಕುಟುಂಬಕ್ಕೆ ಜೀವ ಬೆದರಿಕೆ ಹಾಕಿದ್ದರು’ ಎಂದು ಚಿಂತಾಡ ಆನಂದ ಅವರು 2021ರಲ್ಲಿ ರಾಮಿ ರೆಡ್ಡಿ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಿದ್ದರು.



ಐಪಿಸಿ ಹಾಗೂ ಎಸ್‌ಸಿ,ಎಸ್‌ಟಿ ವಿರುದ್ಧ ದೌರ್ಜನ್ಯ ತಡೆ ಕಾಯ್ದೆಯ ವಿವಿಧ ಸೆಕ್ಷನ್‌ಗಳಡಿ ದೂರು ನೀಡಿದ್ದ ಪಾದ್ರಿ ಅವರು, ಅಕ್ಕಲ ರಾಮಿ ರೆಡ್ಡಿ ವಿರುದ್ಧ ಕ್ರಮ ಕೈಗೊಳ್ಳುವಂತೆ ಮನವಿ ಮಾಡಿದ್ದರು.

‘ಭಾರತಕ್ಕೆ ಹೊರ್ಮುಜ್ ಜಲಸಂಧಿ ಮುಕ್ತ’
ಅಮೆರಿಕ ಹಾಗೂ ಮಿತ್ರದೇಶಗಳನ್ನು ಹೊರತುಪಡಿಸಿದ ರಾಷ್ಟ್ರಗಳ ಹಡಗುಗಳು ಹೊರ್ಮುಜ್ ಜಲಸಂಧಿ ಮೂಲಕ ಸಾಗಲು ಮುಕ್ತ ಅವಕಾಶ ಕಲ್ಪಿಸಲಾಗಿದೆ ಎಂದು ಅಂತರರಾಷ್ಟ್ರೀಯ ಕಡಲ ಸಂಘಟನೆಗಳ ಸದಸ್ಯರಾಷ್ಟ್ರಗಳಿಗೆ ಇರಾನ್ ತಿಳಿಸಿದೆ. ▶11

ಚಿನಕುರುಳಿ ಪ್ರಕಾಶ್ ಶೆಟ್ಟಿ



ಉನ್ನತಾಧಿಕಾರ ಸಮಿತಿ ರಚನೆ

ತೈಲ ಬಿಕ್ಕಟ್ಟು

ನವದೆಹಲಿ (ಪಿಟಿಐ): ‘ಪಶ್ಚಿಮ ಏಷ್ಯಾ ಬಿಕ್ಕಟ್ಟಿನಿಂದ ಉಂಟಾಗಿರುವ ಪರಿಣಾಮಗಳನ್ನು ನಿಭಾಯಿಸಲು, ಕಾರ್ಯತಂತ್ರ ರೂಪಿಸುವ ಭಾಗವಾಗಿ ಕೇಂದ್ರ ಸರ್ಕಾರ ಏಳು ಉನ್ನತಾಧಿಕಾರ ಸಮಿತಿಗಳನ್ನು ರಚಿಸಿದೆ’ ಎಂದು ಪ್ರಧಾನಿ ನರೇಂದ್ರ ಮೋದಿ ಮಂಗಳವಾರ ತಿಳಿಸಿದ್ದಾರೆ.

ರಾಜ್ಯಸಭೆಯಲ್ಲಿ ಈ ಬಗ್ಗೆ ಹೇಳಿಕೆ ನೀಡಿದ ಅವರು, ‘ಪೆಟ್ರೋಲ್- ಡೀಸೆಲ್, ಎಲ್‌ಪಿಜಿ ಸಿಲಿಂಡರ್, ರಸಗೊಬ್ಬರ ಪೂರೈಕೆ ಸರಪಳಿ ಸರಿಪಡಿಸುವುದೂ ಸೇರಿದಂತೆ ಯುದ್ಧದಿಂದ ಉಂಟಾಗಿರುವ ಅಲ್ಪಾವಧಿ, ಮಧ್ಯಮಾವಧಿ ಮತ್ತು ದೀರ್ಘಾವಧಿ ಸಮಸ್ಯೆಗಳಿಗೆ ಈ ಸಮಿತಿಗಳು ಸಮಗ್ರ ಪರಿಹಾರ ಕಂಡುಕೊಳ್ಳಲಿವೆ. ಕೋವಿಡ್-19 ಸಂದರ್ಭದಲ್ಲೂ, ತಜ್ಞರನ್ನೊಳಗೊಂಡ ಇಂತಹ ಉನ್ನತ ಸಮಿತಿಗಳನ್ನು ರಚಿಸಲಾಗಿತ್ತು’ ಎಂದು ಅವರು ವಿವರಿಸಿದ್ದಾರೆ.


▶11

ಮೋದಿ-ಟ್ರಂಪ್ ಚರ್ಚೆ
ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಮಂಗಳವಾರ ಕರೆ ಮಾಡಿ ಮಾತನಾಡಿದ್ದಾರೆ.
ವಿವರ ▶11

ದಯಾಮರಣ: ಹರೀಶ್ ಇನ್ನಿಲ್ಲ

ನವದೆಹಲಿ (ಪಿಟಿಐ): ದೇಶದಲ್ಲಿ ಪರೋಕ್ಷ ದಯಾಮರಣಕ್ಕೆ ಅವಕಾಶ ಪಡೆದುಕೊಂಡ ಮೊದಲ ವ್ಯಕ್ತಿ, 13 ವರ್ಷಗಳಿಂದ ಕೋಮಾದಲ್ಲಿದ್ದ ಗಾಜಿಯಾಬಾದ್‌ನ ಹರೀಶ್ ರಾಣಾ (31) ಮಂಗಳವಾರ ದೆಹಲಿಯ ಅಖಿಲ ಭಾರತ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ (ಏಮ್ಸ್) ನಿಧನರಾದರು.

ದಶಕಕ್ಕೂ ಹೆಚ್ಚು ಕಾಲ ಹಾಸಿಗೆಯಲ್ಲಿಯೇ ಜೀವಚ್ಛವದಂತೆ ಇದ್ದ ಅವರ ದಯಾಮರಣಕ್ಕೆ ಸುಪ್ರೀಂ ಕೋರ್ಟ್ ಮಾರ್ಚ್ 11ರಂದು ಅನುಮತಿ ನೀಡಿತ್ತು. ಸುಪ್ರೀಂಕೋರ್ಟ್‌ನ 2023ರ ಪರಿಷ್ಕೃತ ಮಾರ್ಗಸೂಚಿ ಅನ್ವಯ ದೇಶದಲ್ಲಿ ದಯಾಮರಣಕ್ಕೆ ಅವಕಾಶ ಪಡೆದ ಮೊದಲ ಪ್ರಕರಣ ಹರೀಶ್ ರಾಣಾ ಅವರದ್ದಾಗಿದೆ.


ಹರೀಶ್ ರಾಣಾ

ಪಂಜಾಬ್ ವಿಶ್ವವಿದ್ಯಾಲಯದಲ್ಲಿ ಸಿವಿಲ್ ಎಂಜಿನಿಯರಿಂಗ್ ಅಧ್ಯಯನ ಮಾಡುತ್ತಿದ್ದ ರಾಣಾ, 2013ರಲ್ಲಿ ವಸತಿ ನಿಲಯದ ನಾಲ್ಕನೇ ಮಹಡಿಯಿಂದ ಆಕಸ್ಮಿಕವಾಗಿ ಜಾರಿ ಬಿದ್ದು, ತಲೆಗೆ ತೀವ್ರ ಪೆಟ್ಟಾಗಿ ಕೋಮಾಕ್ಕೆ ಜಾರಿದ್ದರು.

ಸುಪ್ರೀಂಕೋರ್ಟ್ ದಯಾಮರಣಕ್ಕೆ ಅವಕಾಶ ನೀಡಿದ ಬೆನ್ನಲ್ಲೇ, ಗಾಜಿಯಾಬಾದ್‌ನ ಮನೆಯಿಂದ ರಾಣಾ ಅವರನ್ನು ಮಾರ್ಚ್ 14ರಂದು ಏಮ್ಸ್‌ನ ಡಾ. ಬಿ.ಆರ್. ಅಂಬೇಡ್ಕರ್ ಇನ್‌ಸ್ಟಿಟ್ಯೂಟ್ ರೋಟರಿ ಕ್ಯಾನ್ಸರ್ ಆಸ್ಪತ್ರೆಯ ಉಪಶಾಮಕ ಆರೈಕೆ ಘಟಕಕ್ಕೆ ಸ್ಥಳಾಂತರಿಸಲಾಗಿತ್ತು.

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದೆ

ಮಕ್ಕಳ ಚಿಕಿತ್ಸೆ: ಸೂಪರ್ ಸ್ಪೆಷಾಲಿಟಿ ಘಟಕ ಸಿದ್ಧ

ಐಜಿಐಸಿಎಚ್‌ನಲ್ಲಿ ಹಾಸಿಗೆಗಳ ಸಂಖ್ಯೆ 900ಕ್ಕೆ ಏರಿಕೆ

• ಎಂಟು ಮಹಡಿಗಳ ಕಟ್ಟಡದಲ್ಲಿ ಒಪಿಡಿ ಸೇರಿ ವಿವಿಧ ಸೇವೆ

• ವರುಣ ಹೆಗಡೆ

ಬೆಂಗಳೂರು: ಮಕ್ಕಳ ಚಿಕಿತ್ಸೆಗೆ ಮೀಸಲಾಗಿರುವ ಇಲ್ಲಿನ ಇಂದಿರಾ ಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆಯ (ಐಜಿಐಸಿಎಚ್) ಸೂಪರ್ ಸ್ಪೆಷಾಲಿಟಿ ಘಟಕ ಸೇವೆಗೆ ಸಿದ್ಧವಾಗಿದ್ದು, ಇದರ ಕಾರ್ಯಾರಂಭದ ಬಳಿಕ ಸಂಸ್ಥೆಯಲ್ಲಿ ಹಾಸಿಗೆಗಳ ಸಂಖ್ಯೆ 900ಕ್ಕೆ ಏರಿಕೆಯಾಗಲಿದೆ.

ಸೂಪರ್ ಸ್ಪೆಷಾಲಿಟಿ ವೈದ್ಯಕೀಯ ಸೇವೆ ಒದಗಿಸುತ್ತಿರುವ ಈ ಸಂಸ್ಥೆಗೆ, ರಾಜ್ಯದ ವಿವಿಧೆಡೆಯಿಂದ ಚಿಕಿತ್ಸೆಗಾಗಿ ಮಕ್ಕಳನ್ನು ಪಾಲಕರು ಇಲ್ಲಿಗೆ ಕರೆ ತರುತ್ತಾರೆ. ಇದರಿಂದಾಗಿ ಇಲ್ಲಿಗೆ ಚಿಕಿತ್ಸೆಗೆ ಬರುವ ಮಕ್ಕಳ ಸಂಖ್ಯೆ ವರ್ಷದಿಂದ ವರ್ಷಕ್ಕೆ ಏರಿಕೆಯಾಗುತ್ತಿದೆ. ಇಲ್ಲಿಗೆ ಬರುವ ಬಹುತೇಕ ಮಕ್ಕಳು ಒಳರೋಗಿಗಳಾಗಿ ದಾಖಲಾಗುವುದರಿಂದ ಹಾಸಿಗೆಗಳಿಗೆ ಬೇಡಿಕೆ ಹೆಚ್ಚುತ್ತಿದೆ. ಆದ್ದರಿಂದ ಸಂಸ್ಥೆಯ ಆವರಣದಲ್ಲಿ ಎಂಟು ಮಹಡಿಗಳ ಕಟ್ಟಡ ನಿರ್ಮಿಸಲಾಗಿದೆ. ಇದಕ್ಕೆ ಅಗತ್ಯ ಪೀಠೋಪಕರಣ ಹಾಗೂ ವೈದ್ಯಕೀಯ ಉಪಕರಣಗಳನ್ನು ಅಳವಡಿಕೆ ಮಾಡಲಾಗಿದ್ದು, ಈ ಕಟ್ಟಡವು ಇದೇ 28ಕ್ಕೆ ಉದ್ಘಾಟನೆಯಾಗಲಿದೆ.

ವೈದ್ಯಕೀಯ ಶಿಕ್ಷಣ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ಐಜಿಐಸಿಎಚ್, ಸ್ವಾಯತ್ತ ಸಂಸ್ಥೆಯಾಗಿದೆ. ಈ ಸಂಸ್ಥೆಯ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ರಾಜ್ಯದ ವಿವಿಧೆಡೆಯಿಂದ ಶಿಫಾರಸು ಆಧಾರದಲ್ಲಿ ಮಕ್ಕಳು ಚಿಕಿತ್ಸೆಗೆ ಬರುತ್ತಾರೆ. ಸದ್ಯ ಸಂಸ್ಥೆಯಲ್ಲಿ 450 ಹಾಸಿಗೆಗಳು ಲಭ್ಯವಿದೆ. ನೂತನ ಸೂಪರ್ ಸ್ಪೆಷಾಲಿಟಿ ಕಟ್ಟಡವು 450 ಹಾಸಿಗೆಗಳನ್ನು ಒಳಗೊಂಡಿರುವುದರಿಂದ ಒಟ್ಟು ಹಾಸಿಗೆಗಳ ಸಂಖ್ಯೆ ಸಾವಿರದ ಗಡಿ ಸಮೀಪಿಸಲಿದೆ.

ನೂತನ ಕಟ್ಟಡದಲ್ಲಿ ಒಪಿಡಿ: ಸದ್ಯ, ಸಂಸ್ಥೆಯ ಮುಖ್ಯ ಕಟ್ಟಡದಲ್ಲಿ ಹೊರ ರೋಗಿ ವಿಭಾಗ (ಒಪಿಡಿ) ಕಾರ್ಯ ನಿರ್ವಹಿಸುತ್ತಿದೆ. ನೂತನ ಸೂಪರ್ ಸ್ಪೆಷಾಲಿಟಿ ಘಟಕ ಉದ್ಘಾಟನೆಗೊಂಡ ಬಳಿಕ, ಅಲ್ಲಿ ಒಂದು ಮಹಡಿಯಲ್ಲಿ ಒಪಿಡಿ ಸೇವೆ ಲಭ್ಯವಾಗಲಿದೆ. ಹೃದಯ ವಿಜ್ಞಾನ, ರುಮಟಾಲಜಿ, ಗ್ಯಾಸ್ಟ್ರೋಎಂಟರಾಲಜಿ ಸೇರಿ ವಿವಿಧ ವಿಭಾಗವಾರು ಒಪಿಡಿ ಸಜ್ಜುಗೊಳಿಸಲಾಗಿದೆ. ವಿರಳ ಕಾಯಿಲೆಗೆ ಚಿಕಿತ್ಸೆ ಸೇರಿ ಮಕ್ಕಳ ವಿವಿಧ ಅನಾರೋಗ್ಯ ಸಮಸ್ಯೆಗಳಿಗೆ ಒಂದೇ ಸೂರಿನಡಿ ಚಿಕಿತ್ಸೆಗೆ ವ್ಯವಸ್ಥೆ ಮಾಡಲಾಗಿದೆ.

ಈ ಕಟ್ಟಡವನ್ನು ಒಟ್ಟು ₹138 ಕೋಟಿ ವೆಚ್ಚದಲ್ಲಿ ನಿರ್ಮಿಸಲಾಗಿದೆ. ರಾಜ್ಯ ಸರ್ಕಾರವು 2019ರಲ್ಲಿ ಸೂಪರ್ ಸ್ಪೆಷಾಲಿಟಿ ಬ್ಲಾಕ್ ನಿರ್ಮಾಣಕ್ಕೆ ಅನುಮೋದನೆ ನೀಡಿತ್ತು. 2021ರ ಸೆಪ್ಟೆಂಬರ್‌ನಲ್ಲಿ ಕಟ್ಟಡದ ಶಂಕುಸ್ಥಾಪನೆ ನೆರವೇರಿಸಲಾಗಿತ್ತು. ಆದರೆ, ಕೋವಿಡ್-ಲಾಕ್‌ಡೌನ್‌ನಿಂದಾಗಿ ಕಾಮಗಾರಿಗೆ ಹಿನ್ನಡೆಯಾಗಿತ್ತು.

ಕಟ್ಟಡದಲ್ಲಿ ಹಲವು ವ್ಯವಸ್ಥೆ

ನೂತನ ಸೂಪರ್ ಸ್ಪೆಷಾಲಿಟಿ ಘಟಕವು ಅಸ್ಥಿಮಜ್ಜೆ (ಬಿಎಂಟಿ) ಕಸಿ ಘಟಕ, ಅಂಗಾಂಗ ಕಸಿ ಘಟಕವನ್ನು ಒಳಗೊಂಡಿದೆ. ಈಗಾಗಲೇ ಸಂಸ್ಥೆಯಲ್ಲಿ ಥಲಸ್ಸೇಮಿಯಾ ಪೀಡಿತ ಹಾಗೂ ವಿರಳ ಕಾಯಿಲೆಗಳಿಂದ ಬಳಲುತ್ತಿರುವ ಮಕ್ಕಳು ಚಿಕಿತ್ಸೆ ಪಡೆಯುತ್ತಿದ್ದಾರೆ. ಅವರಿಗೆ ನೂತನ ಕಟ್ಟದಲ್ಲಿ ಚಿಕಿತ್ಸೆ ಒದಗಿಸಲಾಗುತ್ತದೆ. ನವಜಾತ ಶಿಶುಗಳ ತಪಾಸಣೆಗೆ ಪರೀಕ್ಷಾ ಕೇಂದ್ರ, ಫೀಟಲ್ ಮೆಡಿಸಿನ್ ವಿಭಾಗ, ಮಕ್ಕಳ ವಾರ್ಡ್‌ಗಳು, ಮಕ್ಕಳ ತೀವ್ರ ನಿಗಾ ಘಟಕವನ್ನೂ ಈ ಕಟ್ಟಡ ಒಳಗೊಂಡಿದೆ.



ಐಜಿಐಸಿಎಚ್ ಸೂಪರ್ ಸ್ಪೆಷಾಲಿಟಿ ಘಟಕದ ಹೊರನೋಟ

450	450	500ರಿಂದ 600
ಐಜಿಐಸಿಎಚ್ ಸದ್ಯ ಹೊಂದಿರುವ ಹಾಸಿಗೆಗಳು	ನೂತನ ಕಟ್ಟಡ ಹೊಂದಿರುವ ಹಾಸಿಗೆಗಳು	ಸಂಸ್ಥೆಗೆ ಪ್ರತಿನಿತ್ಯ ಭೇಟಿ ನೀಡುವ ಹೊರರೋಗಿಗಳು



ಈ ಕಟ್ಟಡದ ಉದ್ಘಾಟನೆ ಬಳಿಕ ಮಕ್ಕಳ ಚಿಕಿತ್ಸೆಗೆ ಹೆಚ್ಚಿನ ಸಂಖ್ಯೆಯಲ್ಲಿ ಹಾಸಿಗೆಗಳು ಲಭ್ಯವಾಗಲಿವೆ. ಇನ್ನಷ್ಟು ಸೇವೆಗಳನ್ನು ಸಂಸ್ಥೆಯಲ್ಲಿ ಪ್ರಾರಂಭಿಸಲಾಗುತ್ತದೆ

ಡಾ. ಸಂಜಯ್ ಕೆ.ಎಸ್.
ಐಜಿಐಸಿಎಚ್ ನಿರ್ದೇಶಕ

ಸುದ್ದಿ 2 ನಿಮಿಷ

ಸುಧಾ ರಘುನಾಥನ್‌ಗೆ ರಾಮಸೇವಾ ಮಂಡಳಿ ಪ್ರಶಸ್ತಿ

ಬೆಂಗಳೂರು: ಶ್ರೀ ರಾಮ ಸೇವಾ ಮಂಡಳಿ ಟ್ರಸ್ಟ್ 'ಎಸ್‌ವಿಎನ್ ಸ್ಮಾರಕ ವಾರ್ಷಿಕ ಸಂಗೀತ ಉತ್ಸವ'ದ ಪ್ರಯುಕ್ತ ನೀಡುವ ರಾಷ್ಟ್ರೀಯ ಪ್ರಶಸ್ತಿಗೆ ಗಾಯಕಿ ಸುಧಾ ರಘುನಾಥನ್ ಆಯ್ಕೆಯಾಗಿದ್ದಾರೆ.

ಇದೇ 28, ಏ.4, ಏ.11 ಮತ್ತು ಏ.18ರಂದು ಟ್ರಸ್ಟ್ ನೆಟ್ಟಿಗೆರೆ ಗ್ರಾಮದಲ್ಲಿರುವ ಎಸ್‌ವಿಎನ್ ಮೆಮೋರಿಯಲ್ ಹಾಲ್‌ನಲ್ಲಿ ಸಂಗೀತ ಉತ್ಸವ ಹಮ್ಮಿಕೊಂಡಿದೆ. 28ರಂದು ಮಧ್ಯಾಹ್ನ 2.45ರಿಂದ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದ್ದು, ಇಸ್ರೊ ಮಾಜಿ ಅಧ್ಯಕ್ಷರಾದ ಕೆ. ರಾಧಾಕೃಷ್ಣನ್, ಎಸ್. ಸೋಮನಾಥ್, ಬ್ರಿಗೇಡ್ ಸಮೂಹದ ಅಧ್ಯಕ್ಷ ಎಂ.ಆರ್. ಜಯಶಂಕರ್, ಎಸ್‌ಡಿಎಂಇ ಸೊಸೈಟಿಯ ಉಪಾಧ್ಯಕ್ಷ ಸುರೇಂದ್ರ ಕುಮಾರ್ ಹೆಗ್ಡೆ ಅವರು ಅತಿಥಿಗಳಾಗಿ ಭಾಗವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.



ಪ್ರಾಚೀನ ಆರೋಗ್ಯ ಪರಂಪರಾ ವೈದ್ಯ ಸಂಗಮ ಏ.1ರಿಂದ

ಬೆಂಗಳೂರು: ಪ್ರಾಚೀನ ಆರೋಗ್ಯ ಪರಂಪರೆ ಸಂರಕ್ಷಣಾ ಟ್ರಸ್ಟ್‌ನಿಂದ ಏಪ್ರಿಲ್ 1 ಮತ್ತು 2ರಂದು ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ತಾಲ್ಲೂಕಿನ ಬಂಗಾರಮಕ್ಕಿಯಲ್ಲಿ ಪ್ರಾಚೀನ ಆರೋಗ್ಯ ಪರಂಪರಾ ವೈದ್ಯ ಸಂಗಮ ಆಯೋಜಿಸಲಾಗಿದೆ.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಟ್ರಸ್ಟ್‌ನ ಸಂಸ್ಥಾಪಕ ಅಧ್ಯಕ್ಷ ಮಹಮ್ಮದ್ ಸಾದಿಕ್, ವ್ಯವಸ್ಥಾಪಕ ಟ್ರಸ್ಟಿ ಕೆ. ಉಮೇಶ, 'ಪ್ರಾಚೀನ ಆರೋಗ್ಯ ಪರಂಪರೆಯ ಸಂರಕ್ಷಣೆ, ಮನೆ ಮದ್ದು, ಜನಪದ ವೈದ್ಯ, ನಾಟಿ ವೈದ್ಯ, ಪಶುವೈದ್ಯ, ಗಿಡಮೂಲಿಕೆ ವೈದ್ಯ, ಮೂಳೆ ವೈದ್ಯ, ಯೋಗ, ಯುನಾನಿ, ಆಯುರ್ವೇದ, ಜಲ ಚಿಕಿತ್ಸೆ ಸೇರಿದಂತೆ ಅನೇಕ ಪಾರಂಪರಿಕ ಚಿಕಿತ್ಸಾ ಪದ್ಧತಿಗಳ ಸಂರಕ್ಷಣೆ ಹಾಗೂ ಪ್ರಚಾರ ಮಾಡುವುದು ನಮ್ಮ ಟ್ರಸ್ಟ್‌ನ ಉದ್ದೇಶವಾಗಿದೆ' ಎಂದು ತಿಳಿಸಿದರು.

'ಎಲ್ಲ ಪಾರಂಪರಿಕ ಚಿಕಿತ್ಸಾ ವಿಧಾನಗಳನ್ನು ಅನುಸರಿಸುವ ವೈದ್ಯರನ್ನು ಗುರುತಿಸಿ ಸಂರಕ್ಷಿಸುವುದು ಹಾಗೂ ಈ ಅಮೂಲ್ಯ ಜ್ಞಾನವನ್ನು ಮುಂದಿನ ಪೀಳಿಗೆಗೆ ಉಳಿಸಿ ಬೆಳೆಸುವ ಉದ್ದೇಶ ಹೊಂದಿದ್ದೇವೆ. ಈ ಸಮ್ಮೇಳನದಲ್ಲಿ ಭಾಗವಹಿಸುವ ವೈದ್ಯರಿಗೆ ವಸತಿ ವ್ಯವಸ್ಥೆ ಮಾಡಲಾಗಿದ್ದು, ಯಾವುದೇ ರೀತಿಯ ಪ್ರವೇಶ ಶುಲ್ಕ ಇರುವುದಿಲ್ಲ' ಎಂದು ಮಾಹಿತಿ ನೀಡಿದರು.

'ಪ್ರಾಚೀನ ವೈದ್ಯರತ್ನ ಪ್ರಶಸ್ತಿಯನ್ನು ರಾಜ್ಯದ ಆಯ್ದ ವೈದ್ಯರಿಗೆ ನೀಡಲಾಗುತ್ತದೆ. ಪ್ರಶಸ್ತಿಯು ₹10 ಸಾವಿರ ನಗದು, ಪ್ರಶಸ್ತಿ ಪತ್ರ ಹಾಗೂ ಸ್ಮರಣಿಕೆ ಒಳಗೊಂಡಿದೆ' ಎಂದು ವಿವರಿಸಿದರು.

ಕರಗ ಉತ್ಸವಕ್ಕೆ ವಿಧ್ಯುಕ್ತ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಐತಿಹಾಸಿಕ ಬೆಂಗಳೂರು ಕರಗ ಉತ್ಸವಕ್ಕೆ ಮಂಗಳವಾರ ಧ್ವಜಾರೋಹಣದ ಮೂಲಕ ಚಾಲನೆ ನೀಡಲಾಗಿದ್ದು, ಏಪ್ರಿಲ್ 1ರಂದು ರಾತ್ರಿ 'ಬೆಂಗಳೂರು ಕರಗ' ನಡೆಯಲಿದೆ.

ತಿಗಳರ ಪೇಟೆಯಲ್ಲಿರುವ ಶ್ರೀ ಧರ್ಮರಾಯಸ್ವಾಮಿ ದೇವಾಲಯದಲ್ಲಿ ಮಂಗಳವಾರ ರಾತ್ರಿ, ಉತ್ಸವ ಮತ್ತು ಧ್ವಜಾರೋಹಣದ ಮೂಲಕ ಕರಗ ಉತ್ಸವಕ್ಕೆ ಚಾಲನೆ ದೊರೆಯಿತು.

ಮಾರ್ಚ್ 25ರಿಂದ 28ರವರೆಗೆ ಪ್ರತಿ ದಿನ ವಿಶೇಷ ಪೂಜೆಗಳು ನಡೆಯಲಿದ್ದು, ಭಾನುವಾರ ಆರತಿ, ಸೋಮವಾರ ಹಸಿ ಕರಗ, ಮಂಗಳವಾರ ಪೊಂಗಲ್ ಸೇವೆ, ಬುಧವಾರ ಕರಗ ಶಕ್ತ್ಯೋತ್ಸವ ಮತ್ತು ಧರ್ಮರಾಯಸ್ವಾಮಿ ಮಹಾರಥೋತ್ಸವ ನಡೆಯಲಿದೆ ಎಂದು ಧರ್ಮರಾಯ ಸ್ವಾಮಿ ದೇವಾಲಯದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಚಲಕರಿ ನಾರಾಯಣಸ್ವಾಮಿ ಅವರು ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಏ.2ರಂದು ದೇವಾಲಯದಲ್ಲಿ ಗಾವು ಶಾಂತಿ ನಡೆಯುತ್ತದೆ ಮತ್ತು ಶುಕ್ರವಾರ ವಸಂತ್ಯುತ್ಸವ ಮತ್ತು ಧ್ವಜಾರೋಹಣ ನಡೆಯಲಿದೆ ಎಂದರು.

ಕರಗದ ಪೂಜಾರಿ ಎ. ಜ್ಞಾನೇಂದ್ರ ಅವರು ಕರಗವನ್ನು ಹೊರಲಿದ್ದಾರೆ. ಏ.1ರಂದು ಚೈತ್ರ ಪೂರ್ಣಿಮೆಯ ರಾತ್ರಿ ಧರ್ಮರಾಯಸ್ವಾಮಿ ದೇವಾಲಯದಿಂದ ಹೊರಡುವ ಕರಗ, ಹಲಸೂರು ಆಂಜನೇಯಸ್ವಾಮಿ, ರಾಮ ದೇವಾಲಯ, ಪ್ರಸನ್ನ ಗಂಗಾಧರೇಶ್ವರ ಸ್ವಾಮಿ ದೇವಾಲಯಗಳಲ್ಲಿ ಪೂಜೆ ಸ್ವೀಕರಿಸಲಿದೆ. ನಂತರ, ನಗರ್ತಪೇಟೆ ವೇಣುಗೋಪಾಸ್ವಾಮಿ ದೇವಾಲಯ, ಸಿದ್ದಣ್ಣಗಲ್ಲಿ, ಕಬ್ಬನ್‌ಪೇಟೆ, ಗಾಣಿಗರ ಪೇಟೆ ದೇವಸ್ಥಾನ ಸೇರಿ ಒಟ್ಟು 26 ದೇವಸ್ಥಾನಗಳಲ್ಲಿ ಪೂಜೆ ಸ್ವೀಕರಿಸಲಿದೆ ಎಂದರು. ಮೈಸೂರಿನಲ್ಲಿ ದೀಪಾಲಂಕಾರ ಮಾಡುವವರೇ ಕರಗ ಉತ್ಸವಕ್ಕೂ ದೀಪಾಲಂಕಾರ ಮಾಡಿದ್ದಾರೆ. ಏ.1ರ ಬುಧವಾರ ರಾತ್ರಿ ಬೆಂಗಳೂರು ಕರಗಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಪುಷ್ಪಾರ್ಚನೆ ಮಾಡಲಿದ್ದಾರೆ ಎಂದರು.



ಶ್ರೀ ಧರ್ಮರಾಯಸ್ವಾಮಿ ದೇವಸ್ಥಾನದ ಆವರಣದಲ್ಲಿ ವಿದ್ಯುತ್ ದೀಪಾಲಂಕಾರಿಕ ಸಿದ್ಧತೆಯಲ್ಲಿ ತೊಡಗಿರುವ ಸಿಬ್ಬಂದಿ ಚಿತ್ರ. ಪ್ರಶಾಂತ್ ಎಚ್‌.ಜಿ.

'ಶೇ 15ರಷ್ಟು ತೆಂಗು ತೋಟಕ್ಕೆ ಹಾನಿ'

ಪ್ರಜಾವಾಣಿ ವಾರ್ತೆ

ರೋಗ ಬಾಧೆ


ನವದೆಹಲಿ: ಕರ್ನಾಟಕದಲ್ಲಿ ಕೀಟಗಳ ಕಾಟ ಹಾಗೂ ರೋಗಗಳ ಬಾಧೆಯಿಂದ ಶೇ 15ರಷ್ಟು ತೆಂಗಿನ ತೋಟಗಳು ಹಾನಿಗೊಳಗಾಗಿವೆ ಎಂದು ಕೇಂದ್ರ ಕೃಷಿ ಸಚಿವಾಲಯದ ತಜ್ಞರ ಸಮಿತಿ ವರದಿ ನೀಡಿದೆ.

ರಾಜ್ಯದಲ್ಲಿ ಪ್ರಮುಖ ಕೀಟಗಳು ಹಾಗೂ ರೋಗಗಳನ್ನು ಪತ್ತೆ ಹಚ್ಚಿ ಉಪಶಮನ ಕ್ರಮಗಳನ್ನು ಸೂಚಿಸಲು ಸಚಿವಾಲಯವು 2025ರಲ್ಲಿ ತಜ್ಞರ ಸಮಿತಿ ರಚಿಸಿತ್ತು. ಆ ಸಮಿತಿ ವರದಿ ನೀಡಿ ಹಲವು ಶಿಫಾರಸುಗಳನ್ನು ಮಾಡಿದೆ. ಈ ಬಗ್ಗೆ ಲೋಕಸಭೆಯಲ್ಲಿ ಮಂಗಳವಾರ ಪ್ರಶ್ನೋತ್ತರ ಅವಧಿಯಲ್ಲಿ ಬೆಂಗಳೂರು ಗ್ರಾಮಾಂತರ ಸಂಸದ ಡಾ.ಸಿ.ಎನ್.ಮಂಜುನಾಥ್ ಅವರ ಪ್ರಶ್ನೆಗೆ ಕೃಷಿ ಖಾತೆ ರಾಜ್ಯ ಸಚಿವ ರಾಮನಾಥ ಠಾಕೂರ್ ಅವರು ಉತ್ತರ ನೀಡಿದ್ದಾರೆ.

ರಾಜ್ಯದಲ್ಲಿ ತೆಂಗಿನ ಉತ್ಪಾದಕತೆ ಸುಧಾರಣೆ ಹಾಗೂ ಕೀಟ ಮತ್ತು ರೋಗ ನಿರ್ವಹಣೆಗೆ ಹೆಚ್ಚಿನ ಗಮನ ಹರಿಸಿ ಕ್ಷೇತ್ರಾಧಾರಿತ ಯೋಜನೆಗಳನ್ನು ಅನುಷ್ಠಾನಗೊಳಿಸಲು ಐದು ವರ್ಷಗಳಲ್ಲಿ ₹174.55 ಕೋಟಿ ಬಳಸಲಾಗಿದೆ ಎಂದು ಅವರು ಮಾಹಿತಿ ನೀಡಿದ್ದಾರೆ.

ಕೀಟ ಹಾಗೂ ರೋಗಗಳ ನಿಯಂತ್ರಣಕ್ಕೆ ತೆಂಗು ಅಭಿವೃದ್ಧಿ ಮಂಡಳಿಯು ಐದು ವರ್ಷಗಳಲ್ಲಿ 144 ಕಾರ್ಯಕ್ರಮಗಳನ್ನು ನಡೆಸಿದೆ. ತೆಂಗಿನಕಾಯಿ ಕಪ್ಪು ತಲೆಯ ಮರಿಹುಳುಗಳನ್ನು ನಿಯಂತ್ರಿಸಲು ಮಂಡಳಿಯು ಮಂಡ್ಯದಲ್ಲಿರುವ ಫಾರಂನಲ್ಲಿ ಐದು ವರ್ಷಗಳಲ್ಲಿ 11.27 ಲಕ್ಷ ಜೈವಿಕ ನಿಯಂತ್ರಣ ಎಕ್ಟೋಪ್ಯಾರಾಸಿಟಾಯ್ಡ್ ಉತ್ಪಾದಿಸಿ ವಿತರಿಸಿದೆ ಎಂದು ಅವರು ತಿಳಿಸಿದ್ದಾರೆ.

ರಾಜ್ಯದಲ್ಲಿ ಕೀಟ ಮತ್ತು ರೋಗ ನಿರ್ವಹಣೆಗೆ ವಿಶೇಷ ಒತ್ತು ನೀಡಿ ಪ್ರಸಕ್ತ ವರ್ಷ 'ತೆಂಗು ಆಧಾರಿತ ಬೆಳೆ ಪದ್ಧತಿಯ ಮೂಲಕ ಉತ್ಪಾದಕತೆ ಸುಧಾರಣೆ'ಗಾಗಿ (3,757 ಹೆಕ್ಟೇರ್) ₹10.89 ಕೋಟಿ ಮತ್ತು ಮರು ನಾಟಿ ಮತ್ತು ಪುನರುಜ್ಜೀವನಕ್ಕಾಗಿ (1,000 ಹೆಕ್ಟೇರ್) ₹4.52 ಕೋಟಿ ಬಿಡುಗಡೆ ಮಾಡಲಾಗಿದೆ ಎಂದು ಅವರು ಹೇಳಿದ್ದಾರೆ.



ಕ್ರೀಡಾಂಗಣದ ಸುತ್ತ ವಾಹನ ನಿಲುಗಡೆ ನಿಷೇಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಲ್ಲಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಮಾರ್ಚ್ 28 ಹಾಗೂ ಏಪ್ರಿಲ್ 4ರಂದು ಐಪಿಎಲ್ ಕ್ರಿಕೆಟ್ ಪಂದ್ಯಗಳು ನಡೆಯಲಿದ್ದು, ಕ್ರೀಡಾಂಗಣದ ಸುತ್ತಮುತ್ತಲ ರಸ್ತೆಗಳು, ಜಂಕ್ಷನ್‌ಗಳಲ್ಲಿ ವಾಹನ ನಿಲುಗಡೆ ನಿಷೇಧ ಮಾಡಲಾಗಿದೆ.

ವಾಹನಗಳ ನಿಲುಗಡೆ ನಿಷೇಧ ಇರುವ ರಸ್ತೆಗಳು :

- ಕ್ವೀನ್ಸ್ ರಸ್ತೆಯ ಎರಡೂ ಬದಿಯಲ್ಲಿ ಹಾಗೂ ಬಾಳೇಕುಂದ್ರಿ ವೃತ್ತದಿಂದ ಕ್ವೀನ್ಸ್ ವೃತ್ತದ ವರೆಗೆ. ಕ್ವೀನ್ಸ್ ವೃತ್ತದಿಂದ ಸಿ.ಟಿ.ಒ ಜಂಕ್ಷನ್ ವರೆಗೆ
- ಎಂ.ಜಿ. ರಸ್ತೆಯಲ್ಲಿ ಅನಿಲ್ ಕುಂಬ್ಳೆ ವೃತ್ತದಿಂದ ಕ್ವೀನ್ಸ್ ವೃತ್ತದವರೆಗೆ ಮತ್ತು ಕ್ವೀನ್ಸ್ ರಸ್ತೆಯಿಂದ ಅನಿಲ್ ಕುಂಬ್ಳೆ ಜಂಕ್ಷನ್‌ವರೆಗೆ ರಸ್ತೆಯ ಎರಡೂ ಕಡೆ
- ಲಿಂಕ್ ರಸ್ತೆ– ಎಂ.ಜಿ ರಸ್ತೆಯಿಂದ ಕಬ್ಬನ್ ರಸ್ತೆವರೆಗೆ
- ರಾಜಭವನ ರಸ್ತೆ, ಟಿ.ಚೌಡಯ್ಯ ರಸ್ತೆ ಮತ್ತು ರೇಸ್ ಕೋರ್ಸ್ ರಸ್ತೆ
- ಸೆಂಟ್ರಲ್ ಸ್ಟ್ರೀಟ್ ರಸ್ತೆಯಲ್ಲಿ ರಸ್ತೆಯ ಎರಡೂ ಕಡೆ
- ಕಬ್ಬನ್ ರಸ್ತೆಯಲ್ಲಿ, ಸಿ.ಟಿ.ಒ ವೃತ್ತದಿಂದ ಡಿಕನ್ಸನ್ ರಸ್ತೆ ಜಂಕ್ಷನ್‌ವರೆಗೆ ರಸ್ತೆಯ ಎರಡೂ ಕಡೆ. ಕಬ್ಬನ್ ರಸ್ತೆಯಲ್ಲಿ ಕಾಮರಾಜ ರಸ್ತೆ ಜಂಕ್ಷನ್‌ನಿಂದ ಡಿಕನ್ಸನ್ ರಸ್ತೆ ಜಂಕ್ಷನ್‌ವರೆಗೆ ಬಿಎಂಟಿಸಿ ಬಸ್‌ಗಳನ್ನು ಹೊರತುಪಡಿಸಿ, ಇತರೆ ಎಲ್ಲಾ ತರಹದ ವಾಹನಗಳ ನಿಲುಗಡೆ ನಿಷೇಧಿಸಲಾಗಿದೆ
- ಸೇಂಟ್ ಮಾರ್ಕ್ಸ್ ರಸ್ತೆಯಲ್ಲಿ, ಕ್ಯಾಶ್ ಫಾರ್ಮಸಿ ಜಂಕ್ಷನ್‌ನಿಂದ ಅನಿಲ್ ಕುಂಬ್ಳೆ ವೃತ್ತದವರೆಗೆ
- ಮ್ಯೂಸಿಯಂ ರಸ್ತೆಯಲ್ಲಿ, ಎಂ.ಜಿ ರಸ್ತೆಯಿಂದ ಸೇಂಟ್ ಮಾರ್ಕ್ಸ್ ರಸ್ತೆವರೆಗೆ ಹಾಗೂ ಆಶೀರ್ವಾದಂ ವೃತ್ತದವರೆಗೆ
- ಕಸ್ತೂರಬಾ ರಸ್ತೆಯಲ್ಲಿ, ಕ್ವೀನ್ಸ್ ವೃತ್ತದಿಂದ ಹಡ್ಸನ್ ವೃತ್ತದ ವರೆಗೆ ಹಾಗೂ ಮಲ್ಯ ಆಸ್ಪತ್ರೆ ರಸ್ತೆಯಲ್ಲಿ ಸಿದ್ದಲಿಂಗಯ್ಯ ವೃತ್ತದಿಂದ ಆರ್‌ಆರ್‌ಎಂಆರ್ ವೃತ್ತದವರೆಗೆ
- ಕಬ್ಬನ್ ಪಾರ್ಕ್ ಒಳಭಾಗದ ಕಿಂಗ್ ರಸ್ತೆ, ಪ್ರೆಸ್‌ಕ್ಲಬ್ ಮುಂಭಾಗ, ಬಾಲಭವನ ಮುಂಭಾಗ, ಫೌಂಟೇನ್ ರಸ್ತೆಗಳಲ್ಲಿ ವಾಹನಗಳ ನಿಲುಗಡೆ ನಿಷೇಧಿಸಲಾಗಿದೆ
- ಲ್ಯಾವೆಲ್ಲೆ ರಸ್ತೆಯಲ್ಲಿ ಕ್ವೀನ್ಸ್ ವೃತ್ತದಿಂದ ವಿಠಲ್‌ಮಲ್ಯ ರಸ್ತೆ ಜಂಕ್ಷನ್‌ವರೆಗೆ ವಾಹನಗಳ ನಿಲುಗಡೆ ನಿಷೇಧಿಸಲಾಗಿದೆ
- ವಿಠಲ್ ಮಲ್ಯ ರಸ್ತೆ, ಸಿದ್ದಲಿಂಗಯ್ಯ ವೃತ್ತದಿಂದ ಸೇಂಟ್ ಮಾರ್ಕ್ಸ್ ರಸ್ತೆಯ ಬಿಷಪ್ ಕಾಟನ್ ಬಾಲಕಿಯರ ಶಾಲೆಯವರೆಗೆ ವಾಹನಗಳ ನಿಲುಗಡೆ ನಿಷೇಧಿಸಲಾಗಿದೆ

ವಾಹನಗಳ ನಿಲುಗಡೆಗೆ ಅವಕಾಶ ಕಲ್ಪಿಸಿರುವ ಸ್ಥಳಗಳು (ಬೆಳಿಗ್ಗೆ 11ರಿಂದ ರಾತ್ರಿ 9ರ ವರೆಗೆ):

- ಸೇಂಟ್ ಜೋಸೆಫ್ಸ್ ಇಂಡಿಯನ್ ಹೈಸ್ಕೂಲ್ ಮೈದಾನ, ಸಿದ್ದಲಿಂಗಯ್ಯ ವೃತ್ತ
- ಸೇಂಟ್ ಜೋಸೆಫ್ಸ್ ಯುರೋಪಿಯನ್ ಸ್ಕೂಲ್ ಮೈದಾನ, ಮ್ಯೂಸಿಯಂ ರಸ್ತೆ
- ಫ್ರೀಡಂ ಪಾರ್ಕ್ ಎಂಎಲ್‌ಸಿಪಿ ಪಾರ್ಕಿಂಗ್ ಸ್ಥಳ
- ಗರುಡ ಮಾಲ್‌ನ ವಾಹನ ನಿಲುಗಡೆಯ ಸ್ಥಳ
- ಶಿವಾಜಿನಗರ ಬಸ್ ನಿಲ್ದಾಣದ ಒಂದನೇ ಮಹಡಿ
- ಯುಬಿಸಿಟಿ ವಾಹನ ನಿಲುಗಡೆಯ ಸ್ಥಳ

ಚಿನ್ನಸ್ವಾಮಿ ಕ್ರೀಡಾಂಗಣ ಪ್ರವೇಶಿಸಲು, ಹೊರಗೆ ಹೋಗಲು ಅವಕಾಶ ಕಲ್ಪಿಸಿರುವ ಸ್ಥಳಗಳು:

- ಸಾರ್ವಜನಿಕರಿಗೆ ಗೇಟ್ ನಂ. ಇ–1ರಿಂದ ಗೇಟ್ ನಂ. ಇ–3 ಮತ್ತು ಗೇಟ್ ನಂ. ಇ–18, ಇ–19, ಇ–22 ಹಾಗೂ ಇ–23 ಕಬ್ಬನ್ ರಸ್ತೆಯಲ್ಲಿದ್ದು, ಈ ಗೇಟ್‌ಗಳ ಮೂಲಕ ಪ್ರವೇಶಿಸಬಹುದು
- ಗೇಟ್ ನಂ. ಇ-11ರಿಂದ ಗೇಟ್ ನಂ. ಇ-17ರ ವರೆಗೆ ಲಿಂಕ್ ರಸ್ತೆಯಲ್ಲಿದ್ದು, ಅನಿಲ್ ಕುಂಬ್ಳೆ ವೃತ್ತ ಮತ್ತು ಬಿ.ಆರ್.ವಿ ವೃತ್ತದ ಕಡೆಯಿಂದ ಪ್ರವೇಶಿಸಬಹುದು
- ಕ್ವೀನ್ಸ್ ರಸ್ತೆಯಲ್ಲಿ ಗೇಟ್ ನಂ. ಇ–5 ಮತ್ತು ಇ–8ರಲ್ಲಿ ಪ್ರವೇಶವಿದ್ದು, ಗೇಟ್ ನಂ. ಇ–9, ಇ–9ಎ ಗೇಟ್‌ನಲ್ಲಿ ನಿರ್ಗಮಿಸಲು ಮಾತ್ರ ಅವಕಾಶ ಇರುತ್ತದೆ
- ಕ್ವೀನ್ಸ್ ರಸ್ತೆಯ ಗೇಟ್ ನಂ. ಇ–10ರಲ್ಲಿ ಆಟಗಾರರು, ಸಹ ಆಟಗಾರರು ಹಾಗೂ ಕ್ರೀಡಾಂಗಣದ ಸಿಬ್ಬಂದಿ ಹಾಗೂ ವಿ.ಐ.ಪಿಗಳಿಗೆ ಅವಕಾಶ ಇರುತ್ತದೆ

ಪಂದ್ಯ ಆರಂಭಕ್ಕೂ ನಾಲ್ಕು ತಾಸು ಮೊದಲು ಪ್ರವೇಶ

ಐಪಿಎಲ್

ಬೆಂಗಳೂರು: ಮಾರ್ಚ್ 28ರಿಂದ ನಗರದ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಐಪಿಎಲ್ ಪಂದ್ಯಗಳು ಆರಂಭವಾಗಲಿದ್ದು, ಪೊಲೀಸ್ ಇಲಾಖೆ ಕಟ್ಟುನಿಟ್ಟಿನ ಸಿದ್ಧತೆ ಮಾಡಿಕೊಂಡಿದೆ. ಭದ್ರತೆಯ ದೃಷ್ಟಿಯಿಂದ ಕೆಲವು ಮಾರ್ಗಸೂಚಿಗಳನ್ನು ಹೊರಡಿಸಿದೆ.

ಕಳೆದ ವರ್ಷ ಜೂನ್ 4ರಂದು ನಡೆದ ಕಾಲ್ತುಳಿತ ದುರಂತದ ಬಳಿಕ ಐಪಿಎಲ್ ಪಂದ್ಯಗಳು ನಡೆಯುತ್ತಿವೆ.

ಆರ್‌ಸಿಬಿ ತಂಡದ ಪಂದ್ಯಗಳ ಟಿಕೆಟ್‌ಗಳು ಕೇವಲ ಅಧಿಕೃತ ವೆಬ್‌ಸೈಟ್ ಮತ್ತು ಮೊಬೈಲ್ ಅಪ್ಲಿಕೇಶನ್ ಮೂಲಕ ಮಾತ್ರ ಲಭ್ಯ ಇವೆ. ಅನಧಿಕೃತ ವೆಬ್‌ಸೈಟ್‌ಗಳು ಅಥವಾ ವ್ಯಕ್ತಿಗಳಿಂದ ಟಿಕೆಟ್ ಖರೀದಿಸಬಾರದು. ಎಲ್ಲಾ ಟಿಕೆಟ್‌ಗಳು ಮೊಬೈಲ್ ಆಧಾರಿತ ಕ್ಯೂಆರ್ ಕೋಡ್ (ಎಂ–ಟಿಕೆಟ್) ರೂಪದಲ್ಲಿರುತ್ತವೆ. ಗೇಟ್ ತೆರೆಯುವ ಸಮಯಕ್ಕೆ ಸುಮಾರು ಐದು ತಾಸು ಮೊದಲು ಮಾತ್ರ ಕ್ಯೂಆರ್ ಕೋಡ್ ಕಾಣಿಸುತ್ತದೆ. ಟಿಕೆಟ್‌ಗಳು ವರ್ಗಾಯಿಸಲಾಗದಂತೆ ವ್ಯಕ್ತಿಗೆ ಲಿಂಕ್ ಆಗಿರುತ್ತವೆ.

ಪ್ರತಿ ಟಿಕೆಟ್‌ನಲ್ಲಿ ಪ್ರವೇಶ ದ್ವಾರ, ಆಸನ ಸಾಲು, ಸಂಖ್ಯೆ ವಿವರ ಇರುತ್ತದೆ. ಪಂದ್ಯ ಆರಂಭಕ್ಕೂ 4 ತಾಸು ಮೊದಲು ಗೇಟ್‌ಗಳನ್ನು ತೆರೆಯಲಾಗುತ್ತದೆ. ಕಬ್ಬನ್ ರಸ್ತೆ ಮತ್ತು ಸಂಪರ್ಕ ರಸ್ತೆ ಮೂಲಕ ಪ್ರವೇಶ. ಕ್ವೀನ್ಸ್ ರಸ್ತೆ ಭಾಗದಿಂದ ಸಾರ್ವಜನಿಕ ಪ್ರವೇಶಕ್ಕೆ ಅವಕಾಶವಿಲ್ಲ.

ಐಪಿಎಲ್ ಪಂದ್ಯಗಳ ಟಿಕೆಟ್ ಹೊಂದಿರುವವರು ಪಂದ್ಯದ ದಿನ ಒಂದು ಬಾರಿ ಮೆಟ್ರೊದಲ್ಲಿ ಉಚಿತವಾಗಿ ಪ್ರಯಾಣಿಸಬಹುದು. ಇದಕ್ಕಾಗಿ ಕೆಎಸ್‌ಸಿಎ, ರಾಯಲ್ ಚಾಲೆಂಜರ್ಸ್ ಬೆಂಗಳೂರು ಫ್ರಾಂಚೈಸಿ ಹಾಗೂ ಬಿಎಂಆರ್‌ಸಿಎಲ್ ನಡುವೆ ನಡುವೆ ಮಾತುಕತೆ ನಡೆದಿದೆ.

ವಾಹನ ದಟ್ಟಣೆ ಹಾಗೂ ಪಾರ್ಕಿಂಗ್ ಕಿರಿಕಿರಿ ತಪ್ಪಿಸಲು ಅಭಿಮಾನಿಗಳು ಸಾಧ್ಯವಾದಷ್ಟು ಮೆಟ್ರೊ ಸೇವೆ ಬಳಸುವಂತೆ ಪೊಲೀಸರು ಮನವಿ ಮಾಡಿದ್ದಾರೆ. ಕ್ರೀಡಾಂಗಣದ ಸುತ್ತಮುತ್ತ 28 ಪ್ರವೇಶ ಹಾಗೂ ನಿರ್ಗಮನ ದ್ವಾರಗಳ ವ್ಯವಸ್ಥೆ ಇರಲಿದೆ.

ಪಂದ್ಯಗಳ ಟಿಕೆಟ್‌ಗಳು ಕೇವಲ ಆನ್‌ಲೈನ್ ಮೂಲಕ ಲಭ್ಯ ಇರುತ್ತವೆ. ಟಿಕೆಟ್ ಖರೀದಿಸಿದವರು ಒಮ್ಮೆ ಮಾತ್ರ ಕ್ರೀಡಾಂಗಣದ ಒಳಗೆ ಪ್ರವೇಶಿಸಲು ಅವಕಾಶ ಇರುತ್ತದೆ. ಟಿಕೆಟ್ ಪರಿಶೀಲನೆ ಸಂದರ್ಭದಲ್ಲಿ ನೆಟ್‌ವರ್ಕ್ ಸಮಸ್ಯೆ ಎದುರಾಗದಂತೆ ಈಗಾಗಲೇ ತಾಂತ್ರಿಕ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ.



ನಗರದಲ್ಲಿ ಇಂದು

ರಾಷ್ಟ್ರೀಯ ಪುಸ್ತಕ ಮೇಳ: ಅತಿಥಿಗಳು: ಎಸ್.ಆರ್. ನಿರಂಜನ, ಬಿ. ರಮೇಶ, ಜಿತೇಂದ್ರ ಕುಮಾರ್ ಮಿಶ್ರಾ, ರವೀಂದ್ರ ಭಂಡಾರಿ, ಪಿ. ಮೋಹನ್, ಆಯೋಜನೆ ಮತ್ತು ಸ್ಥಳ: ಜೈನ್ ಡೀಮ್ಡ್ ಟು ಬಿ ಯೂನಿವರ್ಸಿಟಿ, ಜೆಜಿಐ ನಾಲೆಜ್ ಕ್ಯಾಂಪಸ್, ಜಯನಗರ, ಬೆಳಿಗ್ಗೆ 10

'ರೇಟಿಂಗ್ ಆಫ್ ಪ್ರಾಪರ್ಟೀಸ್ ಫಾರ್ ಡಿಜಿಟಲ್ ಕನೆಕ್ಟಿವಿಟಿ' ವಿಚಾರಸಂಕಿರಣ: ಉದ್ಘಾಟನೆ: ಮಹೇಶ್ವರರಾವ್, ಅತಿಥಿಗಳು: ಬ್ರಿಜೇಂದ್ರ ಕುಮಾರ್, ಪಿ.ಕೆ. ಸಿಂಗ್, ಅನಿಲ್ ಕುಮಾರ್ ಗುಪ್ತಾ, ಆಯೋಜನೆ: ಟಿಆರ್‌ಎಐ, ಸ್ಥಳ: ಹೋಟೆಲ್ ಚಾನ್ಸರಿ ಪೆವಿಲಿಯನ್, ರೆಸಿಡೆನ್ಸಿ ರಸ್ತೆ, ಬೆಳಿಗ್ಗೆ 10ರಿಂದ

'3–ಡೇ ಅಜೆಂಟಿಕ್ ಎಐ ಸಕ್ಷಮ್ ಪ್ರೋಗ್ರಾಂ' ಉದ್ಘಾಟನೆ: ಖುಷ್ಬು ಜಿ. ಚೌಧರಿ, ಆರ್ಮಸ್ಟ್ರಾಂಗ್ ಪೆಮ್, ಅಧ್ಯಕ್ಷತೆ: ಎಸ್.ಎಂ. ಜಯಕರ, ಉಪಸ್ಥಿತಿ: ಕೆ.ಟಿ. ಶಾಂತಲಾ, ಕೆ.ಜಿ. ಚಂದ್ರಶೇಖರ, ಅಮಿತ್ ಸಿಂಗ್, ಅನನ್ಯಾ ಪಟ್ನಾಯಕ್, ಉಮಂಗ್ ಸುರಾನ, ಬಿ.ಎಲ್. ಮುರಳಿಧರ್, ಆಯೋಜನೆ: ಬೆಂಗಳೂರು ವಿಶ್ವವಿದ್ಯಾಲಯ, ಸ್ಥಳ: ಡಾ.ಬಿ.ಆರ್. ಅಂಬೇಡ್ಕರ್ ಸ್ಕೂಲ್ ಆಫ್ ಎಕ್ನಾಮಿಕ್ಸ್, ಜ್ಞಾನಭಾರತಿ ಆವರಣ, ಬೆಳಿಗ್ಗೆ 10

ವಿದ್ಯಾರ್ಥಿ ಸಾಹಿತ್ಯ ಸಂಭ್ರಮ: ಉದ್ಘಾಟನೆ: ಎಸ್. ಸೋಮನಾಥ್, ಅತಿಥಿಗಳು: ಅಚಿಮ್ ಬಿ., ಎಂ.ಕೆ. ಶ್ರೀಧರ್, ಅನಂತ್ ಅಪೂರ್ವ್ ಕುಮಾರ್, ಸಾಯಿಸ್ವರೂಪ ಅಯ್ಯರ್, ಉಷಾ ಸುಬ್ರಮಣಿಯನ್, ಆಯೋಜನೆ: ಯುವಕ ಸಂಘ, ಸ್ಥಳ: ಯುವಪಥ, ಜಯನಗರ, ಬೆಳಿಗ್ಗೆ 10

ಸಾಧಕಿಯರೊಡನೆ ಸಂವಾದ: ಉದ್ಘಾಟನೆ: ಶೈಲಜಾ ಸುರೇಶ್, ಅಧ್ಯಕ್ಷತೆ: ರಾಮಲಿಂಗೇಶ್ವರ, ಲಲಿತಮ್ಮ ಚಂದ್ರಶೇಖರ್, ವೈ.ಕೆ. ಸಂಧ್ಯಾ ಶರ್ಮ, ಆಯೋಜನೆ: ಲೇಖಿಕಾ ಸಾಹಿತ್ಯ ವೇದಿಕೆ, ಸ್ಥಳ: ಬಿ.ಎಂ.ಶ್ರೀ ಪ್ರತಿಷ್ಠಾನ, ಎನ್.ಆರ್. ಕಾಲೊನಿ, ಬೆಳಿಗ್ಗೆ 10.30

'ರಾಮಧಾನ್ಯ' ನಾಟಕ ಪ್ರದರ್ಶನ: ರಚನೆ: ರಾಮಕೃಷ್ಣ ಮರಾಠೆ, ನಿರ್ದೇಶನ: ಕೆಎಸ್‌ಡಿಎಲ್ ಚಂದ್ರು, ಸಂಯೋಜನೆ: ಎಚ್.ಎಂ. ಮಲ್ಲಿಕಾರ್ಜುನ, ಆಯೋಜನೆ ಮತ್ತು ಸ್ಥಳ: ಕ್ರೈಸ್ಟ್ ಅಕಾಡೆಮಿ ಇನ್‌ಸ್ಟಿಟ್ಯೂಟ್ ಫಾರ್ ಅಡ್ವಾನ್ಸ್ ಸ್ಟಡೀಸ್, ಮಧ್ಯಾಹ್ನ 2

'ರಕ್ತ ರಾತ್ರಿ ಅಥವಾ ವೀರ ಅಶ್ವತ್ಥಾಮ' ನಾಟಕ ಪ್ರದರ್ಶನ: ಆಯೋಜನೆ: ಛಾಯಾ ಭಾನು ಕಲಾ ಸಂಘ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಮಧ್ಯಾಹ್ನ 3

'ಆರ್ಥಿಕ ಸಾಕ್ಷರತೆ ಅರಿವು–ಯುವ ಪೀಳಿಗೆಯ ಭವಿಷ್ಯದ ಸುರಕ್ಷತೆಗೆ ಅಡಿಪಾಯ' ಉಪನ್ಯಾಸ: ಕೆ.ಜಿ. ಕೃಪಾಲ್, ಅಧ್ಯಕ್ಷತೆ: ಎಚ್.ಎನ್. ಸುಬ್ರಹ್ಮಣ್ಯ, ಉಪಸ್ಥಿತಿ: ವೈ.ಜಿ. ಮಧುಸೂದನ್, ವಿ. ವೆಂಕಟಶಿವಾರೆಡ್ಡಿ, ಬಿ.ಎಸ್. ಅರುಣ್ ಕುಮಾರ್, ತಲ್ಲಂ ಆರ್. ದ್ವಾರಕನಾಥ್, ವಿ. ಮಂಜುನಾಥ್, ಸುಧಾಕರ್ ಇಸ್ತೂರಿ, ಜಿ.ಎಂ. ರವೀಂದ್ರ, ಪಿ.ಎಲ್. ವೆಂಕಟರಾಮ ರೆಡ್ಡಿ, ಆಯೋಜನೆ: ಬೆಂಗಳೂರು ವಿಜ್ಞಾನ ವೇದಿಕೆ, ಬೆಂಗಳೂರು ಸಮಾಜ ವಿಜ್ಞಾನ ವೇದಿಕೆ, ಸ್ಥಳ: ಮಲ್ಟಿಮೀಡಿಯಾ ಹಾಲ್, ನ್ಯಾಷನಲ್ ಕಾಲೇಜು ಜಯನಗರ, ಮಧ್ಯಾಹ್ನ 3.45

'ಐ ರೈಸ್–ಎಡಿಷನ್ 12' ಪ್ರದರ್ಶನದ ಉದ್ಘಾಟನೆ: ರೇಖಾ ಹೆಬ್ಬಾರ್ ರಾವ್, ಉಪಸ್ಥಿತಿ: ಅಮೃತಾ ಆರ್. ಭಾರತಿ ಸಾಗರ್, ನಿರ್ಮಲಾ ಕುಮಾರಿ ಸಿ.ಎಸ್., ರುನಾ ಬಿಸ್ವಾಸ್, ಸಂಗೀತಾ ಕೆ., ಸೀಮಾ ಜೈನ್, ಸೋನಲ್ ವಿ., ಸ್ಥಳ: ಆರ್ಟ್ ಹೌಸ್, ವಸಂತನಗರ, ಸಂಜೆ 5

ಮುತ್ಯಾಲಮ್ಮ ದೇವಿ ರಥೋತ್ಸವ: ಹೂವಿನ ಪಲ್ಲಕ್ಕಿ ಉತ್ಸವ, ಆಯೋಜನೆ ಮತ್ತು ಸ್ಥಳ: ಮುತ್ಯಾಲಮ್ಮ ದೇವಿ ದೇವಸ್ಥಾನ ಟ್ರಸ್ಟ್, ಮುತ್ಯಾಲಮ್ಮ ಕೆ. ಸ್ಟ್ರೀಟ್, ಶಿವಾಜಿನಗರ, ಸಂಜೆ 7

ಕರಗ ಶಕ್ತ್ಯೋತ್ಸವ: ಮಧ್ಯಾಹ್ನ 12.30ಕ್ಕೆ ಕರಗದ ಕುಂಟೆಯಲ್ಲಿ ಪೂಜೆ, ಸ್ಥಳ: ಕಬ್ಬನ್ ಉದ್ಯಾನ (ಕರಗದ ಕುಂಟೆ), ವಿಶೇಷ ಪೂಜೆ, ಧರ್ಮರಾಯ ಸ್ವಾಮಿಗೆ ಅರಿಶಿನ ಅಲಂಕಾರ, ಆಯೋಜನೆ ಮತ್ತು ಸ್ಥಳ: ಧರ್ಮರಾಯಸ್ವಾಮಿ ದೇವಸ್ಥಾನ ಆವರಣ, ಸಂಜೆ 7.30

ರಾಮನವಮಿ ವಿಶೇಷ



120ನೇ ವರ್ಷದ ಶ್ರೀರಾಮೋತ್ಸವ: ಕರ್ನಾಟಕ ಶಾಸ್ತ್ರೀಯ ಸಂಗೀತ, ಗಾಯನ: ಉಮಾಕುಮಾರ್ ಮತ್ತು ತಂಡ, ಗಾಯನ: ಚಿಂತನಪಲ್ಲಿ ಶ್ರೀನಿವಾಸ್, ಪಿಟೀಲು: ಎಂ.ಎನ್. ಸತ್ಯನಾರಾಯಣ, ಮೃದಂಗ: ಶ್ರೀನಿವಾಸ್ ಅನಂತರಾಮಯ್ಯ, ಆಯೋಜನೆ: ಶ್ರೀರಾಮ ಭಕ್ತ ಸಭಾ, ಸ್ಥಳ: ಶ್ರೀಕಂಠೇಶ್ವರ ಭವನ, ಐದನೇ ಅಡ್ಡ ರಸ್ತೆ, ಮಲ್ಲೇಶ್ವರ, ಸಂಜೆ 5.30

'ಶ್ರೀಮದ್ ರಾಮಾಯಣ' ಉಪನ್ಯಾಸ: ವಿದ್ಯಾಸಿಂಧುಮಾಧವ ತೀರ್ಥ ಸ್ವಾಮೀಜಿ, ಆಯೋಜನೆ ಹಾಗೂ ಸ್ಥಳ: ಅಭಯ ಲಕ್ಷ್ಮೀ ನರಸಿಂಹ ಚಾರಿಟೇಬಲ್ ಟ್ರಸ್ಟ್, ತ್ಯಾಗರಾಜನಗರ, ಸಂಜೆ 6

26ನೇ ಶ್ರೀರಾಮ ನವಮಿ ಸಂಗೀತೋತ್ಸವ: ಲಯ ರಂಜಿನಿ: ಜಿ.ಎಸ್. ನಾಗರಾಜ್ ಮತ್ತು ತಂಡ, ಸ್ಥಳ: ಆಂಜನೇಯ ಮತ್ತು ರಾಘವೇಂದ್ರ ಸ್ವಾಮಿ ದೇವಸ್ಥಾನದ ಆವರಣ, ಎಂಟನೇ ಕ್ರಾಸ್, ವೆಸ್ಟ್ ಪಾರ್ಕ್ ರಸ್ತೆ, ಮಲ್ಲೇಶ್ವರ, ಸಂಜೆ 6.30

ಶ್ರೀರಾಮನವಮಿ ಉತ್ಸವ: ಹರಿದಾಸ ಮಂಜರಿ: ಗಾಯನ: ಅನನ್ಯ ಬೆಳವಾಡಿ, ಕೀ–ಬೋರ್ಡ್: ಅಮಿತ್ ಶರ್ಮಾ, ತಬಲಾ: ಸರ್ವೋತ್ತಮ, ಸ್ಥಳ: ಶ್ರೀರಾಮ ಮಂದಿರ, ಮಲ್ಲೇಶ್ವರ, ಸಂಜೆ 6.30

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in


AMRITA
MBA
UNLEARN. RELEARN. LEAD.
LEADERSHIP BEGINS WITH REINVENTION.
2026 ADMISSIONS OPEN
UP TO 75%* FEE WAIVER FOR TOPPERS IN ACAT / CAT / MAT / KMAT / XAT
₹24.84 LAKHS HIGHEST CTC IN 2025
93.62% PLACEMENT IN 2025
+91 1169323436
amrita.edu/mba
AMRITA
M.TECH.
ENGINEER YOUR NEXT LEAP.
2026 ADMISSIONS OPEN
Eligibility
• Apply with your UG Scores
• Direct Admission for GATE-qualifiers
₹24.5 LAKHS HIGHEST CTC IN 2025
₹10.87 LAKHS AVERAGE CTC IN 2025
SCHOLARSHIP UP TO ₹10,000* PER MONTH
0476 2805555
amrita.edu/mtech
DOWNLOAD HAND BOOK
Invent.
Innovate.
Impact.
AMRITA
B.TECH.
2026 ADMISSIONS OPEN
Apply with AEEE/JEE MAINS Scores
Last Date for AEEE Phase 2: APRIL 15
UPTO 75% FEE WAIVER*
92% PLACEMENTS IN 2025
₹80.4 LAKHS HIGHEST CTC IN 2025
95855 92255
aeee.amrita.edu
AMRITA VISHWA VIDYAPEETHAM
DEEMED TO BE UNIVERSITY UNDER SECTION 3 OF UGC ACT, 1956
nirf GOVT. OF INDIA
8TH RANKED UNIVERSITY IN INDIA 2025
No.1 IN INDIA
Times Higher Education Impact Rankings 2025
NBA NATIONAL BOARD of ACCREDITATION
NAAC A++ ACCREDITED
CATEGORY 1 GRADED AUTONOMY UGC, GOVT. OF INDIA
AACSB ACCREDITED* ASB COIMBATORE CAMPUS
University at Buffalo
MBA-MS Dual Degree* An ASB Bengaluru collaboration
Our Campuses
AMARAVATI | AMRITAPURI | BENGALURU | CHENNAI | COIMBATORE | FARIDABAD | HARIDWAR | KOCHI | MYSURU | NAGERCOIL
*T & C apply

ಹೈಕೋರ್ಟ್ ನೋಟಿಸ್

ಬೆಂಗಳೂರು: ಪೋಷಣ್–2 ಅಭಿಯಾನದಡಿ ಅಂಗನವಾಡಿ ಕೇಂದ್ರಗಳಲ್ಲಿ ಗರ್ಭಿಣಿಯರು, ಬಾಣಂತಿಯರು ಸೇರಿದಂತೆ ಫಲಾನುಭವಿಗಳಿಗೆ ಪೌಷ್ಟಿಕ ಆಹಾರ ವಿತರಿಸುವಾಗ ಮುಖ ಗುರುತಿಸುವಿಕೆಯನ್ನು ಕಡ್ಡಾಯಗೊಳಿಸಿರುವ ಷರತ್ತನ್ನು ಪ್ರಶ್ನಿಸಿದ ಅರ್ಜಿ ಕುರಿತಂತೆ ಕೇಂದ್ರ ಹಾಗೂ ರಾಜ್ಯ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

‘ಅಜಿತ್ ಪವಾರ್: ವ್ಯವಸ್ಥಿತ ಕೊಲೆ’

ಅಳಿಯ ರೋಹಿತ್ ರಾಜೇಂದ್ರ ಪವಾರ್ ದೂರು ಆಧರಿಸಿ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮಹಾರಾಷ್ಟ್ರದ ಮಾಜಿ ಉಪ ಮುಖ್ಯಮಂತ್ರಿ ಅಜಿತ್ ಪವಾರ್ ಅವರ ಸಾವು ಕೇವಲ ಅಪಘಾತವಲ್ಲ, ಅದೊಂದು ವ್ಯವಸ್ಥಿತ ಕೊಲೆ’ ಎಂದು ಆರೋಪಿಸಿ ಅವರ ಅಳಿಯ ರೋಹಿತ್ ರಾಜೇಂದ್ರ ಪವಾರ್ ಅವರು ನಗರದ ಹೈಗ್ರೌಂಡ್ಸ್ ಪೊಲೀಸ್ ಠಾಣೆಗೆ ದೂರು ನೀಡಿದ್ದು, ಸೋಮವಾರ ಎಫ್‌ಐಆರ್ ದಾಖಲಾಗಿದೆ.

‘ರೋಹಿತ್ ರಾಜೇಂದ್ರ ಪವಾರ್ ಅವರು ನೀಡಿರುವ ದೂರು ಆಧರಿಸಿ ‘ಶೂನ್ಯ ಎಫ್‌ಐಆರ್’ ದಾಖಲು ಮಾಡಿಕೊಂಡು, ಆ ರಾಜ್ಯದ ಸಂಬಂಧಪಟ್ಟ ಠಾಣೆಗೆ ವರ್ಗಾವಣೆ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಪ್ರಕರಣದ ಸಂಬಂಧ ಮಹಾರಾಷ್ಟ್ರದ ವಿವಿಧ ಪೊಲೀಸ್ ಠಾಣೆಗಳಲ್ಲಿ ದೂರು ನೀಡಲಾಗಿತ್ತು. ಆದರೆ, ಅಲ್ಲಿನ ಪೊಲೀಸರು ಪ್ರಕರಣ ದಾಖಲಿಸಿಕೊಳ್ಳಲು ನಿರಾಕರಿಸಿದ್ದರಿಂದ ಹೈಗ್ರೌಂಡ್ಸ್ ಠಾಣೆಗೆ ದೂರು ನೀಡಲಾಯಿತು’ ಎಂದು ರೋಹಿತ್ ಪವಾರ್ ತಿಳಿಸಿದ್ದಾರೆ.

ಜ.28ರಂದು ಪುಣೆಯ ಬಾರಾಮತಿ ವಿಮಾನ ನಿಲ್ದಾಣದ ಬಳಿ ನಡೆದ ವಿಮಾನ ಪತನ ಘಟನೆಯಲ್ಲಿ ಅಜಿತ್ ಪವಾರ್ ಮೃತಪಟ್ಟಿದ್ದರು.

‘ಅಮೆರಿಕದಿಂದ ಹಾರಾಟಕ್ಕೆ ಯೋಗ್ಯವಲ್ಲದ ವಿಮಾನ ತಂದು ಬಳಸಲಾಗಿತ್ತು. ವಿಮಾನದ ಸುರಕ್ಷಿತ ಹಾರಾಟದ ಮಿತಿ 5 ಸಾವಿರ ಗಂಟೆ ಆಗಿತ್ತು. ಆದರೆ, ಸುಮಾರು 8 ಸಾವಿರ ಗಂಟೆ ಹಾರಾಟ ನಡೆಸಿದ್ದ ದಾಖಲೆಗಳನ್ನು ತಿದ್ದಿ ಬಳಸಲಾಗಿದೆ. ಈ ಸಂಬಂಧ ತನಿಖೆ ನಡೆಸಬೇಕು’ ಎಂದು ದೂರಿನಲ್ಲಿ ತಿಳಿಸಿದ್ದಾರೆ.

‘ವಿಮಾನದ ಪೈಲಟ್ ಸುಮಿತ್ ಕಪೂರ್ ಅವರು ಈ ಹಿಂದೆ ಎರಡು ಬಾರಿ ಮದ್ಯಪಾನ ಮಾಡಿ ಸಿಕ್ಕಿಬಿದ್ದು, ಅಮಾನತುಗೊಂಡಿದ್ದರು. ಆ ರೀತಿಯ ಹಿನ್ನೆಲೆಯುಳ್ಳ ಪೈಲಟ್ ಅನ್ನು ಉಪ ಮುಖ್ಯಮಂತ್ರಿ ಪ್ರಯಾಣಿಸುತ್ತಿದ್ದ



ಅಜಿತ್ ಪವಾರ್

ವಿಮಾನಕ್ಕೆ ಪೈಲಟ್ ಆಗಿ ನೇಮಿಸಿದ್ದು ಯಾಕೆ? ಮೊದಲು ನಿಗದಿಯಾಗಿದ್ದ ಪೈಲಟ್ ಅನ್ನು ಕೊನೆಯ ಕ್ಷಣದಲ್ಲಿ ಬದಲಿಸಿ, ಕಪೂರ್ ಮತ್ತು ತಂಡವನ್ನು ನೇಮಿಸಲಾಗಿತ್ತು. ಇದು ಉದ್ದೇಶಪೂರ್ವಕ ಸಂಚಿನ ಭಾಗವೇ ಎಂಬ ಅನುಮಾನ ಇದೆ’ ಎಂಬುದಾಗಿ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

‘ಅಜಿತ್ ಪವಾರ್ ಅವರು ರಸ್ತೆ ಮೂಲಕ ಪ್ರಯಾಣಿಸಬೇಕಿತ್ತು. ಆದರೆ, ಕೊನೆಯ ಕ್ಷಣದಲ್ಲಿ ಅದು ವಿಮಾನ ಪ್ರಯಾಣವಾಗಿ ಬದಲಾಗಿದ್ದು ಹೇಗೆ? ಇದರ ಹಿಂದೆ ಯಾರಿದ್ದಾರೆ ಎಂಬ ತನಿಖೆ ನಡೆಸಬೇಕು’ ಎಂದು ಕೋರಿದ್ದಾರೆ.

ಬಾರಾಮತಿಯಲ್ಲಿ ದಟ್ಟ ಮಂಜು ಕವಿದಿದ್ದರೂ ವಿಮಾನ ಇಳಿಯಲು ಅನುಮತಿ ನೀಡಿದ್ದು ಯಾರು ಎಂಬುದನ್ನೂ ಪತ್ತೆ ಮಾಡಬೇಕು ಎಂದು ರೋಹಿತ್ ದೂರಿನಲ್ಲಿ ಕೋರಿದ್ದಾರೆ.

ನಗರಸಭೆ ಮಾಜಿ ಸದಸ್ಯೆ ಸೇರಿ 6 ಮಂದಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ವಿವಿಧ ಜಿಲ್ಲಾ ನ್ಯಾಯಾಲಯಗಳಲ್ಲಿ ನೌಕರಿ ಕೊಡಿಸುವುದಾಗಿ ನಂಬಿಸಿ ಹಣ ಪಡೆದು ವಂಚಿಸುತ್ತಿದ್ದ ಪ್ರಕರಣದಲ್ಲಿ, ಕೊಪ್ಪಳ ನಗರಸಭೆಯ ಮಾಜಿ ಸದಸ್ಯೆ ವಿಜಯಾ ಹಿರೇಮಠ್ ಸೇರಿದಂತೆ ಮತ್ತೆ ಆರು ಆರೋಪಿಗಳನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ. ಈ ಪ್ರಕರಣದಲ್ಲಿ ಬಂಧಿತರ ಸಂಖ್ಯೆ 8ಕ್ಕೆ ಏರಿಕೆ ಆಗಿದೆ.

ಕೊಪ್ಪಳ ನಗರಸಭೆ ಮಾಜಿ ಸದಸ್ಯೆ ವಿಜಯಾ ಹಿರೇಮಠ್, ಸಿದ್ದಲಿಂಗಯ್ಯ ಹಿರೇಮಠ್, ಚಿತ್ರದುರ್ಗದ ಜಿ.ಎಸ್. ವೆಂಕಟರೆಡ್ಡಿ, ಬೆಂಗಳೂರಿನ ವಿದ್ಯಾರಣ್ಯಪುರದ ನಿವಾಸಿ, ರಾಜಕೀಯ ಪಕ್ಷವೊಂದರ ಮುಖಂಡ ಎಂ. ತಿಪ್ಪೇಸ್ವಾಮಿ, ರಾಕೇಶ್ ಹಾಗೂ ಮಹೇಶ್ ಬಂಧಿತರು. ಇದೇ ಪ್ರಕರಣದಲ್ಲಿ ಎರಡು ದಿನಗಳ ಹಿಂದೆ ಚಿಕ್ಕಮಗಳೂರಿನ ಜೈಸನ್ ಡಿಸೋಜಾ ಮತ್ತು ಲವೀನಾ ದಂಪತಿಯನ್ನು ಬಂಧಿಸಲಾಗಿತ್ತು.

ಆರೋಪಿಗಳಿಂದ ₹38 ಲಕ್ಷ ವಶಕ್ಕೆ ಪಡೆದುಕೊಳ್ಳಲಾಗಿದೆ. ಜಿಲ್ಲಾ ನ್ಯಾಯಾಲಯಗಳಲ್ಲಿ ಎಫ್‌ಡಿಎ, ಎಸ್‌ಡಿಎ ಹಾಗೂ ಚಾಲಕ ಕೆಲಸವನ್ನು ಕೊಡಿಸುವುದಾಗಿ ಆರೋಪಿಗಳು ನಂಬಿಸಿ ಹಣ ಪಡೆದು ವಂಚಿಸಿದ್ದರು. ಇದುವರೆಗೂ ನಡೆದ ತನಿಖೆಯಲ್ಲಿ 450ಕ್ಕೂ ಅಭ್ಯರ್ಥಿಗಳಿಂದ ಆರೋಪಿಗಳು ಹಣ ಪಡೆದುಕೊಂಡಿದ್ದಾರೆ ಎಂಬುದು ಗೊತ್ತಾಗಿದೆ. ಹಣ ಕಳೆದುಕೊಂಡ ಅಭ್ಯರ್ಥಿಯೊಬ್ಬರು ನೀಡಿದ ದೂರು ಆಧರಿಸಿ ತನಿಖೆ ನಡೆಸಿದಾಗ ಆರೋಪಿಗಳ ಕೃತ್ಯ ಬಯಲಾಯಿತು ಎಂದು ಪೊಲೀಸರು ಹೇಳಿದರು.

ಉದ್ಯೋಗ ಆಕಾಂಕ್ಷಿಗಳಿಗೆ ಕೆಲಸ ಕೊಡಿಸುವ ಆಮಿಷವೊಡ್ಡಲು ಆರೋಪಿಗಳು ಮಧ್ಯವರ್ತಿಗಳನ್ನು ನೇಮಿಸಿಕೊಂಡಿದ್ದರು. ಆಕಾಂಕ್ಷಿಗಳಿಂದ ಆನ್‌ಲೈನ್, ನಗದು ರೂಪದಲ್ಲಿ ಹಣ ಪಡೆದುಕೊಂಡಿರುವುದು ತನಿಖೆ ವೇಳೆ ಗೊತ್ತಾಗಿದೆ ಎಂದು ಪೊಲೀಸರು ಹೇಳಿದರು.

ವಿವಿಧ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣ: ಚಿಕ್ಕಬಳ್ಳಾಪುರ, ಯಲಹಂಕ ನ್ಯೂಟೌನ್, ಬೊಮ್ಮನಹಳ್ಳಿ, ಆರ್.ಟಿ.ನಗರ, ಗದಗದ ಸೆನ್, ಮಂಡ್ಯ ಜಿಲ್ಲೆ ಕೆಸ್ತೂರು, ಬ್ಯಾಟರಾಯನಪುರ, ಜಾಲಹಳ್ಳಿ, ಕೊಡಿಗೇಹಳ್ಳಿ, ಜ್ಞಾನಭಾರತಿ, ಮಂಗಳೂರು ಊರ್ವ, ಬಸವೇಶ್ವರನಗರ, ಗಂಗಮ್ಮನಗುಡಿ ಪೊಲೀಸ್ ಠಾಣೆಯಲ್ಲಿ ಆರೋಪಿಗಳ ವಿರುದ್ಧ ಪ್ರಕರಣ ದಾಖಲಾಗಿದ್ದವು ಎಂದು ಮೂಲಗಳು ಹೇಳಿವೆ.

‘ನಿರುದ್ಯೋಗಿಗಳು, ಖಾಸಗಿ ಕಂಪನಿಗಳಲ್ಲಿ ಕಡಿಮೆ ಸಂಬಳಕ್ಕೆ ಕೆಲಸ ಮಾಡುತ್ತಿದ್ದವರನ್ನು ಗುರಿಯಾಗಿಸಿಕೊಂಡು ಆರೋಪಿಗಳು ವಂಚಿಸುತ್ತಿದ್ದರು. ಅಭ್ಯರ್ಥಿಗಳಿಂದ ₹10 ಲಕ್ಷದಿಂದ ₹25 ಲಕ್ಷದವರೆಗೆ ವಸೂಲಿ ಮಾಡುತ್ತಿದ್ದರು’ ಎಂದು ಸಿಸಿಬಿ ಮೂಲಗಳು ಹೇಳಿವೆ.

‘ಒಳಮೀಸಲಾತಿ ಜಾರಿ ನಂತರ ನೇಮಕಾತಿ ಮಾಡಿ’

ಬೆಂಗಳೂರು: ಪರಿಶಿಷ್ಟ ಜಾತಿಯ ಒಳಮೀಸಲಾತಿ ಜಾರಿಗೊಳಿಸಿದ ನಂತರವೇ ರಾಜ್ಯ ಸರ್ಕಾರವು 56,432 ಹುದ್ದೆಗಳನ್ನು ಭರ್ತಿ ಮಾಡಬೇಕು ಎಂದು ಒಳಮೀಸಲಾತಿ ಹೋರಾಟ ಸಮಿತಿ ಆಗ್ರಹಿಸಿದೆ.

ಈಗಾಗಲೇ ಒಳಮೀಸಲಾತಿಗೆ ಸಂಬಂಧಿಸಿದ ಎ.ಜೆ. ಸದಾಶಿವ ಆಯೋಗ, ಮಾಧುಸ್ವಾಮಿ ಹಾಗೂ ಎಚ್.ಎನ್. ನಾಗಮೋಹನದಾಸ್ ಆಯೋಗದ ವರದಿಗಳಲ್ಲಿ ಮಾದಿಗ ಸಂಬಂಧಿತ ಸಮುದಾಯಗಳಿಗೆ ಶೇಕಡ 6, ಅಲೆಮಾರಿ ಸಮುದಾಯಗಳಿಗೆ ಶೇ 1 ಒಳಮೀಸಲಾತಿ ಹಂಚಿಕೆ ಮಾಡುವಂತೆ ಶಿಫಾರಸು ಮಾಡಲಾಗಿದೆ. ಇದೇ 27ರಂದು ನಡೆಯುವ ವಿಶೇಷ ಸಚಿವ ಸಂಪುಟ ಸಭೆಯಲ್ಲಿ ರಾಜ್ಯ ಸರ್ಕಾರ ಒಳಮೀಸಲಾತಿ ಜಾರಿಗೊಳಿಸುವ ತೀರ್ಮಾನ ಕೈಗೊಳ್ಳಬೇಕು. ಇಲ್ಲದಿದ್ದರೆ ಮುಂದಿನ ಹೋರಾಟದ ಕುರಿತು ತೀರ್ಮಾನ ಕೈಗೊಳ್ಳಲಾಗುವುದು ಎಂದು ಸಮಿತಿಯ ಮುಖಂಡರಾದ ಮಾರಸಂದ್ರ ಮುನಿಯಪ್ಪ, ಅಂಬಣ್ಣ ಅರೋಲಿಕರ್, ಬಸವರಾಜ್ ಕೌತಾಳ್, ನರಸಪ್ಪ ದಂಡೋರ, ಬಿ.ಆರ್. ಭಾಸ್ಕರ್ ಪ್ರಸಾದ್, ಎಂ. ಗುರುಮೂರ್ತಿ, ಕರಿಯಪ್ಪ ಗುಡಿಮನಿ ತಿಳಿಸಿದ್ದಾರೆ.

ಚೆಲುವನಾರಾಯಣ ಸ್ವಾಮಿ ಕಲ್ಯಾಣೋತ್ಸವ

ಮೇಲುಕೋಟೆ: ಇಲ್ಲಿನ ವೈರಮುಡಿ ಬ್ರಹ್ಮೋತ್ಸವ ಅಂಗವಾಗಿ ಚೆಲುವನಾರಾಯಣ ಸ್ವಾಮಿ ಹಾಗೂ ಕಲ್ಯಾಣಿ ನಾಯಕಿ ಅಮ್ಮನವರ ಕಲ್ಯಾಣೋತ್ಸವ ಪಂಚ ಕಲ್ಯಾಣಿಯ ಧಾರಾ ಮಂಟಪದಲ್ಲಿ ಮಂಗಳವಾರ ರಾತ್ರಿ ವೈಭವದಿಂದ ನೆರವೇರಿತು.

ಲಾರಿಗೆ ಖಾಸಗಿ ಬಸ್ ಡಿಕ್ಕಿ: ಇಬ್ಬರ ಸಾವು

ಹಿರೀಸಾವೆ (ಹಾಸನ ಜಿಲ್ಲೆ): ಇಲ್ಲಿನ ಅಮ್ಮಕುಟೀರ ಬಡಾವಣೆಯ ಬಳಿ ಮಂಗಳವಾರ ಖಾಸಗಿ ಬಸ್ ಲಾರಿಗೆ ಡಿಕ್ಕಿ ಹೊಡೆದು, ಬಸ್‌ನಲ್ಲಿದ್ದ ಇಬ್ಬರು ಮೃತಪಟ್ಟು, 7ಕ್ಕೂ ಹೆಚ್ಚು ಪ್ರಯಾಣಿಕರು ಗಾಯಗೊಂಡಿದ್ದಾರೆ.

ಕುಂದಾಪುರದ ಕೃಷ್ಣಶೆಟ್ಟಿ (45) ಅವರು ಅಪಘಾತ ಸ್ಥಳದಲ್ಲಿ ಹಾಗೂ ಹಾಸನದ ಕೃಷ್ಣ ಬಡಾವಣೆಯ ಮಧು (29) ಆಸ್ಪತ್ರೆಯಲ್ಲಿ ಮೃತಪಟ್ಟರು.

ಮಂಗಳೂರಿನಿಂದ ಬೆಂಗಳೂರಿಗೆ ಹೋಗುತ್ತಿದ್ದ ದುರ್ಗಾಂಬಾ ಟ್ರಾವೆಲ್ಸ್ ಬಸ್ ರಾಷ್ಟ್ರೀಯ ಹೆದ್ದಾರಿ 75ರಲ್ಲಿ ವಾಹನವೊಂದನ್ನು ಹಿಂದಿಕ್ಕಿ ಮುಂದೆ ಹೋಗುತ್ತಿದ್ದ ಲಾರಿಗೆ ಡಿಕ್ಕಿ ಹೊಡೆದಿದೆ.

ಸಿಲಿಂಡರ್‌ಗಾಗಿ ಪರದಾಟ

ಬೆಂಗಳೂರು: ನಗರದ ಲಿಂಗರಾಜಪುರದಲ್ಲಿ ಇರುವ ವಿನಯ್ ಎಂಟರ್‌ಪ್ರೈಸಸ್ ಮುಂದೆ ಮಂಗಳವಾರ ಬೆಳಿಗ್ಗೆ ಗೃಹಬಳಕೆಯ ಸಿಲಿಂಡರ್‌ಗಾಗಿ ನೂರಾರು ಜನರು ಸಾಲಿನಲ್ಲಿ ನಿಂತು ಪರದಾಡಿದರು.

‘ಬುಕ್ಕಿಂಗ್ ಮಾಡಿ 15 ದಿನವಾದರೂ ಮನೆಗೆ ಸಿಲಿಂಡರ್ ಪೂರೈಕೆ ಆಗಿಲ್ಲ. ಫೋನ್ ಮಾಡಿದರೆ ಇಲ್ಲಿಗೇ ಬಂದು ತೆಗೆದುಕೊಂಡು ಹೋಗಿ ಎನ್ನುತ್ತಿದ್ದಾರೆ’ ಎಂದು ಗ್ರಾಹಕರು ಅಸಮಾಧಾನ ವ್ಯಕ್ತಪಡಿಸಿದರು.

‘ಈ ತಿಂಗಳ 10ರಂದು ಬುಕ್ಕಿಂಗ್ ಮಾಡಿದ್ದೆ. ಇದುವರೆಗೂ ಸಿಲಿಂಡರ್ ಬಂದಿಲ್ಲ. ಎರಡೂ ಸಿಲಿಂಡರ್‌ಗಳು ಖಾಲಿ ಆಗಿವೆ. ಇವತ್ತು ಕೆಲಸ ಬಿಟ್ಟು ಸಾಲಿನಲ್ಲಿ ನಿಂತಿದ್ದೇನೆ’ ಎಂದು ಮಹಿಳೆಯೊಬ್ಬರು ಬೇಸರ ವ್ಯಕ್ತಪಡಿಸಿದರು.

‘5000 ಜನರು ಬುಕ್ಕಿಂಗ್ ಮಾಡಿದ್ದಾರೆ. ದಿನಕ್ಕೆ 300–400 ಸಿಲಿಂಡರ್ ಅಷ್ಟೇ ಪೂರೈಕೆಯಾಗುತ್ತಿದೆ. ಮಂಗಳವಾರ 2 ಲೋಡ್ ಬಂದಿದೆ. ಆದರೆ ಇದು ಸಾಕಾಗುವುದಿಲ್ಲ’ ಎಂದು ಏಜೆನ್ಸಿಯ ಮಾಲೀಕರು ತಿಳಿಸಿದರು.

ನಾಯಂಡಹಳ್ಳಿ: 343 ಕೆ.ಜಿ. ಗಾಂಜಾ ಜಪ್ತಿ

ಸಿಸಿಬಿ, ಕಾಡುಗೋಡಿ, ಉಪ್ಪಾರಪೇಟೆ ಪೊಲೀಸರ ಭರ್ಜರಿ ಕಾರ್ಯಾಚರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ವಿವಿಧೆಡೆ ಸಿಸಿಬಿಯ ಮಾದಕ ದ್ರವ್ಯ ನಿಗ್ರಹ ದಳ, ಕಾಡುಗೋಡಿ ಹಾಗೂ ಉಪ್ಪಾರಪೇಟೆ ಠಾಣೆಯ ಪೊಲೀಸರು ಕಾರ್ಯಾಚರಣೆ ನಡೆಸಿ, ₹11.04 ಕೋಟಿ ಮೌಲ್ಯದ ಡ್ರಗ್ಸ್ ಜಪ್ತಿ ಮಾಡಿದ್ದು, ಐವರು ಆರೋಪಿಗಳನ್ನು ಬಂಧಿಸಿದ್ದಾರೆ.


ರವಿ ಕುಮಾರ್

ಬಂಧಿತರಿಂದ 3 ಕೆ.ಜಿ. 912 ಗ್ರಾಂ ಎಂಡಿಎಂಎ, 343 ಕೆ.ಜಿ. ಗಾಂಜಾ, ಒಂದು ಸರಕು ಸಾಗಣೆ ವಾಹನ, ಒಂದು ಮೊಬೈಲ್ ಜಪ್ತಿ ಮಾಡಿಕೊಳ್ಳಲಾಗಿದೆ ಎಂದು ನಗರ ಪೊಲೀಸ್ ಕಮಿಷನರ್ ಸೀಮಾಂತ್ ಕುಮಾರ್ ಸಿಂಗ್ ಮಾಧ್ಯಮಗೋಷ್ಠಿಯಲ್ಲಿ ಮಂಗಳವಾರ ಮಾಹಿತಿ ನೀಡಿದರು.

ಮೈಸೂರು ರಸ್ತೆಯ ನಾಯಂಡಹಳ್ಳಿಯ ಬಳಿ ಕಾರ್ಯಾಚರಣೆ ನಡೆಸಿದ ಸಿಸಿಬಿ ಪೊಲೀಸರು, ರವಿ ಕುಮಾರ್ ಎಂಬಾತನನ್ನು ಬಂಧಿಸಿದ್ದಾರೆ.

ಕೊಡಗು ಜಿಲ್ಲೆ ಸೋಮವಾರಪೇಟೆಯ ರವಿ ಕುಮಾರ್, ದೊಡ್ಡಬಿದಿರುಕಲ್ಲು ಬಳಿ ಬಾಡಿಗೆ ಮನೆ ಪಡೆದು ನೆಲಸಿದ್ದ. ಆರೋಪಿಯಿಂದ ₹3.57 ಕೋಟಿ ಮೌಲ್ಯದ ಡ್ರಗ್ಸ್ ಜಪ್ತಿ ಮಾಡಿದ್ದಾರೆ. ಆರೋಪಿಯ ವಿರುದ್ಧ ಈ ಹಿಂದೆ ಕೊಳ್ಳೇಗಾಲ ಗ್ರಾಮಾಂತರ ಪೊಲೀಸ್ ಠಾಣೆಯಲ್ಲೂ ಪ್ರಕರಣ ದಾಖಲಾಗಿತ್ತು.

ಅಪರಾಧ ಸುದ್ದಿ

ಆರೋಪಿ ಕ್ಯಾಂಟರ್ ಚಾಲಕನಾಗಿದ್ದಾನೆ. ವಾಹನಗಳನ್ನು ಗುತ್ತಿಗೆ ಪಡೆದು ರಾಜ್ಯ ಮತ್ತು ಅಂತರರಾಜ್ಯಕ್ಕೆ ಸರಕು ಸಾಗಾಟ ಮಾಡುತ್ತಿದ್ದ. ಆಂಧ್ರ ಪ್ರದೇಶದಿಂದ ಗಾಂಜಾ ತಂದು ನಗರದಲ್ಲಿ ಮಾರಾಟ ಮಾಡುತ್ತಿದ್ದ ಎಂದು ಪೊಲೀಸರು ಹೇಳಿದರು.

ಆರೋಪಿಯ ಇಬ್ಬರು ಸಹಚರರು, ಮೊದಲೇ ಆಂಧ್ರ ಪ್ರದೇಶಕ್ಕೆ ತೆರಳಿ ಗಾಂಜಾ ಖರೀದಿಸಿ ಪ್ಯಾಕ್ ಮಾಡಿಸುತ್ತಿದ್ದರು. ಬಳಿಕ ಈತನಿಗೆ ಮಾಹಿತಿ ನೀಡುತ್ತಿದ್ದರು. ಈತ ತನ್ನ ಕ್ಯಾಂಟರ್ ವಾಹನದಲ್ಲಿ ಗಾಂಜಾ ತೆಗೆದುಕೊಂಡು ಬರುತ್ತಿದ್ದ. ಬಳಿಕ ಮಂಡ್ಯ, ಮಳವಳ್ಳಿ ಹಾಗೂ ಚಾಮರಾಜನಗರ ಭಾಗಕ್ಕೆ ಮಾದಕ ವಸ್ತು ಪೂರೈಕೆ ಮಾಡುತ್ತಿದ್ದ ಎಂದು ಸಿಸಿಬಿ ಪೊಲೀಸರು ಮಾಹಿತಿ ನೀಡಿದರು. ಸಿಸಿಬಿ ಪಿಐ ರಾಜಪ್ಪ ಮತ್ತು ತಂಡ ಕಾರ್ಯಾಚರಣೆ ನಡೆಸಿದೆ.

ಗುತ್ತಿಗೆದಾರನ ಬಂಧನ: ಮತ್ತೊಂದು ಪ್ರಕರಣದಲ್ಲಿ ಮೆಜೆಸ್ಟಿಕ್ ಸಮೀಪದ ಆರ್‌.ಕೆ.ಪುರದಲ್ಲಿ ಇರುವ ಲಾಡ್ಜ್‌ವೊಂದರಲ್ಲಿ ಮಾದಕ ವಸ್ತು ಸಂಗ್ರಹಿಸಿಟ್ಟುಕೊಂಡಿದ್ದ ಬೀದರ್‌ನ ಗುತ್ತಿಗೆದಾರನನ್ನು ಉಪ್ಪಾರಪೇಟೆ ಠಾಣೆ ಪೊಲೀಸರು ಬಂಧಿಸಿದ್ದಾರೆ. ಬೀದರ್‌ನ ಬಸವಕಲ್ಯಾಣದ ಕಿರಣ್(32) ಬಂಧಿತ.

ಆರೋಪಿಯಿಂದ ₹7.60 ಕೋಟಿ ಮೌಲ್ಯದ 3 ಕೆ.ಜಿ. 900 ಗ್ರಾಂ ಎಂಡಿಎಂಎ ವಶಕ್ಕೆ ಪಡೆಯಲಾಗಿದೆ.

ಬೀದರ್‌ನಲ್ಲಿ ಗುತ್ತಿಗೆ ಕೆಲಸ ಮಾಡಿಕೊಂಡಿದ್ದ ಆರೋಪಿಗೆ, ಕೆಲವು ತಿಂಗಳಿಂದ ನೈಜೀರಿಯಾದ ವ್ಯಕ್ತಿ ಪರಿಚಯವಾಗಿದ್ದ. ನಂತರ ನಗರಕ್ಕೆ ಬಂದು ವಿದೇಶಿ ಪ್ರಜೆಯಿಂದ ಎಂಡಿಎಂಎ ಖರೀದಿಸಿ ಬೇರೆ ವ್ಯಕ್ತಿಗೆ ಮಾರಾಟ ಮಾಡಲು ಲಾಡ್ಜ್‌ನಲ್ಲಿ ವಾಸವಾಗಿದ್ದ. ಈ ಮಾಹಿತಿ ಮೇರೆಗೆ ಕಾರ್ಯಾಚರಣೆ ನಡೆಸಿ ಆರೋಪಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು. ಉಪ್ಪಾರಪೇಟೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಇನ್ನೊಂದು ಪ್ರಕರಣದಲ್ಲಿ ಮಾದಕ ವಸ್ತು ಮಾರಾಟ ಮಾಡುತ್ತಿದ್ದ ಮೂವರು ಆರೋಪಿಗಳನ್ನು ಕಾಡುಗೋಡಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ವೈಟ್‌ಫೀಲ್ಡ್ ನಿವಾಸಿ ಮತೀನ್ ಪಾಷಾ (27), ಬಿದರಹಳ್ಳಿಯ ರಾಜೇಶ್ ಹಂತಲ್ (29), ಮೊಹಮ್ಮದ್ ಗೌಸ್ (42) ಬಂಧಿತರು.

ಆರೋಪಿಗಳಿಂದ ₹12 ಲಕ್ಷ ಮೌಲ್ಯದ 11.70 ಕೆ.ಜಿ. ಗಾಂಜಾ ಮತ್ತು 12 ಗ್ರಾಂ ಎಂಡಿಎಂಎ ವಶಕ್ಕೆ ಪಡೆಯಲಾಗಿದೆ.

ಆರೋಪಿಗಳು ಇತ್ತೀಚೆಗೆ ಠಾಣಾ ವ್ಯಾಪ್ತಿಯ ಚನ್ನಸಂದ್ರ ರಸ್ತೆಯಲ್ಲಿ ಮಾದಕ ವಸ್ತು ಮಾರಾಟಕ್ಕೆ ಮುಂದಾಗಿದ್ದರು. ಈ ಮಾಹಿತಿ ಮೇರೆಗೆ ಕಾರ್ಯಾಚರಣೆ ನಡೆಸಿ ಬಂಧಿಸಲಾಗಿದೆ. ಆರೋಪಿಗಳು ಒಡಿಶಾದಿಂದ ಮಾದಕ ವಸ್ತು ತಂದು ನಗರದಲ್ಲಿ ಮಾರಾಟ ಮಾಡುತ್ತಿದ್ದರು. ಆರೋಪಿಗಳ ಪೈಕಿ ಮತೀನ್ ಪಾಷಾ ಮೆಕ್ಯಾನಿಕ್ ಆಗಿದ್ದಾನೆ. ಇತರೆ ಇಬ್ಬರು ಚಾಲಕರಾಗಿ ಕೆಲಸ ಮಾಡುತ್ತಿದ್ದಾರೆ ಎಂದು ಪೊಲೀಸರು ಮಾಹಿತಿ ನೀಡಿದರು. ಕಾಡುಗೋಡಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬಂಧಿತರು ಹೆಚ್ಚಿನ ಹಣ ಗಳಿಸುವ ಉದ್ದೇಶದಿಂದ ಮಾದಕ ವಸ್ತುಗಳ ಮಾರಾಟಕ್ಕೆ ಮುಂದಾಗಿದ್ದರು. ಆರೋಪಿಗಳ ವಿರುದ್ಧ ಎನ್‌ಡಿಪಿಎಸ್ ಕಾಯ್ದೆ ಅಡಿ ಪ್ರಕರಣ ದಾಖಲು ಮಾಡಿಕೊಂಡು ತನಿಖೆ ಮುಂದುವರಿಸಲಾಗಿದೆ ಎಂದು ಪೊಲೀಸರು ಹೇಳಿದರು.

ಮಾಧ್ಯಮಗೋಷ್ಠಿಯಲ್ಲಿ ಹೆಚ್ಚುವರಿ ಪೊಲೀಸ್ ಕಮಿಷನರ್ ವಂಶಿಕೃಷ್ಣ, ರಮೇಶ್ ಬಾನೊತ್ ಹಾಜರಿದ್ದರು.


ಆರೋಪಿಗಳಿಂದ ಜಪ್ತಿ ಮಾಡಿಕೊಂಡು ಮಾದಕ ವಸ್ತುಗಳನ್ನು ನಗರ ಪೊಲೀಸ್ ಕಮಿಷನರ್ ಸೀಮಾಂತ್‌ಕುಮಾರ್ ಸಿಂಗ್ ಅವರು ಪರಿಶೀಲಿಸಿದರು

285 ಕೆ.ಜಿ. ರಕ್ತಚಂದನದ ತುಂಡು ವಶ

ರಕ್ತ ಚಂದನದ ತುಂಡುಗಳನ್ನು ಅಕ್ರಮವಾಗಿ ಮಾರಾಟ ಮಾಡುತ್ತಿದ್ದ ಆರೋಪಿಯನ್ನು ಬಂಧಿಸಿರುವ ಮಡಿವಾಳ ಠಾಣೆಯ ಪೊಲೀಸರು, 285 ಕೆ.ಜಿ. ರಕ್ತ ಚಂದನದ ತುಂಡುಗಳನ್ನು ವಶಕ್ಕೆ ಪಡೆದುಕೊಂಡಿದ್ದಾರೆ. ಅದರ ಮೌಲ್ಯ ₹7.12 ಲಕ್ಷ ಎಂದು ಅಂದಾಜಿಸಲಾಗಿದೆ. ಆಂಧ್ರ ಪ್ರದೇಶದ ಶೇಖ್ ಬಾಬಾಜಾನ್ (38) ಬಂಧಿತ.

ಬಾತ್ಮೀದಾರರು ನೀಡಿದ ಖಚಿತ ಮಾಹಿತಿ ಆಧರಿಸಿ ಕಾರ್ಯಾಚರಣೆ ನಡೆಸಿ ಆರೋಪಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

‘ಹೆಚ್ಚಿನ ಹಣ ಗಳಿಸುವ ಉದ್ದೇಶದಿಂದ ರಕ್ತಚಂದನದ ತುಂಡುಗಳನ್ನು ಅಕ್ರಮವಾಗಿ ಪಡೆದುಕೊಂಡು ಮಾರಾಟ ಮಾಡಲು ಯತ್ನಿಸುತ್ತಿದ್ದುದಾಗಿ ವಿಚಾರಣೆ ವೇಳೆ ಆರೋಪಿ ತಿಳಿಸಿದ್ದಾನೆ. ಆನೇಕಲ್ ತಾಲ್ಲೂಕಿನ ಶ್ಯಾನಭೋಗನಹಳ್ಳಿಯ ಮಸೀದಿ ಪಕ್ಕದ ಖಾಲಿ ಜಾಗದಲ್ಲಿ ಸಂಗ್ರಹಿಸಿದ್ದ ರಕ್ತ ಚಂದನದ ಮರದ ತುಂಡುಗಳನ್ನು ವಶಕ್ಕೆ ಪಡೆಯಲಾಗಿದೆ’ ಎಂದು ಪೊಲೀಸರು ಹೇಳಿದರು.

ಖಾಲಿ ಹುದ್ದೆ ಭರ್ತಿಗೆ ಆದೇಶ

ಬೆಂಗಳೂರು: ರಾಜ್ಯದ ಎಲ್ಲ ಕಾರಾಗೃಹ ಆಸ್ಪತ್ರೆಗಳಲ್ಲಿ ಖಾಲಿ ಇರುವ ವೈದ್ಯಕೀಯ ಮತ್ತು ಅರೆವೈದ್ಯಕೀಯ ಸಿಬ್ಬಂದಿ ಹುದ್ದೆಗಳನ್ನು ಗುತ್ತಿಗೆ ಹಾಗೂ ಹೊರಗುತ್ತಿಗೆ ಆಧಾರದಲ್ಲಿ ಭರ್ತಿ ಮಾಡಿಕೊಳ್ಳುವಂತೆ ಆರೋಗ್ಯ ಇಲಾಖೆ ಆದೇಶ ಹೊರಡಿಸಿದೆ.

ಕೈದಿಗಳಿಗೆ ಉತ್ತಮ ಗುಣಮಟ್ಟದ ಆರೋಗ್ಯ ಸೇವೆ ಒದಗಿಸುವ ದೃಷ್ಟಿಯಿಂದ ಖಾಲಿ ಹುದ್ದೆಗಳ ಭರ್ತಿಗೆ ಕ್ರಮವಹಿಸಲಾಗಿದೆ.

ಬೆಂಗಳೂರಿನಲ್ಲಿರುವ ಪರಪ್ಪನ ಅಗ್ರಹಾರ ಸೇರಿ 10 ಕಾರಾಗೃಹಗಳಿಗೆ ಮನೋವೈದ್ಯಕೀಯ ತಜ್ಞರು, ವೈದ್ಯಾಧಿಕಾರಿ ಸೇರಿ ವಿವಿಧ ಖಾಲಿ ಹುದ್ದೆಗಳ ನೇಮಕಾತಿಗೆ ಆದೇಶದಲ್ಲಿ ಸೂಚಿಸಲಾಗಿದೆ.

ದುಪ್ಪಟ್ಟು ಹಣದ ಆಮಿಷ: ಮೂವರ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದುಪ್ಪಟ್ಟು ಹಣ ಮಾಡಿಕೊಡುವುದಾಗಿ ನಂಬಿಸಿ, ವಂಚಿಸುತ್ತಿದ್ದ ಮೂವರು ಆರೋಪಿಗಳನ್ನು ಬಾಗಲಗುಂಟೆ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ತುಮಕೂರು ಜಿಲ್ಲೆ ಮಧುಗಿರಿ ವಿಜಯ್ ಅಲಿಯಾಸ್ ರಾಜು (36), ನವೀನ್ (30) ಮತ್ತು ಚಿಕ್ಕಬಾಣಾವರದ ಕೆರೆಗುಡ್ಡದಹಳ್ಳಿ ನಿವಾಸಿ ಕೃಷ್ಣ ಸಿಂಗ್ (34) ಬಂಧಿತರು. ಆರೋಪಿಗಳಿಂದ ₹40 ಲಕ್ಷ ನಗದು ಮತ್ತು ಒಂದು ಕಾರು ವಶಕ್ಕೆ ಪಡೆಯಲಾಗಿದೆ.


ನವೀನ್


ಕೃಷ್ಣಸಿಂಗ್


ವಿಜಯ್

ಆರೋಪಿಗಳು ಕೊಪ್ಪಳದ ವ್ಯಕ್ತಿಯೊಬ್ಬರಿಗೆ ವಂಚಿಸಿದ್ದರು. ಅವರು ನೀಡಿದ ದೂರಿನ ಮೇರೆಗೆ ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಪೊಲೀಸರು ಮಾಹಿತಿ ನೀಡಿದರು.

‘ಒಂದು ಲಕ್ಷ ‘ಬಾರಿಷ್ ಮನಿ’ಗೆ ₹3 ಲಕ್ಷ ಸಾಮಾನ್ಯ ನೋಟುಗಳನ್ನು ಕೊಡುತ್ತೇನೆ’ ಎಂದು ನಂಬಿಸಿ ಹಣ ಪಡೆದು ವಂಚಿಸಿದ್ದರು ಎಂದು ಪೊಲೀಸರು ಹೇಳಿದರು.

ಆರೋಪಿಗಳ ಪೈಕಿ ವಿಜಯ್ ಮಧುಗಿರಿಯಲ್ಲಿ ಕೃಷಿ ಕೆಲಸ ಮಾಡಿಕೊಂಡಿದ್ದ. ಕೃಷ್ಣಸಿಂಗ್ ಢಾಬಾದಲ್ಲಿ ಕೆಲಸ ಮಾಡುತ್ತಿದ್ದ. ನವೀನ್ ಚಾಲಕನಾಗಿ ಕೆಲಸ ಮಾಡುತ್ತಿದ್ದ.

‘ವರ್ಷದ ಹಿಂದೆ ಆರೋಪಿ ವಿಜಯ್ ಗಾಂಧಿನಗರಕ್ಕೆ ಬಂದಿದ್ದ. ಆಗ ದೂರುದಾರರನ್ನು ಪರಿಚಯಿಸಿಕೊಂಡಿದ್ದು, ಇಬ್ಬರು ಆತ್ಮೀಯವಾಗಿದ್ದರು. ಕೆಲ ದಿನಗಳ ಹಿಂದೆ ದೂರುದಾರರಿಗೆ ಕರೆ ಮಾಡಿದ್ದ ವಿಜಯ್, ‘ತನ್ನ ಬಳಿ ಬಾರಿಷ್ ಮನಿ’ ಎಂಬ ನೋಟುಗಳಿದ್ದು, ಅವುಗಳು 9 ತಿಂಗಳ ಬಳಿಕ ಬಿಳಿ ಪೇಪರ್ ಆಗುತ್ತವೆ. ಹೀಗಾಗಿ, ₹1 ಲಕ್ಷ ನಗದು ಕೊಟ್ಟರೆ, ಅದಕ್ಕೆ ಪ್ರತಿಯಾಗಿ ₹3 ಲಕ್ಷ ‘ಬಾರಿಷ್ ಮನಿ’ ಕೊಡುತ್ತೇನೆ. ಅವುಗಳನ್ನು ಸಾಮಾನ್ಯ ನೋಟುಗಳಂತೆಯೇ ಚಲಾವಣೆ ಮಾಡಿಕೊಂಡು, ಲಾಭ ಪಡೆಯಬಹುದೆಂದು ನಂಬಿಸಿದ್ದ’ ಎಂದು ತನಿಖಾಧಿಕಾರಿಗಳು ತಿಳಿಸಿದರು.

8ನೇ ಮೈಲಿಯಲ್ಲಿ ಇರುವ ಹೋಟೆಲ್‌ವೊಂದಕ್ಕೆ ದೂರುದಾರ ಬಂದು ವಿಜಯ್‌ಗೆ ₹28.60 ಲಕ್ಷ ಕೊಟ್ಟಿದ್ದರು. ಆ ನಂತರ ಯಾವುದೇ ನೋಟುಗಳನ್ನು ಕೊಡದೆ ಪರಾರಿಯಾಗಿದ್ದ. ಅದಕ್ಕೆ ಇತರೆ ಇಬ್ಬರು ಆರೋಪಿಗಳು ಸಹಕಾರ ನೀಡಿದ್ದರು ಎಂದು ಪೊಲೀಸರು ಹೇಳಿದರು.

ನಾರ್ಕೋಟಿಕ್ಸ್ ಕಂಟ್ರೋಲ್ ಬ್ಯೂರೋ
ಬೇಕಾಗಿದ್ದಾನೆ

ಎನ್‌ಸಿಬಿ ಬೆಂಗಳೂರು ಸಿಆರ್ ನಂ. 07/2015



ಜೆಫ್ರೆರಿ ರಾಬರ್ಟ್ @ ಜೆಫ್

ಬಿನ್ ಒಸೊರೊ ಎಜಿಜೊರ್ಜೊ, ವಯಸ್ಸು: 35 ವರ್ಷ

ಮೊದಲು ತಿಳಿದಿದ್ದ ವಿಳಾಸ: ಮ.ನಂ. 1, 1ನೇ ಮುಖ್ಯರಸ್ತೆ, 3ನೇ ಅಡ್ಡರಸ್ತೆ, ಹೆಣ್ಣೂರು, ಬೆಂಗಳೂರು

10,000/- ವರೆಗೆ ಬಹುಮಾನ

ಈತಳನ್ನು ಬಂಧಿಸಲು ನೆರವಾಗಬಲ್ಲ ಮಾಹಿತಿ ನೀಡುವ ಯಾವುದೇ ವ್ಯಕ್ತಿಗೆ ಬಹುಮಾನ ನೀಡಲಾಗುತ್ತದೆ.
ಮಾಹಿತಿದಾರರ ಗುರುತು ಪರಿಚಯವನ್ನು ಗೌಪ್ಯವಾಗಿ ಇರಿಸಲಾಗುತ್ತದೆ.

ದಯವಿಟ್ಟು ಸಂಪರ್ಕಿಸಿ
ಮೊಬೈಲ್ ನಂ./ವಾಟ್ಸ್ಯಾಪ್ ನಂ. 8278200990
ಕಂಟ್ರೋಲ್ ರೂಮ್ ನಂ. 080-29720586/29720516
ಇಮೇಲ್: bizu-ncb@nic.in

CBC 19126/11/0174/2526

ನಾರ್ಕೋಟಿಕ್ಸ್ ಕಂಟ್ರೋಲ್ ಬ್ಯೂರೋ
ಬೇಕಾಗಿದ್ದಾನೆ

ಎನ್‌ಸಿಬಿ ಬೆಂಗಳೂರು ಸಿಆರ್ ನಂ. 01/2019



ಮಾರ್ವಾನ್ ಫೈಸಲ್ ಮೊಹಮ್ಮದ್

ಬಿನ್ ಮೊಹಮ್ಮದ್, ವಯಸ್ಸು: 34 ವರ್ಷ

ಮೊದಲು ತಿಳಿದಿದ್ದ ವಿಳಾಸ: 32, 2ನೇ ಎ ಅಡ್ಡರಸ್ತೆ, ಎಎಸ್‌ಆರ್ ಕನ್ವೆನ್ಷನ್ ಹಾಲ್ ಹಿಂಭಾಗ, ವಿಜಯಾ ಬ್ಯಾಂಕ್ ಕಾಲೋನಿ ಎಕ್ಸ್‌ಟೆನ್ಷನ್, ಬಾಣಸವಾಡಿ, ಹೊರಮಾವು, ಕಲ್ಯಾಣನಗರ, ಬೆಂಗಳೂರು-43

10,000/- ವರೆಗೆ ಬಹುಮಾನ

ಈತನನ್ನು ಬಂಧಿಸಲು ನೆರವಾಗಬಲ್ಲ ಮಾಹಿತಿ ನೀಡುವ ಯಾವುದೇ ವ್ಯಕ್ತಿಗೆ ಬಹುಮಾನ ನೀಡಲಾಗುತ್ತದೆ.
ಮಾಹಿತಿದಾರರ ಗುರುತು ಪರಿಚಯವನ್ನು ಗೌಪ್ಯವಾಗಿ ಇರಿಸಲಾಗುತ್ತದೆ.

ದಯವಿಟ್ಟು ಸಂಪರ್ಕಿಸಿ
ಮೊಬೈಲ್ ನಂ./ವಾಟ್ಸ್ಯಾಪ್ ನಂ. 8278200990
ಕಂಟ್ರೋಲ್ ರೂಮ್ ನಂ. 080-29720586/29720516
ಇಮೇಲ್: bizu-ncb@nic.in

CBC 19126/11/0175/2526

ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವಾಲಯ
ಭಾರತ ಸರ್ಕಾರ

ಪ್ರಕಟಣೆ

ಈ ಮೂಲಕ ಸಾಮಾನ್ಯ ಸಾರ್ವಜನಿಕರಿಗೆ ತಿಳಿಸುವ ಮಾಹಿತಿ ಏನೆಂದರೆ, ನ್ಯಾಷನಲ್ ಅವಾರ್ಡ್ಸ್ ಪೋರ್ಟಲ್ (https://awards.gov.in) ಮುಖಾಂತರ ಪ್ರಧಾನ ಮಂತ್ರಿ ರಾಷ್ಟ್ರೀಯ ಬಾಲ ಪುರಸ್ಕಾರ (ಪಿಎಂಆರ್‌ಬಿಪಿ) ಪ್ರಶಸ್ತಿಗಾಗಿ ಅರ್ಜಿಗಳನ್ನು ಸ್ವೀಕರಿಸುವ ಪ್ರಕ್ರಿಯೆಯು 01.04.2026 ರಿಂದ ಪ್ರಾರಂಭವಾಗುತ್ತದೆ. ಈ ಪ್ರಶಸ್ತಿಗಳನ್ನು, **ಶೌರ್ಯ, ಕ್ರೀಡೆ, ಸಾಮಾಜಿಕ ಸೇವೆ, ವಿಜ್ಞಾನ ಮತ್ತು ತಂತ್ರಜ್ಞಾನ, ಪರಿಸರ ಮತ್ತು ಕಲೆ ಹಾಗೂ ಸಂಸ್ಕೃತಿ** ಕ್ಷೇತ್ರಗಳಾದ್ಯಂತ ರಾಷ್ಟ್ರೀಯ ಮಟ್ಟದ ಮನ್ನಣೆ ಪಡೆಯಬಲ್ಲ ಮಕ್ಕಳಿಗೆ ನೀಡಲಾಗುತ್ತದೆ.

ಭಾರತೀಯ ನಾಗರಿಕರಾಗಿರುವ ಮತ್ತು ಭಾರತದ ನಿವಾಸಿಯಾಗಿರುವ, 5 ವರ್ಷ ಮೇಲ್ಪಟ್ಟ ಹಾಗೂ 18 ವರ್ಷ ಮೀರದಿರುವ (31ನೇ ಜುಲೈ, 2026 ರಂತೆಗೆ) ಯಾವುದೇ ಮಕ್ಕಳು, ಸದರಿ ಪ್ರಶಸ್ತಿಗೆ ಅರ್ಹರಾಗಿರುತ್ತಾರೆ.

ಯಾವುದೇ ನಾಗರಿಕರು, ನ್ಯಾಷನಲ್ ಅವಾರ್ಡ್ಸ್ ಪೋರ್ಟಲ್ https://awards.gov.in ಮೂಲಕ ಮಾತ್ರ ನಾಮನಿರ್ದೇಶನಗಳನ್ನು ಸಲ್ಲಿಸಬಹುದಾಗಿರುತ್ತದೆ. ಸದರಿ ಪ್ರಶಸ್ತಿಗಳಿಗೆ, ಸ್ವಯಂ-ನಾಮನಿರ್ದೇಶನ ಮತ್ತು ಶಿಫಾರಸ್ಸುಗಳು, ಎರಡನ್ನೂ ಪರಿಗಣಿಸಲಾಗುತ್ತದೆ. ಆನ್‌ಲೈನ್ ಅರ್ಜಿಗಳನ್ನು ಸ್ವೀಕರಿಸುವ ಕೊನೆ ದಿನಾಂಕ **31.07.2026**. ಹೆಚ್ಚಿನ ವಿವರಗಳಿಗಾಗಿ, ದಯವಿಟ್ಟು ನ್ಯಾಷನಲ್ ಅವಾರ್ಡ್ಸ್ ಪೋರ್ಟಲ್‌ಗೆ (https://awards.gov.in) ಭೇಟಿ ಕೊಡಿ.

CBC 46101/11/0046/2526

ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ

ಉಪ ಪ್ರಧಾನ ವ್ಯವಸ್ಥಾಪಕರ ಕಚೇರಿ -3, 1ನೇ ಮಹಡಿ, ಬಿಬಿಎಂಪಿ ಕಟ್ಟಡ, ತಿಮ್ಮಯ್ಯ ರಸ್ತೆ, ವಸಂತ ನಗರ, ಬೆಂಗಳೂರು -560052.

ಸಂಖ್ಯೆ: ಡಿಜಿಎಂ-3/ಬಿಎಸ್‌ಡಬ್ಲ್ಯೂಎಂಎಲ್/ಟೆಂಡರ್/22/25-26 ದಿನಾಂಕ : 24.03.2026

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ) (ಜಿಓಕೆ ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಉಪ ಪ್ರಧಾನ ವ್ಯವಸ್ಥಾಪಕರು-3, ಬೆಂಗಳೂರು ಘನ ತ್ಯಾಜ್ಯ ನಿರ್ವಹಣಾ ನಿಯಮಿತ, ವ್ಯವಸ್ಥಾಪಕ ನಿರ್ದೇಶಕರ ಪರವಾಗಿ, ಬಿಎಸ್‌ಡಬ್ಲ್ಯೂಎಂಎಲ್ ಕೆಳಗಿನ ಕೋಷ್ಟಕದಲ್ಲಿ ವಿವರಿಸಲಾದ ಕೆಲಸಗಳಿಗಾಗಿ ಬೆಂಗಳೂರು ಅರ್ಹ ಟೆಂಡರ್‌ದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸುತ್ತಾರೆ. ಟೆಂಡರ್‌ಗಳು ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ (ಎಂದರೆ **https://kppp.karnataka.gov.in**) ಮೂಲಕ ಕೆಳಗಿನ ಕೋಷ್ಟಕದಲ್ಲಿ ನೀಡಲಾದ ಕೆಲಸಗಳಿಗೆ ಬಿಡ್‌ಗಳನ್ನು ಸಲ್ಲಿಸಬಹುದು.

SL No	Name of the services	Estimate amount (Rs. In Lakhs)	Duration	EMD Amount in Rs.
1	**Package-1:** Conducting 3 Large Scale Workshops on Swachh Survekshan, Solid Waste Management and implementation of effective waste Management and 2 National level Workshops on Institutionalizing Best Practices under Swachh Bharat Mission (SBM) U-2.0.Call-3.	318.00	9 Months	4,77,000.00
2	**Package-2:** Providing Training and Capacity Building for 30% of the Staff including Executive, Technical Executive, Technical, Supervisory and Pourakarmika, drivers and helpers staffs across themes of Solid Waste Management, Sanitation and Used Water Management under Swachh Bharat Mission (SBM) U-2.0. - Call-2.	279.60	3 Months	4,19,400.00
3	**Package-3:** Providing Training and Capacity Building for 35% of the Staff including Executive, Technical Executive, Technical, Supervisory and Pourakarmika, drivers and helpers staffs across themes of Solid Waste Management, Sanitation and Used Water Management under Swachh Bharat Mission (SBM) U-2.0. - Call-2.	349.00	3 Months	5,23,500.00
4	**Package-4:** Providing Training and Capacity Building for 35% of the Staff including Executive, Technical Executive, Technical, Supervisory and Pourakarmika, drivers and helpers staffs across themes of Solid Waste Management, Sanitation and Used Water Management under Swachh Bharat Mission (SBM) U-2.0. - Call-2.	349.00	3 Months	5,23,500.00
5	**Package-5:** Conducting Advanced Level Training for 50% of the Staff including Executive, Technical, Supervisory and Pourakarmika, drivers and helpers across themes of Solid Waste Management, Sanitation and Used Water Management under Swachh Bharat Mission (SBM) U-2.0. - Call-2.	489.30	6 Months	7,34,000.00
6	**Package-6:** Conducting Advanced Level Training for 50% of the Staff including Executive, Technical, Supervisory and Pourakarmika, drivers and helpers across themes of Solid Waste Management, Sanitation and Used Water Management under Swachh Bharat Mission (SBM) U-2.0. - Call-2.	489.30	6 Months	7,34,000.00
7	**Package-7:** Providing Refresher Training for 50% of the Staff including Executive, Technical and Pourakarmika staffs across themes of Solid Waste Management, Sanitation and Used Water Management under Swachh Bharat Mission (SBM) U-2.0. - Call-2.	488.60	9 Months	7,32,900.00
8	**Package-8:** Providing Refresher Training for 50% of the Staff including Executive, Technical and Pourakarmika staffs across themes of Solid Waste Management, Sanitation and Used Water Management under Swachh Bharat Mission (SBM) U-2.0. - Call-2.	488.60	9 Months	7,32,900.00

ಸೂಚನೆ: (1) ಬಿಡ್ ಪೂರ್ವ ಪ್ರಶ್ನೆಗಳನ್ನು ಕೆಪಿಪಿ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಲು ಕೊನೆಯ **ದಿನಾಂಕ: 26.03.2026 ರಂದು ಮಧ್ಯಾಹ್ನ 15.00 ಗಂಟೆಯವರೆಗೆ.** (2) ಬಿಡ್ ಪೂರ್ವ ಸಭೆಯು **ದಿನಾಂಕ 27.03.2026 ರಂದು ಮಧ್ಯಾಹ್ನ 15:00 ಗಂಟೆಗೆ** ಸಿಇ & ಸಿಜಿಎಂ-2 (ಟೆಕ್) ಬಿಎಸ್‌ಡಬ್ಲ್ಯೂಎಂಎಲ್, ತಿಮ್ಮಯ್ಯ ರಸ್ತೆ, ವಸಂತ ನಗರ, ಬೆಂಗಳೂರು ರವರ ಕಚೇರಿಯಲ್ಲಿ ನಡೆಯಲಿದೆ. (3) ಬಿಡ್‌ಗಳನ್ನು ಸಲ್ಲಿಸಲು ಕೊನೆಯ **ದಿನಾಂಕ: 01.04.2026 ರಂದು ಸಂಜೆ 16.00 ಗಂಟೆಯವರೆಗೆ.** (4) ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 02.04.2026 ರಂದು 16.30 ಗಂಟೆಗೆ.** (5) ತಾಂತ್ರಿಕವಾಗಿ ಅರ್ಹ ಬಿಡ್‌ದಾರರಿಗೆ ಹಣಕಾಸು ಬಿಡ್‌ಗಳನ್ನು ತೆರೆಯುವ ದಿನಾಂಕವನ್ನು ತಿಳಿಸಲಾಗುವುದು.

ಸಹಿ/-
ಉಪ ಪ್ರಧಾನ ವ್ಯವಸ್ಥಾಪಕರು-3, ಬಿಎಸ್‌ಡಬ್ಲ್ಯೂಎಂಎಲ್

ವಾಸಾಸಂಇ/ವಾ.ಪ್ರ/6434/ಶಿರಡಿ ಸಾಯಿ/2025-26

ನಾರ್ಕೋಟಿಕ್ಸ್ ಕಂಟ್ರೋಲ್ ಬ್ಯೂರೋ
ಬೇಕಾಗಿದ್ದಾನೆ

ಎನ್‌ಸಿಬಿ ಬೆಂಗಳೂರು ಸಿಆರ್ ನಂ. 01/2019



ಕೆನ್ನೆಥ್ ಜಿಡಿಯೊಫೊಲ್

ಬಿನ್ ನ್ವಾಬ್ನವಾನ್ನೆ, ವಯಸ್ಸು: 31 ವರ್ಷ

ಮೊದಲು ತಿಳಿದಿದ್ದ ವಿಳಾಸ: 32, 2ನೇ ಎ ಅಡ್ಡರಸ್ತೆ, ಎಎಸ್‌ಆರ್ ಕನ್ವೆನ್ಷನ್ ಹಾಲ್ ಹಿಂಭಾಗ, ವಿಜಯಾ ಬ್ಯಾಂಕ್ ಕಾಲೋನಿ ಎಕ್ಸ್‌ಟೆನ್ಷನ್, ಬಾಣಸವಾಡಿ, ಹೊರಮಾವು, ಕಲ್ಯಾಣನಗರ, ಬೆಂಗಳೂರು-43

10,000/- ವರೆಗೆ ಬಹುಮಾನ

ಈತನನ್ನು ಬಂಧಿಸಲು ನೆರವಾಗಬಲ್ಲ ಮಾಹಿತಿ ನೀಡುವ ಯಾವುದೇ ವ್ಯಕ್ತಿಗೆ ಬಹುಮಾನ ನೀಡಲಾಗುತ್ತದೆ.
ಮಾಹಿತಿದಾರರ ಗುರುತು ಪರಿಚಯವನ್ನು ಗೌಪ್ಯವಾಗಿ ಇರಿಸಲಾಗುತ್ತದೆ.

ದಯವಿಟ್ಟು ಸಂಪರ್ಕಿಸಿ
ಮೊಬೈಲ್ ನಂ./ವಾಟ್ಸ್ಯಾಪ್ ನಂ. 8278200990
ಕಂಟ್ರೋಲ್ ರೂಮ್ ನಂ. 080-29720586/29720516
ಇಮೇಲ್: bizu-ncb@nic.in

CBC 19126/11/0176/2526

ನಾರ್ಕೋಟಿಕ್ಸ್ ಕಂಟ್ರೋಲ್ ಬ್ಯೂರೋ
ಬೇಕಾಗಿದ್ದಾಳೆ

ಎನ್‌ಸಿಬಿ ಬೆಂಗಳೂರು ಸಿಆರ್ ನಂ. 38/2023



ಪಮೇಲಾ ಸಿ ಒಬಿಯಾಲರ್

ಬಿನ್ ಅಜುಬುಯಿಕೆ ಒಬಿಯಾಲರ್, ವಯಸ್ಸು: 32 ವರ್ಷ ಎತ್ತರ: 5'8"

ಮೊದಲು ತಿಳಿದಿದ್ದ ವಿಳಾಸ: ಆರ್/ಒ 45, ನೆಲಮಹಡಿ, 1ನೇ ಅಡ್ಡರಸ್ತೆ, ಅಂಬಾ ದೇವಸ್ಥಾನ ರಸ್ತೆ, ವಿದ್ಯಾರಣ್ಯಪುರ ಅಂಚೆ, ಬೆಂಗಳೂರು

10,000/- ವರೆಗೆ ಬಹುಮಾನ

ಈತಳನ್ನು ಬಂಧಿಸಲು ನೆರವಾಗಬಲ್ಲ ಮಾಹಿತಿ ನೀಡುವ ಯಾವುದೇ ವ್ಯಕ್ತಿಗೆ ಬಹುಮಾನ ನೀಡಲಾಗುತ್ತದೆ.
ಮಾಹಿತಿದಾರರ ಗುರುತು ಪರಿಚಯವನ್ನು ಗೌಪ್ಯವಾಗಿ ಇರಿಸಲಾಗುತ್ತದೆ.

ದಯವಿಟ್ಟು ಸಂಪರ್ಕಿಸಿ
ಮೊಬೈಲ್ ನಂ./ವಾಟ್ಸ್ಯಾಪ್ ನಂ. 8278200990
ಕಂಟ್ರೋಲ್ ರೂಮ್ ನಂ. 080-29720586/29720516
ಇಮೇಲ್: bizu-ncb@nic.in

CBC 19126/11/0180/2526

ನಾರ್ಕೋಟಿಕ್ಸ್ ಕಂಟ್ರೋಲ್ ಬ್ಯೂರೋ
ಬೇಕಾಗಿದ್ದಾನೆ

ಎನ್‌ಸಿಬಿ ಬೆಂಗಳೂರು ಸಿಆರ್ ನಂ. 38/2023



ಒಕೊರೊ ಡೇನಿಯಲ್ ಒಫಾಮಾ

ಬಿನ್ ಒಕೊರೊ, ವಯಸ್ಸು: 42 ವರ್ಷ, ಎತ್ತರ: 6'2"

ಮೊದಲು ತಿಳಿದಿದ್ದ ವಿಳಾಸ: ಆರ್/ಒ 45, ನೆಲಮಹಡಿ, 1ನೇ ಅಡ್ಡರಸ್ತೆ, ಅಂಬಾ ದೇವಸ್ಥಾನ ರಸ್ತೆ, ವಿದ್ಯಾರಣ್ಯಪುರ ಅಂಚೆ, ಬೆಂಗಳೂರು

10,000/- ವರೆಗೆ ಬಹುಮಾನ

ಈತನನ್ನು ಬಂಧಿಸಲು ನೆರವಾಗಬಲ್ಲ ಮಾಹಿತಿ ನೀಡುವ ಯಾವುದೇ ವ್ಯಕ್ತಿಗೆ ಬಹುಮಾನ ನೀಡಲಾಗುತ್ತದೆ.
ಮಾಹಿತಿದಾರರ ಗುರುತು ಪರಿಚಯವನ್ನು ಗೌಪ್ಯವಾಗಿ ಇರಿಸಲಾಗುತ್ತದೆ.

ದಯವಿಟ್ಟು ಸಂಪರ್ಕಿಸಿ
ಮೊಬೈಲ್ ನಂ./ವಾಟ್ಸ್ಯಾಪ್ ನಂ. 8278200990
ಕಂಟ್ರೋಲ್ ರೂಮ್ ನಂ. 080-29720586/29720516
ಇಮೇಲ್: bizu-ncb@nic.in

CBC 19126/11/0179/2526

ನಾರ್ಕೋಟಿಕ್ಸ್ ಕಂಟ್ರೋಲ್ ಬ್ಯೂರೋ
ಬೇಕಾಗಿದ್ದಾನೆ

ಎನ್‌ಸಿಬಿ ಬೆಂಗಳೂರು ಸಿಆರ್ ನಂ. 01/2019



ಚಿಬ್ಗೊ ವಿಕ್ಟರ್

ಬಿನ್ ಸ್ಯಾಮುಯೆಲ್, ವಯಸ್ಸು: 41 ವರ್ಷ, ಎತ್ತರ: 5'9"

ಮೊದಲು ತಿಳಿದಿದ್ದ ವಿಳಾಸ: 32, 2ನೇ ಎ ಅಡ್ಡರಸ್ತೆ, ಎಎಸ್‌ಆರ್ ಕನ್ವೆನ್ಷನ್ ಹಾಲ್ ಹಿಂಭಾಗ, ವಿಜಯಾ ಬ್ಯಾಂಕ್ ಕಾಲೋನಿ ಎಕ್ಸ್‌ಟೆನ್ಷನ್, ಬಾಣಸವಾಡಿ, ಹೊರಮಾವು, ಕಲ್ಯಾಣನಗರ, ಬೆಂಗಳೂರು-43

10,000/- ವರೆಗೆ ಬಹುಮಾನ


ಈತನನ್ನು ಬಂಧಿಸಲು ನೆರವಾಗಬಲ್ಲ ಮಾಹಿತಿ ನೀಡುವ ಯಾವುದೇ ವ್ಯಕ್ತಿಗೆ ಬಹುಮಾನ ನೀಡಲಾಗುತ್ತದೆ.
ಮಾಹಿತಿದಾರರ ಗುರುತು ಪರಿಚಯವನ್ನು ಗೌಪ್ಯವಾಗಿ ಇರಿಸಲಾಗುತ್ತದೆ.

ದಯವಿಟ್ಟು ಸಂಪರ್ಕಿಸಿ
ಮೊಬೈಲ್ ನಂ./ವಾಟ್ಸ್ಯಾಪ್ ನಂ. 8278200990
ಕಂಟ್ರೋಲ್ ರೂಮ್ ನಂ. 080-29720586/29720516
ಇಮೇಲ್: bizu-ncb@nic.in

CBC 19126/11/0177/2526

ನಾರ್ಕೋಟಿಕ್ಸ್ ಕಂಟ್ರೋಲ್ ಬ್ಯೂರೋ
ಬೇಕಾಗಿದ್ದಾನೆ

ಎನ್‌ಸಿಬಿ ಬೆಂಗಳೂರು ಸಿಆರ್ ನಂ. 01/2020



ಮೈಕೇಲ್ ಚುಕ್ವುಯೆಬುಕ್ಕಾ @ ಮೈಕ್

ಬಿನ್ ಮೈಕೇಲ್ ಅಜಾ, ವಯಸ್ಸು: 39 ವರ್ಷ, ಎತ್ತರ: 5'7"

ಮೊದಲು ತಿಳಿದಿದ್ದ ವಿಳಾಸ: ಹೆಣ್ಣೂರು, ಬೆಂಗಳೂರು

10,000/- ವರೆಗೆ ಬಹುಮಾನ

ಈತನನ್ನು ಬಂಧಿಸಲು ನೆರವಾಗಬಲ್ಲ ಮಾಹಿತಿ ನೀಡುವ ಯಾವುದೇ ವ್ಯಕ್ತಿಗೆ ಬಹುಮಾನ ನೀಡಲಾಗುತ್ತದೆ.
ಮಾಹಿತಿದಾರರ ಗುರುತು ಪರಿಚಯವನ್ನು ಗೌಪ್ಯವಾಗಿ ಇರಿಸಲಾಗುತ್ತದೆ.

ದಯವಿಟ್ಟು ಸಂಪರ್ಕಿಸಿ
ಮೊಬೈಲ್ ನಂ./ವಾಟ್ಸ್ಯಾಪ್ ನಂ. 8278200990
ಕಂಟ್ರೋಲ್ ರೂಮ್ ನಂ. 080-29720586/29720516
ಇಮೇಲ್: bizu-ncb@nic.in

CBC 19126/11/0178/2526

ನಗರ ಪಾಲಿಕೆ: ಬಜೆಟ್ ಮುಂದಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಜೆಟ್ ಮಂಡನೆ ದಿನಕ್ಕೆ ಸಂಬಂಧಿಸಿ ಅಧಿಕಾರಿಗಳ ಅಭಿಪ್ರಾಯ ಹೊಂದಾಣಿಕೆಯಾಗದ್ದರಿಂದ ಐದು ನಗರ ಪಾಲಿಕೆಗಳ ಬಜೆಟ್ ಮಂಡನೆಯನ್ನು ಮುಂದೂಡಲಾಗಿದೆ.

ಮಾರ್ಚ್ 25 ಮತ್ತು 26ರಂದು ಐದು ನಗರ ಪಾಲಿಕೆಗಳ ಬಜೆಟ್ ಮಂಡನೆಗೆ ಸೋಮವಾರ ನಿರ್ಧಾರ ಕೈಗೊಳ್ಳಲಾಗಿತ್ತು. ಆದರೆ, ಮಂಗಳವಾರ ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಬಜೆಟ್ ಮಂಡನೆ ದಿನದ ಬಗ್ಗೆ ವ್ಯತಿರಿಕ್ತ ಅಭಿಪ್ರಾಯಗಳು ಮೂಡಿದವು.

ಐದು ನಗರ ಪಾಲಿಕೆಗಳ ಬಜೆಟ್ ಅನ್ನು ಸರದಿ ಪ್ರಕಾರ ಪುರಭವನದಲ್ಲಿ ಒಂದೇ ದಿನ ಮಂಡಿಸುವ ಬಗ್ಗೆ ಮಂಗಳವಾರ ಮಧ್ಯಾಹ್ನ ಬಹುತೇಕ ನಿಗದಿಯಾಗಿತ್ತು. ಆದರೆ, ನಂತರ, 'ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ನಗರದಲ್ಲಿ ಇರುವುದಿಲ್ಲ' ಎಂದು ಆಯುಕ್ತರೊಬ್ಬರು ತಕರಾರು ಎತ್ತಿದರು. ಅಲ್ಲದೆ, 'ಒಂದೇ ದಿನ ಒಂದೇ ಕಡೆ ಬಜೆಟ್ ಮಂಡಿಸಿದರೆ, ಸ್ಥಳೀಯರಿಗೆ ಆದ್ಯತೆ ನೀಡಿದಂತಾಗುವುದಿಲ್ಲ. ಅಲ್ಲಿನ ಶಾಸಕರು ಇಲ್ಲಿಗೆ ಬರುವುದಿಲ್ಲ' ಎಂದು ಮತ್ತೊಬ್ಬ ಆಯುಕ್ತರು ಅಭಿಪ್ರಾಯಪಟ್ಟರು.

ಹೀಗಾಗಿ, ಐದು ನಗರ ಪಾಲಿಕೆಗಳ ಬಜೆಟ್ ಅನ್ನು ಆಯಾ ಪಾಲಿಕೆಗಳ ವ್ಯಾಪ್ತಿಯಲ್ಲೇ ಮಂಡಿಸಲು ಕೊನೆಗೆ ನಿರ್ಧರಿಸಲಾಯಿತು. ಮಾರ್ಚ್ 27 ಮತ್ತು 28ರಂದು ಬಜೆಟ್ ಮಂಡನೆಯಾಗಲಿದ್ದು, ಯಾವ ಸ್ಥಳ ಎಂಬುದು ಇನ್ನೂ ನಿರ್ಧಾರವಾಗಿಲ್ಲ. ಹೆಚ್ಚಿನ ಜನರು ಸೇರುವ ಹಿನ್ನೆಲೆಯಲ್ಲಿ ನಗರ ಪಾಲಿಕೆಗಳ ಕಚೇರಿ ಬದಲು ದೊಡ್ಡ ಸಭಾಂಗಣದಲ್ಲಿ ಬಜೆಟ್ ಮಂಡನೆ ಕಾರ್ಯಕ್ರಮ ಆಯೋಜಿಸಲು ನಿರ್ಧರಿಸಲಾಗಿದೆ ಎಂದು ಮೂಲಗಳು ತಿಳಿಸಿದವು.

- ಪೂರ್ವ ನಗರ ಪಾಲಿಕೆ ಬಜೆಟ್– ಮಾರ್ಚ್ 27ರ ಶುಕ್ರವಾರ ಬೆಳಿಗ್ಗೆ 9.30
- ಕೇಂದ್ರ ನಗರ ಪಾಲಿಕೆ ಬಜೆಟ್– ಮಾರ್ಚ್ 27ರ ಶುಕ್ರವಾರ ಮಧ್ಯಾಹ್ನ 12.30
- ಉತ್ತರ ನಗರ ಪಾಲಿಕೆ ಬಜೆಟ್– ಮಾರ್ಚ್ 28ರ ಶನಿವಾರ ಬೆಳಿಗ್ಗೆ 9.30
- ಪಶ್ಚಿಮ ನಗರ ಪಾಲಿಕೆ ಬಜೆಟ್– ಮಾರ್ಚ್ 28ರ ಶನಿವಾರ ಮಧ್ಯಾಹ್ನ 12.30
- ದಕ್ಷಿಣ ನಗರ ಪಾಲಿಕೆ ಬಜೆಟ್– ಮಾರ್ಚ್ 28ರ ಶನಿವಾರ ಮಧ್ಯಾಹ್ನ 2.30

'ವಿದ್ಯಾರ್ಥಿಗಳ ಸಂಖ್ಯೆಗೆ ತಕ್ಕ ಶಿಕ್ಷಕರಿಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿದ್ಯಾರ್ಥಿಗಳ ಸಂಖ್ಯೆಗೆ ತಕ್ಕಂತೆ ಶಿಕ್ಷಕರ ಸಂಖ್ಯೆ ಹೆಚ್ಚಾಗಿಲ್ಲ. ಎಐಸಿಟಿಇ ಮಾನದಂಡದ ಪ್ರಕಾರ 15ರಿಂದ 20 ವಿದ್ಯಾರ್ಥಿಗಳಿಗೆ ಒಬ್ಬ ಶಿಕ್ಷಕರು ಇರಬೇಕು ಎಂದು ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದ ಅರ್ಥಶಾಸ್ತ್ರದ ಸಹ ಪ್ರಾಧ್ಯಾಪಕಿ ರೋಸಾ ಅಬ್ರಹಾಂ ಹೇಳಿದರು.

ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯ ಮಂಗಳವಾರ ಬೆಂಗಳೂರು ಅಂತರ-ರಾಷ್ಟ್ರೀಯ ಕೇಂದ್ರದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ 'ಸ್ಟೇಟ್ ಆಫ್ ವರ್ಕಿಂಗ್ ಇಂಡಿಯಾ-2026' ವರದಿ ಬಿಡುಗಡೆ ಮಾಡಿ ಮಾತನಾಡಿದ ಅವರು, ಸಂಪನ್ಮೂಲ ಕೊರತೆಯ ಕಾರಣಕ್ಕೆ ಖಾಲಿ ಇರುವ ಹುದ್ದೆಗಳ ಭರ್ತಿ ಮಾಡುತ್ತಿಲ್ಲ ಹಾಗೂ ಅತಿಥಿ ಶಿಕ್ಷಕರನ್ನು ನೇಮಕ ಮಾಡಿಕೊಳ್ಳುತ್ತಿಲ್ಲ ಎಂದರು.

2007ರಿಂದ 2017ರವರೆಗೆ ಉನ್ನತ ಶಿಕ್ಷಣ ಪಡೆದ ಬಡ ಕುಟುಂಬಗಳ ವಿದ್ಯಾರ್ಥಿಗಳ ಪ್ರಮಾಣ ಶೇಕಡ 8ರಿಂದ ಶೇಕಡ 15ಕ್ಕೆ ಏರಿದೆ. ಎಂಜಿನಿಯರಿಂಗ್ ಮತ್ತು ವೈದ್ಯಕೀಯ ಶಿಕ್ಷಣವನ್ನು ಶ್ರೀಮಂತ ಕುಟುಂಬದ ವಿದ್ಯಾರ್ಥಿಗಳೇ ಹೆಚ್ಚು ಆಯ್ಕೆ ಮಾಡಿಕೊಳ್ಳುತ್ತಿದ್ದಾರೆ. ಏಕೆಂದರೆ ಶಿಕ್ಷಣದ ಶುಲ್ಕವು ಬಡ ಕುಟುಂಬಗಳ ವಾರ್ಷಿಕ ಆದಾಯಕ್ಕಿಂತ ಹೆಚ್ಚು ಎಂದರು.

15ರಿಂದ 29 ವರ್ಷದ ಪದವೀಧರರ ನಿರುದ್ಯೋಗ ಸಮಸ್ಯೆ ಹೆಚ್ಚಾಗಿದೆ (15-25 ವರ್ಷದವರಲ್ಲಿ ಶೇಕಡ 40 ಮತ್ತು 25-29 ವರ್ಷದವರಲ್ಲಿ ಶೇಕಡ 20) ಮತ್ತು ಪದವಿ ಪಡೆದ ಒಂದು ವರ್ಷದೊಳಗೆ ಬೆರಳಣಿಕೆ ಮಂದಿಗೆ ಮಾತ್ರ ಉತ್ತಮ ಉದ್ಯೋಗ ಸಿಗುತ್ತಿದೆ. ದೇಶದಲ್ಲಿ ನಿರುದ್ಯೋಗ ಸಮಸ್ಯೆ ಹೊಸದಲ್ಲ, ದಶಕಗಳಿಂದ ಇದೆ. ಈಗಲೂ ಉದ್ಯೋಗಕ್ಕಾಗಿ ಅಲೆದಾಡುವುದು ತಪ್ಪಿಲ್ಲ ಎಂದರು.

2017ರಲ್ಲಿ ಶಿಕ್ಷಣ ಪಡೆಯುತ್ತಿದ್ದ ಯುವಜನರ ಪ್ರಮಾಣ ಶೇಕಡ 38 ಇತ್ತು. 2024ರ ವೇಳೆಗೆ ಶೇಕಡ 34ಕ್ಕೆ ಇಳಿಯಿತು. ಕುಟುಂಬದ ಜವಾಬ್ದಾರಿ ಸೇರಿದಂತೆ ಹಲವು ಕಾರಣಗಳಿಂದ ಕಲಿಕೆಯಿಂದ ಹಿಂದೆ ಸರಿಯಬೇಕಾಯಿತು ಎಂದು ಯುವಜನರು ಹೇಳಿದ್ದಾರೆ ಎಂದರು.

ಯುವಕರು ಕೃಷಿ ಕ್ಷೇತ್ರ ತ್ಯಜಿಸಿ ಕಟ್ಟಡ, ಸಾರಿಗೆ ಮತ್ತು ಕೈಗಾರಿಕಾ ಕ್ಷೇತ್ರಗಳತ್ತ ಮುಖ ಮಾಡುತ್ತಿದ್ದಾರೆ. ಅದರಲ್ಲೂ ಮಹಿಳೆಯರು ಐ.ಟಿ., ಆಟೊ ಮೊಬೈಲ್ ತಯಾರಿಕಾ ವಲಯ ಮತ್ತು ವ್ಯಾಪಾರ ಕ್ಷೇತ್ರದಲ್ಲಿ ಹೆಚ್ಚು ಉದ್ಯೋಗ ಪಡೆದುಕೊಂಡಿರುವುದು ಸಮೀಕ್ಷೆಯಿಂದ ಗೊತ್ತಾಗಿದೆ ಎಂದು ತಿಳಿಸಿದರು.

ನಂತರ ನಡೆದ ಸಂವಾದದಲ್ಲಿ ಹಿರಿಯ ಸಂಶೋಧನಾ ವಿಶ್ಲೇಷಕಿ ಅಕ್ಷತಾ, ಮಾಹೆ ಸಹಾಯಕ ಪ್ರಾಧ್ಯಾಪಕಿ ಸ್ವಾತಿ ಶಿವಾನಂದ, ವರ್ಕ್ ಫೇರ್ ಆ್ಯಂಡ್ ಫ್ರೀ ಸಹ ಸಂಸ್ಥಾಪಕಿ ದಿವ್ಯಾ ವರ್ಮ ಅವರು ಪಾಲ್ಗೊಂಡಿದ್ದರು. ಪ್ರಾಧ್ಯಾಪಕ ಅರ್ಜುನ್ ಜಯದೇವ ನಿರ್ವಹಿಸಿದರು. ವಿವಿಯ ಸೋನಿ ಶೆಟ್ಟಿ ಹಾಜರಿದ್ದರು.

'ಸರ್ಕಾರಿ ಶಾಲೆ ಉಳಿಸಿಲು ಹೋರಾಡೋಣ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ವಾತಂತ್ರ್ಯ ಹೋರಾಟಗಾರರಾದ ಭಗತ್‌ಸಿಂಗ್, ರಾಜಗುರು ಮತ್ತು ಸುಖದೇವ್ ಅವರ 95ನೇ ಹುತಾತ್ಮ ದಿನವನ್ನು ಎಐಡಿಎಸ್‌ಒ ಜಿಲ್ಲಾ ಸಮಿತಿಯಿಂದ ನಗರದ ಶಾಲಾ ಕಾಲೇಜುಗಳಲ್ಲಿ ಆಚರಿಸಲಾಯಿತು.

'ಬಡವರ ಮನೆ ಬೆಳಗಲು ಶಾಲೆ ಉಳಿಸಿ; ಭಗತ್ ಸಿಂಗ್ ಕನಸು ಕಂಡ ಭಾರತವ ಕಟ್ಟಿ' ಎಂಬ ಘೋಷವಾಕ್ಯದೊಂದಿಗೆ ನಡೆದ 'ಸಾರ್ವಜನಿಕ ಶಿಕ್ಷಣ ಉಳಿಸಿ' ಅಭಿಯಾನದ ಭಾಗವಾಗಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಎಐಡಿಎಸ್‌ಒ ಜಿಲ್ಲಾ ಕಾರ್ಯದರ್ಶಿ ವಿ. ಕಲ್ಯಾಣ್ ಕುಮಾರ್ ಮಾತನಾಡಿ, 'ಭಗತ್ ಸಿಂಗ್ ಕೇವಲ ಆಳುವವರ ಬದಲಾವಣೆಗಾಗಿ ಪ್ರಾಣತ್ಯಾಗ ಮಾಡದೇ ಶೋಷಣೆ ಮುಕ್ತವಾದ ಸಮಾಜವಾದಿ ಭಾರತದ ನಿರ್ಮಾಣಕ್ಕಾಗಿ ಹೋರಾಡಿದರು. ಇಂದು ಶಿಕ್ಷಣವು ಹಕ್ಕಾಗಿ ಉಳಿಯದೆ ಮಾರಾಟದ ವಸ್ತು ಆಗುತ್ತಿರುವಾಗ ಅವರ ಮಾತುಗಳು ಈಗ ಹೆಚ್ಚು ಅನ್ವಯವಾಗುತ್ತಿವೆ' ಎಂದರು.

'ಸರ್ಕಾರದ ಕೆಪಿಎಸ್-ಮ್ಯಾಗ್ನೆಟ್ ನೀತಿ ಹುತಾತ್ಮರ ಕನಸಿನ ಮೇಲಿನ ನೇರ ದಾಳಿಯಾಗಿದೆ. ಸಂಪನ್ಮೂಲಗಳನ್ನು ಕೆಲವೇ ಶಾಲೆಗೆ ಸೀಮಿತಗೊಳಿಸಿ, ಸಾವಿರಾರು ಸರ್ಕಾರಿ ಶಾಲೆ ಮುಚ್ಚಿ ಸಾರ್ವಜನಿಕ ಶಿಕ್ಷಣ ವ್ಯವಸ್ಥೆ ಕೊಲ್ಲಲು ಹೊರಟಿದೆ. ಸರ್ಕಾರಿ ಶಾಲೆ ಉಳಿಸಿಕೊಳ್ಳಲು ಸಂಘಟಿತರಾಗಿ ಹೋರಾಡಬೇಕಿದೆ' ಎಂದರು.

ಜಿಲ್ಲಾ ಸದಸ್ಯರಾದ ನವಾಜ್, ಹಂಸ ಮತ್ತು ತುಳಸಿ, ರಾಜಶೇಖರ್, ಸಂಜಯ್ ಉಪಸ್ಥಿತರಿದ್ದರು.

'ಮರುತನಿಖೆಯಿಂದ ಹಿಂದೆ ಸರಿಯಬಾರದು'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಧರ್ಮಸ್ಥಳದ ಸೌಜನ್ಯ ಮೇಲಿನ ಅತ್ಯಾಚಾರ ಮತ್ತು ಕೊಲೆ ಪ್ರಕರಣದ ಮರು ತನಿಖೆ ಕೋರಿ ಸಲ್ಲಿಸಿದ್ದ ಅರ್ಜಿ ಸ್ವೀಕರಿಸಿದ ಸುಪ್ರೀಂ ಕೋರ್ಟ್, ರಾಜ್ಯ ಸರ್ಕಾರ ಮತ್ತು ಸಿಬಿಐಗೆ ಉತ್ತರ ನೀಡಲು ನಿರ್ದೇಶನ ನೀಡಿರುವುದನ್ನು ನ್ಯಾಷನಲ್ ಫೆಡರೇಷನ್ ಆಫ್ ಇಂಡಿಯನ್ ವಿಮೆನ್ (ಎನ್‌ಎಫ್‌ಐಡಬ್ಲ್ಯು) ರಾಜ್ಯ ಸಮಿತಿ ಸ್ವಾಗತಿಸಿದೆ.

ಬಾಲಕಿ ಸೌಜನ್ಯ ಪ್ರಕರಣದ ಮರುತನಿಖೆಗೆ ಕೋರಿ ಆಕೆಯ ತಾಯಿ ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿದ್ದ ಅರ್ಜಿಯನ್ನು ಸ್ವೀಕರಿಸಿ ನಿರ್ದೇಶನ ನೀಡಿರುವುದು ಕಗ್ಗತ್ತಲಲ್ಲಿರುವ ನಮಗೆ ಕೊಂಚ ಬೆಳಕಿನ ಆಶಾಕಿರಣ ಮೂಡಿಸಿದೆ. ರಾಜ್ಯ ಸರ್ಕಾರ ನ್ಯಾಯಾಲಯಕ್ಕೆ ಉತ್ತರ ನೀಡುವ ಸಂದರ್ಭದಲ್ಲಿ ಯಾವುದೇ ಕಾರಣಕ್ಕೂ ಮರುತನಿಖೆಯಿಂದ ಹಿಂದೆ ಸರಿಯಬಾರದು ಹಾಗೂ ಸಾಕ್ಷ್ಯಗಳಿಲ್ಲ ಎಂಬಂತಹ ಸುಳ್ಳು ನೆಪಗಳನ್ನು ನೀಡಬಾರದು ಎಂದು ಎನ್‌ಎಫ್‌ಐಡಬ್ಲ್ಯು ಅಧ್ಯಕ್ಷೆ ಎ.ಜ್ಯೋತಿ ತಿಳಿಸಿದ್ದಾರೆ.

ಎಸ್‌ಐಟಿ ಎಲ್ಲಾ ರೀತಿಯ ಸಹಕಾರ ನೀಡಿ, ನೊಂದ ಮಹಿಳೆಯರಿಗೆ ಮತ್ತು ಅಮಾಯಕರಿಗೆ ನ್ಯಾಯ ಒದಗಿಸಬೇಕೆಂದು ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು - 560 020.

ಸಂಖ್ಯೆ: ಬೆಂ.ಅ.ಪ್ರಾ/ಕಾಅ/ವಯೋವಿ-2/ಟಿಇಎನ್/ಟಿ-156-158/2025-26 ದಿನಾಂಕ: 24.03.2026

ಟೆಂಡರ್ ಆಹ್ವಾನ ಪ್ರಕಟಣೆ (ಐಎಫ್‌ಟಿ)
(ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ)

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಕೊಮ್ಮಘಟ್ಟ **(NPKL)** ವಸತಿ ಯೋಜನೆಯ ಅಭಿವೃದ್ಧಿ ಕಾಮಗಾರಿಗಳಿಗಾಗಿ ಟೆಂಡರ್ ಆಹ್ವಾನಿಸಿದೆ.ಇಂಡೆಂಟ್ ಸಂಖ್ಯೆ: **(1)** BDA/2025-26/OW/WORK_INDENT234 **(2)** BDA/2025-26/OW/WORK_INDENT235 **(3)**BDA/2025-26/OW/WORK_INDENT 236 **ಟೆಂಡರ್ ವೇಳಾಪಟ್ಟಿ:** (1) ಇ-ಪೋರ್ಟಲ್‌ನಲ್ಲಿ ಟೆಂಡರ್ ದಸ್ತಾವೇಜುಗಳು ದೊರೆಯುವ **ದಿನಾಂಕ:25.03.2026** (2) ಟೆಂಡರ್ ಬಿಡ್ ಪೂರ್ವ ವಿಚಾರಣೆಗಳ ಸಲ್ಲಿಕೆಗಾಗಿ ಕಡೇ ದಿನಾಂಕ ಮತ್ತು ಸಮಯ: **27.03.2026 ರಂದು ಮಧ್ಯಾಹ್ನ 3.00 ಗಂಟೆಗೆ** (3) ಟೆಂಡರ್ ಸಲ್ಲಿಸಲು ಕಡೇ ದಿನಾಂಕ ಮತ್ತು ಸಮಯ: **02.04.2026ರಂದು ಸಂಜೆ 4.00 ಗಂಟೆವರೆಗೆ.** (4) ಟೆಂಡರ್‌ನ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **04.04.2026 ರಂದು ಸಂಜೆ 4.30 ಗಂಟೆಯ ನಂತರ.** ಆಸಕ್ತಿಯುಳ್ಳ ಗುತ್ತಿಗೆದಾರರು ಹೆಚ್ಚಿನ ವಿವರಗಳನ್ನು **https://kppp.karnataka.gov.in** ಇಲ್ಲಿ ನೋಡಬಹುದು. ಹೆಚ್ಚಿನ ವಿವರಗಳಿಗಾಗಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವಸತಿ ಯೋಜನೆ ವಿಭಾಗ-2 ಅನ್ನು ಕಚೇರಿ ವೇಳೆಯಲ್ಲಿ ಸಂಪರ್ಕಿಸಬಹುದು.

ಸೂಚನೆ: ಯಾವುದೇ ಕಾರಣದಿಂದಾಗಿ ಇ-ಪೋರ್ಟಲ್‌ನಲ್ಲಿ ಟೆಂಡರ್ ದಸ್ತಾವೇಜುಗಳನ್ನು ಅಪ್‌ಲೋಡ್ ಮಾಡುವಲ್ಲಿ ವಿಳಂಬವಾದರೆ, ಪರಿಷ್ಕೃತ/ಮಾರ್ಪಡಿಸಿದ ಟೆಂಡರ್ ದಿನಾಂಕಗಳನ್ನು ಇ-ಪೋರ್ಟಲ್‌ನಲ್ಲಿ ಪ್ರಕಟಿಸಲಾಗುವುದು.

ಸಹಾಯವಾಣಿ/ವಾಟ್ಸ್‌ಪ್: 9483166622 (24x7). @BDAOfficialGok

ಸಹಿ/- ಕಾರ್ಯಪಾಲಕ ಅಭಿಯಂತರರು, ವಯೋವಿ-2, ಬೆಂಅಪ್ರಾ, ಬೆಂಗಳೂರು

‘ಹೈನುಗಾರಿಕೆಯಿಂದ ಮಹಿಳೆಯರ ಸಬಲೀಕರಣ’

ಪ್ರಜಾವಾಣಿ ವಾರ್ತೆ

ಹೆಸರಘಟ್ಟ: ಹೈನುಗಾರಿಕೆಯು ಗ್ರಾಮೀಣ ಪ್ರದೇಶದ ಆರ್ಥಿಕ ವ್ಯವಸ್ಥೆಯನ್ನು ಗಟ್ಟಿ ಮಾಡುವುದಲ್ಲದೆ, ಇದರಿಂದ ಮಹಿಳೆಯರು ಸಬಲರಾಗಬಹುದು ಎಂದು ಚಿಕ್ಕಬಳ್ಳಾಪುರ ಲೋಕಸಭಾ ಸದಸ್ಯ ಕೆ.ಸುಧಾಕರ್ ಹೇಳಿದರು.

ಹೊಸಹಳ್ಳಿಪಾಳ್ಯ ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ ಮೊದಲನೇ ಮಹಡಿಯ ಶಂಕುಸ್ಥಾಪನೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಇಂದು ಲಕ್ಷಾಂತರ ಕುಟುಂಬಗಳು ಹೈನುಗಾರಿಕೆಯಲ್ಲಿ ತೊಡಗಿಸಿಕೊಂಡಿದ್ದು ಬದುಕನ್ನು ಕಟ್ಟಿಕೊಂಡಿವೆ. ಹೈನುಗಾರಿಕೆಯಿಂದ ಪ್ರತಿನಿತ್ಯ ಹಣದ ವಹಿವಾಟು ನಡೆಯುವುದರಿಂದ ಮಹಿಳೆಯರು ಸ್ವಾವಲಂಬಿಯಾಗಿ ಜೀವನ ನಡೆಸಬಹುದಾಗಿದೆ’ ಎಂದು ತಿಳಿಸಿದರು.

ಬಮೂಲ್ ನಿರ್ದೇಶಕ ಕಡತನಮಲೆ ಸತೀಶ್, ‘ಏಪ್ರಿಲ್ 1ರಂದು ಹಾಲು ಉತ್ಪಾದಕರ ಖಾತೆಗಳಿಗೆ ನೇರವಾಗಿ ಲೀಟರ್‌ಗೆ ಹೆಚ್ಚುವರಿ ₹1 ಅನ್ನು ವರ್ಗಾಯಿಸಲಾಗುತ್ತದೆ. ಲಾಭಾಂಶದ ಹಣದಲ್ಲಿ ಪ್ರತಿ ಸಹಕಾರ ಸಂಘಕ್ಕೆ ₹15 ಸಾವಿರ ಹಂಚಿಕೆ ಮಾಡಲಾಗುತ್ತದೆ’ ಎಂದರು.

ಗುಣಮಟ್ಟದ ಹಾಲು ಉತ್ಪಾದನೆಗಾಗಿ 15 ಅಡಿ ಎತ್ತರ ಬೆಳೆಯುವ ಜೋಳವನ್ನು ಪ್ರತಿ ಹಾಲು ಉತ್ಪಾದಕರಿಗೆ 5 ಕೆ.ಜಿ. ಉಚಿತವಾಗಿ ವಿತರಣೆ ಮಾಡಲಾಗುತ್ತದೆ. ರೈತರು ಹಾಲು ಉತ್ಪಾದನೆಯಲ್ಲಿ ತೊಡಗಲು ಪ್ರೋತ್ಸಾಹಿಸುವ ಸಲುವಾಗಿ ಹಲವಾರು ಕಾರ್ಯಕ್ರಮಗಳನ್ನು ಜಾರಿಗೆ ತರಲಾಗಿದೆ ಎಂದರು.

ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಎಚ್ ಸೀನಪ್ಪ, ಬಿಜೆಪಿ ಮುಖಂಡರಾದ ಹನುಮಯ್ಯ, ಬಾಬು, ಅಜಯ್, ವಿಜಯಕುಮಾರ್, ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷ ನವಾನಂದ ಉಪಸ್ಥಿತರಿದ್ದರು.

ಉತ್ತರ ಒದಗಿಸದ ಅಧಿಕಾರಿಗಳಿಗೆ ಛೀಮಾರಿ: ಒತ್ತಾಯ

ಬೆಂಗಳೂರು: ಅಧಿವೇಶನ ಮುಗಿಯುವ ಹಂತಕ್ಕೆ ಬಂದರೂ ಸದಸ್ಯರ ಪ್ರಶ್ನೆಗಳಿಗೆ ಉತ್ತರ ಒದಗಿಸದ ಅಧಿಕಾರಿಗಳನ್ನು ವಿಧಾನಪರಿಷತ್‌ಗೆ ಕರೆಸಿ, ಛೀಮಾರಿ ಹಾಕಬೇಕು. ಅಮಾನತುಗೊಳಿಸಲು ನಿರ್ಣಯ ಕೈಗೊಳ್ಳಬೇಕು ಎಂದು ವಿರೋಧ ಪಕ್ಷಗಳ ಸದಸ್ಯರು ಒತ್ತಾಯಿಸಿದರು.

ಪ್ರಶ್ನೋತ್ತರ ಅವಧಿ ಮುಗಿಯುತ್ತಿದ್ದಂತೆ ವಿಷಯ ಪ್ರಸ್ತಾಪಿಸಿದ ಜೆಡಿಎಸ್‌ನ ಎಸ್.ಎಲ್.ಭೋಜೇಗೌಡ, '289 ಪ್ರಶ್ನೆಗಳಿಗೆ ಅಧಿಕಾರಿಗಳು ಉತ್ತರ ನೀಡದಿರುವುದು ಹಕ್ಕು ಚ್ಯುತಿಯಾಗಿದೆ. ಈ ಕುರಿತು ಕ್ರಮ ಕೈಗೊಳ್ಳಬೇಕು' ಎಂದು ಸಭಾಪತಿ ಬಸವರಾಜ ಹೊರಟ್ಟಿ ಅವರನ್ನು ಕೋರಿದರು. ಕಾಂಗ್ರೆಸ್‌ನ ಪುಟ್ಟಣ್ಣ, ಸುಧಾಮದಾಸ್, ಬಿಜೆಪಿಯ ಸಿ.ಟಿ.ರವಿ ಸೇರಿ ಹಲವರು 'ಉತ್ತರ ಕೊಡಿಸುವ ವಿಚಾರದಲ್ಲಿ ಸಭಾಪತಿ ಅಸಹಾಯಕರಾದರೆ ಹೇಗೆ?' ಎಂದರು.

ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, 'ಬೆಳಗಾವಿ ಅಧಿವೇಶನದಲ್ಲಿ ಕೇಳಿದ್ದ ಹಲವು ಪ್ರಶ್ನೆಗಳಿಗೂ ಉತ್ತರ ಬಂದಿಲ್ಲ' ಎಂದರು. ಮಾರ್ಚ್ 25ರ ಒಳಗೆ ಉತ್ತರ ಒದಗಿಸುವಂತೆ ಸಭಾನಾಯಕ ಎನ್.ಎಸ್.ಬೋಸರಾಜು ಅವರಿಗೆ ಹೊರಟ್ಟಿ ಸೂಚಿಸಿದರು.

ಗುತ್ತಿಗೆದಾರರೊಂದಿಗೆ ನಾಳೆ, ನಾಡಿದ್ದು ಸಭೆ

ನಗರದಲ್ಲಿ ಕಸ ಸಂಗ್ರಹ, ಸಾಗಣೆ ಸ್ಥಗಿತ • ಸಮಸ್ಯೆ ಇತ್ಯರ್ಥಕ್ಕೆ ಸಭೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಆರು ತಿಂಗಳಿಂದ ಪಾವತಿಯಾಗದ ಬಿಲ್: ಪ್ರತಿಭಟನೆ
- ಇದೇ 26, 27ಕ್ಕೆ ಗುತ್ತಿಗೆದಾರರೊಂದಿಗೆ ಸಭೆ
- ಕಸ ಆಯಲು ಕಾರ್ಮಿಕರ ಬಳಕೆ: ದೂರು

ಬೆಂಗಳೂರು: ಕಾರ್ಮಿಕರಿಗೆ ಶೋಷಣೆ ನಿಲ್ಲಿಸಲಾಗುತ್ತಿದೆ ಹಾಗೂ ಆರು ತಿಂಗಳಿಂದ ಬಿಲ್ ಪಾವತಿಸಿಲ್ಲ ಎಂದು ಹಲವು ಗುತ್ತಿಗೆದಾರರು ನಗರದಲ್ಲಿ ಕಸ ಸಂಗ್ರಹ, ಸಾಗಣೆಯನ್ನು ಮಂಗಳವಾರದಿಂದ ಸ್ಥಗಿತಗೊಳಿಸಿದ್ದಾರೆ. ಈ ಸಮಸ್ಯೆಯನ್ನು ಸಭೆ ನಡೆಸಿ, ಪರಿಹರಿಸಲು ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ (ಬಿಎಸ್‌ಡಬ್ಲ್ಯುಎಂಎಲ್) ಅಧಿಕಾರಿಗಳು ಮುಂದಾಗಿದ್ದಾರೆ.

'ಎಸ್ಮಾ' ಕಾಯ್ದೆ ಜಾರಿ ಮಾಡಿ, 35 ಗುತ್ತಿಗೆದಾರರ ಮೇಲೆ ಬಿಎಸ್‌ಡಬ್ಲ್ಯುಎಂಎಲ್ ವತಿಯಿಂದ ಪೊಲೀಸ್ ಠಾಣೆಯಲ್ಲಿ ಸೋಮವಾರ ಎಫ್‌ಐಆರ್ ದಾಖಲಿಸಲಾಗಿತ್ತು. ಈ ಗುತ್ತಿಗೆದಾರರು ತಮ್ಮ ಪ್ರದೇಶದಲ್ಲಿ ಮಂಗಳವಾರ ಕಾರ್ಯನಿರ್ವಹಿಸದ್ದರಿಂದ ಮನೆಗಳಲ್ಲಿ ತ್ಯಾಜ್ಯ ಉಳಿದಿದ್ದು, 'ಬ್ಲ್ಯಾಕ್ ಸ್ಪಾಟ್'ಗಳಲ್ಲಿ ಕಸ ರಾಶಿ ಬಿದ್ದಿದೆ.

'ಪ್ರತಿ ವಿಧಾನಸಭೆ ಕ್ಷೇತ್ರದಂತೆ ಗುತ್ತಿಗೆದಾರರ ಸಭೆಯನ್ನು ಮಾರ್ಚ್ 26 ಮತ್ತು 27ರಂದು ನಡೆಸಲಾಗುತ್ತದೆ. ಗುತ್ತಿಗೆದಾರರು ತಮ್ಮ ಸಮಸ್ಯೆಗಳನ್ನು ಮುಕ್ತವಾಗಿ ಚರ್ಚಿಸಬಹುದು. ಪರಿಹಾರಕ್ಕೆ ಕ್ರಮ ಕೈಗೊಳ್ಳಲಾಗುತ್ತದೆ' ಎಂದು ಬಿಎಸ್‌ಡಬ್ಲ್ಯುಎಂಎಲ್‌ನ ಸಿಒಒ ಕರೀಗೌಡ ತಿಳಿಸಿದರು.

'ವಿಧಾನಸಭೆ ಕ್ಷೇತ್ರ ಹಾಗೂ ವಿಭಾಗವಾರು ಗುತ್ತಿಗೆದಾರರ ಸಭೆಯನ್ನು ನಡೆಸಿದ ನಂತರ, ಗುತ್ತಿಗೆದಾರರ ಸಂಘದ ಪದಾಧಿಕಾರಿಗಳೊಂದಿಗೆ ಸಭೆ ನಡೆಸಲಾಗುತ್ತದೆ' ಎಂದರು.

'ಸಿಇಒ ಅಧ್ಯಕ್ಷತೆಯಲ್ಲಿ ಅಧಿಕಾರಿಗಳು ಹಾಗೂ ಗುತ್ತಿಗೆದಾರರ ಸಭೆಯನ್ನು ಕರೆಯಲಾಗಿದೆ. ಗುತ್ತಿಗೆದಾರರು ಅಥವಾ ಪ್ರತಿನಿಧಿಯವರನ್ನು ಆಯಾ ಸಹಾಯಕ ಪ್ರಧಾನ ವ್ಯವಸ್ಥಾಪಕರು (ಎಜಿಎಂ) ಸಭೆಗೆ ಆಹ್ವಾನಿಸಬೇಕು' ಎಂದು ಬಿಎಸ್‌ಡಬ್ಲ್ಯುಎಂಎಲ್‌ನ ಸಿಒಒ ಅವರು ಮಂಗಳವಾರ ಆದೇಶ ಹೊರಡಿಸಿದ್ದಾರೆ.

ಮಲ್ಲೇಶ್ವರ, ಮಹಾಲಕ್ಷ್ಮಿ ಲೇಔಟ್, ರಾಜಾಜಿನಗರ, ರಾಜರಾಜೇಶ್ವರಿನಗರ, ಗೋವಿಂದರಾಜನಗರ, ವಿಜಯನಗರ, ಯಶವಂತಪುರ, ಬಸವನಗುಡಿ, ದಾಸರಹಳ್ಳಿ, ಪದ್ಮನಾಭನಗರ, ಕೆ.ಆರ್. ಪುರ, ಮಹದೇವಪುರ ವಿಧಾನಸಭೆ ವ್ಯಾಪ್ತಿಯ ಗುತ್ತಿಗೆದಾರರೊಂದಿಗೆ ಮಾರ್ಚ್ 26ರಂದು ಸಭೆ ನಡೆಯಲಿದೆ.

ದೂರು: 'ಕಾರ್ಮಿಕರನ್ನು ಕಸ ಆಯುವುದಕ್ಕೆ ಬಳಸಿಕೊಂಡಿರುವುದರಿಂದ ಅವರಿಗೆ ಆರೋಗ್ಯದ ಸಮಸ್ಯೆಗಳಾಗಿವೆ. ಕಾಯ್ದೆಗಳಂತೆ, ಈ ಕೆಲಸಕ್ಕೆ ಯಾರನ್ನೂ ಉಪಯೋಗಿಸಿಕೊಳ್ಳಬಾರದು. ಇದು ಕಾನೂನು ಬಾಹಿರ. ಇದಕ್ಕೆ ಕಾರಣರಾದ ಅಧಿಕಾರಿಗಳ ಮೇಲೆ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ರಾಜ್ಯಪಾಲ, ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ, ಮಾನವ ಹಕ್ಕು ಆಯೋಗಗಳಿಗೆ ಪತ್ರ ಬರೆಯಲಾಗಿದೆ' ಎಂದು ಬೆಂಗಳೂರು ಮಹಾನಗರ ಸ್ವಚ್ಛತೆ ಮತ್ತು ಲಾರಿ ಮಾಲೀಕರು-ಗುತ್ತಿಗೆದಾರರ ಸಂಘದ ಪ್ರಧಾನ ಕಾರ್ಯದರ್ಶಿ ಎಸ್.ಎನ್. ಬಾಲಸುಬ್ರಮಣಿಯಂ ತಿಳಿಸಿದರು.

'ಎಸ್ಮಾ ಕಾಯ್ದೆಯಂತೆ ಗುತ್ತಿಗೆದಾರರ ಮೇಲೆ ಎಫ್‌ಐಆರ್ ದಾಖಲು ಮಾಡಲಾಗಿದೆ. ಈ ಗುತ್ತಿಗೆದಾರರು ಮಂಗಳವಾರವೂ ಕಾರ್ಯ ನಿರ್ವಹಿಸಿಲ್ಲ. ಕಾನೂನು ಪ್ರಕಾರ ಹೋರಾಟ ಮಾಡುತ್ತೇವೆ. ಆರು ತಿಂಗಳಿಂದ ಬಿಲ್ ಪಾವತಿ ಮಾಡದೆ ಶೋಷಣೆ ಮಾಡುತ್ತಿರುವುದರ ಜೊತೆಗೆ, ಕಾರ್ಮಿಕರಿಂದ ಚಿಂದಿ ಆಯಿಸಿ ಅಮಾನವೀಯವಾಗಿ ನಡೆಸಿಕೊಳ್ಳಲಾಗುತ್ತಿದೆ. ಇದಕ್ಕೆ ಕಾರಣರಾದ ಅಧಿಕಾರಿಗಳ ಮೇಲೆ ಕ್ರಮ ಆಗಲೇಬೇಕು. ಈ ಬಗ್ಗೆ ನಾವು ಎಲ್ಲ ಹಂತದಲ್ಲಿಯೂ ಹೋರಾಟ ಮಾಡಲಿದ್ದೇವೆ' ಎಂದು ಹೇಳಿದರು.



ಚಾಮರಾಜಪೇಟೆಯ ರುದ್ರಪ್ಪ ಗಾರ್ಡನ್ ಮಹದೇಶ್ವರ ದೇವಸ್ಥಾನದ ಬಳಿ ಮಂಗಳವಾರ ವಿಲೇವಾರಿಯಾಗದೆ ಬಿದ್ದಿದ್ದ ಕಸದ ರಾಶಿ
ಪ್ರಜಾವಾಣಿ ಚಿತ್ರ

ಸುದ್ದಿ 2 ನಿಮಿಷ

'ವಿದೇಶಿ ನೇರ ಹೂಡಿಕೆ ಹೆಚ್ಚಳ ಸಿ.ಎಂ ಆಡಳಿತವೇ ಕಾರಣ'

ಬೆಂಗಳೂರು: ಸಿದ್ದರಾಮಯ್ಯ ಅವರ ಆಡಳಿತ ವೈಖರಿಯನ್ನು ಮೆಚ್ಚಿಕೊಂಡಿರುವ ಕಾರಣದಿಂದಾಗಿಯೇ ರಾಜ್ಯಕ್ಕೆ ಅತಿ ಹೆಚ್ಚು ಪ್ರಮಾಣದಲ್ಲಿ ವಿದೇಶಿ ನೇರ ಹೂಡಿಕೆ ಹರಿದು ಬರುತ್ತಿದೆ ಎಂದು ಕಾಂಗ್ರೆಸ್‌ನ ಬಸವರಾಜ ರಾಯರಡ್ಡಿ ಹೇಳಿದರು.

ಬಜೆಟ್ ಮೇಲಿನ ಚರ್ಚೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು, 'ದೇಶದಲ್ಲಿ ವಿದೇಶಿ ನೇರ ಹೂಡಿಕೆಯಲ್ಲಿ ಮಹಾರಾಷ್ಟ್ರ ನಂಬರ್ 1 ಸ್ಥಾನದಲ್ಲಿದ್ದರೆ, ಕರ್ನಾಟಕ ಎರಡನೇ ಸ್ಥಾನದಲ್ಲಿದೆ. ಇದಕ್ಕೆ ಸಿದ್ದರಾಮಯ್ಯ ಅವರೇ ಕಾರಣರು' ಎಂದರು.

ಗ್ಯಾರಂಟಿ ಯೋಜನೆಗಳ ಕಾರಣ ರಾಜ್ಯದ ತಲಾ ಆದಾಯವೂ ಹೆಚ್ಚಾಗಿದೆ. ತಲಾವಾರು ಆದಾಯದಲ್ಲಿ ದೇಶದಲ್ಲೇ ಎಲ್ಲಾ ರಾಜ್ಯಗಳಿಗಿಂತಲೂ ಕರ್ನಾಟಕ ಮೊದಲ ಸ್ಥಾನದಲ್ಲಿದೆ. ಮಹಾರಾಷ್ಟ್ರ 3ನೇ ಸ್ಥಾನದಲ್ಲಿ, ಗುಜರಾತ್ 4ನೇ ಸ್ಥಾನದಲ್ಲಿದೆ. ಈ ಮಾಹಿತಿಯನ್ನು ಕೇಂದ್ರ ಹಣಕಾಸು ಸಚಿವೆ ರಾಜ್ಯಸಭೆಯಲ್ಲಿ ತಿಳಿಸಿದ್ದಾರೆ ಎಂದರು.

'ಕೇಂದ್ರ ಸರ್ಕಾರದ ತಾರತಮ್ಯದ ಧೋರಣೆಯಿಂದಾಗಿ ನಮ್ಮ ರಾಜ್ಯಕ್ಕೆ ಆರ್ಥಿಕವಾಗಿ ಅನ್ಯಾಯ ಆಗುತ್ತಿದೆಯೇ ಹೊರತು, ರಾಜ್ಯ ಸರ್ಕಾರ ತಂದಿರುವ ಗ್ಯಾರಂಟಿ ಯೋಜನೆಗಳಿಂದ ಅಲ್ಲ' ಎಂದು ಹೇಳಿದರು.



ವಿಶೇಷ ಭತ್ಯೆ ಕೊಡಿ': 'ಗ್ರಾಮಾಂತರ ಪ್ರದೇಶದಲ್ಲಿ ರೈತರ ಮಕ್ಕಳಿಗೆ ಯಾರೂ ಹೆಣ್ಣು ಕೊಡುತ್ತಿಲ್ಲ. ಅಲ್ಲಿನ ಯುವಕರನ್ನು ನೋಡಿದರೆ ಹೊಟ್ಟೆ ಉರಿಯುತ್ತದೆ' ಎಂದು ಬಜೆಟ್ ಮೇಲಿನ ಚರ್ಚೆಯಲ್ಲಿ ಕಾಂಗ್ರೆಸ್‌ನ ಎಚ್.ಡಿ.ರಂಗನಾಥ್ ಹೇಳಿದರು.

'ನಾಯಕತ್ವ ಗೊಂದಲ ಪರಿಹರಿಸಿ'

ಬೆಂಗಳೂರು: ಅಧಿಕಾರ ಹಂಚಿಕೆ, ನಾಯಕತ್ವ ಗೊಂದಲ ವಿಚಾರವನ್ನು ಹೈಕಮಾಂಡ್ ಆದಷ್ಟು ಬೇಗ ಇತ್ಯರ್ಥಪಡಿಸಬೇಕು, ಪರಿಷತ್ ಸದಸ್ಯರಿಗೂ ಸಂಪುಟದಲ್ಲಿ ಸ್ಥಾನ ನೀಡಬೇಕು ಎಂದು ವಿಧಾನ ಪರಿಷತ್‌ನ ಕಾಂಗ್ರೆಸ್ ಸದಸ್ಯರ ಸಮಾನಮನಸ್ಕರ ಗುಂಪು ಪಟ್ಟು ಹಿಡಿದಿದೆ.

ತಾಜ್ ವೆಸ್ಟೆಂಡ್ ಹೋಟೆಲ್‌ನಲ್ಲಿ 20ಕ್ಕೂ ಹೆಚ್ಚು ಸದಸ್ಯರು ಮಂಗಳವಾರ ರಾತ್ರಿ ಸಭೆ ನಡೆಸಿ ಈ ಬಗ್ಗೆ ಚರ್ಚೆ ನಡೆಸಿದ್ದಾರೆ.

ಮಂಜುನಾಥ ಭಂಡಾರಿ, ಸಲೀಂ ಅಹಮದ್, ಎಸ್. ರವಿ, ಬಸನಗೌಡ ಬಾದರ್ಲಿ, ದಿನೇಶ್ ಗೂಳಿಗೌಡ, ಪುಟ್ಟಣ್ಣ, ಸುಧಾಮ್ ದಾಸ್ ಮತ್ತಿತರು ಈ ಸಭೆಯಲ್ಲಿ ಭಾಗಿಯಾಗಿದ್ದರು.

ನಾಯಕತ್ವದ ಗೊಂದಲದಿಂದ ರಾಜ್ಯ ಕಾಂಗ್ರೆಸ್‌ನಲ್ಲಿ ಗೊಂದಲ ಸೃಷ್ಟಿಯಾಗಿದೆ. ಅಧಿಕಾರ ಹಂಚಿಕೆ ಕುರಿತಂತೆ ಒಪ್ಪಂದ ಆಗಿದ್ದರೆ ಈ ವಿಚಾರವನ್ನು ಆದಷ್ಟು ಶೀಘ್ರ ಇತ್ಯರ್ಥಪಡಿಸಬೇಕು, ನಿಗಮ–ಮಂಡಳಿಗಳಿಗೆ ನೇಮಕ ವೇಳೆ ಪಕ್ಷದ ಕಾರ್ಯಕರ್ತರಿಗೆ ಆಗಿರುವ ಅನ್ಯಾಯವನ್ನು ಸರಿಪಡಿಸಬೇಕು. ಸ್ಥಳೀಯ ಸಂಸ್ಥೆಗಳ ಚುನಾವಣೆ ಹತ್ತಿರದಲ್ಲಿಯೇ ಇರುವುದರಿಂದ ಎಲ್ಲ ಗೊಂದಲಗಳಿಗೆ ಪರಿಹಾರ ಕಂಡುಕೊಳ್ಳಬೇಕು ಎಂದು ಪಕ್ಷದ ವರಿಷ್ಠರನ್ನು ಆಗ್ರಹಿಸಲು ನಿರ್ಧರಿಸಲಾಗಿದೆ.

ಪ್ರತಿಭಟನೆ...

ಪ್ರಜಾವಾಣಿ ಚಿತ್ರ



ಕನಿಷ್ಠ ವೇತನ ಜಾರಿ ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸಲು ಆಗ್ರಹಿಸಿ ರಾಜ್ಯ ಅಂಗನವಾಡಿ ನೌಕರರ ಸಂಘದ ಸದಸ್ಯರು ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಎರಡನೇ ದಿನವಾದ ಮಂಗಳವಾರವೂ ಪ್ರತಿಭಟನೆ ನಡೆಸಿದರು

ಶಿವಲಿಂಗೇಗೌಡ– ರಾಯರಡ್ಡಿ ಜಟಾಪಟಿ!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಂಗ್ಲಿಷ್ ಹಾಗೂ ಕನ್ನಡ ಮಾಧ್ಯಮದ ವಿಷಯವು ವಿಧಾನಸಭೆಯಲ್ಲಿ ಕಾಂಗ್ರೆಸ್ ಸದಸ್ಯರ ಜಟಾಪಟಿಗೆ ದಾರಿ ಮಾಡಿಕೊಟ್ಟಿತು.

'ಹಳ್ಳಿ ಮಕ್ಕಳು, ಆರ್ಥಿಕ ಶಕ್ತಿ ಇಲ್ಲದ ಮಕ್ಕಳು ಇಂಗ್ಲಿಷ್ ಓದಬೇಕು. ಅದಕ್ಕೆ ಆಂಗ್ಲ ಮಾಧ್ಯಮ ಬೇಕು' ಎಂಬ ಕೆ.ಎಂ. ಶಿವಲಿಂಗೇಗೌಡ ಅವರ ವಾದಕ್ಕೆ, 'ಮಕ್ಕಳು ಕನ್ನಡದಲ್ಲಿಯೇ ಓದಲಿ. ನಾವು ಇಂಗ್ಲಿಷ್ ಗುಲಾಮರಾಗ ಬೇಕಿಲ್ಲ' ಎಂದು ಬಸವರಾಜ ರಾಯರಡ್ಡಿ ಪ್ರತಿವಾದ ಮಂಡಿಸಿದರು.

ಶಿಕ್ಷಕರ ವರ್ಗಾವಣೆ ನಿಯಂತ್ರಣ ತಿದ್ದುಪಡಿ ಮಸೂದೆ ಮೇಲಿನ ಚರ್ಚೆಯ ವೇಳೆ ಮಾತನಾಡಿದ ಕಾಂಗ್ರೆಸ್‌ನ ಶಿವಲಿಂಗೇಗೌಡ, 'ನಮ್ಮ ಮಕ್ಕಳು ಇಂಗ್ಲಿಷ್ ಕಲಿಯಬೇಕು. ಅವರು ಅಮೆರಿಕ ತಿರುಗಿ ಬರಬೇಕು. ನಮ್ಮ ಮಕ್ಕಳು ಇಲ್ಲಿಯೇ ಇರಬೇಕೇ? ಕನ್ನಡ ಮಾಧ್ಯಮ ಬೇಡ ಎಂದಲ್ಲ. ಆದರೆ, ಆಂಗ್ಲ ಮಾಧ್ಯಮ ಬೇಕು' ಎಂದು ಆಗ್ರಹಿಸಿದರು.

ಈ ವೇಳೆ ಮಧ್ಯಪ್ರವೇಶಿಸಿದ ರಾಯರೆಡ್ಡಿ, 'ಕನ್ನಡದಲ್ಲಿ ಓದಿದರೆ ಸಮಸ್ಯೆಯೇನು' ಎಂದು ಪ್ರಶ್ನಿಸಿದರು.

ಆಗ ಶಿವಲಿಂಗೇಗೌಡ, 'ನೀವು ಯಾಕೆ ಇಂಗ್ಲಿಷ್ ಓದಿದ್ರಿ? ಸರ್ಕಾರದ ವಿರುದ್ಧ ಮಾತನಾಡುತ್ತಿದ್ದೀರಿ. ಇಂಗ್ಲಿಷ್ ಅವಶ್ಯ ಇಲ್ಲ ಅಂತ ಹೇಗೆ ಹೇಳ್ತೀರಾ? ಸರ್ಕಾರಿ ಶಾಲೆ ಮಕ್ಕಳೂ ಇಂಗ್ಲಿಷ್ ಓದಬೇಕು' ಎಂದು ಒತ್ತಿ ಹೇಳಿದರು. ಅದಕ್ಕೆ ರಾಯರಡ್ಡಿ, 'ಇಂಗ್ಲಿಷ್ ಬರೋರು ಮಾತ್ರ ಮೇಧಾವಿ ಅಲ್ಲ' ಎಂದು ಪ್ರತಿಪಾದಿಸಿದರು. ಇಬ್ಬರನ್ನೂ ಸಮಾಧಾನಪಡಿಸುವಷ್ಟರಲ್ಲಿ ಸಭಾಧ್ಯಕ್ಷ ಯು.ಟಿ. ಖಾದರ್ ಸುಸ್ತಾಗಿ ಹೋದರು.

'ನಮ್ಮ ರಕ್ತದಲ್ಲಿ ಕನ್ನಡ ಭಾಷೆಯಿದೆ'

'ನಮ್ಮ ರಕ್ತದಲ್ಲಿ ಕನ್ನಡ ಭಾಷೆಯಿದೆ. ಅದನ್ನು ಯಾರಿಂದಲೂ ಬದಲಿಸಲು ಸಾಧ್ಯವಿಲ್ಲ' ಎಂದು ಮಧು ಬಂಗಾರಪ್ಪ ಹೇಳಿದರು.

'ಕನ್ನಡವನ್ನು ಇನ್ನಷ್ಟು ಚಂದವಾಗಿ ಹೇಗೆ ಕಲಿಸಬಹುದು ಎಂಬ ಬಗ್ಗೆ ಸಲಹೆ ನೀಡುವಂತೆ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ, ಬರಗೂರು ರಾಮಚಂದ್ರಪ್ಪ, ದೇವನೂರ ಮಹದೇವ ಅವರನ್ನು ಕೋರಲಾಗಿದೆ' ಎಂದು ಹೇಳಿ ಭಾಷಾ ಮಾಧ್ಯಮ ಕುರಿತ ಚರ್ಚೆಗೆ ತೆರೆ ಎಳೆದರು.

ನಾಗರತ್ನ ಪೀಠಕ್ಕೆ 'ಜಮ್ನಾಲಾಲ್' ವಿವಾದ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ನ್ಯಾ. ದೀಪಂಕರ್ ದತ್ತ ನ್ಯಾ. ಸತೀಶ್ ಚಂದ್ರ ಪೀಠದಿಂದ ವರ್ಗಾವಣೆ
- ಹೈಕೋರ್ಟ್ ಆದೇಶ ಪ್ರಶ್ನಿಸಿ ಟ್ರಸ್ಟ್ ಸಲ್ಲಿಸಿದ್ದ ಅರ್ಜಿ
- ಮಿತಿಗಿಂತಲೂ ಹೆಚ್ಚು ಜಮೀನು ಹೊಂದಿದೆ ಎಂಬ ಆರೋಪ ಪ್ರಕರಣ

ನವದೆಹಲಿ: ಬೆಂಗಳೂರಿನ ಜಮ್ನಾಲಾಲ್ ಬಜಾಜ್ ಟ್ರಸ್ಟ್‌ನ ಭೂ ವಿವಾದವನ್ನು ನ್ಯಾಯಮೂರ್ತಿ ಬಿ.ವಿ.ನಾಗರತ್ನ ಅವರ ಪೀಠಕ್ಕೆ ನ್ಯಾಯಮೂರ್ತಿಗಳಾದ ದೀಪಂಕರ್ ದತ್ತ ಹಾಗೂ ಸತೀಶ್ ಚಂದ್ರ ಶರ್ಮಾ ಅವರ ಪೀಠವು ವರ್ಗಾಯಿಸಿದೆ.

ಹೈಕೋರ್ಟ್ ಆದೇಶ ಪ್ರಶ್ನಿಸಿ ಟ್ರಸ್ಟ್ ಸಲ್ಲಿಸಿರುವ ವಿಶೇಷ ಮೇಲ್ಮನವಿ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಪೀಠವು, 'ಸತ್ಯ ಹಾಗೂ ಸಂದರ್ಭವನ್ನು ಗಮನದಲ್ಲಿಟ್ಟುಕೊಂಡು ನ್ಯಾಯದ ಹಿತಾಸಕ್ತಿಗಾಗಿ ಈ ತೀರ್ಮಾನಕ್ಕೆ ಬಂದಿದ್ದೇವೆ' ಎಂದು ತಿಳಿಸಿದೆ.

ಭೂ ಸುಧಾರಣಾ ಕಾಯ್ದೆಯ ಮಿತಿಗಿಂತಲೂ ಹೆಚ್ಚುವರಿ ಜಮೀನನ್ನು ಹೊಂದಿದೆ ಎಂಬ ಕಾರಣಕ್ಕೆ ದಾಖಲಾಗಿದ್ದ ಪ್ರಕರಣದಲ್ಲಿ ಭೂ ನ್ಯಾಯಮಂಡಳಿ, 'ಟ್ರಸ್ಟ್ ತನ್ನ ಸುಪರ್ದಿಯಲ್ಲಿರುವ ಹೆಚ್ಚುವರಿ ಜಮೀನನ್ನು ಸರ್ಕಾರಕ್ಕೆ ಮರಳಿಸಬೇಕು' ಎಂದು 2010ರಲ್ಲಿ ಆದೇಶ ನೀಡಿತ್ತು. ಇದನ್ನು ಟ್ರಸ್ಟ್ ಹೈಕೋರ್ಟ್‌ನಲ್ಲಿ ಪ್ರಶ್ನಿಸಿತ್ತು.



ಬಿ.ವಿ.ನಾಗರತ್ನ

ವಿಚಾರಣೆ ನಡೆಸಿದ್ದ ಏಕಸದಸ್ಯ ನ್ಯಾಯಪೀಠ, 'ಉಪ ವಿಭಾಗಾಧಿಕಾರಿ ಅಧ್ಯಕ್ಷತೆಯ ಭೂ ನ್ಯಾಯ ಮಂಡಳಿಯೇ ಪ್ರಕರಣವನ್ನು ಮರುಪರಿಶೀಲಿಸಿ ತೀರ್ಪು ನೀಡಬೇಕು' ಎಂದು 2014ರ ಮಾರ್ಚ್ 3ರಂದು ಆದೇಶಿಸಿತ್ತು.

ಈ ಆದೇಶದ ಅನುಸಾರ ವಿಚಾರಣೆ ನಡೆಸಿದ್ದ ಎಂ.ಕೆ.ಜಗದೀಶ್ ನೇತೃತ್ವದ ಭೂ ನ್ಯಾಯಮಂಡಳಿ, 'ಕಾಯ್ದೆಯ ಮಿತಿಗಿಂತ 354 ಎಕರೆ ಹೆಚ್ಚುವರಿ ಜಮೀನನ್ನು ಟ್ರಸ್ಟ್ ಹೊಂದಿದೆ. ಇದನ್ನು ಸರ್ಕಾರ ಮರಳಿ ತನ್ನ ವಶಕ್ಕೆ ಪಡೆಯಬೇಕು' ಎಂದು 2017ರ ನವೆಂಬರ್ 28ರಂದು ಆದೇಶಿಸಿತ್ತು. ಇದನ್ನು ಪ್ರಶ್ನಿಸಿ ಟ್ರಸ್ಟ್ ಪುನಃ ಹೈಕೋರ್ಟ್ ಮೆಟ್ಟಿಲೇರಿತ್ತು. ಈ ಅರ್ಜಿ ವಿಚಾರಣೆ ನಡೆಸಿದ್ದ ಏಕಸದಸ್ಯ ನ್ಯಾಯಪೀಠ, ಭೂ ನ್ಯಾಯಮಂಡಳಿಯ ಆದೇಶ ರದ್ದುಪಡಿಸಿ 2021ರ ಜೂನ್ 30ರಂದು ತೀರ್ಪು ನೀಡಿತ್ತು.

ಮಾಗಡಿ ಮುಖ್ಯ ರಸ್ತೆಯಲ್ಲಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ವತಿಯಿಂದ 'ಮೆಗಾ ಕೃಷಿ ಮಾರುಕಟ್ಟೆ' ನಿರ್ಮಾಣಕ್ಕಾಗಿ 272 ಎಕರೆಗೂ ಹೆಚ್ಚಿನ ವಿಶಾಲ ಪ್ರದೇಶವನ್ನು ಸ್ವಾಧೀನಪಡಿಸಿಕೊಂಡಿದ್ದ ರಾಜ್ಯ ಸರ್ಕಾರದ ಕ್ರಮವನ್ನು ಹೈಕೋರ್ಟ್ 2025ರಲ್ಲಿ ಎತ್ತಿಹಿಡಿದಿತ್ತು. ಭೂ ಸ್ವಾಧೀನ ಕ್ರಮವನ್ನು ಪ್ರಶ್ನಿಸಿ, 'ಜಮ್ನಾಲಾಲ್ ಬಜಾಜ್ ಸೇವಾ ಟ್ರಸ್ಟ್' ಅಧ್ಯಕ್ಷ ರಾಹುಲ್ ಬಜಾಜ್ ಸೇರಿದಂತೆ ಒಟ್ಟು ಎಂಟು ಜನ ಟ್ರಸ್ಟಿಗಳು ಸಲ್ಲಿಸಿದ್ದ ಪ್ರತ್ಯೇಕ ರಿಟ್ ಅರ್ಜಿಗಳನ್ನು ವಜಾಗೊಳಿಸಿತ್ತು.

ವಸತಿಶಾಲೆಗೆ ಉಚಿತ ಪ್ರವೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾರತ್ತಹಳ್ಳಿಯ ಶ್ರೀಮದ್ ವಿಭೂತಿಪುರ ವೀರಸಿಂಹಾಸನ ಸಂಸ್ಥಾನ ಮಠದ ಉಚಿತ ವಸತಿಶಾಲೆಯ ಪ್ರವೇಶಕ್ಕೆ ಅರ್ಜಿ ಆಹ್ವಾನಿಸಲಾಗಿದೆ.

ಈ ಶಾಲೆಯಲ್ಲಿ 6,7,8ನೇ ತರಗತಿ ಆಂಗ್ಲಮಾಧ್ಯಮದಲ್ಲಿ ವ್ಯಾಸಂಗ ಮಾಡ ಬಯಸುವ ಗ್ರಾಮೀಣ ಪ್ರದೇಶದ, ಜಾತಿ, ಮತ ಭೇದವಿಲ್ಲದೇ ಬಾಲಕರಿಗೆ ಪ್ರವೇಶ ನೀಡಲಾಗುತ್ತದೆ. ಏ.7ರಂದು ಪ್ರವೇಶ ಪರೀಕ್ಷೆ ಮಠದಲ್ಲಿ ನಡೆಯಲಿದೆ ಎಂದು ಕಾರ್ಯದರ್ಶಿ ಸಿ.ಬಸವರಾಜ ತಿಳಿಸಿದ್ದಾರೆ.

ಮಾಹಿತಿಗೆ 97382245665/9448670372 ಕರೆ ಮಾಡಬಹುದು.

ಇಂದಿನಿಂದ ವಿಚಾರಸಂಕಿರಣ

ಬೆಂಗಳೂರು: ತಾರಾಲಯದ ಶತಮಾನೋತ್ಸವದ ಅಂಗವಾಗಿ ಜವಾಹರಲಾಲ್ ನೆಹರೂ ತಾರಾಲಯವು 'ಉತ್ತಮ ಗುಣಮಟ್ಟದ ವಿಜ್ಞಾನ ಶಿಕ್ಷಣ ನೀಡುವಲ್ಲಿ ತಾರಾಲಯಗಳ ಪಾತ್ರ' ಎಂಬ ಶೀರ್ಷಿಕೆಯಡಿ ಮಾರ್ಚ್ 25 ಮತ್ತು 26ರಂದು ವಿಚಾರಸಂಕಿರಣ ಆಯೋಜಿಸಿದೆ. ಬೇಸ್ ನೇತೃತ್ವ ವಹಿಸಿರುವ ಎ.ಎಸ್.ಕಿರಣ್ ಕುಮಾರ್ ಬೆಳಿಗ್ಗೆ 10.30ಕ್ಕೆ ಉದ್ಘಾಟಿಸಲಿದ್ದಾರೆ.

ಆಕಾಶ ಮಂದಿರದಲ್ಲಿ ಮನೋಹರವಾದ ರಾತ್ರಿ ಆಕಾಶವನ್ನು ಸೃಷ್ಟಿಸಿ, ಖಗೋಳಶಾಸ್ತ್ರ, ಅಂತರಿಕ್ಷಕ್ಕೆ ಸಂಬಂಧಿಸಿದ ವಿಷಯಗಳ ಮೂಲಕ ವಿಜ್ಞಾನವನ್ನು ಸಾಮಾನ್ಯ ಜನರಿಗೆ ಮತ್ತು ವಿದ್ಯಾರ್ಥಿಗಳಿಗೆ ತಲುಪಿಸಲಾಗುವುದು. ರಾಜ್ಯದ ವಿಜ್ಞಾನ ಕೇಂದ್ರಗಳು ಮತ್ತು ತಾರಾಲಯಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿವೆ ಎಂದು ನಿರ್ದೇಶಕ ಡಾ.ಬಿ.ಆರ್. ಗುರುಪ್ರಸಾದ್ ತಿಳಿಸಿದ್ದಾರೆ.

ಕಾರಿಗೆ ₹1 ಸಾವಿರ ನಿಗದಿ

10 ವಾಹನಗಳಲ್ಲಿ 3 ವಾಹನ ಪೊಲೀಸರಿಗೆ ಹಸ್ತಾಂತರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರ ವ್ಯಾಪ್ತಿಯಲ್ಲಿ ಅನಧಿಕೃತವಾಗಿ ನಿಲುಗಡೆ ಮಾಡುವ ವಾಹನಗಳನ್ನು ಟೋಯಿಂಗ್ ಮಾಡಲು ಜಿಬಿಎ ದರ ನಿಗದಿ ಮಾಡಿದ್ದು, ಅನುಷ್ಠಾನಗೊಳಿಸಲು ಬೆಂಗಳೂರು ನಗರ ಸಂಚಾರ ಪೊಲೀಸರಿಗೆ ಪತ್ರ ಬರೆದಿದೆ.

ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆಯಂತೆ (ಜಿಬಿಜಿಎ) ಟೋಯಿಂಗ್ ಶುಲ್ಕವನ್ನು ನಿಗದಿಪಡಿಸಲಾಗಿದೆ. ದ್ವಿಚಕ್ರ ವಾಹನಕ್ಕೆ ₹650 ಹಾಗೂ ನಾಲ್ಕು ಚಕ್ರ ವಾಹನಕ್ಕೆ ₹1 ಸಾವಿರ ನಿಗದಿಪಡಿಸಿ ಕಳೆದ ವಾರ ಆದೇಶ ಹೊರಡಿಸಲಾಗಿದೆ.

'ಟೋಯಿಂಗ್ ವಾಹನಗಳ ಕಾರ್ಯಾಚರಣೆಗೆ ಖಾಸಗಿ ವ್ಯಕ್ತಿಗಳನ್ನು ನೇಮಕ ಮಾಡಿಕೊಳ್ಳುವ ಪ್ರಕ್ರಿಯೆಯನ್ನು ನಗರ ಪಾಲಿಕೆಗಳು ಆರಂಭಿಸಿದ್ದು, ಸಂಚಾರ ಪೊಲೀಸರ ಸಲಹೆ, ಸಮ್ಮತಿ ನಂತರ ವಾಹನಗಳು ಕಾರ್ಯಾರಂಭ ಮಾಡಲಿವೆ' ಎಂದು ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ತಿಳಿಸಿದರು.

ನಗರದಲ್ಲಿ ಈ ಹಿಂದೆ ಟೋಯಿಂಗ್ ವ್ಯವಸ್ಥೆ ಜಾರಿಯಲ್ಲಿದ್ದಾಗ, ದ್ವಿಚಕ್ರ ವಾಹನಕ್ಕೆ ₹300 ಹಾಗೂ ನಾಲ್ಕು ಚಕ್ರ ವಾಹನಕ್ಕೆ ₹500 ಶುಲ್ಕ ವಿಧಿಸಲಾಗುತ್ತಿತ್ತು.

ಟೋಯಿಂಗ್ ದರ

10 ವಾಹನ: 'ವಾಹನ ನಿಲುಗಡೆಗೆ ರಸ್ತೆಗಳಲ್ಲಿ ನಿಗದಿಪಡಿಸಲಾದ ಸ್ಥಳದ ಹೊರತಾಗಿ, ಇತರೆ ಯಾವುದೇ ಪ್ರದೇಶದಲ್ಲಿ ವಾಹನಗಳನ್ನು ನಿಲುಗಡೆ ಮಾಡಿದರೆ ಟೋಯಿಂಗ್ ಮಾಡಲಾಗುತ್ತದೆ. ನಗರ ಪಾಲಿಕೆಗಳಿಗೆ ತಲಾ ಎರಡು ಟೋಯಿಂಗ್ ವಾಹನಗಳನ್ನು ನೀಡಿದ್ದೇವೆ. ವಾಹನ ನಿಲುಗಡೆಗೆ ಅವಕಾಶ ಇರದ ಕಡೆ ನಿಲ್ಲಿಸಿದರೆ ಪೊಲೀಸರ ಸಹಕಾರದೊಂದಿಗೆ ಟೋಯಿಂಗ್ ಮಾಡಲಾಗುವುದು' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಇತ್ತೀಚೆಗೆ ತಿಳಿಸಿದ್ದರು.

'ವಾಹನಗಳನ್ನು (ಅನಾಥ ವಾಹನ) ವಾರಗಟ್ಟಲೆ ರಸ್ತೆಗಳಲ್ಲಿ ನಿಲ್ಲಿಸಿದ್ದರೆ ಅವುಗಳನ್ನು ಎತ್ತಿಕೊಂಡು ಹೋಗಿ ನಿಗದಿತ ಜಾಗದಲ್ಲಿ 'ಡಂಪ್' ಮಾಡಲಾಗುವುದು. ಇಂತಹ ವಾಹನಗಳನ್ನು ಕೊಂಡೊಯ್ಯುವ ಜವಾಬ್ದಾರಿಯನ್ನು ಪೊಲೀಸರಿಗೆ ನೀಡಲಾಗಿದೆ. ಬೆಳ್ಳಹಳ್ಳಿ, ಸೊಂಡೆಕೊಪ್ಪ ಸೇರಿದಂತೆ ನಾಲ್ಕು ಕಡೆ ಜಾಗ ನಿಗದಿ ಮಾಡಲಾಗಿದೆ. ಇನ್ನು ಕೆಲವು ಜಾಗ ನಿಗದಿ ಮಾಡಲಾಗುವುದು' ಎಂದು ಹೇಳಿದ್ದರು.

ಹತ್ತು ಟೋಯಿಂಗ್ ವಾಹನಗಳನ್ನು ಸಂಚಾರ ಪೊಲೀಸರಿಗೆ ನೀಡಬೇಕಿತ್ತು. ಆದರೆ, ಈವರೆಗೆ ಮೂರನ್ನು ಮಾತ್ರ ಅವರಿಗೆ ಹಸ್ತಾಂತರಿಸಲಾಗಿದೆ.

ಸದ್ಯದಲ್ಲಿಯೇ ಜಾರಿ: ಕಾರ್ತಿಕ್ ರೆಡ್ಡಿ

'ನಗರ ಪಾಲಿಕೆಗಳಿಂದ ಮೂರು ಟೋಯಿಂಗ್ ವಾಹನಗಳನ್ನು ಸಂಚಾರ ಪೊಲೀಸರಿಗೆ ನೀಡಿದ್ದಾರೆ. ಶುಲ್ಕವನ್ನೂ ನಿಗದಿಪಡಿಸಿದ್ದಾರೆ. ಆದರೆ, ಕೆಲವು ಉಪಕರಣಗಳ ಅಳವಡಿಕೆ ಬಾಕಿ ಇದೆ. ಇದೇ ಶುಕ್ರವಾರ ಅಥವಾ ಮುಂದಿನ ಸೋಮವಾರದಿಂದ ಟೋಯಿಂಗ್ ವ್ಯವಸ್ಥೆ ಜಾರಿಗೆ ಬರಲಿದೆ' ಎಂದು ಸಂಚಾರ ವಿಭಾಗದ ಜಂಟಿ ಪೊಲೀಸ್ ಕಮಿಷನರ್ ಕಾರ್ತಿಕ್ ರೆಡ್ಡಿ ತಿಳಿಸಿದರು.

'ಟೋಯಿಂಗ್ ಶುಲ್ಕ ಪಾಲಿಕೆಗಳಿಗೆ ಸಂದಾಯವಾಗುತ್ತದೆ. ಅನಧಿಕೃತ ಪಾರ್ಕಿಂಗ್ ಶುಲ್ಕ ಸಂಚಾರ ಪೊಲೀಸ್ ವಿಭಾಗಕ್ಕೆ ಸಂದಾಯವಾಗುತ್ತದೆ' ಎಂದರು.

ರೂಟರ್‌ಗಳ ಆಮದು ನಿಷೇಧಿಸಿದ ಅಮೆರಿಕ

ವಾಷಿಂಗ್ಟನ್ (ಎಪಿ): ವಿದೇಶಿ ನಿರ್ಮಿತ ರೂಟರ್‌ಗಳ (ವೈಫೈ ರೂಟರ್) ಆಮದನ್ನು ಅಮೆರಿಕವು ನಿಷೇಧಿಸಿದೆ. ಸೈಬರ್ ಭದ್ರತೆಯ ಕಾರಣ ಡೊನಾಲ್ಡ್ ಟ್ರಂಪ್ ಆಡಳಿತವು ನೀಡಿ ಈ ನಿರ್ಧಾರ ತೆಗೆದುಕೊಂಡಿದೆ.

'ಈ ಸಾಧನವು ಅಮೆರಿಕದ ರಾಷ್ಟ್ರೀಯ ಭದ್ರತೆಗೆ ಅಥವಾ ಅಮೆರಿಕನ್ನರ ಸುರಕ್ಷತೆ ಮತ್ತು ಭದ್ರತೆಗೆ ಅಪಾಯ ಉಂಟುಮಾಡುತ್ತದೆ' ಎಂದು ಫೆಡರಲ್ ಕಮ್ಯುನಿಕೇಷನ್ಸ್ ಕಮಿಷನ್ ತಿಳಿಸಿದೆ.

ಜಲಮಂಡಳಿ ಅದಾಲತ್

ಬೆಂಗಳೂರು: ಬೆಂಗಳೂರು ಜಲಮಂಡಳಿಯು ನೀರಿನ ಅದಾಲತ್ ಅನ್ನು ಮಾರ್ಚ್ 26ರಂದು ಬೆಳಿಗ್ಗೆ 9.30ರಿಂದ 11ರವರೆಗೆ ಹಮ್ಮಿಕೊಂಡಿದೆ.

ಆಗ್ನೇಯ-3 ಉಪವಿಭಾಗದ ಅದಾಲತ್ ಕೂಡು ಜಿಎಲ್‌ಆರ್ ಆವರಣ, ಆಗ್ನೇಯ-6 ಬಿಟಿಎಂ 2ನೇ ಹಂತ, ಪಶ್ಚಿಮ 1-3 ರಾಜಾಜಿನಗರ, ವಾಯವ್ಯ-6 ಹೆಸರಘಟ್ಟ ಸಮೀಪದ ಎಂಇಐ ಲೇಔಟ್, ಉತ್ತರ 2-3 ಯಲಹಂಕ, ದಕ್ಷಿಣ 1-3 ಅಂಜನಾಪುರ, ನೈರುತ್ಯ-3 ಎಂಎನ್‌ಕೆ ಪಾರ್ಕ್ ಬಸವನಗುಡಿ, ನೈರುತ್ಯ 6 ಲಿಂಗಧೀರನಹಳ್ಳಿ, ಪೂರ್ವ 2-4 ಕಸ್ತೂರಿನಗರದಲ್ಲಿ ನಡೆಯಲಿವೆ. ಮಾಹಿತಿಗೆ 1916.

ಕ್ಯಾಬ್, ಬಿಎಂಟಿಸಿ, ಕೆಎಸ್‌ಆರ್‌ಟಿಸಿ, ಆಟೊ ಚಾಲಕರಿಗೆ ತರಬೇತಿ

1.21 ಲಕ್ಷ ಚಾಲಕರಿಗೆ 'ಸಂಚಾರ ಪಾಠ'

• ಆದಿತ್ಯ ಕೆ.ಎ.

ಬೆಂಗಳೂರು: ರಸ್ತೆಗೆ ಇಳಿಯುತ್ತಿರುವ ವಾಹನಗಳ ಸಂಖ್ಯೆ ದಿನದಿಂದ ದಿನಕ್ಕೆ ಏರಿಕೆ ಆಗುತ್ತಿದ್ದು, ನಗರದಲ್ಲಿ ಸುಗಮ ಸಂಚಾರ ಸಾಧ್ಯವಾಗುತ್ತಿಲ್ಲ. ಅದರಲ್ಲೂ ಕೆಲವು ಜಂಕ್ಷನ್‌ಗಳಲ್ಲಿ ವಾಹನಗಳ ಚಾಲಕರು ಮುಂದಕ್ಕೆ ಸಾಗಲು ಅಡ್ಡಾದಿಡ್ಡಿಯಾಗಿ ವಾಹನ ಚಾಲನೆ ಮಾಡುತ್ತಿರುವ ಪರಿಣಾಮ ಪ್ರಯಾಣ ಮತ್ತಷ್ಟು ತ್ರಾಸದಾಯಕವಾಗಿದೆ. ಈ ಸಮಸ್ಯೆ ತಪ್ಪಿಸುವ ಉದ್ದೇಶದಿಂದ ಚಾಲಕರಿಗೆ 'ಸಂಚಾರ ಪಾಠ' ಮಾಡಲಾಗುತ್ತಿದೆ.

ನಿಯಮ ಉಲ್ಲಂಘಿಸಿದವರನ್ನು ಪತ್ತೆಹಚ್ಚಿ ಅಂತಹ ಚಾಲಕರಿಗೆ ತರಬೇತಿ ನೀಡಲಾಗುತ್ತಿದೆ. ಸಂಚಾರ ನಿಯಮಗಳ ಪಾಲನೆಯ ಕುರಿತು ಸಂಚಾರ ಪೊಲೀಸ್ ವಿಭಾಗದ ಅಧಿಕಾರಿಗಳು ಅರಿವು ಮೂಡಿಸುತ್ತಿದ್ದಾರೆ.

ಥಣಿಸಂದ್ರದ 'ಸಂಚಾರ ತರಬೇತಿ ಮತ್ತು ರಸ್ತೆ ಸುರಕ್ಷತಾ ಸಂಸ್ಥೆ'ಯಲ್ಲಿ ಕ್ಯಾಬ್, ಬಿಎಂಟಿಸಿ, ಕೆಎಸ್‌ಆರ್‌ಟಿಸಿ, ಆಟೊ ಚಾಲಕರು ಹಾಗೂ ಐಟಿ-ಬಿಟಿ ಕಂಪನಿಯ ಸಿಬ್ಬಂದಿಗೆ ತರಬೇತಿ ನೀಡಲಾಗುತ್ತಿದೆ. ತರಬೇತಿ ವೇಳೆ 'ಅಡ್ಡಾದಿಡ್ಡಿಯಾಗಿ ವಾಹನ ಚಾಲನೆ ಮಾಡಬೇಡಿ' ಎಂದು ತಿಳಿವಳಿಕೆ ನೀಡಿ, 'ರಸ್ತೆ ಸುರಕ್ಷತೆ ಹಾಗೂ ಸುಗಮ ಸಂಚಾರ'ದ ಬಗ್ಗೆ ಅರಿವು ಮೂಡಿಸಲಾಗುತ್ತಿದೆ.



ಥಣಿಸಂದ್ರದ ಸಂಚಾರ ತರಬೇತಿ ಹಾಗೂ ಸುರಕ್ಷತಾ ಸಂಸ್ಥೆಯಲ್ಲಿ ಚಾಲಕರಿಗೆ ತರಬೇತಿ ನೀಡಲಾಯಿತು

ಕಳೆದ ಮೂರು ವರ್ಷದಲ್ಲಿ 1.21 ಲಕ್ಷ ಚಾಲಕರಿಗೆ ತರಬೇತಿ ನೀಡಲಾಗಿದೆ. 2025ರಲ್ಲಿ 48,179 ಚಾಲಕರಿಗೆ ತರಬೇತಿ ನೀಡಲಾಗುತ್ತಿದೆ. ಈ ವರ್ಷ 1 ಲಕ್ಷಕ್ಕೂ ಹೆಚ್ಚು ಚಾಲಕರಿಗೆ ತರಬೇತಿ ನೀಡಿ, ಸಂಚಾರ ನಿಯಮಗಳ ಪಾಲನೆ ಕುರಿತು ಹೆಚ್ಚಿನ ಅರಿವು ಮೂಡಿಸಲಾಗುವುದು ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

ನಗರದ ನಿವಾಸಿಗಳು, ಹೊರ ಜಿಲ್ಲೆಯ ಚಾಲಕರಿಗಲ್ಲದೇ ಹೊರರಾಜ್ಯದವರಿಗೂ ತರಬೇತಿ ಕೊಡಲಾಗುತ್ತಿದೆ. ಸಂಚಾರ ನಿರ್ವಹಣಾ ಕೇಂದ್ರದಲ್ಲಿ ದೆಹಲಿ, ಗುಜರಾತ್, ತಮಿಳುನಾಡು, ಆಂಧ್ರಪ್ರದೇಶದ ರಾಜ್ಯ ರಸ್ತೆ ಸಾರಿಗೆ ನಿಗಮ ಮತ್ತು ಸಾರಿಗೆ ಇಲಾಖೆಯ ಅಧಿಕಾರಿಗಳಿಗೂ 'ಸಂಚಾರ ನಿಯಮಗಳ ಪಾಲನೆ ಕುರಿತು ಪಾಠ' ಮಾಡಲಾಗಿದೆ. ಬೆಂಗಳೂರಿಗೆ ನೆರೆಯ ರಾಜ್ಯಗಳ ವಾಹನಗಳು ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಿವೆ. ಚಾಲಕರು ನಿರ್ಬಂಧಿತ ಸ್ಥಳದಲ್ಲಿ ಬಸ್, ಕ್ಯಾಬ್ ನಿಲುಗಡೆ ಮಾಡುತ್ತಾರೆ. ಇದರಿಂದ ಸುಗಮ ಸಂಚಾರಕ್ಕೆ ತೊಂದರೆ ಆಗುತ್ತಿದೆ.

ತರಬೇತಿ ಪಡೆದ ವಿವಿಧ ಮಾದರಿ ವಾಹನ ಚಾಲಕರ ಸಂಖ್ಯೆ

2023	30,151
2024	43,587
2025	48,179

ಏಕಮುಖ ಸಂಚಾರ: ಉಲ್ಲಂಘನೆ ಹೆಚ್ಚು

ಸಂಚಾರ ನಿಯಮ ಉಲ್ಲಂಘನೆ ಪ್ರಕರಣಗಳ ಪೈಕಿ, ಏಕಮುಖ ಸಂಚಾರ ರಸ್ತೆಯಲ್ಲಿ ವಿರುದ್ಧ ದಿಕ್ಕಿನಿಂದ ಬರುವವರ ಸಂಖ್ಯೆಯೇ ಹೆಚ್ಚಾಗಿದೆ. ಅಂತಹವರನ್ನು ಪತ್ತೆಹಚ್ಚಿ, ಪ್ರಕರಣ ದಾಖಲು ಮಾಡಲಾಗುತ್ತಿದೆ.

ಕಳೆದ ಜ.22ರಿಂದ ಮಾ.22ರ ವರೆಗೆ ನಡೆದ 'ವಿಶೇಷ ಕಾರ್ಯಾಚರಣೆ'ಯಲ್ಲಿ 89,229 ಮಂದಿ ವಿರುದ್ಧ ಪ್ರಕರಣ ದಾಖಲು ಮಾಡಲಾಗಿದೆ. ಕಳೆದ ಆರು ದಿನದಲ್ಲಿ ಉತ್ತರ, ದಕ್ಷಿಣ, ಪಶ್ಚಿಮ ಹಾಗೂ ಪೂರ್ವ ವಿಭಾಗದಲ್ಲಿ 3,807 ಮಂದಿ ವಿರುದ್ಧ ಪ್ರಕರಣ ದಾಖಲು ಮಾಡಲಾಗಿದೆ.

'ವಾಹನ ಸವಾರರು ಬೇಗನೇ ನಿಗದಿತ ಸ್ಥಳ ತಲುಪಲು 'ಅಡ್ಡದಾರಿ' ಹುಡುಕಲು ಹೋಗಿ ಪ್ರಾಣಕ್ಕೇ ಸಂಚಕಾರ ತಂದುಕೊಳ್ಳುತ್ತಿದ್ದಾರೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

ಇನ್ನು ದ್ವಿಚಕ್ರ ವಾಹನ ಸವಾರರು, ಏಕಮುಖ ಸಂಚಾರ ಮಾರ್ಗದಲ್ಲಿ ವಿರುದ್ಧ ದಿಕ್ಕಿನಿಂದ ಬಂದು ನಿಯಮ ಉಲ್ಲಂಘಿಸುತ್ತಿದ್ದಾರೆ. ಆಹಾರ ಪದಾರ್ಥಗಳನ್ನು ಪೂರೈಸುವ 'ಗಿಗ್ ಕಾರ್ಮಿಕರು' ಸಹ ಪಾದಚಾರಿ ಮಾರ್ಗದಲ್ಲಿಯೇ ದ್ವಿಚಕ್ರ ವಾಹನ ಚಾಲನೆ ಮಾಡಿ ಪಾದಚಾರಿಗಳಿಗೆ ತೊಂದರೆ ನೀಡುತ್ತಿದ್ದಾರೆ. ನಿಯಮ ಉಲ್ಲಂಘಿಸಿದವರನ್ನು ಪತ್ತೆ ಮಾಡಿ ತರಬೇತಿ ನೀಡಲಾಗುತ್ತಿದೆ ಎಂದು ಅಧಿಕಾರಿಯೊಬ್ಬರು ಹೇಳಿದರು.

ಅತಿ ವೇಗದ ಚಾಲನೆ, ಮದ್ಯಪಾನ ಮಾಡಿ ವಾಹನ ಚಾಲನೆ, ವಾಹನ ಚಾಲನೆ ವೇಳೆ ಮೊಬೈಲ್ ಬಳಕೆ, ಸಿಗ್ನಲ್ ಜಂಪ್ ಮಾಡುವ ಮೂಲಕವೇ ಹೆಚ್ಚಿನವರು ಸಂಚಾರ ನಿಯಮ ಉಲ್ಲಂಘಿಸುತ್ತಿದ್ದಾರೆ. ಈ ರೀತಿಯ ಉಲ್ಲಂಘನೆಗಳನ್ನು ತಡೆಗಟ್ಟುವ ಉದ್ದೇಶದಿಂದ ತರಬೇತಿ ಅವಧಿಯಲ್ಲಿ ತಿಳಿವಳಿಕೆ ನೀಡಲಾಗುತ್ತಿದೆ.

ಥಣಿಸಂದ್ರದ ತರಬೇತಿ ಸಂಸ್ಥೆಯ ಜತೆಗೆ ಸೇಂಟ್ ಮಾರ್ಕ್ಸ್ ರಸ್ತೆಯ 'ಟ್ರಾಫಿಕ್ ಪಾರ್ಕ್'ನಲ್ಲೂ ವಿವಿಧ ಮಾದರಿಯ ವಾಹನಗಳ ಚಾಲಕರು ಹಾಗೂ ವಿದ್ಯಾರ್ಥಿಗಳಿಗೆ ರಸ್ತೆ ನಿಯಮಗಳ ಬಗ್ಗೆ ಅರಿವು ಮೂಡಿಸಲಾಗುತ್ತಿದೆ. ಕಳೆದ ಮೂರು ವರ್ಷದಲ್ಲಿ ಆಯಾ ವಿಭಾಗದ ಪೊಲೀಸರು, 9,654 ಬಾರಿ ವಿವಿಧ ಶಾಲೆಗಳಿಗೆ ಭೇಟಿ ನೀಡಿ 11.30 ಲಕ್ಷ ವಿದ್ಯಾರ್ಥಿಗಳಿಗೆ ನಿಯಮ ಪಾಲನೆ ಕುರಿತು ತಿಳಿವಳಿಕೆ ಮೂಡಿಸಿದ್ದಾರೆ.

ಇ-ಖಾತಾ ಮಾಫಿಯಾ: ಅಶೋಕ ವಾಗ್ದಾಳಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಇ-ಖಾತಾ ಮಾಡಿಸುವುದು ಜನಸಾಮಾನ್ಯರಿಗೆ ದುಸ್ತರವಾಗಿದೆ. ಆ ಹೆಸರಿನಲ್ಲಿ ಮಾಫಿಯಾ ಸೃಷ್ಟಿಯಾಗಿದ್ದು, ಪಾಲಿಕೆ ಅಧಿಕಾರಿಗಳು ದಂಧೆಗೆ ಇಳಿದಿದ್ದಾರೆ. ತೆರಿಗೆ ಪಾವತಿಸಿದರೂ ಮನೆ ಹರಾಜು ಹಾಕಲು ನೋಟಿಸ್ ನೀಡುತ್ತಿದ್ದಾರೆ' ಎಂದು ವಿರೋಧ ಪಕ್ಷದ ನಾಯಕ ಆರ್. ಅಶೋಕ ವಾಗ್ದಾಳಿ ನಡೆಸಿದರು.

ದಾಖಲೆಗಳು, ರಸೀದಿಗಳ ಕಟ್ಟು ಹಿಡಿದು ಉದಾಹರಣೆಗಳ ಸಹಿತ ವಿಧಾನ ಸಭೆಯಲ್ಲಿ ಮಂಗಳವಾರ ಮಾತನಾಡಿದ ಅವರು, ನಗರದ ಆಡಳಿತ ಯಂತ್ರ ಸಂಪೂರ್ಣ ಕುಸಿದಿದ್ದು, ಪ್ರಮುಖವಾಗಿ ಇ-ಖಾತಾ ಪ್ರಕ್ರಿಯೆಯಲ್ಲಿ ನಡೆಯುತ್ತಿರುವ ದಂಧೆ, ರಸ್ತೆ ಗುಂಡಿಗಳ ಸಮಸ್ಯೆ, ಭ್ರಷ್ಟಾಚಾರ, ಮೂಲಸೌಕರ್ಯಗಳ ಕೊರತೆ, ಬಿಬಿಎಂಪಿ ದಿವಾಳಿಯಾಗಿದೆ ಎಂದು ಆರೋಪಿಸುತ್ತಲೇ ನಗರದ ಸ್ಥಿತಿಯನ್ನು ಎಳೆಎಳೆಯಾಗಿ ವಿವರಿಸಿದರು.

'ನಮ್ಮ ಸರ್ಕಾರದಲ್ಲಿ ಲಂಚ ಪಡೆದ ಒಬ್ಬರನ್ನು ತೋರಿಸಿ' ಎಂದು ಬೆಂಗಳೂರು ಉಸ್ತುವಾರಿಯೂ ಆಗಿರುವ ಉಪ ಮುಖ್ಯ ಮಂತ್ರಿ ಡಿ.ಕೆ. ಶಿವಕುಮಾರ್ ಸವಾಲು ಹಾಕಿರುವ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಓಡಾಡುತ್ತಿದೆ' ಎಂದರು.

'ಎಚ್‌ಬಿಆರ್ ಲೇಔಟ್‌ನಲ್ಲಿ ಬಿಡಿಎ ಹರಾಜಿನಲ್ಲಿ ಮೂಲೆ ನಿವೇಶನ ಪಡೆದಿದ್ದ ಮಾಲೀಕರೊಬ್ಬರು ಇ-ಖಾತಾ ಮಾಡಿಸಲು ಹೋದಾಗ, ಅಧಿಕಾರಿಗಳು ಅದನ್ನು 'ಬಿ ಖಾತಾ' ಎಂದು ವರ್ಗೀಕರಿಸಲು ₹30 ಸಾವಿರ ಲಂಚಕ್ಕೆ ಬೇಡಿಕೆ ಇಟ್ಟಿದ್ದರು. ಈ ಪೈಕಿ ₹15 ಸಾವಿರವನ್ನು ಅಧಿಕಾರಿಗಳು 'ಫೋನ್ ಪೇ' ಮೂಲಕ ಪಡೆದಿದ್ದಾರೆ. ಲಂಚ ಪಡೆದರೂ ಕೆಲಸ ಆಗದಿದ್ದಾಗ, ಹಣ ವಾಪಸ್ ಕೇಳಿದರೆ ಅಧಿಕಾರಿಗಳು ಮೊಂಡುತನ ಪ್ರದರ್ಶಿಸಿದ್ದಾರೆ. ಗ್ರಾಹಕರ ನ್ಯಾಯಾಲಯ ಮತ್ತು ಸಹಾಯವಾಣಿಗಳಿಗೆ ದೂರು ನೀಡಿದರೂ ಯಾವುದೇ ಪ್ರಯೋಜನ ಆಗಿಲ್ಲ. ದೇವನಹಳ್ಳಿ ಭಾಗದಲ್ಲೂ ಇ-ಖಾತಾ ಮಾಡಿಸಲು ₹50 ಸಾವಿರವರೆಗೆ ಲಂಚ ಪಡೆಯಲಾಗುತ್ತಿದೆ. ನಿವೃತ್ತ ಅಧಿಕಾರಿಯೊಬ್ಬರು ಖಾಸಗಿ ಕಚೇರಿ ತೆರೆದು ಈ ದಂಧೆಯಲ್ಲಿ ತೊಡಗಿದ್ದಾರೆ' ಎಂದು ಆರೋಪಿಸಿದರು.

'ಬ್ರ್ಯಾಂಡ್ ಬೆಂಗಳೂರು' ಯೋಜನೆ ಪ್ರಚಾರಕ್ಕೆ ಸೀಮಿತವಾಗಿದೆ. ಉಪಮುಖ್ಯಮಂತ್ರಿ ನಗರ ಪ್ರದಕ್ಷಿಣೆ ಮಾಡಿದರೂ 15 ದಿನಗಳಲ್ಲಿ ರಸ್ತೆ ಗುಂಡಿ ಮುಚ್ಚಲಾಗಲಿಲ್ಲ ಎಂದು ಆರ್. ಅಶೋಕ ಟೀಕಿಸಿದರು.

'ತೆರಿಗೆ ಪಾವತಿಸಿದರೂ ಮನೆ ಹರಾಜು'

'ಬೆಂಗಳೂರಿನಲ್ಲಿ ಆಸ್ತಿ ತೆರಿಗೆ ಪಾವತಿಸುವ ಪ್ರಾಮಾಣಿಕ ನಾಗರಿಕರಿಗೂ ರಕ್ಷಣೆ ಇಲ್ಲದಂತಾಗಿದೆ. ಎಚ್‌ಬಿಆರ್ ಲೇಔಟ್‌ನಲ್ಲಿ ಮಗನ ಹೆಸರಿಗೆ ಖಾತೆ ವರ್ಗಾವಣೆಯಾಗಿ, ಮಗ ಸಕಾಲದಲ್ಲಿ ತೆರಿಗೆ ಪಾವತಿಸುತ್ತಿದ್ದರೂ, ಅಧಿಕಾರಿಗಳು ಹಳೆಯ ದಾಖಲೆಗಳ ಆಧಾರದಲ್ಲಿ ತಂದೆಯ ಹೆಸರಿಗೆ ಹರಾಜು ನೋಟಿಸ್ ನೀಡಿದ್ದಾರೆ. ಎರಡು ವರ್ಷ ತೆರಿಗೆ ಬಾಕಿ ಇದೆ ಎಂಬ ನೆಪವೊಡ್ಡಿ ಮನೆಗಳನ್ನು ಹರಾಜು ಹಾಕಲು ಮುಂದಾಗುತ್ತಿರುವುದು ಜನರಲ್ಲಿ ಭೀತಿ ಹುಟ್ಟಿಸಿದೆ. ಇದು ಕೇವಲ ಒಂದು ಲೇಔಟ್‌ನ ಕಥೆಯಲ್ಲ, ನಗರದಾದ್ಯಂತ ಇಂತಹ ಮಾಫಿಯಾ ಕೆಲಸ ಮಾಡುತ್ತಿದೆ' ಎಂದು ಅಶೋಕ ಕಿಡಿಕಾರಿದರು.

'ಒ.ಸಿ ಇಲ್ಲದೆ ಪಾಳು ಬಿದ್ದಿವೆ 4 ಲಕ್ಷ ಕಟ್ಟಡಗಳು': ನಗರದಲ್ಲಿ ಸ್ವಾಧೀನಾನುಭವ ಪತ್ರ (ಒ.ಸಿ) ನೀಡದೆ ಸಮಸ್ಯೆಯಾಗಿದೆ. 4 ಲಕ್ಷ ಕಟ್ಟಡಗಳು ಬಳಕೆಯಾಗದೆ ಪಾಳು ಬಿದ್ದಿವೆ. ಒ.ಸಿ ನೀಡಲು ಸಾಧ್ಯ ಇಲ್ಲ ಎಂದಾದರೆ ನಿರ್ಮಾಣಕ್ಕೆ ಅನುಮತಿ ಕೊಟ್ಟಿದ್ದು ಏಕೆ' ಎಂದು ಅವರು ಪ್ರಶ್ನಿಸಿದರು.

'ಜಕ್ಕೂರಿನ ವೈಮಾನಿಕ ಶಾಲೆ ಮುಚ್ಚುವ ಹುನ್ನಾರ': 'ಜಕ್ಕೂರಿನ ವೈಮಾನಿಕ ಶಾಲೆಯ ಜಾಗದ ಮೇಲೆ ರಿಯಲ್ ಎಸ್ಟೇಟ್ ದಂಧೆಕೋರರ ಕಣ್ಣು ಬಿದ್ದಿದೆ. ಮೈಸೂರು ಮಹಾರಾಜರು ನೀಡಿದ ಜಾಗದಲ್ಲಿರುವ ಈ ಶಾಲೆಯನ್ನು ಸ್ಥಳಾಂತರಿಸಿ, ಅಲ್ಲಿ ಶಾಪಿಂಗ್ ಕಾಂಪ್ಲೆಕ್ಸ್ ಮತ್ತು ಎತ್ತರದ ಕಟ್ಟಡಗಳನ್ನು ನಿರ್ಮಿಸಲು ಸಂಚು ನಡೆಯುತ್ತಿದೆ. ಈ ಹಿಂದೆ ಬಿಜೆಪಿ ಸರ್ಕಾರ ಕೈಬಿಟ್ಟಿದ್ದ ಕ್ಲಬ್ ನಿರ್ಮಾಣದ ಯೋಜನೆಯನ್ನು ಈಗ ಮತ್ತೆ ಜೀವಂತಗೊಳಿಸಲಾಗುತ್ತಿದೆ' ಎಂದು ಅಶೋಕ ಆರೋಪಿಸಿದರು.

ಸಚಿವ ಕೆ.ಜೆ. ಜಾರ್ಜ್ ಮಧ್ಯಪ್ರವೇಶಿಸಿ, 'ವೈಮಾನಿಕ ಶಾಲೆಯ ಜಾಗದಲ್ಲಿ ಕ್ರೀಡಾ ಸಂಕೀರ್ಣ ನಿರ್ಮಿಸುವ ಬಗ್ಗೆ ಕಾರಣಗಳ ಸಹಿತ ಮುಖ್ಯಮಂತ್ರಿಗೆ ನಾನು ಪತ್ರ ಬರೆದಿದ್ದೇನೆ. ಈ ವಿಷಯ ಸಚಿವ ಸಂಪುಟ ಸಭೆಯಲ್ಲಿ ಚರ್ಚೆಗೆ ಬಂದಿದ್ದು ನಿಜ. ಆದರೆ, ಆ ನಿರ್ಣಯ ಆಗಿಲ್ಲ' ಎಂದರು.

ಮಠದ ಭಕ್ತರಿಂದ 'ಲೆಕ್ಕ ಕೊಡಿ' ಚಳವಳಿ

ಪಂಚಮಸಾಲಿ ಗುರುಪೀಠ: 300ಕ್ಕೂ ಹೆಚ್ಚು ಭಕ್ತರಿಂದ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಮಠದಲ್ಲಿ ಅವ್ಯವಹಾರ: ಮುಖಂಡರ ಆರೋಪ
- ವ್ಯವಹಾರಗಳ ಲೆಕ್ಕ ಕೇಳಿದ ಭಕ್ತಸಮೂಹ
- ಮಠದ ಇತರ ಆಸ್ತಿ ವಿವರಕ್ಕೂ ಆಗ್ರಹ

ಹರಿಹರ: ವೀರಶೈವ ಲಿಂಗಾಯತ ಪಂಚಮಸಾಲಿ ಗುರುಪೀಠದಲ್ಲಿ ನಡೆದಿರುವ ವೆಚ್ಚದ ಕುರಿತ ಲೆಕ್ಕ ಕೊಡಬೇಕು ಎಂದು ಆಗ್ರಹಿಸಿ ಮಂಗಳವಾರ ಮಠದ ಆವರಣದಲ್ಲಿ 300ಕ್ಕೂ ಹೆಚ್ಚು ಭಕ್ತರು ಪ್ರತಿಭಟಿಸಿದರು.

ಮಠದ ಆಡಳಿತಾಧಿಕಾರಿ ಹೊನ್ನಾಳಿಯ ಡಾ.ರಾಜ್‌ಕುಮಾರ್ ನೇತೃತ್ವದಲ್ಲಿ ಮಧ್ಯಾಹ್ನ 12 ಗಂಟೆಯಿಂದ ಸಂಜೆ 4ರವರೆಗೆ ಭಕ್ತರು 'ಲೆಕ್ಕ ಕೊಡಿ' ಚಳವಳಿ ನಡೆಸಿದರು.

'ಪೀಠಾಧ್ಯಕ್ಷರಾಗಿ ಮುಂದುವರಿಯುತ್ತೀರೊ ಅಥವಾ ಬೆಂಗಳೂರಿನ ಶ್ವಾಸ ಯೋಗ ಕೇಂದ್ರದ ಅಧಿಕಾರದಲ್ಲಿ ಇರುತ್ತೀರೊ ಎಂಬುದನ್ನು ಸ್ಪಷ್ಟಪಡಿಸಿ ಎಂದು ಸೂಚಿಸಿ ಮಠದ ಟ್ರಸ್ಟಿಗಳಾದ ಬಿ.ಸಿ. ಉಮಾಪತಿ, ಚಂದ್ರಶೇಖರ್ ಪೂಜಾರ್ ಮತ್ತಿತರರು ಮಾರ್ಚ್ 24ರ ಗಡುವು ನೀಡಿದ್ದರು.

ಬಿಡಿಗಾಸು ದುರ್ಬಳಕೆ ಮಾಡಿಲ್ಲ: 'ಗುರುಪೀಠದ ಒಂದು ಪೈಸೆಯನ್ನೂ ಸ್ವಂತಕ್ಕಾಗಿ ಬಳಸಿಲ್ಲ. ಪೀಠಾಧಿಪತಿ ಹುದ್ದೆಯನ್ನು ಯಾವುದೇ ರೀತಿಯ ದುರುಪಯೋಗ ಮಾಡಿಕೊಂಡಿಲ್ಲ' ಎಂದು ಗುರುಪೀಠದ ವಚನಾನಂದ ಶ್ರೀ ಹೇಳಿದರು.

ಮಧ್ಯಾಹ್ನ ಮಠದಲ್ಲಿ ನಡೆದ ಭಕ್ತರ ಸಭೆಯಲ್ಲಿ ಅವರು, 'ಅಧಿಕಾರ ಸ್ವೀಕರಿಸಿದಾಗಿನಿಂದ ಹಣಕಾಸಿನ ವ್ಯವಹಾರಕ್ಕೆ ಸಂಬಂಧಿಸಿದ ಚೆಕ್‌ಗಳಿಗೆ ಸಹಿ ಹಾಕುವ ಅಧಿಕಾರ ಹೊಂದಿಲ್ಲ. ಪೀಠದ ಹಣವನ್ನು ಬೆಂಗಳೂರಿನ ಶ್ವಾಸಯೋಗ ಕೇಂದ್ರಕ್ಕೆ ಬಳಸಿಲ್ಲ. ಸಮಾಜವೇ ನನಗೆ ಶ್ವಾಸ, ಸಮಾಜವೇ ಸರ್ವಸ್ವವಾಗಿದೆ' ಎಂದರು.

'ಗುರುಪೀಠಕ್ಕೆ ನೇಮಕವಾಗುವಾಗ ಸಂದರ್ಭ ಟ್ರಸ್ಟ್ ಮುಖ್ಯಸ್ಥರಿಗೆ ಯಾವುದಾದರೂ ವಾಗ್ದಾನ ನೀಡಲಾಗಿತ್ತೇ?' ಎಂಬ ಪ್ರಶ್ನೆಗೆ ಶ್ರೀಗಳು ಉತ್ತರ ನೀಡಲಿಲ್ಲ. ಆದರೆ, 'ದಾಖಲೆಗಳನ್ನು ಒದಗಿಸುತ್ತೇನೆ' ಎಂದಷ್ಟೇ ಹೇಳಿದರು.

'ಗುರುಪೀಠದ ಹಲವು ಟ್ರಸ್ಟಿಗಳ ಹಣದ ಅವ್ಯವಹಾರವನ್ನು ಪ್ರಶ್ನಿಸಿದ್ದಕ್ಕೆ ಮಠದ ಲಿಂಗೈಕ್ಯ ಮಹಾಂತ ಶ್ರೀಗಳ ಕೊಠಡಿಗೆ ಪೆಟ್ರೋಲ್ ಸುರಿದಿದ್ದು ಸೇರಿ ವಿವಿಧ ರೀತಿ ಕಿರುಕುಳ ನೀಡಿದ್ದಾರೆ. ಶ್ರೀಗಳು ತಮ್ಮ ದಿನಚರಿಯಲ್ಲಿ ಬರೆದಿರುವ ಅನುಭವವನ್ನು ಓದಿದರೆ ಇದು ತಿಳಿಯುತ್ತದೆ' ಎಂದು ಮಠದ ಹೊರಾಂಗಣದಲ್ಲಿ ನಡೆದ ಸಭೆಯಲ್ಲಿ ಗಡಿನಾಡು ಅಭಿವೃದ್ಧಿ ನಿಗಮದ ಅಧ್ಯಕ್ಷರೂ ಆದ ಟ್ರಸ್ಟಿ ಸೋಮಣ್ಣ ಬೇವಿನಮರದ ಹೇಳಿದರು.

'ಬಳ್ಳಾರಿ, ನವಲಗುಂದ, ದಾವಣಗೆರೆ, ಶಿಗ್ಗಾವಿ, ಹಿರೇಕೆರೂರು, ಹಗರಿಬೊಮ್ಮನಹಳ್ಳಿ ಸೇರಿದಂತೆ ರಾಜ್ಯದ ವಿವಿಧೆಡೆ ಮಠ ಹೊಂದಿರುವ ಆಸ್ತಿ ವಿವರವನ್ನೂ ಬಿ.ಸಿ.ಉಮಾಪತಿ, ಚಂದ್ರಶೇಖರ್ ಪೂಜಾರ್ ಅವರು ನೀಡಬೇಕು' ಎಂದು ಒತ್ತಾಯಿಸಿದರು.

ರಾಣೇಬೆನ್ನೂರು ಮಾಜಿ ಶಾಸಕ ಅರುಣಕುಮಾರ್ ಪೂಜಾರ್, ಅನ್ನ ದಾಸೋಹ ಸಮಿತಿ ಅಧ್ಯಕ್ಷ ಪ್ರಕಾಶ್ ಪಾಟೀಲ್, ಸಮುದಾಯದ ಮುಖಂಡರಾದ ಮಾಜಿ ಶಾಸಕ ನಂದಿಹಳ್ಳಿ ಹಾಲಪ್ಪ, ಹೊಳೆಸಿರಿಗೆರೆಯ ಪರಮೇಶ್ವರ ಗೌಡ ಸೇರಿದಂತೆ ಹಲವರು ಮಠದ ಲೆಕ್ಕಪತ್ರ ಸಲ್ಲಿಸಬೇಕೆಂದು ಆಗ್ರಹಿಸಿದರು.



ಹರಿಹರ ಹೊರವಲಯದ ವೀರಶೈವ ಲಿಂಗಾಯತ ಪಂಚಮಸಾಲಿ ಗುರುಪೀಠದಲ್ಲಿ ಮಂಗಳವಾರ ನಡೆದ ಲೆಕ್ಕ ಕೊಡಿ ಚಳವಳಿಯ ಹಿನ್ನೆಲೆಯಲ್ಲಿ ವಚನಾನಂದ ಶ್ರೀಗಳು ಸಭೆಯಲ್ಲಿ ಮಾತನಾಡಿದರು

ಮುಂದಿನ ದಿನಗಳಲ್ಲಿ ಸಭೆ: ಉಮಾಪತಿ

'ಬೆಂಗಳೂರಿನ ಶ್ವಾಸ ಯೋಗ ಪೀಠವನ್ನು ತ್ಯಜಿಸುವ ಬಗ್ಗೆ ನಿರ್ಧರಿಸಲು ಮಾರ್ಚ್ 24ರ ವರೆಗೆ ವಚನಾನಂದ ಶ್ರೀಗಳೇ ಸಮಯ ಕೇಳಿದ್ದರು. ಗಡುವು ಮುಗಿದಿದೆ. ಉಪಚುನಾವಣೆಯ ಕಾರಣಕ್ಕೆ ಭದ್ರತೆ ಒದಗಿಸಲು ಕಷ್ಟ. ಸಭೆ ನಡೆಸದಂತೆ ಪೊಲೀಸರು ಮನವಿ ಮಾಡಿದ್ದರು. ಹೀಗಾಗಿ ಸದ್ಯಕ್ಕೆ ಸಭೆ ನಡೆಸುತ್ತಿಲ್ಲ' ಎಂದು ಗುರುಪೀಠದ ಟ್ರಸ್ಟ್‌ನ ಪ್ರಧಾನ ಧರ್ಮದರ್ಶಿ ಬಿ.ಸಿ. ಉಮಾಪತಿ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

'ಮುಂದಿನ ದಿನಗಳಲ್ಲಿ ಟ್ರಸ್ಟ್ ಸದಸ್ಯರು, ಸಮುದಾಯದ ಹಿರಿಯರು ಸಭೆ ನಡೆಸಿ ತೀರ್ಮಾನ ಕೈಗೊಳ್ಳುತ್ತೇವೆ. ಎಷ್ಟು ಬಾರಿಯಾದರೂ ಲೆಕ್ಕ ಒಪ್ಪಿಸಲು ಸಿದ್ಧ' ಎಂದು ಸ್ಪಷ್ಟಪಡಿಸಿದರು.

ಏಕಾತ್ಮ ಮಾನವ ದರ್ಶನ ರದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇದೇ 25ರಿಂದ (ಬುಧವಾರ) ಕರ್ನಾಟಕ ಮುಕ್ತ ವಿಶ್ವವಿದ್ಯಾಲಯದಲ್ಲಿ ಆಯೋಜಿಸಿರುವ 'ಏಕಾತ್ಮ ಮಾನವ ದರ್ಶನ-ಭಾರತದ ವಿಶ್ವದೃಷ್ಟಿ' ಅಂತರರಾಷ್ಟ್ರೀಯ ಸಮ್ಮೇಳನವನ್ನು ರದ್ದುಪಡಿಸಿ ಉನ್ನತ ಶಿಕ್ಷಣ ಇಲಾಖೆ ಆದೇಶ ಹೊರಡಿಸಿದೆ.

ಪ್ರಜ್ಞಾ ಪ್ರವಾಹ ಮತ್ತು ಶ್ಯಾಮ್ ಪ್ರಸಾದ್ ಮುಖರ್ಜಿ ಸಂಶೋಧನಾ ಪ್ರತಿಷ್ಠಾನದ ಸಹಯೋಗದೊಂದಿಗೆ ಈ ಕಾರ್ಯಕ್ರಮ ಆಯೋಜಿಸಿರುವುದು ಶಿಷ್ಟಾಚಾರದ ಉಲ್ಲಂಘನೆ. ಖಾಸಗಿ ಸಂಸ್ಥೆಯ ಕಾರ್ಯಕ್ರಮಕ್ಕೆ ಅನುಮತಿ ನೀಡಿರುವುದನ್ನು ಒಪ್ಪಲು ಸಾಧ್ಯವಿಲ್ಲ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಇದು ವಿಶ್ವವಿದ್ಯಾಲಯದ ಅಧಿಕೃತ ಕಾರ್ಯಕ್ರಮ ಅಲ್ಲ. ಜಾಗವನ್ನು ಮಾತ್ರ ಬಾಡಿಗೆಗೆ ನೀಡಲಾಗಿದೆ ಎಂದು ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ ಅವರು ಉತ್ತರ ನೀಡಿದ ಬೆನ್ನಲ್ಲೇ, ಉನ್ನತ ಶಿಕ್ಷಣ ಇಲಾಖೆಯ ಕಾರ್ಯದರ್ಶಿ ಆದೇಶ ಹೊರಡಿಸಿದ್ದು, ಕುಲಪತಿಯ ಉತ್ತರವನ್ನು ಒಪ್ಪಲು ಸಾಧ್ಯವಿಲ್ಲ ಎಂದು ತಿಳಿಸಿದ್ದಾರೆ.

ಕಾರ್ಯಕ್ರಮ ಆಯೋಜನೆಗೆ ಸಂಬಂಧಿಸಿದಂತೆ ಉನ್ನತ ಶಿಕ್ಷಣ ಇಲಾಖೆಯ ಕಾರ್ಯದರ್ಶಿ ನೀಡಿರುವ ನೋಟಿಸ್‌ಗೆ ಮಂಗಳವಾರ ಉತ್ತರ ನೀಡಿದ್ದ ಅವರು, ಪ್ರಜ್ಞಾ ಪ್ರವಾಹ ಸಂಸ್ಥೆಯ ಮನವಿ ಮೇರೆಗೆ ವಿ.ವಿ. ಘಟಿಕೋತ್ಸವ ಭವನವನ್ನು ಬಾಡಿಗೆ ಆಧಾರದ ಮೇಲೆ ನೀಡಲಾಗಿದೆ. ಆ ಸಂಸ್ಥೆಯೇ ಈ ಕಾರ್ಯಕ್ರಮವನ್ನು ಆಯೋಜಿಸಿದೆ ಎಂದು ಹೇಳಿದ್ದರು.

ವಿಧಾನ ಪರಿಷತ್‌ನಲ್ಲಿ ಸೋಮವಾರ ಶೂನ್ಯ ವೇಳೆಯಲ್ಲಿ ಕಾಂಗ್ರೆಸ್ ಸದಸ್ಯ ರಮೇಶ್ ಬಾಬು ಅವರು ಈ ವಿಷಯ ಪ್ರಸ್ತಾಪಿಸಿದಾಗ, ಉತ್ತರ ನೀಡಿದ ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್, 'ಶಿಷ್ಟಾಚಾರ ಉಲ್ಲಂಘನೆಯಾಗಿದ್ದು, ಕಾರ್ಯಕ್ರಮ ಮುಂದೂಡಲು ಸೂಚಿಸಲಾಗುವುದು' ಎಂದಿದ್ದರು. ಇದರ ಬೆನ್ನಲ್ಲೇ ಕುಲಪತಿಗೆ ನೋಟಿಸ್ ನೀಡಲಾಗಿತ್ತು.

ಮಳೆ: ಬೆಳಗಾವಿ ಡಿ.ಸಿ ಕಚೇರಿಗೆ ನೀರು

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಧಾರವಾಡ, ಬೆಳಗಾವಿ, ವಿಜಯನಗರ ಜಿಲ್ಲೆಯ ಕೆಲವಡೆ ಮಂಗಳವಾರ ಗುಡುಗು, ಸಿಡಿಲು ಸಮೇತ ಧಾರಾಕಾರ ಮಳೆ ಸುರಿಯಿತು. ಬೆಳಗಾವಿ ನಗರ, ತಾಲ್ಲೂಕಿನ ಸುತ್ತಮುತ್ತ ಆಲಿಕಲ್ಲು ಸಹಿತ ಮಳೆ ಸುರಿಯಿತು. ಮಳೆ, ಗಾಳಿ ರಭಸಕ್ಕೆ ಕೆಲ ಕಡೆ ವಿದ್ಯುತ್ ಪೂರೈಕೆ ಸ್ಥಗಿತಗೊಳಿಸಲಾಗಿತ್ತು.

ಬೆಳಗಾವಿ ಜಿಲ್ಲಾಧಿಕಾರಿ ಕಚೇರಿ ಕಟ್ಟಡದಲ್ಲೂ ಸೋರಿಕೆ ಉಂಟಾಗಿ, ಜಿಲ್ಲಾಧಿಕಾರಿಯ ಕೊಠಡಿಗೂ ರಾಡಿ ಮಿಶ್ರಿತ ನೀರು ನುಗ್ಗಿತು. ಸಿಬ್ಬಂದಿ ನೀರು ಹೊರಹಾಕಲು ಶ್ರಮಿಸಿದರು.

ಹೊಸಪೇಟೆ ತಾಲ್ಲೂಕಿನ ಮರಿಯಮ್ಮನಹಳ್ಳಿಯಲ್ಲಿ ಮತ್ತು ಹರಪನಹಳ್ಳಿ ತಾಲ್ಲೂಕಿನ ತೆಲಗಿ, ಅರಸೀಕೆರೆ ಹೋಬಳಿಗಳಲ್ಲಿ ಸ್ವಲ್ಪ ಹೊತ್ತು ಬಿರುಸಾಗಿ ಮಳೆ ಸುರಿಯಿತು.

ಸಿಡಿಲು ಬಡಿದು ಯುವಕ ಸಾವು

ಕಲಬುರಗಿ: ಸಿಡಿಲು ಬಡಿದು ಕಲಬುರಗಿ ಜಿಲ್ಲೆ ಚಿಂಚೋಳಿ ತಾಲ್ಲೂಕಿನ ಶಾದಿಪುರ ಬಳಿಯ ಧನಸಿಂಗ್ ನಾಯಕ ತಾಂಡಾ ನಿವಾಸಿ ಮಹೇಶ ಕಿಶನ್ ಚವ್ಹಾಣ್ (22) ಮೃತಪಟ್ಟಿದ್ದಾರೆ.

ಬೀದರ್ ಜಿಲ್ಲೆಯ ಭಾಲ್ಕಿ ತಾಲ್ಲೂಕಿನ ನಿಟ್ಟೂರು (ಬಿ) ಗ್ರಾಮದಲ್ಲಿ ಹೊಲದಲ್ಲಿ ನಾಲ್ವರು ಕೃಷಿಕರು ಸಿಡಿಲು ಬಡಿದು ಗಾಯಗೊಂಡಿದ್ದಾರೆ.

ಐಆರ್‌ಡಿಎಐಗೆ ನೋಟಿಸ್ ನೀಡಿದ ಎನ್‌ಎಚ್‌ಆರ್‌ಸಿ

ನವದೆಹಲಿ (ಪಿಟಿಐ): ಶ್ರವಣ ಹಾಗೂ ವಾಕ್ ದೋಷವಿರುವ ಮಕ್ಕಳನ್ನು ಹೊಂದಿದ ಕುಟುಂಬಸ್ಥರು ಜೀವವಿಮೆ ಪಡೆಯಲು ತೊಂದರೆ ಅನುಭವಿಸುತ್ತಿರುವ ಕುರಿತ ಅರ್ಜಿ ವಿಚಾರಣೆ ನಡೆಸಿದ ರಾಷ್ಟ್ರೀಯ ಮಾನವ ಹಕ್ಕು ಆಯೋಗವು (ಎನ್‌ಎಚ್‌ಆರ್‌ಸಿ) ಭಾರತೀಯ ವಿಮಾ ಪ್ರಾಧಿಕಾರಕ್ಕೆ (ಐಆರ್‌ಡಿಎಐ) ಮಂಗಳವಾರ ನೋಟಿಸ್ ಜಾರಿಗೊಳಿಸಿದೆ.

ಎನ್‌ಎಚ್‌ಆರ್‌ಸಿ ಪೀಠದ ಅಧ್ಯಕ್ಷತೆ ವಹಿಸಿ ಅರ್ಜಿ ವಿಚಾರಣೆ ನಡೆಸಿದ ಸದಸ್ಯ ಪ್ರಿಯಾಂಕ್ ಕನೂಂಗೊ ನೋಟಿಸ್ ಜಾರಿಗೊಳಿಸಿದ್ದಾರೆ.

ವಾಕ್ ಹಾಗೂ ಶ್ರವಣ ದೋಷ ಹೊಂದಿರುವ ಮಕ್ಕಳ ಪೋಷಕರು ಜೀವ ವಿಮೆ ಪಡೆಯಲು ಸಂಕಷ್ಟಪಡುತ್ತಿದ್ದಾರೆ. ವಿಮೆ ನೀಡಿದರೂ ಕೂಡ ಕೆಲವೊಂದು ಷರತ್ತುಗಳನ್ನು ವಿಧಿಸುತ್ತಿದ್ದಾರೆ' ಎಂದು ಆರೋಪಿಸಿ ಪಂಜಾಬ್‌ನ ಲೂಧಿಯಾನದ ಲಘು ಉದ್ಯೋಗ್ ಭಾರತಿಯ ಅಧ್ಯಕ್ಷರು ದೂರು ಸಲ್ಲಿಸಿದ್ದರು.

ವಿಮಾ ಕಂಪನಿಗಳಿಗೆ ಈ ಕುರಿತು ನೀತಿ ಮಾರ್ಗಸೂಚಿಗಳನ್ನು ನೀಡುವಂತೆ ಕೋರಿ ಅರ್ಜಿದಾರರು ಮನವಿ ಮಾಡಿದ್ದರು. ಆ ಮೂಲಕ ಅಂಗವೈಕಲ್ಯ ಹೊಂದಿದ ಕಾರಣಕ್ಕಾಗಿ ವಿಮೆ ನಿರಾಕರಿಸದಂತೆ, ವಿಶೇಷ ಅಗತ್ಯವುಳ್ಳ ಮಕ್ಕಳಿಗೂ ವಿಮೆ ಸೌಲಭ್ಯ ಕಲ್ಪಿಸಲು ಜಾಗೃತಿ ಮೂಡಿಸಬೇಕು ಎಂದು ಅರ್ಜಿಯಲ್ಲಿ ಕೋರಿದ್ದರು.

ಹೈದರಾಬಾದ್‌ನಲ್ಲಿರುವ ಐಆರ್‌ಡಿಎ ಅಧ್ಯಕ್ಷರಿಗೆ ನೋಟಿಸ್ ಜಾರಿಗೊಳಿಸಿದ ಎನ್‌ಎಚ್‌ಆರ್‌ಸಿ, 15 ದಿನಗಳ ಒಳಗಾಗಿ ತೆಗೆದುಕೊಂಡ ಕ್ರಮಗಳ ಕುರಿತಾಗಿ ವರದಿ ಸಲ್ಲಿಸುವಂತೆ ನೋಟಿಸ್‌ನಲ್ಲಿ ಸೂಚನೆ ನೀಡಿದೆ.

ಆನ್‌ಲೈನ್ ಗೇಮ್ ವಿದ್ಯಾರ್ಥಿ ಆತ್ಮಹತ್ಯೆ



ಅನಿಷ್ಕಾರ್

ಬೀದರ್: ಆನ್‌ಲೈನ್ ಗೇಮ್‌ನಲ್ಲಿ ಹಣ ಕಳೆದುಕೊಂಡು ಸಾಲದ ಸುಳಿಗೆ ಸಿಲುಕಿದ ಎಂಬಿಬಿಎಸ್ ಅಂತಿಮ ವರ್ಷದ ವಿದ್ಯಾರ್ಥಿ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ನಗರದ ಬೀದರ್ ವೈದ್ಯಕೀಯ ವಿಜ್ಞಾನ ಸಂಸ್ಥೆಯ (ಬ್ರಿಮ್ಸ್) ಹಾಸ್ಟೆಲ್‌ನಲ್ಲಿ ನಡೆದಿದೆ.

ಕಲಬುರಗಿ ಜಿಲ್ಲೆಯ ಚಿಂಚೋಳಿ ತಾಲ್ಲೂಕಿನ ಪಾಲತ್ಯಾ ತಾಂಡಾ ನಿವಾಸಿ ಅನಿಷ್ಕಾರ್ ಚವಾಣ್ (21) ಮೃತ ವಿದ್ಯಾರ್ಥಿ. 'ಆನ್‌ಲೈನ್ ಗೇಮ್‌ನಲ್ಲಿ ₹80 ಸಾವಿರ ಕಳೆದುಕೊಂಡಿದ್ದ. ಒತ್ತಡಕ್ಕೆ ಒಳಗಾಗಿ ಆತ್ಮಹತ್ಯೆಗೆ ಶರಣಾಗಿರುವ ಸಾಧ್ಯತೆ ಇದೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪ್ರದೀಪ್ ಗುಂಟಿ ತಿಳಿಸಿದ್ದಾರೆ.

ಭಯೋತ್ಪಾದನೆ ನಂಟಿನ ಶಂಕೆ: ಮೂವರ ಬಂಧನ

ವಿಜಯವಾಡ(ಆಂಧ್ರಪ್ರದೇಶ): ಭಯೋತ್ಪಾದನಾ ಜಾಲದೊಂದಿಗೆ ನಂಟು ಹೊಂದಿರುವ ಶಂಕೆಯಡಿ ಗುಪ್ತಚರ ದಳವು ಆಂಧ್ರಪ್ರದೇಶದಲ್ಲಿ ಮೂವರನ್ನು ಬಂಧಿಸಿದೆ.

'ಮೂವರ ಮೇಲೆ ಹಲವು ದಿನಗಳಿಂದ ನಿಗಾ ಇಡಲಾಗಿತ್ತು. ಅವರು ದೇಶದಾದ್ಯಂತ ಕಾರ್ಯಚರಿಸುತ್ತಿರುವ 10 ಮಂದಿಯ ಜಾಲದ ಭಾಗವಾಗಿದ್ದಾರೆ ಎಂಬುವುದು ಪ್ರಾಥಮಿಕ ತನಿಖೆಯಲ್ಲಿ ತಿಳಿದುಬಂದಿದೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ಆರೋಪಿಗಳು ಪಾಕಿಸ್ತಾನ ಮೂಲದ ವ್ಯಕ್ತಿಗಳಿಂದ ಹಣ ಪಡೆಯುತ್ತಿದ್ದರು. ಇನ್‌ಸ್ಟಾಗ್ರಾಂ ಮತ್ತು ಟೆಲಿಗ್ರಾಂ ಮೂಲಕ ಸಿದ್ಧಾಂತಗಳನ್ನು ಪ್ರಚುರ ಪಡಿಸಿ, ಜಿಹಾದಿ ಚಟುವಟಿಕೆಗಳಿಗೆ ಯುವಕರನ್ನು ಸೇರಿಸಿಕೊಳ್ಳುತ್ತಿದ್ದರು' ಎಂದು ಪೊಲೀಸರು ಆರೋಪಿಸಿದ್ದಾರೆ.

ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯ: ಬಾಲಕ ವಶಕ್ಕೆ

ಮೂಡಿಗೆರೆ: ಪಟ್ಟಣದಲ್ಲಿ ಬಾಲಕಿಯ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪದ ಮೇಲೆ ಕಾನೂನು ಸಂಘರ್ಷಕ್ಕೆ ಒಳಪಟ್ಟ ಬಾಲಕನ ವಿರುದ್ಧ ಪೋಕ್ಸೊ ಕಾಯ್ದೆಯಡಿ ಪ್ರಕರಣ ದಾಖಲಾಗಿದೆ.

ಸಂತ್ರಸ್ತೆಯ ಪೋಷಕರು ದೂರು ನೀಡಿದ್ದು, ಪೊಲೀಸರು ಬಾಲಕನನ್ನು ವಶಕ್ಕೆ ಪಡೆದಿದ್ದಾರೆ. ಬಾಲಕಿ ಹಾಗೂ ಬಾಲಕ ಪ್ರತ್ಯೇಕ ಧರ್ಮದವರು. ಮುಂಜಾಗ್ರತೆಯಾಗಿ ಪಟ್ಟಣದ ವಿವಿಧೆಡೆ ಬಿಗಿ ಭದ್ರತೆ ಏರ್ಪಡಿಸಿದೆ.

ಬಾಲಕನ ಪೋಷಕರೂ ದೂರು ನೀಡಿದ್ದು, ಪೋಕ್ಸೊ ಅನ್ವಯ ಹಾಗೂ ಹಲ್ಲೆ ಪ್ರಕರಣ ದಾಖಲಿಸಿದ್ದಾರೆ.

ವಿವರ: ಒಂದೇ ಶಾಲೆಯಲ್ಲಿ 10ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದ ಬಾಲಕಿ- ಬಾಲಕ ಪ್ರೀತಿಸಿದ್ದರು. ಪಿ.ಯು ವ್ಯಾಸಂಗಕ್ಕೆ ಭಿನ್ನ ಕಾಲೇಜು ಸೇರಿದ್ದರೂ ಪ್ರೀತಿ ಮುಂದುವರಿದಿತ್ತು. ಪ್ರೀತಿ ವಿಚಾರ ಆರು ತಿಂಗಳ ಹಿಂದೆಯೇ ಪೋಷಕರಿಗೆ ತಿಳಿದಿದೆ. ಪೋಷಕರು ಚರ್ಚಿಸಿ ಬಾಲಕ-ಬಾಲಕಿಗೆ ತಿಳಿವಳಿಕೆ ನೀಡಿದ್ದರು.

ಆದರೂ ಇಬ್ಬರೂ ಮೊಬೈಲ್‌ನಲ್ಲಿ ಸಂಪರ್ಕ ಇಟ್ಟುಕೊಂಡಿದ್ದರು. ಈ ಕುರಿತು ಸೋಮವಾರ ರಾತ್ರಿ ಎರಡೂ ಕುಟುಂಬಗಳ ಪೋಷಕರ ನಡುವೆ ವಾಕ್ಸಮರ, ಘರ್ಷಣೆ ನಡೆದಿದೆ ಎಂದು ಹೇಳಲಾಗಿದೆ. ಈ ಸಂದರ್ಭದಲ್ಲಿ ಹಿಂದುತ್ವವಾದಿ ಸಂಘಟನೆ ಮುಖಂಡರು ಬಾಲಕನ ಮೊಬೈಲ್ ಅನ್ನು ಕಸಿದು ಪೊಲೀಸರಿಗೆ ಒಪ್ಪಿಸಿದ್ದಾರೆ. ಪರಸ್ಪರ ವಿರುದ್ಧ ದೂರು ನೀಡಲಾಗಿದ್ದು, ಪೊಲೀಸರು ತನಿಖೆ ಮುಂದುವರಿಸಿದ್ದಾರೆ.

ಬ್ಯಾಟರಿ ಚಾರ್ಜ್ ಆಗಲು ಅರೆಕ್ಷಣ ಸಾಕು!



ಸಾಮಾನ್ಯವಾಗಿ, ಬ್ಯಾಟರಿಯ ಗಾತ್ರವು ದೊಡ್ಡದಾದಷ್ಟೂ, ಅದು ಸಂಪೂರ್ಣವಾಗಿ ಚಾರ್ಜ್ ಆಗಲು ಹಿಡಿಯುವ ಸಮಯ ಹೆಚ್ಚುತ್ತದೆ. ಆದರೆ, ಈ ಕ್ವಾಂಟಂ ಬ್ಯಾಟರಿಯಲ್ಲಿ, ಬ್ಯಾಟರಿಯ ಗಾತ್ರ ಹಿಗ್ಗಿದಷ್ಟೂ, ಚಾರ್ಜ್ ಆಗಲು ಬೇಕಾಗುವ ಸಮಯ ಕಡಿಮೆಯಾಗುತ್ತದೆ



• ಕ್ಷಮಾ ವಿ. ಭಾನುಪ್ರಕಾಶ್

ಎಲೆಕ್ಟ್ರಿಕ್ ವಾಹನದ ಒಡೆಯರಿಗೆ ಇರುವ ಒಂದು ಮುಖ್ಯವಾದ ಸಮಸ್ಯೆ, ಕಾರು ಅಥವಾ ಬೈಕ್ ಬ್ಯಾಟರಿ ಸಂಪೂರ್ಣವಾಗಿ ಚಾರ್ಜ್ ಆಗಲು ಹಿಡಿಯುವ ಸಮಯ. ಎಲೆಕ್ಟ್ರಿಕ್ ಕಾರುಗಳ ಬ್ಯಾಟರಿ ಚಾರ್ಜ್ ಮಾಡಲು ಸಾಮಾನ್ಯವಾಗಿ, 30 ನಿಮಿಷದಿಂದ 12 ಗಂಟೆಗಳವರೆಗೂ ಸಮಯ ಬೇಕಾಗುತ್ತದೆ. ಅದು ಬ್ಯಾಟರಿಯ ಗಾತ್ರ ಮತ್ತು 'ಚಾರ್ಜರ್'ನ ವಿಧದ ಮೇಲೆ ಅವಲಂಬಿಸಿರುತ್ತದೆ. ಮನೆಯ ಸಾಕೆಟ್ ಅಥವಾ ಸಾರ್ವಜನಿಕ ವಾಲ್ ಬಾಕ್ಸ್ ಬಳಸುತ್ತೇವೋ ಅಥವಾ ಡಿಸಿ ಫಾಸ್ಟ್ ಚಾರ್ಜಿಂಗ್ ಬಳಸುತ್ತೇವೋ ಎಂಬುದರ ಆಧಾರದಮೇಲೂ ಒಂದು ಬ್ಯಾಟರಿಯು ಸಂಪೂರ್ಣವಾಗಿ ಚಾರ್ಜ್ ಆಗಲು ಎಷ್ಟು ಸಮಯ ಹಿಡಿಯುತ್ತದೆ ಎಂಬುದನ್ನು ನಾವು ಅಂದಾಜಿಸಬಹುದು. ಇನ್ನು ಹೀಗೆ ಗಂಟೆಗಟ್ಟಲೇ ಕಾಯದೇ, ಪೆಟ್ರೋಲ್-ಡೀಸೆಲ್ ಅನ್ನು ಕಾರಿನ ಟ್ಯಾಂಕಿಗೆ ತುಂಬಿಸಲು ಬೇಕಾಗುವಷ್ಟೇ ನಿಮಿಷಗಳಲ್ಲಿ, ಕಾರುಗಳ ಬ್ಯಾಟರಿ ಚಾರ್ಜ್ ಆಗಬಹುದು ಎನ್ನುತ್ತಾರೆ, ಆಸ್ಟ್ರೇಲಿಯಾದ ಸಂಶೋಧಕರು. ಜಗತ್ತಿನ ಮೊದಲ 'ಕ್ವಾಂಟಂ ಬ್ಯಾಟರಿ'ಯ ವರ್ಕಿಂಗ್ ಮಾದರಿಯನ್ನು ತಯಾರಿಸಿದ್ದಾರೆ ಮೆಲ್ಬೋರ್ನ್ ವಿಶ್ವವಿದ್ಯಾಲಯದ ವಿಜ್ಞಾನಿಗಳು, ಆಸ್ಟ್ರೇಲಿಯಾದ ಆರ್.ಎಮ್.ಐ.ಟಿ. ವಿಶ್ವವಿದ್ಯಾಲಯದ ಸಂಶೋಧಕರು ಮತ್ತು 'ಸಿ.ಎಸ್.ಐ.ಆರ್.ಓ.'ದ ತಂತ್ರಜ್ಞರು. ಈ ಮಾದರಿಯ ಮೇಲೆ ನಡೆಸಿದ ಪ್ರಯೋಗಗಳು ತಿಳಿಸುವುದೇನೆಂದರೆ, ಇಲ್ಲಿ ಒಂದಿಡೀ ಬ್ಯಾಟರಿ ಚಾರ್ಜ್ ಆಗಲು ಒಂದು ನಿಮಿಷವೂ ಬೇಕಿಲ್ಲ; ಕೇವಲ ಸೆಕೆಂಡುಗಳು ಸಾಕಂತೆ!

ಇದೆಲ್ಲ ಕಲ್ಪನಾಲೋಕದ ಕಥೆಯಂತೆನಿಸಿದರೂ, 'ಇದು ಸಾಧ್ಯ' ಎಂದು ಸಾಬೀತುಪಡಿಸಿದ್ದಾರೆ, ಆಸ್ಟ್ರೇಲಿಯಾದ ತಂತ್ರಜ್ಞರು. ಈ 'ಕ್ವಾಂಟಂ ಬ್ಯಾಟರಿ'ಯ ಹಿಂದಿರುವ ಪ್ರಕ್ರಿಯೆಯ ಹೆಸರು 'ಸೂಪರ್ ಅಬ್ಸಾರ್ಪ್ಷನ್'. ಸಾಮಾನ್ಯ ಬ್ಯಾಟರಿಗಳು ಅವುಗಳ ಒಳಗೆ ನಡೆಯುವ ರಾಸಾಯನಿಕ ಪ್ರಕ್ರಿಯೆಯ ಮೇಲೆ ಆಧಾರಿತವಾಗಿದ್ದರೆ, ಈ ಕ್ವಾಂಟಂ ಬ್ಯಾಟರಿಯು, ಅಣುಗಳ ನಡುವಿನ 'ಕ್ವಾಂಟಂ ಎಂಟ್ಯಾಂಗಲ್ಮೆಂಟ್'ನ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತದೆ. ಸಾಮಾನ್ಯ ಬ್ಯಾಟರಿಯು ಅನೇಕ ಸಣ್ಣ ಬ್ಯಾಟರಿಗಳ ಮೊತ್ತದಂತೆ ಕಾರ್ಯನಿರ್ವಹಿಸಿ, ಒಂದರ ನಂತರ ಮತ್ತೊಂದು ಚಾರ್ಜ್ ಆಗಿ ಒಟ್ಟಾರೆ ಬ್ಯಾಟರಿ ಚಾರ್ಜ್ ಆಗುತ್ತದೆ. ಆದರೆ ಈ ಹೊಸ ಕ್ವಾಂಟಂ ಬ್ಯಾಟರಿಯಲ್ಲಿ ಎಲ್ಲ ಕಣಗಳೂ ಒಟ್ಟಿಗೇ, ಒಂದೇ ಸಲಕ್ಕೇ ಚಾರ್ಜನ್ನು ಹೀರಿಕೊಳ್ಳುತ್ತವೆ. ಅದಕ್ಕೇ ಇಂತಹ ಮಹತ್ತರ ಹೀರಿಕೆಯನ್ನು 'ಸೂಪರ್ ಅಬ್ಸಾರ್ಪ್ಷನ್' ಎನ್ನುತ್ತಾರೆ. ಇದಕ್ಕೆ ಕಾರಣ, 'ಕ್ವಾಂಟಂ ಎಂಟ್ಯಾಂಗಲ್ಮೆಂಟ್', ಅಂದರೆ, ಒಂದು ಕಣಕ್ಕೂ ಮತ್ತೊಂದು ಕಣಕ್ಕೂ ಕಾಣದಂತೆ ಇರುವ ಕೊಂಡಿ. ಆ ಕಣಗಳ ನಡುವೆ ಅದೆಷ್ಟೇ ಅಂತರವಿರಲಿ, ಒಂದು ಕಣಕ್ಕೆ ಭೌತಿಕವಾಗಿ ಆದ ಪರಿಣಾಮವು ಮತ್ತೊಂದು ಕಣದ ಮೇಲೂ ಆಗಿರುತ್ತದೆ. ಹಾಗಾಗಿ, ಒಂದು ಕಣವು ಚಾರ್ಜ್ ಆದ ಕ್ಷಣದಲ್ಲೇ ಸುತ್ತಲೂ ಬ್ಯಾಟರಿಯಲ್ಲಿರುವ ಎಲ್ಲ ಕಣಗಳೂ ಚಾರ್ಜ್ ಆಗುತ್ತವೆ. ಹಾಗಾಗಿ, ಚಾರ್ಜಿಂಗ್ ಸಮಯವನ್ನು ಗಂಟೆಗಳಿಂದ ಅರೆಕ್ಷಣಕ್ಕೆ ಇಳಿಸಬಹುದಾಗಿದೆ. ಸಾಮಾನ್ಯವಾಗಿ, ಬ್ಯಾಟರಿಯ ಗಾತ್ರವು ದೊಡ್ಡದಾದಷ್ಟೂ, ಅದು ಸಂಪೂರ್ಣವಾಗಿ ಚಾರ್ಜ್ ಆಗಲು ಹಿಡಿಯುವ ಸಮಯ ಹೆಚ್ಚುತ್ತದೆ. ಆದರೆ, ಈ ಕ್ವಾಂಟಂ ಬ್ಯಾಟರಿಯಲ್ಲಿ, ಬ್ಯಾಟರಿಯ ಗಾತ್ರ ಹಿಗ್ಗಿದಷ್ಟೂ, ಚಾರ್ಜ್ ಆಗಲು ಬೇಕಾಗುವ ಸಮಯ ಕಡಿಮೆಯಾಗುತ್ತದೆ ಎನ್ನುತ್ತಾರೆ, ಸಂಶೋಧಕರು.

ಇದನ್ನು ಸಾಬೀತು ಪಡಿಸುವುದಕ್ಕೆ ಸಂಪೂರ್ಣ ಚಾರ್ಜಿಂಗ್ ಚಕ್ರವನ್ನು ಯಶಸ್ವಿಯಾಗಿ ಮಾಡಿ ತೋರಿಸಿದ್ದಾರೆ ಪ್ರೊ. ಜೇಮ್ಸ್ ಕ್ವಾಚ್ ಮತ್ತು ಅವರ ತಂಡದ ವಿಜ್ಞಾನಿಗಳು. ಸಂಪೂರ್ಣ ಚಾರ್ಜಿಂಗ್ ಚಕ್ರವೆಂದರೆ, ಮೊದಲು ಚಾರ್ಜ್ ಮಾಡುವುದು, ನಂತರ ಆ ಚಾರ್ಜನ್ನು ಬ್ಯಾಟರಿಯಲ್ಲೇ ಸ್ಟೋರ್ ಮಾಡುವುದು, ನಂತರ ಬ್ಯಾಟರಿಯನ್ನು ಸಂಪೂರ್ಣವಾಗಿ ಡಿಸ್ಚಾರ್ಜ್ ಮಾಡಿ, ಈ ಚಾರ್ಜಿಂಗ್ ಚಕ್ರವನ್ನು ಪುನಃ ಪ್ರಾರಂಭಿಸುವುದು. ಇದಕ್ಕಾಗಿ ವಿಶೇಷವಾಗಿ ತಯಾರಿಸಿದ ಅನೇಕ ಪದರಗಳಿರುವ ಇಂಗಾಲೀಯ 'ಮೈಕ್ರೋಕ್ಯಾವಿಟಿ'ಯ ಬಳಕೆ ಮಾಡಿದ್ದೇವೆ ಎನ್ನುತ್ತದೆ, ಈ ತಂಡ.

ಇಲ್ಲಿ ಮತ್ತೊಂದು ವಿಶೇಷತೆಯೇನು ಗೊತ್ತಾ? ಇಂತಹ ಕ್ವಾಂಟಂಮಟ್ಟದ ಪ್ರಯೋಗಗಳಿಗೆ ಸಾಮಾನ್ಯವಾಗಿ 'ಕ್ರಯೋಜೆನಿಕ್ ಕೂಲಿಂಗ್'ನ ಅವಶ್ಯಕತೆಯಿರುತ್ತದೆ. ಇಂತಹ ಅಪರಿಮಿತ ತಂಪು, ಅಂದರೆ ಮೈನಸ್ 240 ಡಿಗ್ರಿ ಸೆಲ್ಸಿಯಸ್‌ಗಿಂತಲೂ ಕಡಿಮೆ ತಾಪಮಾನವನ್ನು ತಲುಪಲು, ಹೀಲಿಯಂ ಅನಿಲದ ಸಮಸ್ಥಾನಿಗಳನ್ನು ಬಳಸಲಾಗುತ್ತದೆ. ಇಷ್ಟೆಲ್ಲ ತ್ರಾಸವಿಲ್ಲದೆ, ಸಾಮಾನ್ಯ ತಾಪಮಾನಗಳಲ್ಲೂ ಕಾರ್ಯನಿರ್ವಹಿಸಲು ಸೈ ನಮ್ಮ ಈ ಹೊಸ ಕ್ವಾಂಟಂ ಬ್ಯಾಟರಿ ಎಂಬುದು ಅತ್ಯಂತ ಅಚ್ಚರಿದಾಯಕ ಅಂಶವೇ ಸರಿ.

ಪ್ರೊ. ಕ್ವಾಚ್ ಅವರ ಪ್ರಕಾರ, ಪ್ರಾಯೋಗಿಕ ಹಂತದಲ್ಲಿ, ಈ ಹೊಸ ಬ್ಯಾಟರಿಯು ಚಾರ್ಜ್ ಆಗಲು ಒಂದು ಕ್ಷಣವೂ ಬೇಕಾಗಲಿಲ್ಲವಂತೆ! ಮೈಕ್ರೋ ಸೆಕೆಂಡ್, ಫೆಮ್ಟೋ ಸೆಕೆಂಡುಗಳಲ್ಲೇ ಸಂಪೂರ್ಣ ಚಾರ್ಜ್ ಆದ ಈ ಪ್ರಾಯೋಗಿಕ ಮಾದರಿಯು, ವಾಣಿಜ್ಯಿಕವಾಗಿ ತಯಾರಾಗಿ ನಮ್ಮ ಕೈ ಸೇರುವಷ್ಟರಲ್ಲಿ, ಮತ್ತಷ್ಟು ಹೆಚ್ಚು ಸಮಯ ತೆಗೆದುಕೊಂಡರೂ ನಷ್ಟವಿಲ್ಲ; ಗಂಟೆಗಳಿಂದ ಕ್ಷಣಗಳಿಗೆ ಚಾರ್ಜಿಂಗ್ ಸಮಯ ಇಳಿಸುವುದೇನು ಕಡಿಮೆ ಮಾತೇ? ಏಕೆಂದರೆ, ಈ ಬ್ಯಾಟರಿಯ ಸ್ಟೋರೇಜ್ ಕೆಪಾಸಿಟಿ, ಈಗ ಮಾರುಕಟ್ಟೆಯಲ್ಲಿ ಸಿಗುವ ಎಲೆಕ್ಟ್ರಿಕ್ ಕಾರ್ ಬ್ಯಾಟರಿಗಿಂತಲೂ ಸಾವಿರ ಪಟ್ಟು ಹೆಚ್ಚಿಗೆ ಇದೆಯಂತೆ. ಕ್ಷಣದಲ್ಲೇ ಚಾರ್ಜ್ ಆಗುವ ಬ್ಯಾಟರಿಯ ಶಕ್ತಿ, ಸಾಮಾನ್ಯಕ್ಕಿಂತಲೂ ಸಾವಿರಪಟ್ಟು ಹೆಚ್ಚು ಎಂದು ಹೇಳಿದರೆ, 'ಇದೇನು ಕಾಲ್ಪನಿಕವೋ?' ಎನಿಸದಿರದು. ಆದರೆ, ವಿಜ್ಞಾನವು ಎಂದಿಗೂ ಪ್ರಯೋಗಾಧಾರಿತ, ಸಾಕ್ಷ್ಯಾಧಾರಿತ ಎಂಬುದನ್ನು ನೆನಪಿಡೋಣ. ಪ್ರೊ. ಕ್ವಾಚ್ ಮತ್ತು ತಂಡದ ಪ್ರಯೋಗದ ದತ್ತಾಂಶವು ಇದನ್ನೇ ಸಾಬೀತು ಪಡಿಸಿ, ವೈಜ್ಞಾನಿಕ ಜಗತ್ತನ್ನೇ ಆಶ್ಚರ್ಯಚಕಿತಗೊಳಿಸಿದೆ.

ಇಂತಹ ಬ್ಯಾಟರಿಯ ಚಾರ್ಜರ್ ಹೇಗಿರಬಹುದು ಊಹಿಸಿ? ಈ ಕ್ವಾಂಟಂ ಬ್ಯಾಟರಿಯ ಚಾರ್ಜರ್ ವೈರ್‌ಲೆಸ್ ಆಗಿದ್ದು, ಲೇಸರ್ ಬಳಕೆಯಿಂದ ಚಾರ್ಜ್ ಆಗುತ್ತದೆ. ಲೇಸರ್ ಕಿರಣವನ್ನು ಈ ಬ್ಯಾಟರಿಯ ಮೇಲೆ ಹಾಯಿಸಿದಾಗ, ಅದು ಬ್ಯಾಟರಿಯೊಳಗಿನ ಅಣುಗಳ ನಡುವೆ 'ಕ್ವಾಂಟಂ ಎಂಟಾಗಲ್ಮೆಂಟ್' ಸ್ಥಿತಿಯನ್ನು ಸ್ಥಾಪಿಸುತ್ತದೆ; ಅದೇ ಕ್ಷಣದಲ್ಲಿ, ಎಲ್ಲ ಅಣುಗಳೂ ಒಟ್ಟಿಗೇ ಶಕ್ತಿಯನ್ನು ಹೀರಿಕೊಳ್ಳುತ್ತಾ, ಚಾರ್ಜ್ ಆಗಿಬಿಡುತ್ತವೆ. ಈಗ ಒಂದು ಅನ್ನದ ಅಗುಳಿನ ಗಾತ್ರದಲ್ಲಿರುವ ಈ ಕ್ವಾಂಟಂ ಬ್ಯಾಟರಿಯನ್ನು ವಾಣಿಜ್ಯಿಕ ನೆಲೆಗಟ್ಟಿನಲ್ಲಿ ರೂಪಾಂತರಗೊಳಿಸಲಾಗುತ್ತಿದ್ದು, ಮುಂದಿನ ದಿನಗಳಲ್ಲಿ ವಿದ್ಯುತ್ ವಾಹನಗಳಿಗೆ ಮಾತ್ರವಲ್ಲದೇ ವಿದ್ಯುನ್ಮಾನ ಯಂತ್ರಗಳಲ್ಲೂ, ಖಗೋಳಯಾತ್ರೆಗೆ ಬೇಕಾದ ಸಲಕರಣೆಗಳಲ್ಲೂ ಬಳಕೆಯಾಗುವ ಮತ್ತು ಹೊಸ ಸಾಧ್ಯತೆಗಳಿಗೆ ನಾಂದಿಹಾಡುವ ಸಕಲ ಸಾಧ್ಯತೆಗಳೂ ಕಂಡುಬರುತ್ತಿವೆ.



ಮಾತೇ ವ್ಯಾಪಾರದ 'ಏಜೆಂಟ್'



• ಕೃಷ್ಣಭಟ್

ಭಾರತದ ಇ-ಕಾಮರ್ಸ್ ಕ್ಷೇತ್ರಕ್ಕೆ ಒಂದು ಮಹತ್ವದ ಕೊಡುಗೆಯಾಗಬಲ್ಲಂತಹ ಸೌಲಭ್ಯವೊಂದರ ಪ್ರಾತ್ಯಕ್ಷಿಕೆಯನ್ನು 'ಫಿನ್‌ಟೆಕ್' ಕಂಪನಿ ರೇಝರ್‌ಪೇ ಪ್ರದರ್ಶಿಸಿತ್ತು. ಈ ಸೌಲಭ್ಯವನ್ನು ಗಮನಿಸಿದ ಪ್ರೇಕ್ಷಕವೃಂದ ಒಮ್ಮೆ 'ವಾವ್' ಎಂಬ ಉದ್ಗಾರವನ್ನು ವ್ಯಕ್ತಪಡಿಸಿದ್ದನ್ನು ಗಮನಿಸಿದರೆ, ಯುಪಿಐ ಎಂಬ ಸುಲಭ ಪೇಮೆಂಟ್ ಸಿಸ್ಟಮ್ ತಂತ್ರಜ್ಞಾನವನ್ನು ಪರಿಚಯಿಸಿದ ಭಾರತದಲ್ಲಿ ಇದು ಜಾರಿಗೆ ಬರುವುದರಲ್ಲಿ ಯಾವ ಅನುಮಾನವೂ ಇಲ್ಲ ಎನಿಸಿತ್ತು.

ರೇಝರ್‌ಪೇ ಕಂಪನಿಯು ಅಧಿಕಾರಿಗಳು ಪ್ರದರ್ಶಿಸಿದ್ದು ಇಷ್ಟೇ: ವೇದಿಕೆ ಮೇಲೆ ನಿಂತಿರುವ ವ್ಯಕ್ತಿಯೊಬ್ಬ 'ಹೋಟೆಲ್‌ನಿಂದ ನನಗೆ ಒಂದು ಚಹಾ ಮತ್ತು ಸಮೋಸಾ ತರಿಸಿಕೊಡು' ಎಂದು ಸ್ಕ್ರೀನ್‌ಗೆ ಹೇಳಿದ. ಒಂದು ಸೆಕೆಂಡ್ ಪ್ರೊಸೆಸ್ ಆಗುತ್ತಿರುವ ಚಿತ್ರ ಕಾಣಿಸಿತು. ಆ ಮೇಲೆ, 'ಸರಿ! ಪೇಮೆಂಟ್ ಮಾಡುತ್ತೀರಾ?' ಎಂದು ಕೇಳಿತು. 'ಹೌದು' ಎಂದ ತಕ್ಷಣ ಪೇಮೆಂಟ್ ಆಯಿತು.

ಇಲ್ಲಿ ಸ್ಕ್ಯಾನ್ ಮಾಡಬೇಕಿಲ್ಲ, ಚೆಕ್‌ಔಟ್ ಪೇಜ್‌ಗೆ ಹೋಗಬೇಕಿಲ್ಲ, ಯುಪಿಐ ಪಿನ್ ಹಾಕಬೇಕಿಲ್ಲ, ಪೇಮೆಂಟ್ ಆಗಿದೆ ಎಂದು ಯಾರಿಗೂ ಹೇಳಬೇಕಿಲ್ಲ. ಇವೆಲ್ಲ ಪ್ರಕ್ರಿಯೆ ಕೇವಲ ಒಂದು ಸೆಕೆಂಡಿನಲ್ಲಿ ಮುಗಿದುಹೋಗಿತ್ತು!

ಇದೊಂದು ಮ್ಯಾಜಿಕ್ ಟ್ರಿಕ್ ರೀತಿ ಕೆಲಸ ಮಾಡಿತ್ತು. ಇದನ್ನು ನೋಡಿದ ಜನರು ಎದ್ದು ನಿಂತು ಚಪ್ಪಾಳೆ ಹೊಡೆದಿದ್ದರು.

ಇದು ಏಜೆಂಟಿಂಕ್ ಕಾಮರ್ಸ್‌ನ ಚಮತ್ಕಾರ. ಇದರಲ್ಲಿ ನೆರವಾಗಿದ್ದು ಎ.ಐ. ಏಜೆಂಟ್‌ಗಳು ಮತ್ತು ಯುಪಿಐ ವ್ಯವಸ್ಥೆ. ಇವೆರಡರ ಸಮ್ಮಿಳನದಿಂದ ಈ ಅದ್ಭುತ ಸೃಷ್ಟಿಯಾಗಿತ್ತು.

ಯುಪಿಐ ಸರ್ಕಲ್ ಹಾಗೂ ರಿಸರ್ವ್ ಪೇ ಮೇಲೆ ರೇಝರ್‌ಪೇ ಸಂಸ್ಥೆ ಒಂದು 'ಏಜೆಂಟಿಕ್ ಎಐ' ಅನ್ನು ನಿರ್ಮಾಣ ಮಾಡಿದೆ. ಇದರಲ್ಲಿ ಒಂದು ನಿರ್ದಿಷ್ಟ ಮೊತ್ತದ ಹಣವನ್ನು ಸ್ವಯಂಚಾಲಿತವಾಗಿ ಪಾವತಿ ಆಗುವ ಹಾಗೆ ಸೆಟ್ ಮಾಡಿಡಬಹುದು. ಆ ಮೊತ್ತದ ಒಳಗಿನ ಖರೀದಿಗೆ ಪಿನ್ ಹಾಕುವ ಅಗತ್ಯವಿಲ್ಲ. ಇದು ಈ ಇಡೀ ವ್ಯವಸ್ಥೆಯ ಹಿಂದಿನ ಚಾಲಕಶಕ್ತಿ. ಕೆಲವು ದಿನಗಳ ಹಿಂದೆ ಯುಪಿಐ ಸರ್ಕಲ್ ಅನ್ನು ಎನ್‌ಪಿಸಿಐ ಬಿಡುಗಡೆ ಮಾಡಿದಾಗ ಇಂಥದ್ದೊಂದು ಸಾಧ್ಯತೆಯ ಬಗ್ಗೆ ಯಾರೂ ಊಹಿಸಿರಲಿಲ್ಲ. ಆದರೆ, ಈಗ ಇಡೀ ಪೇಮೆಂಟ್ ಸಿಸ್ಟಮ್‌ನಲ್ಲೇ ಒಂದು ಮಹತ್ವದ ಬದಲಾವಣೆಗೆ ಇದು ದಾರಿ ಮಾಡಿಕೊಡುವ ಸಾಧ್ಯತೆ ನಿಚ್ಚಳವಾಗಿದೆ.

ಇಲ್ಲಿ ಇನ್ನೊಂದು ಕುತೂಹಲದ ಸಂಗತಿಯೆಂದರೆ, ಈ ವ್ಯವಸ್ಥೆ ಅಥವಾ ಇಂಥದ್ದೇ ವ್ಯವಸ್ಥೆಯನ್ನು ಅಮೆರಿಕ ಹಾಗೂ ಇತರ ದೇಶಗಳಲ್ಲೂ ಜಾರಿಗೆ ತರುವುದಕ್ಕೆ ಓಪನ್ ಎಐ, ಅಮೆಜಾನ್ ಹಾಗೂ ಇಬೇ ಕಂಪನಿಗಳು ಪ್ರಯತ್ನ ನಡೆಸಿದ್ದವು. ಆದರೆ, ಅಲ್ಲಿನ ಹಣಕಾಸು ವ್ಯವಸ್ಥೆಯಲ್ಲಿರುವ ಅಡೆತಡೆಗಳಿಂದ ಇದು ಸಾಧ್ಯವಾಗಲಿಲ್ಲ. ಇದರಿಂದ ಈ ವ್ಯವಸ್ಥೆಯನ್ನೇ ಸಂಸ್ಥೆಗಳು ಹಿಂಜರಿಯುವ ಪರಿಸ್ಥಿತಿ ಬಂದಿತ್ತು.

ಅಷ್ಟೇ ಅಲ್ಲ, ಈ ಸಂಸ್ಥೆಗಳಿಗೆ ಯುಪಿಐ ಬಳಸಿಕೊಂಡು ಅದರ ಮೇಲೆ ಏಜೆಂಟ್ ನಿರ್ಮಾಣ ಮಾಡಿ, ಗ್ರಾಹಕರಿಗೆ ಅನುಕೂಲ ಒದಗಿಸಿಕೊಡುವ ಮನಸ್ಸಿಲ್ಲ. ಏಕೆಂದರೆ, ಇದರಿಂದ ಇಡೀ ಪೇಮೆಂಟ್ ಸಿಸ್ಟಮ್ ತಮ್ಮ ನಿಯಂತ್ರಣದಿಂದ ಹೊರಗೆ ಹೋಗಿಬಿಡುತ್ತವೆ ಎಂಬ ಆತಂಕವೂ ಇದೆ. ಪೇಮೆಂಟ್ ಕೂಡ ನಮ್ಮ ಪ್ಲಾಟ್‌ಫಾರಂನಲ್ಲೇ ನಡೆಯಬೇಕು. ಅದರಿಂದ ನಮಗೆ ಸಿಗುವ ಡೇಟಾ ಕೂಡ ಮಹತ್ವದ್ದು ಎಂದು ಈ ಸಂಸ್ಥೆಗಳು ಭಾವಿಸುತ್ತವೆ.

ಓಪನ್‌ಎಐ ಉದಾಹರಣೆಯನ್ನೇ ತೆಗೆದುಕೊಳ್ಳೋಣ. ಮೊದಲು ಓಪನ್‌ಎಐ ಶಾಪಿಂಗ್ ಏಜೆಂಟ್ ಒಂದನ್ನು ರೂಪಿಸಿ, ಇನ್‌ಸ್ಟಂಟ್ ಚೆಕ್‌ಔಟ್ ಸೌಲಭ್ಯವನ್ನು ಪರಿಚಯಿಸುತ್ತಿದ್ದೇವೆ ಎಂದು ಘೋಷಿಸಿತು. ತಕ್ಷಣ ಅಮೆರಿಕದ ಎಟ್ಸಿ, ವಾಲ್‌ಮಾರ್ಟ್, ಶಾಪಿಫೈ ಇತ್ಯಾದಿ ಕಂಪನಿಗಳು ಕೈಜೋಡಿಸುವುದಕ್ಕೆ ಮುಂದೆ ಬಂದವು. ಆದರೆ, ಕೆಲವೇ ದಿನಗಳಲ್ಲಿ ಈ ಇನ್‌ಸ್ಟಂಟ್ ಚೆಕ್‌ಔಟ್ ಸೌಲಭ್ಯದ ಬದಲಿಗೆ, 'ಓಪನ್ ಎಐ'ನ ಚಾಟ್‌ಬೋಟ್ ಚಾಟ್‌ಜಿಪಿಟಿಯಲ್ಲಿ ಪ್ರತ್ಯೇಕ ಶಾಪಿಂಗ್ ಆ್ಯಪ್ ಸಿದ್ಧಪಡಿಸಿ, ಅದರ ಚೆಕ್‌ಔಟ್ ಪೇಜ್ ಅನ್ನು ಅವರದೇ ಮೂಲ ವೆಬ್‌ಸೈಟ್‌ಗೆ ಕಳುಹಿಸುವ ಹೊಸ ಯೋಜನೆ ಸಿದ್ಧವಾಯಿತು. ಇದಕ್ಕೆ ಕಾರಣವೇ, ಈ ದೇಶಗಳಲ್ಲಿರುವ ಪೇಮೆಂಟ್ ಸಿಸ್ಟಮ್‌ನ ಸಂಕೀರ್ಣತೆ.

ಆದರೆ, ಇದೆಲ್ಲವನ್ನೂ ಮೀರಿ ಅತ್ಯಂತ ಸುಲಭದ ಹಾಗೂ ಅದ್ಭುತ ಎನಿಸಬಹುದಾದ ಸೌಲಭ್ಯವನ್ನು ಭಾರತದ ಕಂಪನಿ ಬಿಡುಗಡೆ ಮಾಡಿದೆ. ಈ ಫೀಚರ್‌ನಿಂದ ನಾವು ಕನ್ವರ್ಸೇಶನಲ್ ಕಾಮರ್ಸ್‌ನಿಂದ ಏಜೆಂಟಿಕ್ ಕಾಮರ್ಸ್‌ಗೆ ದಾಪುಗಾಲು ಇಟ್ಟಿದ್ದೇವೆ. ಜೊತೆಗೆ, ಈ ವಿಷಯದಲ್ಲಿ ಐರೋಪ್ಯ ದೇಶಗಳಿಗಿಂತ ಒಂದು ಹೆಜ್ಜೆ ಮುಂದೆ ಇಟ್ಟಿದ್ದೇವೆ.

ಬಹುಶಃ ಇನ್ನು ಕೆಲವೇ ವರ್ಷಗಳಲ್ಲಿ ಈ ಏಜೆಂಟಿಕ್ ಕಾಮರ್ಸ್ ಬಳಸಿಕೊಂಡೇ ನಾವು ಶಾಪಿಂಗ್ ಮಾಡುವ ದಿನಗಳು ದೂರವಿಲ್ಲ. ಈ ಸೌಲಭ್ಯ ಯಶಸ್ವಿಯಾಗಿ ಜಾರಿಗೆ ಬರುತ್ತದೆಯೇ ಎಂದು ವಾಣಿಜ್ಯ ವಲಯದ ದಿಗ್ಗಜ ಕಂಪನಿಗಳು ಎದುರು ನೋಡುತ್ತಿವೆ. ಒಂದು ವೇಳೆ ಇದು ಯಶಸ್ವಿಯಾಗಿ ಜಾರಿಗೆ ಬಂದರೆ, ಇಡೀ ವಿಶ್ವ ಈ ಮಾದರಿಯನ್ನು ಅನುಸರಿಸುವುದು ಖಚಿತ.

ಸುರಕ್ಷತೆಯ ಕಳವಳ

ಹಣಕಾಸಿನ ವಿಷಯ ಪ್ರಸ್ತಾಪವಾದ ತಕ್ಷಣವೇ ಅದರಲ್ಲಿ ಸುರಕ್ಷತೆಯ ಅಪಾಯವೂ ಜೊತೆಗೇ ಬರುತ್ತದೆ. ಇಲ್ಲಿ ಒಂದು ಗಮನಿಸಬೇಕಾದ ಸಂಗತಿಯೆಂದರೆ, ಯುಪಿಐ ಸರ್ಕಲ್ ಹಾಗೂ ರಿಸರ್ವ್ ಪೇ ಸೌಲಭ್ಯದಲ್ಲಿ ಪೇಮೆಂಟ್‌ಗೆ ಒಂದು ಮಿತಿ ಇರುತ್ತದೆ. ಅಂದರೆ, ನಾವು ತಿಂಗಳಿಗೆ ₹ 2,000 ನಿಗದಿ ಮಾಡಿದ್ದರೆ, ಅದನ್ನು ಮೀರಿ ಒಂದು ಪೈಸೆಯನ್ನೂ ಪೇಮೆಂಟ್ ಮಾಡಲು ಸಾಧ್ಯವಾಗುವುದಿಲ್ಲ. ಅದೂ ಅಲ್ಲದೆ, ನಮ್ಮ ಪೇಮೆಂಟ್‌ನ ಹವ್ಯಾಸವನ್ನು ಏಜೆಂಟ್‌ಗಳು ಅರ್ಥ ಮಾಡಿಕೊಂಡಿರುತ್ತವೆ. ಉದಾಹರಣೆಗೆ, ನಾವು ಆಗಾಗ್ಗೆ ಯಾವುದೋ ಇ-ಕಾಮರ್ಸ್ ವೆಬ್‌ಸೈಟ್‌ನಿಂದ ಒಂದು ರೇಂಜ್‌ನ ಬಟ್ಟೆ ಬುಕ್ ಮಾಡುತ್ತಿದ್ದರೆ, ಅದನ್ನು ಅವು ಅರ್ಥ ಮಾಡಿಕೊಂಡಿರುತ್ತವೆ. ಒಂದೇ ಬಾರಿಗೆ ನಾವು ಬೇರೆ ಏನನ್ನೋ ಬುಕ್ ಮಾಡುತ್ತಿದ್ದರೆ, ಅದನ್ನು ಈ ಏಜೆಂಟ್‌ಗಳು ಪರಿಶೀಲನೆ ಮಾಡದೇ ಮುಂದೆ ಹೋಗಲು ಕೊಡುವುದಿಲ್ಲ.

ಇಲ್ಲಿ ಕೆಲವೇ ಸೆಕೆಂಡುಗಳಲ್ಲಿ ಎಲ್ಲವೂ ನಡೆದುಹೋಗುತ್ತದೆ ಎಂದು ಎನಿಸಿದರೂ ಅವುಗಳಿಗೆ ಹಣಪಾವತಿಗೆ ಅಗತ್ಯವಿರುವ ಎಲ್ಲ ಸುರಕ್ಷತಾ ಮಾನದಂಡಗಳನ್ನೂ ದಾಟಿಕೊಂಡೇ ಹೋಗಿರುತ್ತದೆ. ಹೀಗಾಗಿ, ಇ-ಕಾಮರ್ಸ್ ಏಜೆಂಟ್‌ನಿಂದ ಸುರಕ್ಷತೆ ವಿಷಯದಲ್ಲಿ ನಮಗೆ ಹೆಚ್ಚಿನ ಅನುಕೂಲವೇ ಆಗಿರುತ್ತದೆ.

'ನೀಟ್' ದಿಕ್ಸೂಚಿ

Biology

8) Given below are two statements: One is labelled as **Assertion A** and the other is labelled as **Reason R:**

Assertion A: The first stage of gametophyte in the life cycle of moss is protonema stage.

Reason R: Protonema develops directly from spores produced in capsule.

In the light of the above statements, choose the most appropriate answer from the options given below:

a) A is not correct but R is correct.
b) Both A and R are correct and R is the correct explanation of A.
c) Both A and R are correct but R is NOT the correct explanation of A.
d) A is correct but R is not correct.

Ans:-b

Expl^n:- Mosses spores released from the capsule germinate to form the filamentous structure called protonema. It is the first stage of gametophyte.

9) Identify the pair of heterosporous pteridophytes among the following:

a) Equisetum and Salvinia
b) Lycopodium and Selaginella
c) Selaginella and Salvinia
d) Psilolum and Salvinia

Ans:- C

Expl^n:- Genera like Selaginella and Salvinia which produce two kinds of spores, macro (large) and micro (small) spores, are known as heterosporous

10) Family Fabaceae differs from Solanaceae and Liliaceae. With respect to the stamens, pick out the characteristics specific to family Fabaceae but not found in Solanaceae or Liliaceae.

a) Epiphyllous and Dithecous anthers
b) Diadelphous and Dithecous anthers
c) Polyadelphous and epipetalous stamens
d) Monoadelphous and Monothecous anthers

Ans:- (b)

Expl^n:- In fabaceae family the filaments of nine stamen are united into one bundle and tenth posterior stamen stand apart (diadelphous condition). Anther in fabaceae is of two lobes or two theca thus called dithecous anther. These two characteristics are present in the members of fabaceae family but not found in members of solanacea or liliaceae family. Androecium: ten, diadelphous, anther dithecous

11) Eco RI cleaves the DNA strands to produce

a) Blunt ends b) sticky ends
c) satellite ends d) ori replication end

Ans:- b;

Expln- Eco RI comes from Escherichia coli RY 13. It is a sticky end type cutting restriction enzyme. It recognises the base sequence of G ↓ AATTC on the DNA strand and cleave at the site to produce DNA fragments. These fragments have sticky ends which can be joined easily with other fragment carrying complementary sticky ends.

12) Statement I:- Women are at the peak of conception on the 14th day of ovulation.

Statement II:- Vasectomy is the method normally employed to avoid conception in females.

a) I is wrong, II is right
b) I is right, II is wrong
c) Both I and II are right
d) Both I and II wrong

Ans:- b;

Expln- Both LH and FSH hormones attain a peak level in the middle of menstrual cycle (about 14th day). The rapid secretion of LH leading to maximum level during the mid-cycle called LH surge induces rupture of Graafian follicle and thereby releasing the ovum (ovulation)

It the ovum meets sperm during this time, conception can occur. Vasectomy is the contraception method used in males.

13) What is the name of the blood vessel that carries deoxygenated blood from the body to the heart in a frog?

(a) Aorta (b) Pulmonary artery
(c) Pulmonary vein (d) Vena cava

Ans : (d)

Expln:- Frog's heart is a muscular structure with three chambers. It receives deoxygenated blood from body parts through the major veins called vena cava. Vena cava carries deoxygenated blood. Aorta and pulmonary vein carries oxygenated blood. Whereas, pulmonary artery will carry deoxygenated blood towards the lungs

14) Which taxonomic term may be suggested for any rank in the classification?

a) Class b) order
c) Species d) Taxon

Ans:- d;

Expln- Each category of classification is a part of overall taxonomic arrangement, it is called taxonomic category.

Each taxonomic category referred to as a unit of classification and represent a rank and commonly termed as taxon (pl).

15) Which of the following is *not* the function of insulin?

a) increase the oxidation of glucose in the cells
b) increases the permeability of cell membrane to glucose
c) initiates the formation of hepatic glycogen from excess of glucose
d) initiates the conversion of glycogen to glucose

Ans:- d;

ಎಸ್ಎಸ್ಎಲ್‌ಸಿ-ಪಿಯುಸಿ ಪರೀಕ್ಷೆ ದಿಕ್ಸೂಚಿ

ಪಿಯುಸಿ/ಸಿಇಟಿ ದಿಕ್ಸೂಚಿ

CHEMISTRY

MULTIPLE CHOICE QUESTIONS


29) Propanone and Propanal are

(A) Position isomers (B) Functional isomers
(C) Chain isomers (D) Geometrical isomers

Ans. B

Expln:- Propanone and Propanal are functional isomers

30) But-1-yne on reaction with dil.H_2SO_4 in presence of Hg^{2+} ions at 333K gives



Ans. A


Expln:

$$CH_3-CH_2-C\equiv CH + H_2O \xrightarrow[H_2SO_4]{Hg^{+2}} CH_3-CH_2-\underset{\underset{OH}{|}}{C}=CH_2$$

Tautamerises ⇅

$$CH_3-CH_2-\overset{\overset{O}{\|}}{C}-CH_3$$

(or)



31) The IUPAC name of $[Pt(NH_3)_4][PtCl_4]$ is:

a) Tetra ammine palatinate (0) tetra chloride platinum (IV)
b). Tetra ammine platinum (II) tetra chloride palatinate (II)
c) Tetra ammine platinum (0) tetra chloride platinum (IV)
d) Tetra ammine palatinate (II) tetra chloride platinum (II)

Ans: (d)

Expln:- The coordination complex must be neutral. In all the options, the oxidation states of Pt are given such that we get an overall neutral complex. Again, while naming a complex, the cationic part should be named first followed by the anionic part. While naming the anionic part, the name of the metal should end with the suffix –ate. From this, we can conclude that the IUPAC name of $[Pt(NH_3)_4][PtCl_4]$ can be either (A) or (D). But the most common oxidation state of Pt is +2 and +4 and in both the parts of the complex, Pt has the same coordination number

32) Which of the following pairs of ions are isoelectronic and is isostructural?

a) CO_3^{2-}, NO_3^- b) ClO_3^-, CO_3^{2-}
c) SO_3^{2-}, NO_3^- d) ClO_3^-, SO_3^{2-}

Ans:-a

33) Affinity for hydrogen decreases in the group from fluorine to iodine. Which of the halogen acids should have highest bond dissociation enthalpy?

a) HF b) HCL
c) HBr d) HI

Ans:a

34) Bond dissociation enthalpy of E-H (E = element) bonds is given below. Which of the compounds will act as strongest reducing agent?

Compound	NH_3	PH_3	AsH_3	SbH_3
Δ_{diss} (E-H)/kJ mol^{-1}	389	322	297	255

a) NH_3 b) PH_3
c) AsH_3 d) SbH_3

Ans:-d

35) On heating with concentrated NaoH solution in an inert atmosphere of CO_2, white phosphorus gives a gas. Which of the following statement is incorrect about the gas?

a) It is highly poisonous and has smell like fish.
b) It's solution in water decomposes in the presence of light.
c) It is more basic than NH_3.
d) It is less basic than NH_3.

Ans:-C

36) Which of the following acids forms three series of salts?

a) H_3PO_2 b) H_3BO_3
c) H_3PO_4 d) H_3PO_3

Ans:-C

37) Strong reducing behaviour of H_3PO_2 is due to

a) Low oxidation state of phosphorus
b) Presence of two-OH groups and one P-H bond
c) Presence of one –OH group and two P-H bonds
d) High electron gain enthalpy of phosphorus

Ans:-C

38) On heating lead nitrate forms oxides of nitrogen and lead. The oxides formed are ________.

a) N_2O, PbO b) NO_2, PbO
c) NO, PbO d) NO, PbO_2

Ans:-b

39) Which of the following elements does not show allotropy?

a) Nitrogen b) Bismuth
c) Antimony d) Arsenic

Ans:-a

40) Maximum covalency of nitrogen is ______.

a) 3 b) 5
c) 4 d) 6

Ans:-C

41) Which of the following statements is wrong?

a) Single N-N bond is stronger than the single P-P bond.
b) PH_3 can act as a ligand in the formation of coordination compound with transition elements.
c) NO_2 is paramagnetic in nature.
d) Covalency of nitrogen in N_2O_5 is four.

Ans:-a

‘ಗೃಹಲಕ್ಷ್ಮಿ: ಲೂಟಿ ಆಗಿದ್ದರೆ ದಾಳಿ ಆಗುತ್ತಿತ್ತು’

ಸಚಿವೆ ಲಕ್ಷ್ಮೀ ಹೆಬ್ಬಾಳಕರ ಹೇಳಿಕೆ

ಸಾಧಕಿಯರಿಗೆ ‘ಕಿತ್ತೂರು ರಾಣಿ ಚನ್ನಮ್ಮ ಪ್ರಶಸ್ತಿ’ ಪ್ರದಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಗೃಹಲಕ್ಷ್ಮಿ ಯೋಜನೆಯಡಿ ₹5 ಸಾವಿರ ಕೋಟಿ ಹಣವನ್ನು ಕಾಂಗ್ರೆಸ್ ಸರ್ಕಾರ ಲೂಟಿ ಮಾಡಿದೆಯೆಂದು ಬಿಜೆಪಿ ಮುಖಂಡರು ಆರೋಪಿಸಿದರು. ಯೋಜನೆಯ ಹಣ ಸ್ವಲ್ಪ ಹೆಚ್ಚು ಕಡಿಮೆಯಾಗಿದ್ದರೂ ಮೋದಿ ಸರ್ಕಾರದ ಜಾರಿ ನಿರ್ದೇಶನಾಲಯ (ಇ.ಡಿ) ನನ್ನ ಮನೆ ಬಾಗಿಲಿಗೆ ಬಂದು ನಿಲ್ಲುತ್ತಿತ್ತು’ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳಕರ ಹೇಳಿದರು.

ಮಂಗಳವಾರ ಹಮ್ಮಿಕೊಂಡಿದ್ದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಸಮಾರಂಭದಲ್ಲಿ ಸಾಧಕಿಯರಿಗೆ ‘ಕಿತ್ತೂರು ರಾಣಿ ಚನ್ನಮ್ಮ ಪ್ರಶಸ್ತಿ’ ಪ್ರದಾನ ಮಾಡಿ, ಮಾತನಾಡಿದರು.

‘ಆರ್ಥಿಕ ಇಲಾಖೆಯಿಂದ ಅನುಮೋದನೆ ಸಿಗದ ಕಾರಣ, 2025ರ ಫೆಬ್ರುವರಿ ಮತ್ತು ಮಾರ್ಚ್ ತಿಂಗಳ ಗೃಹಲಕ್ಷ್ಮಿ ಹಣ ಫಲಾನುಭವಿಗಳ ಖಾತೆಗೆ ಜಮೆ ಆಗಿರಲಿಲ್ಲ. ಪ್ರಾಮಾಣಿಕತೆಯಿಂದ ಕೆಲಸ ಮಾಡುತ್ತಿರುವ ಸಂದರ್ಭದಲ್ಲಿ, ಸಾಮಾಜಿಕ ಜಾಲತಾಣದಲ್ಲಿ ₹5 ಸಾವಿರ ಕೋಟಿಯ ಕಳ್ಳಿ ಎಂದು ಬಿಜೆಪಿಯವರು ನನ್ನನ್ನು ಜರೆದರು. ಮಾತಿನ ಚಪಲದಿಂದ ವಾಸ್ತವ ತಿಳಿದುಕೊಳ್ಳದೆ ದೂರಿದರು. ಯೋಜನೆಯಡಿ ಕಳೆದ ತಿಂಗಳ ಹಣ ಬಿಡುಗಡೆಗೂ ಆರ್ಥಿಕ ಇಲಾಖೆ ಅನುಮೋದನೆ ದೊರೆತಿದೆ’ ಎಂದು ಹೇಳಿದರು.

‘ಈಗ ಸಮಾಜದಲ್ಲಿ ಮಹಿಳೆಯರ ಬಗೆಗಿನ ದೃಷ್ಟಿಕೋನ ಬದಲಾಗುತ್ತಿದೆ ಹಿಂದೆ ಮಹಿಳೆ ಮನೆಯಿಂದ ಹೊರ ಬಂದರೆ ಹಲವರು ಅವರ ಬಗ್ಗೆ ಮಾತನಾಡುತ್ತಿದ್ದರು. ಈಗ ಪುರುಷರು ಸಹ ಬೆಂಬಲಿಸುತ್ತಿದ್ದಾರೆ. ಗಂಡು ಮಗುವಿನ ರೀತಿಯೆ ಹೆಣ್ಣು ಮಗುವನ್ನೂ ಕಂಡು, ಹಕ್ಕನ್ನು ನೀಡುತ್ತಿದ್ದಾರೆ’ ಎಂದು ಅಭಿಪ್ರಾಯಪಟ್ಟರು.

ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ ಅಧ್ಯಕ್ಷೆ ಪದ್ಮಾವತಿ, ‘ಮಹಿಳೆಯು ದೀಪದ ರೀತಿಯಾಗಿದ್ದು, ತಾನು ಉರಿದು ಬೇರೆಯವರಿಗೆ ಬೆಳಕು ನೀಡುತ್ತಾಳೆ. ಇತ್ತೀಚೆಗೆ ಎಲ್ಲ ರಂಗದಲ್ಲಿಯೂ ಮಹಿಳೆಯರು ಛಾಪು ಮೂಡಿಸುತ್ತಿದ್ದಾರೆ’ ಎಂದರು.

ಬಾಲವಿಕಾಸ ಅಕಾಡೆಮಿ ಅಧ್ಯಕ್ಷ ಅಡಿವೇಶ ಗಿರೆಪ್ಪಾ ಇಟಗಿ, ಇಲಾಖೆ ಕಾರ್ಯದರ್ಶಿ ಶಮ್ಲಾ ಇಕ್ಬಾಲ್, ನಿರ್ದೇಶಕ ಮಹೇಶ್ ಬಾಬು ಹಾಗೂ ಬಾಲಭವನ ಸೊಸೈಟಿ ಕಾರ್ಯದರ್ಶಿ ನಿಶ್ಚಲ್ ಎಚ್. ಉಪಸ್ಥಿತರಿದ್ದರು.

‘ಚನ್ನಮ್ಮ ಪ್ರಶಸ್ತಿ’ಗೆ ಆಯ್ಕೆಯಾದ ಸಂಸ್ಥೆಗಳು	
ಸಂಸ್ಥೆಯ ಹೆಸರು	ಜಿಲ್ಲೆ
ಸಹ್ಯಾದ್ರಿ ಸಮುದಾಯ ಅಭಿವೃದ್ಧಿ ಮತ್ತು ಮಹಿಳಾ ಸಶಕ್ತೀಕರಣ ಸಂಸ್ಥೆ	ಉತ್ತರ ಕನ್ನಡ
ಪರಮೇಶ್ವರಿ ಮಹಿಳಾ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿ	ಬಾಗಲಕೋಟೆ
ಪರಿಸರ ರೂರಲ್ ಡೆವಲಪ್‌ಮೆಂಟ್ ಸೊಸೈಟಿ	ಮಂಡ್ಯ
ಕಾಮಧೇನು ಸಂಜೀವಿನಿ ಮಹಿಳಾ ಸ್ವಸಹಾಯ ಸಂಘ	ಧಾರವಾಡ
ರಂಗ ಸಮಾಜ ಸಾಂಸ್ಕೃತಿಕ ಸಂಸ್ಥೆ	ಬೆಂಗಳೂರು
ಪತಂಜಲಿ ಯೋಗ ಮತ್ತು ಪ್ರಕೃತಿ ಸಂಸ್ಥೆ	ಶಿವಮೊಗ್ಗ
ಸರ್ವೋದಯ ಇಂಟಗ್ರೇಟೆಡ್ ರೂರಲ್ ಡೆವಲಪ್‌ಮೆಂಟ್ ಆ್ಯಕ್ಷನ್	ಗದಗ

ಸ್ತ್ರೀಶಕ್ತಿ ಗುಂಪುಗಳಿಗೆ ಪ್ರಶಸ್ತಿ

ಅತ್ಯುತ್ತಮವಾಗಿ ಕಾರ್ಯನಿರ್ವಹಿಸುತ್ತಿರುವ ಬಾಗಲಕೋಟೆಯ ವೈಭವಲಕ್ಷ್ಮಿ ಮಹಿಳಾ ಸ್ವಸಹಾಯ ಸಂಘ (₹50 ಸಾವಿರ ನಗದು), ದಾವಣಗೆರೆಯ ಬನಶಂಕರಿ ಮಹಿಳಾ ಸ್ವಸಹಾಯ ಸಂಘ (₹30 ಸಾವಿರ ನಗದು), ಕಲಬುರಗಿಯ ರೇಣುಕಾಂಬೆ ಮಹಿಳಾ ಸ್ವಸಹಾಯ ಸಂಘ (₹20 ಸಾವಿರ ನಗದು) ಹಾಗೂ ಬೆಂಗಳೂರಿನ ಅನ್ನಪೂರ್ಣೇಶ್ವರಿ ಮಹಿಳಾ ಸ್ವಸಹಾಯ ಸಂಘಕ್ಕೆ (₹20 ಸಾವಿರ ನಗದು) ‘ಶ್ರೀಮತಿ ಯಶೋಧರಮ್ಮ ದಾಸಪ್ಪ ರಾಜ್ಯಮಟ್ಟದ ಪ್ರಶಸ್ತಿ’ ಪ್ರದಾನ ಮಾಡಲಾಯಿತು.

ಬೆಂಗಳೂರಿನ ವಿನಾಯಕನಗರ ಸ್ತ್ರೀಶಕ್ತಿ ಸಂಘ, ಗದಗದ ಆದಿಶಕ್ತಿ ಸ್ತ್ರೀಶಕ್ತಿ ಸ್ವಸಹಾಯ ಗುಂಪು, ಉಡುಪಿಯ ಕೀರ್ತಿ ಸ್ತ್ರೀಶಕ್ತಿ ಸ್ವಸಹಾಯ ಸಂಘ ಹಾಗೂ ಯಾದಗಿರಿಯ ರಾಣಿ ಚೆನ್ನಮ್ಮ ಸ್ತ್ರೀಶಕ್ತಿ ಗುಂಪಿಗೆ ‘ಶ್ರೀಮತಿ ಯಶೋಧರಮ್ಮ ದಾಸಪ್ಪ ವಿಭಾಗೀಯ ಮಟ್ಟದ ಪ್ರಶಸ್ತಿ’ ವಿತರಿಸಲಾಯಿತು. ಈ ಪ್ರಶಸ್ತಿ ತಲಾ ₹25 ಸಾವಿರ ನಗದು ಒಳಗೊಂಡಿದೆ.



ಸಮಾರಂಭದಲ್ಲಿ ಸಾಧಕಿಯರಿಗೆ ‘ಕಿತ್ತೂರು ರಾಣಿ ಚೆನ್ನಮ್ಮ ಪ್ರಶಸ್ತಿ’ ಪ್ರದಾನ ಮಾಡಲಾಯಿತು. ನಿಶ್ಚಲ್ ಬಿ.ಎಚ್., ಮಹೇಶ್ ಬಾಬು, ಪದ್ಮಾವತಿ, ಲಕ್ಷ್ಮೀ ಹೆಬ್ಬಾಳಕರ, ಶಮ್ಲಾ ಇಕ್ಬಾಲ್, ಅಡಿವೇಶ ಗಿರಪ್ಪಾ ಇಟಗಿ ಉಪಸ್ಥಿತರಿದ್ದರು – ಪ್ರಜಾವಾಣಿ ಚಿತ್ರ

23 ಮಹಿಳೆಯರಿಗೆ ಪ್ರಶಸ್ತಿ

ಮಹಿಳೆಯರ ಅಭಿವೃದ್ಧಿ, ಕಲೆ, ಸಾಹಿತ್ಯ, ಕ್ರೀಡೆ ಮತ್ತು ಶಿಕ್ಷಣ ಕ್ಷೇತ್ರದಿಂದ 23 ಮಹಿಳೆಯರಿಗೆ ‘ಕಿತ್ತೂರು ರಾಣಿ ಚನ್ನಮ್ಮ ಪ್ರಶಸ್ತಿ’ ಪ್ರದಾನ ಮಾಡಲಾಯಿತು. ಮಹಿಳೆಯರ ಅಭಿವೃದ್ಧಿಗೆ ಬೆಂಗಳೂರಿನ ಅಂಬಿಕಾ ಸಿ., ಸುವರ್ಣ ಅಮರನಾಥನ್, ಕೋಲಾರದ ರತ್ನಮ್ಮ ಎ.ವಿ., ತುಮಕೂರಿನ ವಸಂತಾ ಮುರಳಿ, ಧಾರವಾಡದ ಅಮೃತಾ ಶ್ರೀಕಾಂತ ಜೋಶಿ, ಹಾವೇರಿಯ ಉಮಾ ವಿಜಯಕುಮಾರ, ಮಂಡ್ಯದ ರತ್ನಮ್ಮ ವೈ.ಎಚ್., ಬಿ.ಎಸ್. ವಿಶಾಲಾಕ್ಷ್ಮಿ ಹಾಗೂ ಕೊಡಗಿನ ಕುಸುಮವತಿ ಪಿ.ಎಸ್. ಅವರು ಪ್ರಶಸ್ತಿ ಸ್ವೀಕರಿಸಿದರು.

ಕಲಾ ಕ್ಷೇತ್ರದಿಂದ ಶಿವಮೊಗ್ಗದ ಎಚ್. ಶಾಂತಾ ಆನಂದ್, ಧಾರವಾಡದ ಅನ್ನಪೂರ್ಣ ಬಿ. ಹೊಸಮನಿ, ಗೀತಾ ಚಿಕ್ಕಮಠ, ಬೆಳಗಾವಿಯ ಕೆ.ಎಂ. ರೋಹಿಣಿ, ಚಿಕ್ಕಮಗಳೂರಿನ ಕೆ.ಎಚ್. ಸುಮಿತ್ರಾ, ಉಡುಪಿಯ ವಾಸಂತಿ ಜಿ., ವಿಜಯನಗರದ ಅನುರಾಧ ವಿ. ಚನ್ನನಗೌಡ, ಕೊಪ್ಪಳದ ಲಲಿತಮ್ಮ, ಸಾಹಿತ್ಯ ಕ್ಷೇತ್ರದಿಂದ ದಾವಣಗೆರೆಯ ಎ.ಆರ್. ವತ್ಸಲ ರಘುನಾಥ್, ಗದಗದ ಭಾಗ್ಯಶ್ರೀ ಗವಿಸಿದ್ದಯ್ಯ, ಬಳ್ಳಾರಿಯ ಭ್ರಮರಾಂಭ ಯಾಟೆ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಕ್ರೀಡಾ ಕ್ಷೇತ್ರದಿಂದ ಬೆಂಗಳೂರಿನ ಸಂಧ್ಯಾ ಯು. ಪ್ರಭು, ಉಡುಪಿಯ ಅಕ್ಷತಾ ಪೂಜಾರಿ ಬೋಳ ಹಾಗೂ ಶಿಕ್ಷಣ ಕ್ಷೇತ್ರದಿಂದ ಬೀದರ್‌ನ ಮಲ್ಲಮ್ಮ ರಾಮಲಿಂಗೇಶ್ವರ ಪಾಟೀಲ ಅವರಿಗೆ ಪ್ರಶಸ್ತಿ ವಿತರಿಸಲಾಯಿತು.

ಇದೇ ವೇಳೆ ಏಳು ಸಂಸ್ಥೆಗಳಿಗೆ (ತಲಾ ₹50 ಸಾವಿರ ನಗದು), ಕಲೆ, ಶಿಕ್ಷಣ ಸೇರಿ ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದ 23 ಮಹಿಳೆಯರಿಗೆ (ತಲಾ ₹25 ಸಾವಿರ ನಗದು) ‘ಕಿತ್ತೂರು ರಾಣಿ ಚೆನ್ನಮ್ಮ ಪ್ರಶಸ್ತಿ’ ವಿತರಿಸಲಾಯಿತು. ಎಂಟು ಸ್ತ್ರೀ ಶಕ್ತಿ ಗುಂಪುಗಳಿಗೆ ‘ಯಶೋಧರಮ್ಮ ದಾಸಪ್ಪ ಪ್ರಶಸ್ತಿ’ಯನ್ನು ಪ್ರದಾನ ಮಾಡಲಾಯಿತು. ಈ ಬಹುಮಾನ ₹20 ಸಾವಿರದಿಂದ ₹50 ಸಾವಿರದವರೆಗಿನ ನಗದು ಒಳಗೊಂಡಿದೆ.

‘ರಣವೀರ್ ಕ್ಷಮೆ ಕೇಳಿದ್ದಾರೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕಾಂತಾರ ಚಾಪ್ಟರ್-1 ಚಿತ್ರದ ದೈವಪಾತ್ರವನ್ನು ಅಣಕಿಸಿದ ಆರೋಪ ಎದುರಿಸುತ್ತಿರುವ ಬಾಲಿವುಡ್ ನಟ ರಣವೀರ್ ಸಿಂಗ್ ಈಗಾಗಲೇ ‘ಎಕ್ಸ್’ ಮೂಲಕ ಸಾರ್ವಜನಿಕ ಕ್ಷಮೆ ಯಾಚಿಸಿದ್ದಾರೆ’ ಎಂದು ರಣವೀರ್ ಸಿಂಗ್ ಪರ ಹಿರಿಯ ವಕೀಲರು ಹೈಕೋರ್ಟ್‌ಗೆ ಅರುಹಿದರು.

‘ನನ್ನ ವಿರುದ್ಧ ನಗರದ ಮ್ಯಾಜಿಸ್ಟ್ರೇಟ್ ಕೋರ್ಟ್‌ನಲ್ಲಿ ದಾಖಲಾಗಿರುವ ಖಾಸಗಿ ದೂರು ಮತ್ತು ಹೈಗ್ರೌಂಡ್ಸ್ ಠಾಣೆ ಪೊಲೀಸರು ದಾಖಲಿಸಿರುವ ಎಫ್‌ಐಆರ್ ರದ್ದುಪಡಿಸಬೇಕು’ ಎಂದು ಕೋರಿ ಬಾಲಿವುಡ್ ನಟ ರಣವೀರ್ ಸಿಂಗ್ ಸಲ್ಲಿಸಿರುವ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ರಣವೀರ್ ಸಿಂಗ್ ಪರ ಸುಪ್ರೀಂ ಕೋರ್ಟ್‌ನ ಪದಾಂಕಿತ ಹಿರಿಯ ವಕೀಲ ಸಜನ್ ಪೂವಯ್ಯ ಅವರು, ‘ಅರ್ಜಿದಾರರು ಈಗಾಗಲೇ ಎಕ್ಸ್ ಮೂಲಕ ಕ್ಷಮೆ ಯಾಚಿಸಿದ್ದಾರೆ ಮತ್ತು ಚಾಮುಂಡಿ ಬೆಟ್ಟಕ್ಕೂ ಭೇಟಿ ನೀಡಲಿದ್ದಾರೆ’ ಎಂದು ವಿವರಿಸಿದರು.

> ನಟರು ಎಲ್ಲರ ಮೇಲೂ ಹೆಚ್ಚಿನ ಪ್ರಭಾವ ಬೀರುವ ಶಕ್ತಿ ಹೊಂದಿರುತ್ತಾರೆ. ಪ್ರಮಾದ ಆದಾಗ ಪಶ್ಚಾತ್ತಾಪ ವ್ಯಕ್ತಪಡಿಸುವ ಮನಸ್ಸು ಹೊಂದಿರಬೇಕು
> **ನ್ಯಾ.ಎಂ.ನಾಗಪ್ರಸನ್ನ**

ಇದಕ್ಕೆ ದೂರುದಾರರ ಪರ ಹೈಕೋರ್ಟ್ ವಕೀಲ ಶಿಜಿ ಮಲೆಯಾಳಿ ಅವರು, ‘ರಣವೀರ್ ಕ್ಷಮೆ ಕೇಳಿರುವುದು ಸಾಕಾಗುವುದಿಲ್ಲ. ಅವರ ಮ್ಯಾನೇಜರ್‌ಗಳು ಪೋಸ್ಟ್ ಮಾಡಿದ್ದಾರೆ’ ಎಂದು ಆಕ್ಷೇಪಿಸಿದರು.

‘ರಣವೀರ್ ಸಿಂಗ್ ಮೌಖಿಕವಾಗಿ ದೈವಕ್ಕೆ ಅಪಮಾನ ಮಾಡಿರುವುದರಿಂದ ಅವರು ಮೌಖಿಕವಾಗಿಯೇ ಕ್ಷಮೆ ಕೋರಬೇಕು. ಚಾಮುಂಡಿ ಬೆಟ್ಟಕ್ಕೆ ಸಜನ್ ಪೂವಯ್ಯ ಅವರ ಜೊತೆ ಹೋಗಿ ರಣವೀರ್ ಅಲ್ಲಿಯೇ ಕ್ಷಮೆ ಕೋರಲಿ’ ಎಂದರು. ಇದನ್ನು ಒಪ್ಪದ ಪೀಠ ಅರ್ಜಿದಾರರ ಪರ ವಕೀಲರ ಮನವಿಗೆ ಸ್ಪಂದಿಸಿ ಮಧ್ಯಂತರ ಆದೇಶ ವಿಸ್ತರಿಸಿ ವಿಚಾರಣೆ ಮುಂದೂಡಿತು.

ತಿಮರೋಡಿ ಗಡಿಪಾರಿಗೆ ತಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮಹೇಶ್ ಶೆಟ್ಟಿ ತಿಮರೋಡಿ ಅವರನ್ನು ದಕ್ಷಿಣ ಕನ್ನಡ ಜಿಲ್ಲೆಯಿಂದ ರಾಯಚೂರಿನ ಮಾನ್ವಿ ತಾಲ್ಲೂಕಿಗೆ ಗಡಿಪಾರು ಮಾಡಿ ಮೂರನೇ ಬಾರಿಗೆ ಹೊರಡಿಸಲಾಗಿರುವ ಆದೇಶವನ್ನು ಇದೇ 26ರವರೆಗೆ ಜಾರಿಗೊಳಿಸಬಾರದು’ ಎಂದು ಹೈಕೋರ್ಟ್ ಮಧ್ಯಂತರ ಆದೇಶ ಹೊರಡಿಸಿದೆ.

ಈ ಸಂಬಂಧ ಮಹೇಶ್ ಶೆಟ್ಟಿ ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಸಚಿನ್ ಶಂಕರ್ ಮಗದುಂ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ಅರ್ಜಿದಾರರ ಪರ ಹೈಕೋರ್ಟ್ ವಕೀಲ ಎಂ.ಆರ್.ಬಾಲಕೃಷ್ಣ ಅವರ ವಾದ ಆಲಿಸಿದ ನ್ಯಾಯಪೀಠ, ಮಹೇಶ್ ಶೆಟ್ಟಿ ವಿರುದ್ಧದ ಗಡಿಪಾರು ಆದೇಶವನ್ನು ಇದೇ 26ರವರೆಗೆ ಅನುಷ್ಠಾನಗೊಳಿಸದಂತೆ ಸರ್ಕಾರಕ್ಕೆ ನಿರ್ದೇಶಿಸಿತು.

ಪ್ರತಿವಾದಿಗಳಾದ ರಾಜ್ಯ ಗೃಹ ಇಲಾಖೆ ಕಾರ್ಯದರ್ಶಿ, ಪುತ್ತೂರು ಉಪ ವಿಭಾಗಾಧಿಕಾರಿ, ಬಂಟ್ವಾಳ ಡಿವೈಎಸ್‌ಪಿ ಮತ್ತು ಬೆಳ್ತಂಗಡಿ ಪೊಲೀಸ್ ಠಾಣೆಯ ಸಬ್ ಇನ್‌ಸ್ಪೆಕ್ಟರ್‌ಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ ವಿಚಾರಣೆ ಮುಂದೂಡಿತು.

ಸಂಕ್ಷಿಪ್ತ ಸುದ್ದಿ

ಮಾಜಿ ಶಾಸಕನ ಪುತ್ರನ ಶವ ಸುಟ್ಟಸ್ಥಿತಿಯಲ್ಲಿ ಪತ್ತೆ

ಧಾರವಾಡ: ತಾಲ್ಲೂಕಿನ ರಾಮಾಪುರದ ರೈಲ್ವೆ ಹಳಿ ಬಳಿ ನಿರ್ಜನ ಪ್ರದೇಶದಲ್ಲಿ ಮಂಗಳವಾರ ಕಾರಿನಲ್ಲಿ, ಬೆಳಗಾವಿ ಜಿಲ್ಲೆಯ ಬೈಲಹೊಂಗಲದ ಮಾಜಿ ಶಾಸಕ ಬಾಬುರಾವ್ ಬೋಳಶೆಟ್ಟಿ ಪುತ್ರ ರಾಜು ಬೋಳಶೆಟ್ಟಿ (54) ಅವರ ಶವ ಸುಟ್ಟ ಸ್ಥಿತಿಯಲ್ಲಿ ಪತ್ತೆ ಆಗಿದೆ.

‘ರಾಜು ಬೈಲಹೊಂಗಲ ತಾಲ್ಲೂಕಿನ ಉಡಿಕೇರಿ ಗ್ರಾಮದವರು. ಸೋಮವಾರ ರಾತ್ರಿಯಾದರೂ ಹಿಂದಿರುಗಿರಲಿಲ್ಲ’ ಎಂದು ಪೊಲೀಸರು ತಿಳಿಸಿದ್ದಾರೆ.

‘ರಾಜು ಶವ ಸುಟ್ಟಸ್ಥಿತಿಯಲ್ಲಿ ಪತ್ತೆಯಾಗಿದೆ. ಡಿಎನ್‌ಎ ಪರೀಕ್ಷೆ ಮಾಡಿಸಲಾಗುವುದು. ಕೃತ್ಯದ ಕಾರಣ ಗೊತ್ತಾಗಿಲ್ಲ. ದುಷ್ಕರ್ಮಿಗಳು ಕಾರಿಗೆ ಬೆಂಕಿ ಹಚ್ಚಿ ಕೊಲೆ ಮಾಡಿದ್ದಾರೆಯೇ ಎಂಬ ದಿಕ್ಕಿನಲ್ಲೂ ತನಿಖೆ ನಡೆಸಿದ್ದೇವೆ’ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಗುಂಜನ್ ಆರ್ಯ ತಿಳಿಸಿದರು.

ಅಲೆಮಾರಿ ಒಕ್ಕೂಟದಿಂದ 27ರಂದು ಸತ್ಯಾಗ್ರಹ

ಬೆಂಗಳೂರು: ಅಸ್ಪೃಶ್ಯ ಅಲೆಮಾರಿ ಸಮುದಾಯಗಳಿಗೆ ಶೇ 1ರಷ್ಟು ಮೀಸಲಾತಿ ನೀಡುವ ಜತೆಗೆ ಪ್ರತ್ಯೇಕ ನಿಗಮ ಸ್ಥಾಪಿಸಲು ಆಗ್ರಹಿಸಿ ಮಾರ್ಚ್ 27ರಂದು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಉಪವಾಸ ಸತ್ಯಾಗ್ರಹ ಹಮ್ಮಿಕೊಳ್ಳಲಾಗಿದೆ.

ಕರ್ನಾಟಕ ಅಸ್ಪೃಶ್ಯ ಅಲೆಮಾರಿ ಸಮುದಾಯಗಳ ಒಕ್ಕೂಟದ ಅಧ್ಯಕ್ಷ ಶೇಷಪ್ಪ ಅಂದೋಳು ಅಧ್ಯಕ್ಷತೆಯಲ್ಲಿ ಗಾಂಧಿ ಭವನದಲ್ಲಿ ನಡೆದ ಏಕತಾ ಸಭೆಯಲ್ಲಿ ಈ ತೀರ್ಮಾನ ಕೈಗೊಳ್ಳಲಾಗಿದೆ.

‘49 ಅಸ್ಪೃಶ್ಯ ಅಲೆಮಾರಿಗಳನ್ನು ಪ್ರವರ್ಗ ‘ಎ’ನಲ್ಲಿ ಸೇರಿಸಿ ಶೇ 1ರಷ್ಟು ಮೀಸಲಾತಿ ನೀಡಬೇಕು. ಈ ಹಿಂದೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ.ಮಹದೇವಪ್ಪ ಅವರು ನೀಡಿರುವ ಭರವಸೆಯನ್ನು ಈಡೇರಿಸಬೇಕು. ಮೀಸಲಾತಿ ಜತೆಗೆ ಅಲೆಮಾರಿಗಳ ಅಭಿವೃದ್ಧಿಗೆ ಪೂರಕವಾಗಿ ವಿಶೇಷ ಪ್ಯಾಕೇಜ್ ಘೋಷಿಸುವುದಾಗಿ ಭರವಸೆ ನೀಡಿದ್ದ ಇಬ್ಬರೂ ನಮ್ಮನ್ನು ವಂಚಿಸಿದ್ದಾರೆ’ ಎಂದು ಶೇಷಪ್ಪ ಅಂದೋಳು ತಿಳಿಸಿದರು.

ಕರ್ನಾಟಕ ಮೀಸಲಾತಿ ಸಂರಕ್ಷಣಾ ಒಕ್ಕೂಟದಿಂದ ಬೆಂಗಳೂರಿನಲ್ಲಿ ಬೃಹತ್ ಪ್ರತಿಭಟನೆ

‘ಹಳೇ ಮೀಸಲಾತಿಯನ್ನೇ ಅನ್ವಯಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಒಳಮೀಸಲಾತಿಯ ರೋಸ್ಟರ್ ಹಂಚಿಕೆ ವಿರೋಧಿಸಿ ಹಾಗೂ ಹಳೆಯ ಮೀಸಲಾತಿಗೆ ಅನುಗುಣವಾಗಿ ನೇಮಕಾತಿ ನಡೆಸಲು ಒತ್ತಾಯಿಸಿ ಭೋವಿ ಗುರುಪೀಠದ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ ನೇತೃತ್ವದಲ್ಲಿ ಮಂಗಳವಾರ ಬೃಹತ್ ಪ್ರತಿಭಟನೆ ನಡೆಯಿತು.

ಕರ್ನಾಟಕ ಮೀಸಲಾತಿ ಸಂರಕ್ಷಣಾ ಒಕ್ಕೂಟವು ಇಲ್ಲಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ಹಮ್ಮಿಕೊಂಡಿತ್ತು.

ಮಾರ್ಚ್ 27ರಂದು ಒಳಮೀಸಲಾತಿ ಕುರಿತು ನಡೆಯಲಿರುವ ವಿಶೇಷ ಸಂಪುಟ ಸಭೆಯಲ್ಲಿ ಸಮಗ್ರವಾಗಿ ಚರ್ಚೆ ನಡೆಸಿ, ನ್ಯಾಯಸಮ್ಮತ ನಿರ್ಧಾರ ತೆಗೆದುಕೊಳ್ಳಬೇಕು. ನ್ಯಾಯಸಮ್ಮತ ತೀರ್ಮಾನ ತೆಗೆದುಕೊಳ್ಳದೇ ಇದ್ದರೆ, ಬಂಜಾರ, ಭೋವಿ, ಕೊರಮ, ಕೊರಚ, ಚರ್ಮಕಾರ ಸಮುದಾಯದಿಂದ ಹೋರಾಟ ತೀವ್ರಗೊಳಿಸಲಾಗುವುದು ಎಂದೂ ಎಚ್ಚರಿಸಿದರು.

ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ ಮಾತನಾಡಿ, ‘ನ್ಯಾಯ ಸಿಗುವ ತನಕ ಒಗ್ಗಟ್ಟಿನಿಂದ ಹೋರಾಟ ಮಾಡೋಣ. ಒಳಮೀಸಲಾತಿ ವಿಚಾರದಲ್ಲಿ ಸರ್ಕಾರ ಕೈಗೊಂಡ ಕ್ರಮಗಳು ಅವೈಜ್ಞಾನಿಕವಾಗಿವೆ. ಭೋವಿ, ಬಂಜಾರ, ಕೊರಮ, ಕೊರಚ, ಸೂಕ್ಷ್ಮ ಹಾಗೂ ಅತಿಸೂಕ್ಷ್ಮ ಹಾಗೂ ಅಲೆಮಾರಿಗಳ 59 ಜಾತಿಗಳಿಗೆ ಅನ್ಯಾಯವಾಗಿದೆ. ನಿವೃತ್ತ ನ್ಯಾಯಮೂರ್ತಿ ನಾಗಮೋಹನದಾಸ್ ಅವರ ಏಕಸದಸ್ಯ ಆಯೋಗದ ವರದಿ ಅಪೂರ್ಣವಾಗಿದೆ’ ಎಂದು ಆಕ್ರೋಶ ಹೊರಹಾಕಿದರು.

ಮಾಜಿ ಸಚಿವ ಅರವಿಂದ ಲಿಂಬಾವಳಿ ಮಾತನಾಡಿ, ‘ರೋಸ್ಟರ್ ವ್ಯವಸ್ಥೆ ಅವೈಜ್ಞಾನಿಕವಾಗಿದೆ. ನಮ್ಮ ಸಮುದಾಯಗಳನ್ನು ಉದ್ದೇಶಪೂರ್ವಕವಾಗಿ ಹಿಂದುಳಿಸುವ ಷಡ್ಯಂತ್ರ ನಡೆದಿದೆ’ ಎಂದು ದೂರಿದರು.

ಪ್ರತಿಭಟನೆಯಲ್ಲಿ ಸರ್ದಾರ್ ಸೇವಾಲಾಲ್ ಸ್ವಾಮೀಜಿ, ಮಾಜಿ ಸಚಿವೆ ಬಿ.ಟಿ.ಲಲಿತಾ ನಾಯಕ್, ಜಲಜಾ ನಾಯಕ್, ರೇವೂ ನಾಯಕ್ ಬೆಳಮಗಿ, ಎಂ.ಚಂದ್ರಪ್ಪ, ಮೀಸಲಾತಿ ಒಕ್ಕೂಟದ ಅಧ್ಯಕ್ಷ ಎಚ್.ರವಿ ಮಾಕಳಿ, ಕಾರ್ಯಾಧ್ಯಕ್ಷ ರಾಘವೇಂದ್ರ ನಾಯಕ್, ಕಾರ್ಯಾಧ್ಯಕ್ಷರಾದ ಅನಂತ ನಾಯಕ್, ಆದರ್ಶ ಯಲ್ಲಪ್ಪ, ಪ್ರಧಾನ ಕಾರ್ಯದರ್ಶಿ ಹಾವೇರಿ ರವಿ ಪೂಜಾರ, ಕೃಷ್ಣಪ್ಪ, ಆನೇಕಲ್ ಚಿನ್ನಸ್ವಾಮಿ, ಶ್ರೀನಿವಾಸ ಪಾಲ್ಗೊಂಡಿದ್ದರು.



ಕರ್ನಾಟಕ ಮೀಸಲಾತಿ ಸಂರಕ್ಷಣಾ ಒಕ್ಕೂಟದಿಂದ ಇಲ್ಲಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಭೋವಿ ಗುರುಪೀಠದ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ ನೇತೃತ್ವದಲ್ಲಿ ಮಂಗಳವಾರ ಬೃಹತ್ ಪ್ರತಿಭಟನೆ ನಡೆಯಿತು – ಪ್ರಜಾವಾಣಿ ಚಿತ್ರ

ರೋಸ್ಟರ್: ದೋಷ ಸರಿಪಡಿಸಲು ಆಗ್ರಹ

ರೋಸ್ಟರ್ ಬಿಂದು ಹಂಚಿಕೆಯಲ್ಲಿನ ದೋಷಗಳನ್ನು ಸರಿಪಡಿಸಿ, ಪರಿಶಿಷ್ಟ ಜಾತಿಗಳಿಗೆ ಒಳ ಮೀಸಲಾತಿ ನೀಡುವ ಆದೇಶ ಹೊರಡಿಸಿದ ನಂತರವೇ 56,432 ಹುದ್ದೆಗಳನ್ನು ಭರ್ತಿ ಮಾಡಬೇಕು ಎಂದು ದಲಿತ ಸಂಘರ್ಷ ಸಮಿತಿಗಳ ಮತ್ತು ದಲಿತ ಸಂಘಟನೆಗಳ ಒಕ್ಕೂಟ ಆಗ್ರಹಿಸಿದೆ.

ಮಂಗಳವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಒಕ್ಕೂಟದ ಮುಖಂಡರಾದ ಶ್ರೀಧರ ಕಲಿವೀರ, ಗುರುಮೂರ್ತಿ ಎಂ., ಹನುಮಂತಪ್ಪ ಕಾಕರಗಲ್, ಎಂ. ಗೋವಿಂದರಾಜು, ‘ಒಳಮೀಸಲಾತಿ ಜಾರಿಗೊಳಿಸದೇ ನೇಮಕಾತಿಗೆ ಆದೇಶ ಮಾಡಿರುವ ಸರ್ಕಾರದ ನಿರ್ಧಾರ ಖಂಡನೀಯ. ಈ ಆದೇಶವನ್ನು ಕೂಡಲೇ ರದ್ದುಪಡಿಸಬೇಕು. ಪರಿಶಿಷ್ಟ ಜಾತಿಗಳಲ್ಲಿ ಬರುವ 101 ಸಮುದಾಯಗಳ ಜನಸಂಖ್ಯೆಗೆ ಅನುಗುಣವಾಗಿ ಒಳ ಮೀಸಲಾತಿ ಪ್ರಮಾಣವನ್ನು ಹಂಚಿಕೆ ಮಾಡಬೇಕು’ ಎಂದು ಒತ್ತಾಯಿಸಿದರು.

‘ವಿಶ್ವವಿದ್ಯಾಲಯವನ್ನು ಒಂದು ಘಟಕವನ್ನಾಗಿ ಪರಿಗಣಿಸಿ, ನೇಮಕಾತಿಗೆ ಸಮಾಜ ಕಲ್ಯಾಣ ಸಚಿವ ಎಚ್.ಸಿ. ಮಹದೇವಪ್ಪ ಅವರು ಅವಕಾಶ ನೀಡಬಾರದು’ ಎಂದು ಆಗ್ರಹಿಸಿದರು.

‘ಒಳ ಮೀಸಲಾತಿ ಜಾರಿಗೊಳಿಸುವ ಕುರಿತು ಮಾದಿಗ, ಬಲಗೈ (ಹೊಲಯ), ಭೋವಿ, ಲಂಬಾಣಿ, ಕೊರಮ, ಕೊರಚ ಸೇರಿದಂತೆ ಅಲೆಮಾರಿ ಜಾತಿಗಳ ಸಂಘಟನೆಗಳು ಪ್ರತ್ಯೇಕವಾಗಿ ಹೋರಾಟ ಮಾಡುತ್ತಿರುವುದು ಸರಿಯಲ್ಲ. ನಾವೆಲ್ಲರೂ ಒಗ್ಗಟಾಗಿ ಹೋರಾಟ ಮಾಡುವ ಮೂಲಕ ನಮ್ಮ ಹಕ್ಕುಗಳನ್ನು ಪಡೆದುಕೊಳ್ಳಬೇಕು. ಇದೇ 27ರಂದು ನಡೆಯುವ ಸಚಿವ ಸಂಪುಟ ಸಭೆಯಲ್ಲಿ ನಮ್ಮ ಬೇಡಿಕೆಗಳನ್ನು ಈಡೇರಿಸಬೇಕು. ಇಲ್ಲದಿದ್ದರೆ ರಾಜ್ಯದಾದ್ಯಂತ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು’ ಎಂದು ಎಚ್ಚರಿಕೆ ನೀಡಿದರು.

ಕೆಪಿಎಸ್‌ಸಿ ಪ್ರಕರಣ: ಹೈಕೋರ್ಟ್ ಆದೇಶ ರದ್ದುಪಡಿಸಿದ ನ್ಯಾಯಪೀಠ

‘ಕರ್ತವ್ಯಕ್ಕೆ ಸೇರದಿದ್ದರೆ ಮತ್ತೆ ಅವಕಾಶ ಇಲ್ಲ’

ಪ್ರಜಾವಾಣಿ ವಾರ್ತೆ

ನವದೆಹಲಿ: ‘ಆಯ್ಕೆಯಾದ ಅಭ್ಯರ್ಥಿಯು ನೇಮಕಾತಿ ಪೂರ್ವ ಔಪಚಾರಿಕತೆಗಳನ್ನು ಪೂರ್ಣಗೊಳಿಸಲು ವಿಫಲವಾದಲ್ಲಿ ಅಥವಾ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳದಿದ್ದರೆ ಅದೇ ಆಯ್ಕೆ ಪಟ್ಟಿಯಿಂದ ನೇಮಕಾತಿಯನ್ನು ಹಕ್ಕಿನ ವಿಷಯವಾಗಿ ಪಡೆಯಲು ಸಾಧ್ಯವಿಲ್ಲ’ ಎಂದು ಸುಪ್ರೀಂ ಕೋರ್ಟ್ ತೀರ್ಪು ನೀಡಿದೆ.

ಪ್ರತಿವಾದಿಯನ್ನು ಉಪ ವಿಭಾಗಾಧಿಕಾರಿ (ಕೆಎಎಸ್) ಹುದ್ದೆಗೆ ಪರಿಗಣಿಸಬೇಕು ಎಂದು ಕರ್ನಾಟಕ ಹೈಕೋರ್ಟ್ ನೀಡಿದ್ದ ಆದೇಶವನ್ನು ನ್ಯಾಯಮೂರ್ತಿಗಳಾದ ವಿಕ್ರಮ್‌ನಾಥ್ ಹಾಗೂ ಸಂದೀಪ್ ಮೆಹ್ತಾ ಅವರ ಪೀಠ ರದ್ದುಪಡಿಸಿದೆ.

‘ಕರ್ನಾಟಕ ಲೋಕಸೇವಾ ಆಯೋಗದ (ಕೆಪಿಎಸ್‌ಸಿ) ನೇಮಕಾತಿ ಪ್ರಕ್ರಿಯೆಯಲ್ಲಿ ವೇಯ್ಟಿಂಗ್ ಲಿಸ್ಟ್ (ನಿರೀಕ್ಷಣಾ ಪಟ್ಟಿ) ಅಥವಾ ಹೆಚ್ಚುವರಿ ಪಟ್ಟಿಗಾಗಿ ನಿರ್ದಿಷ್ಟ ಶಾಸಕಾಂಗ ನಿಯಮಗಳಿಲ್ಲ. ಹೀಗಾಗಿ, ಆಯ್ಕೆಯಾದ ಅಭ್ಯರ್ಥಿಯು ಹುದ್ದೆಗೆ ವರದಿ ಮಾಡಿಕೊಳ್ಳದಿದ್ದರೆ ಬೇರೆ ಅಭ್ಯರ್ಥಿಯು ಆ ಹುದ್ದೆಯನ್ನು ಕೇಳುವಂತಿಲ್ಲ’ ಎಂದು ಪೀಠ ಸ್ಪಷ್ಟಪಡಿಸಿದೆ.

‘ಅಂತಹ ಖಾಲಿ ಹುದ್ದೆಯನ್ನು ಆಡಳಿತ ನೇಮಕಾತಿ ನಿಯಮಗಳಿಗೆ ಅನುಸಾರವಾಗಿ ಭರ್ತಿ ಮಾಡಬೇಕು. ಶಾಸನಬದ್ಧ ಚೌಕಟ್ಟನ್ನು ಮೀರಿ ಅದೇ ಆಯ್ಕೆ ಪಟ್ಟಿಯನ್ನು ನಿರ್ವಹಿಸುವ ಮೂಲಕ ಪ್ರಕ್ರಿಯೆ ನಡೆಸುವಂತಿಲ್ಲ’ ಎಂದು ಪೀಠ ಒತ್ತಿ ಹೇಳಿದೆ.

‘ಆಯ್ಕೆ ಪಟ್ಟಿಯು ಆಡಳಿತ ನಿಯಮಗಳಿಗೆ ಅನುಸಾರವಾಗಿ ಅಭ್ಯರ್ಥಿಯನ್ನು ಪರಿಗಣನೆಗೆ ಅರ್ಹರನ್ನಾಗಿ ಮಾಡುತ್ತದೆ. ಇದು ಶಾಸನಬದ್ಧ ಚೌಕಟ್ಟನ್ನು ಉಲ್ಲಂಘಿಸಿ ಹುದ್ದೆ ಪಡೆಯಲು ಸ್ಥಾಪಿತ ಹಕ್ಕನ್ನು ಸೃಷ್ಟಿಸುವುದಿಲ್ಲ’ ಎಂದು ನ್ಯಾಯಪೀಠ ಹೇಳಿದೆ.

‘ಆಯ್ಕೆ ಪಟ್ಟಿಯಲ್ಲಿ ನಾನೇ ಮುಂದಿನ ಅಭ್ಯರ್ಥಿಯಾಗಿದ್ದೇನೆ. ಹುದ್ದೆ ಖಾಲಿ ಉಳಿದಿರುವುದರಿಂದ, ಉನ್ನತ ಹುದ್ದೆಗೆ ನನ್ನನ್ನು ನೇಮಕಾತಿ ಮಾಡಬೇಕು’ ಎಂಬ ಪ್ರತಿವಾದಿಯ ವಾದವನ್ನು ನ್ಯಾಯಪೀಠ ತಿರಸ್ಕರಿಸಿದೆ.

ಪ್ರಕರಣವೇನು?

362 ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳಿಗೆ ಕೆಪಿಎಸ್‌ಸಿ 2011ರಲ್ಲಿ ಅಧಿಸೂಚನೆ ಹೊರಡಿಸಿತ್ತು. ಪ್ರತಿವಾದಿಯೂ ಆಗಿರುವ ಮಾಜಿ ಸೈನಿಕ ಸಂತೋಷ್ ಕುಮಾರ್ ಸಿ. ಪರೀಕ್ಷೆ ಬರೆದಿದ್ದರು.

ಆಯೋಗವು 2014ರ ಮಾರ್ಚ್‌ನಲ್ಲಿ ಅಂತಿಮ ಆಯ್ಕೆ ಪಟ್ಟಿ ಪ್ರಕಟಿಸಿತ್ತು. ಸಾಮಾನ್ಯ ಅರ್ಹತೆ/ ಮಾಜಿ ಸೈನಿಕ ವಿಭಾಗದಲ್ಲಿ ಅಯ್ಯಪ್ಪ ಎಂ.ಎ. ಅವರಿಗೆ ಆಯೋಗವು ಉಪವಿಭಾಗಾಧಿಕಾರಿ (ದರ್ಜೆ ಎ) ಹುದ್ದೆ ಕೊಟ್ಟಿತ್ತು. ಸಂತೋಷ್ ಕುಮಾರ್ ಅವರಿಗೆ ಸಹಾಯಕ ಆಯುಕ್ತ (ವಾಣಿಜ್ಯ ತೆರಿಗೆ) ಹುದ್ದೆ ಕೊಡಲಾಗಿತ್ತು.

ಆದರೆ, ಅಯ್ಯಪ್ಪ ಅವರು ಕಡ್ಡಾಯ ವೈದ್ಯಕೀಯ ಪರೀಕ್ಷೆಗೆ ಹಾಜರಾಗಿರಲಿಲ್ಲ ಹಾಗೂ ಪೊಲೀಸ್ ದೃಢೀಕರಣ ನಡೆಸಿರಲಿಲ್ಲ. ಜತೆಗೆ ಕರ್ತವ್ಯಕ್ಕೆ ವರದಿ ಮಾಡಿಕೊಂಡಿರಲಿಲ್ಲ. ಈ ನಡುವೆ, ಸಂತೋಷ್ ಕುಮಾರ್ 2022ರಲ್ಲಿ ಸೇವೆಗೆ ವರದಿ ಮಾಡಿಕೊಂಡಿದ್ದರು. ಮೆರಿಟ್ ಆಧಾರದಲ್ಲಿ ತಮಗೆ ಈ ಕೆಎಎಸ್ ಹುದ್ದೆ ನೀಡಬೇಕು ಎಂದು ಸಂತೋಷ್ ಅವರು ಸಿಬ್ಬಂದಿ ಹಾಗೂ ಆಡಳಿತ ಸುಧಾರಣಾ ಇಲಾಖೆಗೆ ಮನವಿ ಮಾಡಿದ್ದರು. ‘ಕರ್ನಾಟಕ ಗೆಜೆಟೆಡ್ ಪ್ರೊಬೇಷನರ್ಸ್ ನೇಮಕಾತಿ (ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ನೇಮಕಾತಿ) ನಿಯಮಗಳು–1997’ರಲ್ಲಿ ನಿರೀಕ್ಷಣಾ ಪಟ್ಟಿ ಎಂಬ ಪರಿಕಲ್ಪನೆಯೇ ಇಲ್ಲ ಎಂಬ ಕಾರಣ ನೀಡಿ ಈ ಮನವಿಯನ್ನು ಇಲಾಖೆ ತಿರಸ್ಕರಿಸಿತ್ತು.

ಇದನ್ನು ಪ್ರಶ್ನಿಸಿ ಸಂತೋಷ್ ಅವರು ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿ ಮೊರೆ ಹೋಗಿದ್ದರು. ಅವರ ಅರ್ಜಿಯನ್ನು ನ್ಯಾಯಮಂಡಳಿ ವಜಾಗೊಳಿಸಿತ್ತು. ಬಳಿಕ ಅವರು ಹೈಕೋರ್ಟ್ ಮೆಟ್ಟಿಲೇರಿದ್ದರು. ಅರ್ಜಿದಾರರನ್ನು ಕೆಎಎಸ್ ಹುದ್ದೆಗೆ ಪರಿಗಣಿಸಬೇಕು ಎಂದು ಹೈಕೋರ್ಟ್ ಆದೇಶಿಸಿತ್ತು. ಇದನ್ನು ಪ್ರಶ್ನಿಸಿ ಕರ್ನಾಟಕ ಸರ್ಕಾರವು ಸುಪ್ರೀಂ ಕೋರ್ಟ್‌ಗೆ ವಿಶೇಷ ಮೇಲ್ಮನವಿ ಅರ್ಜಿ ಸಲ್ಲಿಸಿತ್ತು.

‘ಅಂತಿಮ ಆಯ್ಕೆ ಪಟ್ಟಿ ಪ್ರಕಟವಾದ ನಂತರ ನೇಮಕಾತಿ ಪ್ರಕ್ರಿಯೆ ಮುಕ್ತಾಯಗೊಂಡಂತೆ. ಕೆಪಿಎಸ್‌ಸಿಯು ಖಾಲಿ ಹುದ್ದೆಗಳ ಸಂಖ್ಯೆಗೆ ಸಮಾನವಾದ ಪಟ್ಟಿಯನ್ನು ಮಾತ್ರ ಸಿದ್ಧಪಡಿಸುತ್ತದೆ. ಆಯ್ಕೆಯಾದವರು ಸೇವೆಗೆ ಸೇರದ ಕಾರಣ ಉದ್ಭವಿಸುವ ಯಾವುದೇ ಖಾಲಿ ಹುದ್ದೆಯನ್ನು ಭವಿಷ್ಯದ ನೇಮಕಾತಿಗಾಗಿ ಹೊಸ ಖಾಲಿ ಹುದ್ದೆ ಎಂದು ಪರಿಗಣಿಸಲಾಗುತ್ತದೆ’ ಎಂದು ರಾಜ್ಯ ಸರ್ಕಾರದ ವಕೀಲರು ವಾದಿಸಿದ್ದರು.



ಗಾಯಾಳುಗಳನ್ನು ಉಪವಿಭಾಗಾಧಿಕಾರಿ ಗಂಗಪ್ಪ ಎಂ. ಮಂಗಳವಾರ ಭೇಟಿಯಾಗಿ, ಆರೋಗ್ಯ ವಿಚಾರಿಸಿದರು

ನೀರಿನ ಬಳಕೆ ವಿಷಯದಲ್ಲಿ ಘರ್ಷಣೆ: ಕಲ್ಲು ತೂರಾಟ

ಪ್ರಜಾವಾಣಿ ವಾರ್ತೆ

ಮುಂಡರಗಿ (ಗದಗ ಜಿಲ್ಲೆ): ಹೊಲದಲ್ಲಿ ನೀರಿನ ಬಳಕೆ ವಿಷಯಕ್ಕೆ ಸಂಬಂಧಿಸಿ ತಾಲ್ಲೂಕಿನ ಚಿಕ್ಕವಡ್ಡಟ್ಟಿ ಗ್ರಾಮದಲ್ಲಿ ಸೋಮವಾರ ಸಂಜೆ ಮಾದರ ಮತ್ತು ವಾಲ್ಮೀಕಿ ಸಮುದಾಯಗಳ ನಡುವೆ ತೀವ್ರ ಗಲಾಟೆ ನಡೆದಿದೆ. ಪರಸ್ಪರ ಕಲ್ಲು ತೂರಾಟ ನಡೆದಿದ್ದು, 40 ಜನರಿಗೆ ಗಾಯಗಳಾಗಿವೆ.

ಮುಂಡರಗಿ ಪೊಲೀಸ್ ಠಾಣೆಯಲ್ಲಿ ದೂರು ಪ್ರತಿ ದೂರು ದಾಖಲಾಗಿದ್ದು, ಮಾದರ ಸಮಾಜದ 122 ಮಂದಿ ಹಾಗೂ ವಾಲ್ಮೀಕಿ ಸಮಾಜದ 69 ಮಂದಿ ವಿರುದ್ಧ ಪ್ರಕರಣ ದಾಖಲಾಗಿದೆ.

ವಿವರ: ವಾಲ್ಮೀಕಿ ಸಮುದಾಯಕ್ಕೆ ಸೇರಿದ ರೈತನ ಜಮೀನಿನ ಕೊಳವೆ ಬಾವಿಯಲ್ಲಿ ಮಾದರ ಸಮುದಾಯದ ಯುವಕನೊಬ್ಬ ಸ್ನಾನ ಮಾಡಲು ಹೋದಾಗ ಘರ್ಷಣೆ ಆಗಿದೆ. ‘ದನಕರುಗಳಿಗೆ ಕುಡಿಯಲು ನೀರಿಲ್ಲ. ಸ್ನಾನ ಬೇಡ. ಬೇಕಿದ್ದರೆ ನೀರು ಕುಡಿಯಿರಿ’ ಎಂದಿದ್ದಾರೆ. ಆಗ ಮಾತಿಗೆ ಮಾತು ಬೆಳೆದು, ಗಲಾಟೆ ತಾರಕಕ್ಕೇರಿದೆ.

ಜಗಳವು ಊರಿಗೂ ವಿಸ್ತರಿಸಿದೆ. ಗುಂಪುಗಳ ನಡುವೆ ಕಲ್ಲುತೂರಾಟ ನಡೆದಿದೆ. ‘ಕಲ್ಲು, ಕೊಡಲಿ, ಖಾರದಪುಡಿ, ಸೈಕಲ್ ಚೈನು ಇತ್ಯಾದಿ ಬಳಸಿ ಹೊಡೆದಿದ್ದಾರೆ’ ಎಂದು ಎರಡೂ ಕಡೆಯವರು ದೂರಿನಲ್ಲಿ ಆರೋಪಿಸಿದ್ದಾರೆ.

ತಿಂಗಳ ಹಿಂದೆ ಚಿಕ್ಕವಡ್ಡಟ್ಟಿ ಗ್ರಾಮದ ಜಾತ್ರೆ ವೇಳೆ ಹುಡುಗರ ನಡುವೆ ಗಲಾಟೆ ಆಗಿತ್ತು. ಮುಂದೆ ಇಂಥ ಅಹಿತಕರ ಘಟನೆ ನಡೆಯುವುದಿಲ್ಲ ಎಂದು ಹಿರಿಯರು ಆಗ ಮುಚ್ಚಳಿಕೆ ಬರೆದುಕೊಟ್ಟಿದ್ದರು.

ಜೆಜೆಎಂ: ರಾಜ್ಯಕ್ಕೆ ಸಿಕ್ಕಿದ್ದು ₹11,189 ಕೋಟಿ

ಕೇಂದ್ರದ ಹಂಚಿಕೆ ₹24,819.48 ಕೋಟಿ ಬಳಸಲು ವಿಫಲ

• ಮಹಾಲೇಖಪಾಲರ ವರದಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮನೆ ಮನೆಗೆ ಪೈಪ್ ಮೂಲಕ ಕುಡಿಯುವ ನೀರಿನ ಸಂಪರ್ಕ ಕಲ್ಪಿಸುವ ಜಲ ಜೀವನ್ ಮಿಷನ್ (ಜೆಜೆಎಂ) ನಿಧಿಯಡಿ ಕೇಂದ್ರ ದಿಂದ ಹಂಚಿಕೆಯಾದ ₹24,819.48 ಕೋಟಿಯಲ್ಲಿ ರಾಜ್ಯಕ್ಕೆ ಕೇವಲ ₹11,189 ಕೋಟಿ ಪಡೆಯಲಷ್ಟೆ ಸಾಧ್ಯವಾಗಿದೆ' ಎಂದು ಜಲ ಜೀವನ್ ಮಿಷನ್ ಅನುಷ್ಠಾನ ಕುರಿತ ಮಹಾಲೇಖಪಾಲರ ವರದಿ ಉಲ್ಲೇಖಿಸಿದೆ.

'2019-20ರಿಂದ 2023-24 ರವರೆಗಿನ ಅವಧಿಯ ಕುರಿತ ಕಾರ್ಯ ನಿರ್ವಹಣಾ ವರದಿಯನ್ನು ವಿಧಾನಸಭೆಯಲ್ಲಿ ಮಂಗಳವಾರ ಮಂಡಿಸಲಾಯಿತು. ಟೆಂಡರ್ ವಿಳಂಬ, ಭೂಮಿ ಲಭ್ಯತೆಗೂ ಮೊದಲೇ ಕಾಮಗಾರಿ ವಹಿಸಿರುವುದು, ಭೂ ಮಂಜೂರಾತಿ ಪಡೆಯಲು ವಿಳಂಬ, ಡಿಪಿಆರ್‌ಗಳ ಕೊರತೆ ಮತ್ತಿತರ ನಾನಾ ಕಾರಣಗಳಿಗೆ ರಾಜ್ಯಕ್ಕೆ ಕೇಂದ್ರದ ಅನುದಾನ ಪಡೆಯಲು ಸಾಧ್ಯ ಆಗಿಲ್ಲ. ರಾಜ್ಯ ಸರ್ಕಾರವು ಬಳಕೆ ಪ್ರಮಾಣಪತ್ರ ಮತ್ತು ಲೆಕ್ಕಪರಿಶೋಧಕ ವರದಿ ಸಲ್ಲಿಸಲು 30ರಿಂದ 9 ತಿಂಗಳವರೆಗೆ ವಿಳಂಬ ಆಗಿರುವುದು ಅನುದಾನ ಬಳಕೆ ಆಗದಿರಲು ಕಾರಣ' ಎಂದೂ ವರದಿ ಹೇಳಿದೆ.

ಗ್ರಾಮೀಣ ಪ್ರದೇಶದ ಜನರಿಗೆ ಶುದ್ಧ ಕುಡಿಯುವ ನೀರು ಒದಗಿಸುವ ಉದ್ದೇಶ ಹೊಂದಿರುವ ಈ ಯೋಜನೆಯಲ್ಲಿ ಸಮುದಾಯಗಳ ಸಹಭಾಗಿತ್ವವೂ ಇದೆ. ಸಮುದಾಯವೂ ಕೊಡುಗೆ ನೀಡಬೇಕು. ಆದರೆ, ರಾಜ್ಯದಲ್ಲಿ ಸಮುದಾಯದ ಕೊಡುಗೆ ಅತ್ಯಲ್ಪವಾಗಿದ್ದು, ನಿರೀಕ್ಷಿತ ₹1,594.90 ಕೋಟಿಯಲ್ಲಿ ಕೇವಲ ₹22.57 ಕೋಟಿ ಮಾತ್ರ ಸಂಗ್ರಹಿಸಲಾಗಿದೆ ಎಂದು ವರದಿ ಬೊಟ್ಟು ಮಾಡಿದೆ.

'ರಾಜ್ಯದ 533 ಗ್ರಾಮಗಳಲ್ಲಿ ಕ್ಷೇತ್ರ ತಪಾಸಣಾ ಕಿಟ್‌ಗಳನ್ನು ಬಳಸುವ ಬಗ್ಗೆ ಮಹಿಳೆಯರಿಗೆ ತರಬೇತಿ ನೀಡಿರಲಿಲ್ಲ. ಕಲುಷಿತ ನೀರಿನ ಮಾದರಿಗಳ ಪರೀಕ್ಷೆಯನ್ನು 2023-24ರಲ್ಲಿ ಮಾತ್ರ ಮಾಡಲಾಗಿದೆ. ಅದೂ ಕೇವಲ ಶೇ 18ರಷ್ಟು. 31 ಜಿಲ್ಲಾ ಮಟ್ಟದ ಮತ್ತು 48 ತಾಲ್ಲೂಕು ಮಟ್ಟದ ಪ್ರಯೋಗಾಲಯಗಳಲ್ಲಿ ನೀರಿನಲ್ಲಿ ಆರ್ಸೆನಿಕ್ ಮಟ್ಟ ಪರೀಕ್ಷೆ ಮಾಡುವ ವ್ಯವಸ್ಥೆ ಇಲ್ಲ. ಸೂಕ್ಷ್ಮ ಜೀವ ವೈಜ್ಞಾನಿಕ ನಿಯಾಂತಗಳನ್ನು ಪರೀಕ್ಷಿಸಲು 17 ಜಿಲ್ಲಾಮಟ್ಟದ ಮತ್ತು 4 ತಾಲ್ಲೂಕು ಮಟ್ಟದ ಪ್ರಯೋಗಾಲಯಗಳನ್ನು ಮಾತ್ರ ಸಜ್ಜುಗೊಳಿಸಲಾಗಿತ್ತು. 2019-10ರಿಂದ 2023-24ರ ಅವಧಿಯಲ್ಲಿ ಗೊತ್ತುಪಡಿಸಿದ ರಾಜ್ಯದ ಪ್ರಯೋಗಾಲಯದಿಂದ ಒಂದೇ ಒಂದು ಮಾದರಿಯನ್ನು ಪರೀಕ್ಷಿಸಲು ಇಲಾಖೆ ವಿಫಲವಾಗಿತ್ತು' ಎಂದು ವರದಿ ಯಲ್ಲಿದೆ.

ಪರಿಣಾಮ: 'ಪ್ರಾಥಮಿಕ ಶಾಲೆಗೆ ಹೋಗುವ ವಿದ್ಯಾರ್ಥಿನಿಯರ ಶಾಲೆ ಬಿಡುವ ಪ್ರಮಾಣ ಕಡಿಮೆ ಮಾಡಲು ಮತ್ತು ಮಹಿಳೆಯರ ಹೊರೆಯನ್ನು ಕಡಿಮೆ ಮಾಡಲು ಈ ಯೋಜನೆ ಸಹಾಯ ಮಾಡಿದೆ. ಆದರೆ, ಉದ್ಯೋಗ ಮತ್ತು ಸಾರ್ವಜನಿಕ ಆರೋಗ್ಯದ ಮೇಲೆ ಅಷ್ಟೊಂದು ಪರಿಣಾಮ ಬೀರಿಲ್ಲ' ಎಂದೂ ವರದಿ ಅಭಿಪ್ರಾಯಪಟ್ಟಿದೆ.

ಶಿಫಾರಸು: ಜೆಜೆಎಂ ಅನುಷ್ಠಾನ ಮೇಲ್ವಿಚಾರಣೆಗೆ ರಚಿಸಲಾದ ಸಮಿತಿಗಳು, ಸಂಪನ್ಮೂಲ ಬಳಕೆಯ ಸಮನ್ವಯ ಕಡೆಗೆ ರಾಜ್ಯ ಸರ್ಕಾರ ಗಮನಹರಿಸಬೇಕು, ಕಾಮಗಾರಿಗಳನ್ನು ಪೂರ್ಣಗೊಳಿಸುವಾಗ ಆಗುವ ವಿಳಂಬ ತಪ್ಪಿಸಲು ಭೂಮಿಯ ಲಭ್ಯತೆಯನ್ನು ಖಚಿತಪಡಿಸಿಕೊಳ್ಳಬೇಕು. ಗುತ್ತಿಗೆದಾರರ ಟೆಂಡರ್ ಸಾಮರ್ಥ್ಯ ಪರಿಗಣಿಸಿದ ನಂತರ ಕಾಮಗಾರಿ ವಹಿಸಬೇಕು. ಕೇಂದ್ರದಿಂದ ಬಿಡುಗಡೆಯಾದ ಹಣವನ್ನು ಪಡೆದುಕೊಳ್ಳಲು ಅಗತ್ಯ ಕ್ರಮ ತೆಗೆದುಕೊಳ್ಳಬೇಕು ನೀರಿನ ಗುಣಮಟ್ಟದ ಪರೀಕ್ಷೆಗೆ ಆದ್ಯತೆ ನೀಡಬೇಕು. ತಪ್ಪಾದ ವರದಿ ಆನ್‌ಲೈನ್ ಪೋರ್ಟಲ್‌ನಲ್ಲಿ ಅಪ್ಲೋಡ್ ಆಗದಂತೆ ರಾಜ್ಯ ಸರ್ಕಾರ ಪರಿಶೀಲಿಸಬೇಕು ಎಂದೂ ವರದಿಯಲ್ಲಿ ಶಿಫಾರಸು ಮಾಡಲಾಗಿದೆ.



ವಿಧಾನಸೌಧದ ಪಶ್ಚಿಮದ ನೆಲಮಹಡಿಯಲ್ಲಿನ ನವೀಕೃತ ಪ್ರವೇಶ ದ್ವಾರವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಮಂಗಳವಾರ ಉದ್ಘಾಟಿಸಿದರು. ಸ್ಪೀಕರ್ ಯು.ಟಿ ಖಾದರ್, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್. ಅಶೋಕ, ಗೃಹ ಸಚಿವ ಜಿ.ಪರಮೇಶ್ವರ ಉಪಸ್ಥಿತರಿದ್ದರು –ಪ್ರಜಾವಾಣಿ ಚಿತ್ರ

ಶೇ 34ರಷ್ಟು ಮನೆಗೆ ಸಿಗದ ಸಂಪರ್ಕ

ಈ ಯೋಜನೆಯ ಅವಧಿ 2024ರ ಮಾರ್ಚ್ 31ಕ್ಕೆ ಕೊನೆಗೊಂಡಿದೆ. ಆದರೆ, ಅದೇ ವರ್ಷದ ನವೆಂಬರ್‌ವರೆಗೆ 72.14 ಲಕ್ಷ ಮನೆಗಳ ಪೈಕಿ ಇನ್ನೂ 24.52 ಲಕ್ಷ ಮನೆಗಳಿಗೆ (ಶೇ 34) ನಲ್ಲಿಯ ಸಂಪರ್ಕ ಒದಗಿಸಲು ಸಾಧ್ಯವಾಗಿಲ್ಲ ಎಂದೂ ವರದಿ ಉಲ್ಲೇಖಿಸಿದೆ.

'ಹಲವು ಕಡೆ ವಾಸಸ್ಥಳಗಳಲ್ಲಿ ಮನೆಗಳ ಸಂಖ್ಯೆ ಕಡಿಮೆ ಆಗಿರುವುದರಿಂದ ವೆಚ್ಚ ಹೆಚ್ಚಾಗುತ್ತದೆ ಎಂಬ ಕಾರಣಕ್ಕೆ ಕಾಮಗಾರಿಗಳನ್ನು ಕೈಬಿಡಲಾಗಿದೆ. ಕೆಲವು ಕಡೆ ಓವರ್ ಹೆಡ್ ಟ್ಯಾಂಕ್ (ಒಎಚ್‌ಟಿ) ನಿರ್ಮಾಣಕ್ಕೆ ಭೂಮಿಯನ್ನು ಗುತ್ತಿಗೆದಾರರಿಗೆ ಹಸ್ತಾಂತರಿಸದ ಕಾರಣ ಕಾಮಗಾರಿ ಆರಂಭಿಸಲು ಸಾಧ್ಯ ಆಗಿಲ್ಲ. ಪಂಚಾಯತ್‌ರಾಜ್ ಇಲಾಖೆಯು 2024ರ ಮೇ ವೇಳೆಗೆ ತೆರೆದ ಬಾವಿಯನ್ನು ನಿರ್ಮಿಸಿ, ಕೊಳವೆಗಳನ್ನು ಹಾಕಲು ₹60.41 ಲಕ್ಷ ವೆಚ್ಚ ಮಾಡಿದ್ದರೂ ಕಾಮಗಾರಿ ಅಪೂರ್ಣವಾಗಿ ಸ್ಥಗಿತಗೊಂಡಿದೆ. ಹೀಗಾಗಿ, 435 ಮನೆಗಳಿಗೆ ನೀರು ಪೂರೈಸುವ ಉದ್ದೇಶ ಈಡೇರಿಲ್ಲ' ಎಂದು ವರದಿ ಹೇಳಿದೆ.

'ನರೇಗಾ ಅನುಷ್ಠಾನದಲ್ಲಿ ಅಕ್ರಮ'

ಬೆಂಗಳೂರು: ರಾಜ್ಯದಲ್ಲಿ 2019–20ರಿಂದ 2023–24ರ ಅವಧಿಯಲ್ಲಿ, ನರೇಗಾ ಯೋಜನೆ ಅನುಷ್ಠಾನದಲ್ಲಿ ಹಲವು ಅಕ್ರಮ ನಡೆದಿವೆ ಎಂದು ಮಹಾಲೇಖಪಾಲರ (ಸಿಎಜಿ) ವರದಿ ಹೇಳಿದೆ.

ವಿಧಾನಸಭೆಯಲ್ಲಿ ಮಂಗಳವಾರ ಮಂಡಿಸಲಾದ 'ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಮೇಲಿನ ಮಹಾಲೇಖಪಾಲರ ವರದಿ'ಯಲ್ಲಿ ಈ ವಿವರ ಇದೆ.

ಕಾಮಗಾರಿ ನಡೆಸದೆಯೇ ಬಿಲ್ ಪಾವತಿ, ನಕಲಿ ಬಿಲ್ ಆಧರಿಸಿ ಹಣ ಬಿಡುಗಡೆ, ವೇತನ ಪಾವತಿಯಲ್ಲಿ ಪಾರದರ್ಶಕತೆ ಇಲ್ಲದಿರುವುದು ಸೇರಿ ಹಲವು ಅಕ್ರಮಗಳು ನಡೆದಿವೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ. ಸಣ್ಣ ಮೊತ್ತದ ಕಾಮಗಾರಿಗಳಲ್ಲೇ ಅಕ್ರಮ ನಡೆದಿದ್ದು, ಅಂತಹ ನೂರಾರು ಪ್ರಕರಣಗಳು ಪತ್ತೆಯಾಗಿವೆ ಎಂದು ಸಿಎಜಿ ಹೇಳಿದೆ.

ಕೇಂದ್ರ ಮತ್ತು ರಾಜ್ಯ ಸರ್ಕಾರದ ವಿವಿಧ ವಸತಿ ಯೋಜನೆಗಳ ಅಡಿಯಲ್ಲಿ ಫಲಾನುಭವಿಗಳೇ ನಿರ್ಮಾಣ ಕಾಮಗಾರಿ ಕೈಗೊಂಡಿದ್ದರೆ ನರೇಗಾ ಅಡಿ ನೆರವು ನೀಡಲಾಗುತ್ತದೆ. ರಾಜ್ಯದ ಕಲಬುರಗಿ, ಕೊಪ್ಪಳ, ಮಂಡ್ಯ, ಶಿವಮೊಗ್ಗ, ತುಮಕೂರು ಜಿಲ್ಲೆಗಳಲ್ಲಿ ಒಟ್ಟು 2,560 ಮನೆಗಳ ನಿರ್ಮಾಣಕ್ಕೆ ನೆರವು ನೀಡಲಾಗಿದೆ. ಈ ಪೈಕಿ 847 ಕಾಮಗಾರಿಗಳ ಪರಿಶೀಲನೆ ನಡೆಸಿದ್ದು, 653 ಮನೆಗಳ ನಿರ್ಮಾಣದಲ್ಲಿ ₹1.19 ಕೋಟಿ ಮೊತ್ತದ ಅಕ್ರಮ ನಡೆದಿದೆ ಎಂದು ಸಿಎಜಿ ಹೇಳಿದೆ.

ಯೋಜನೆ ಅಡಿ ಉದ್ಯೋಗ ಚೀಟಿ ಹೊಂದಿರುವ ಪ್ರತಿ ಕುಟುಂಬಕ್ಕೆ 100 ದಿನ ಉದ್ಯೋಗ ಒದಗಿಸಬೇಕು. ಆದರೆ ಬೇಡಿಕೆಗಿಂತ ಕಡಿಮೆ ಪ್ರಮಾಣದ ಉದ್ಯೋಗ ಒದಗಿಸಲಾಗಿದೆ. 100 ದಿನ ಉದ್ಯೋಗ ಪಡೆದ ಕುಟುಂಬಗಳಪ್ರಮಾಣ ಶೇ 5ರಷ್ಟು ಮಾತ್ರ. 3 ಲಕ್ಷಕ್ಕೂ ಹೆಚ್ಚು ಉದ್ಯೋಗ ಚೀಟಿದಾರರ ಆಧಾರ್ ಮತ್ತು ಬ್ಯಾಂಕ್ ಖಾತೆ ವಿವರಗಳನ್ನು ಜೋಡಿಸಿಲ್ಲ ಎಂದು ವಿವರಿಸಿದೆ.

ಯೋಜನೆ ಅನುಷ್ಠಾನ ಮೇಲ್ವಿಚಾರಣಾ ವಿಭಾಗದಲ್ಲಿ ಗುತ್ತಿಗೆ ನೌಕರರ ನೇಮಕಾತಿಗೆ ಅವಕಾಶವಿದ್ದು, ಅಲ್ಲಿ ಮೀಸಲಾತಿ ನೀತಿ ಪಾವತಿಸಿಲ್ಲ. ಇದರಿಂದಾಗಿ ಮಹಿಳಾ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ, ಅಂಗವಿಕಲರ ಮೀಸಲಾತಿ ಅನ್ವಯವಾಗಿಲ್ಲ. ನಿಯಮಗಳನ್ನು ಗಾಳಿಗೆ ತೂರಿ, ನೇಮಕಾತಿ ನಡೆಸಲಾಗಿದೆ. ಕೆಲವು ಹುದ್ದೆಗಳಿಗೆ ಅನುಮೋದನೆ ಇಲ್ಲದೇ ಇದ್ದರೂ, ವೇತನ ಪಾವತಿ ಮಾಡಲಾಗಿದೆ.

ಅಂಕಿ ಅಂಶಗಳು

3.11 ಲಕ್ಷ
ನೋಂದಾಯಿತ ಕಾರ್ಮಿಕರ ಖಾತೆಗಳಿಗೆ ಬ್ಯಾಂಕ್ ಖಾತೆ ಮತ್ತು ಆಧಾರ್ ಜೋಡಣೆ ಮಾಡಿಲ್ಲ

₹32.78 ಕೋಟಿ
ಅನುಮೋದನೆ ಇಲ್ಲದೆಯೇ ಕಾಮಗಾರಿ ನಡೆಸಿ, ಬಿಡುಗಡೆ ಮಾಡಿಕೊಳ್ಳಲಾದ ಮೊತ್ತ

₹35.10 ಕೋಟಿ
ವೇತನ ಬಾಕಿ ಮತ್ತು ಸಾಮಗ್ರಿ ವೆಚ್ಚ ಬಾಕಿ

ಸುದ್ದಿ 2 ನಿಮಿಷ

'ಘನತ್ಯಾಜ್ಯ: 38 ಸ್ಥಳೀಯ ಸಂಸ್ಥೆಗಳಲ್ಲಿ ಜಾಗವೇ ಇಲ್ಲ'

ಬೆಂಗಳೂರು: ಗ್ರೇಟರ್ ಬೆಂಗಳೂರು ಪ್ರಾಧಿಕಾರ ಬಿಟ್ಟು ರಾಜ್ಯದ 325 ನಗರ ಸ್ಥಳೀಯ ಸಂಸ್ಥೆಗಳಲ್ಲಿ ನಿತ್ಯ 7,304 ಟನ್ ತ್ಯಾಜ್ಯ ಸಂಗ್ರಹವಾಗುತ್ತಿದೆ. 38 ಸ್ಥಳೀಯ ಸಂಸ್ಥೆಗಳಲ್ಲಿ ಘನತ್ಯಾಜ್ಯ ನಿರ್ವಹಣೆಗೆ ಸ್ಥಳವೇ ಇಲ್ಲ ಎಂದು ಪೌರಾಡಳಿತ ಸಚಿವ ರಹೀಂ ಖಾನ್ ಹೇಳಿದರು.

ವಿಧಾನಪರಿಷತ್‌ನಲ್ಲಿ ಬಿಜೆಪಿಯ ಡಿ.ಎಸ್.ಅರುಣ್ ಅವರ ಪ್ರಶ್ನೆಗೆ ಉತ್ತರಿಸಿದ ಅವರು, 'ಸ್ವಚ್ಛಭಾರತ್ ಮಿಷನ್ ಯೋಜನೆ ಅಡಿ 219 ನಗರ ಸ್ಥಳೀಯ ಸಂಸ್ಥೆಗಳಲ್ಲಿ ಘನತ್ಯಾಜ್ಯ ಸಂಸ್ಕರಣಾ ಘಟಕ ಅಭಿವೃದ್ಧಿಪಡಿಸಲಾಗಿದೆ. ನಿತ್ಯ 6,304 ಟನ್ ತ್ಯಾಜ್ಯ ಸಂಸ್ಕರಣೆ ಮಾಡಲಾಗುತ್ತಿದೆ' ಎಂದರು.



'ಕಸ ವಿಲೇವಾರಿ ಮಾಫಿಯಾ ಕಪಿಮುಷ್ಟಿಯಲ್ಲಿದೆ, ದೊಡ್ಡ ಲಾಬಿ ನಡೆಯುತ್ತಿದೆ. ಇ-ತ್ಯಾಜ್ಯ, ವೈದ್ಯಕೀಯ ತ್ಯಾಜ್ಯ ವಿಲೇವಾರಿ ಸೇರಿದಂತೆ ವೈಜ್ಞಾನಿಕವಾಗಿ ಪೂರ್ಣಪ್ರಮಾಣದಲ್ಲಿ ನಿರ್ವಹಣೆ ಆಗುತ್ತಿಲ್ಲ. ಗ್ರಾಮೀಣ ಭಾಗದಲ್ಲೂ ಸಮಸ್ಯೆ ವ್ಯಾಪಕವಾಗಿದೆ. ಗ್ರಾಮೀಣಾಭಿವೃದ್ಧಿ, ನಗರಾಭಿವೃದ್ಧಿ ಇಲಾಖೆ ಸೇರಿದಂತೆ ವಿವಿಧ ಇಲಾಖೆಗಳ ಸಮನ್ವಯದ ಮೂಲಕ ಘನತ್ಯಾಜ್ಯ ನಿರ್ವಹಣೆಗೆ ಶಾಶ್ವತ ಪರಿಹಾರ ಕಂಡುಕೊಳ್ಳಬೇಕು' ಎಂದು ಅರುಣ್ ಒತ್ತಾಯಿಸಿದರು.

'₹850 ಕೋಟಿ ಬಾಕಿ ಉಳಿಸಿಕೊಂಡ ಅದಾನಿ ಕಂಪನಿ'

ಬೆಂಗಳೂರು: ಕಲಬುರಗಿ ಜಿಲ್ಲೆ ವಾಡಿಯ ಕಣ್ಣೂರು ಲೈಮ್‌ಸ್ಟೋನ್ ಬ್ಲಾಕ್ ಗುತ್ತಿಗೆ ಪಡೆದಿದ್ದ ಅದಾನಿ ಒಡೆತನದ ಎಸಿಸಿ ಕಂಪನಿ ರಾಜಧನ ಹಾಗೂ ದಂಡದ ಮೊತ್ತ ಸೇರಿ ₹850 ಕೋಟಿ ಬಾಕಿ ಉಳಿಸಿಕೊಂಡಿದೆ.

ವಿಧಾನ ಪರಿಷತ್‌ನಲ್ಲಿ ಕಾಂಗ್ರೆಸ್‌ನ ಆರತಿ ಕೃಷ್ಣ ಅವರ ಪ್ರಶ್ನೆಗೆ ಗಣಿ ಸಚಿವ ಎಸ್.ಎಸ್.ಮಲ್ಲಿಕಾರ್ಜುನ ಅವರ ಪರವಾಗಿ ಉತ್ತರಿಸಿದ ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಈ ಮಾಹಿತಿ ನೀಡಿದರು.

'ಕಲಬುರಗಿ ಜಿಲ್ಲೆಯ ಇಂಗಳಗಿ ಹಾಗೂ ರಾವೂರ ಗ್ರಾಮಗಳ ವ್ಯಾಪ್ತಿಯಲ್ಲಿ ಎಸಿಸಿ ಕಂಪನಿಗೆ 471.03 ಹೆಕ್ಟೇರ್ ಸುಣ್ಣದ ಕಲ್ಲಿನ ಗಣಿ ಗುತ್ತಿಗೆಗೆ ನೀಡಲಾಗಿದೆ. ಈ ವರ್ಷದ ಜನವರಿಯಲ್ಲೇ ಗುತ್ತಿಗೆ ಅವಧಿ ಮುಗಿದಿದ್ದು, ಹೊಸದಾಗಿ ಅನುಮತಿ ನೀಡಿಲ್ಲ. ರಾಜಧನ ಮತ್ತು ದಂಡದ ಮೊತ್ತ ಪ್ರಶ್ನಿಸಿ ಕಂಪನಿ ಕಾನೂನು ಹೋರಾಟ ನಡೆಸುತ್ತಿದೆ. ಸುಪ್ರೀಂ ಕೋರ್ಟ್‌ನಲ್ಲಿ ವಿಚಾರಣೆ ನಡೆಯುತ್ತಿದೆ. ಪಾವತಿಸಬೇಕಾದ ಮೊತ್ತ ಇತ್ಯರ್ಥವಾಗಿಲ್ಲ. ಅಲ್ಲಿಯವರೆಗೆ ಗಣಿಗಾರಿಕೆ ನಡೆಸಲು ಕೋರ್ಟ್ ಅವಕಾಶ ನೀಡಿದೆ' ಎಂದರು.

'ಕಾಂಗ್ರೆಸ್ ನಾಯಕರು ಅದಾನಿ ಅವರನ್ನು ಪ್ರಧಾನಮಂತ್ರಿ ನರೇಂದ್ರ ಮೋದಿ ಸ್ನೇಹಿತ ಎಂದು ಟೀಕಿಸುತ್ತಾರೆ. ಅದಾನಿ ಒಡೆತನದ ಕಂಪನಿ ಭಾರಿ ಮೊತ್ತ ಬಾಕಿ ಉಳಿಸಿಕೊಂಡರೂ ರಾಜ್ಯ ಸರ್ಕಾರ ಗಣಿಗಾರಿಕೆಗೆ ಅವಕಾಶ ನೀಡಿದೆ. ಇದರ ಹಿಂದಿನ ಹಿತಾಸಕ್ತಿ ಏನು' ಎಂದು ಬಿಜೆಪಿಯ ಸಿ.ಟಿ.ರವಿ ಪ್ರಶ್ನಿಸಿದರು.

ಫೋಟೊ ಶೂಟ್: ನಾನಾ ವ್ಯಾಖ್ಯಾನ

ಬೆಂಗಳೂರು: ಒಟ್ಟಾಗಿ ಭಾವಚಿತ್ರ ತೆಗೆಸಿಕೊಳ್ಳಲು ಹಾಜರಾಗುವಂತೆ ವಿಧಾನಸಭಾಧ್ಯಕ್ಷ ಯು.ಟಿ. ಖಾದರ್ ಅವರು ಶಾಸಕರಿಗೆ ಸೂಚನೆ ನೀಡಿದ್ದು, ನಾನಾ ವ್ಯಾಖ್ಯಾನಗಳಿಗೆ ಕಾರಣವಾಗಿದೆ.

ಈ ಕಾರ್ಯಕ್ರಮವು ಬುಧವಾರ ಬೆಳಿಗ್ಗೆ 10 ಗಂಟೆಗೆ ವಿಧಾನ ಸೌಧದ ಪೂರ್ವ ದ್ವಾರದ ಮೆಟ್ಟಿಲುಗಳ ನಡೆಯಲಿದೆ.

'ಈಗ ಗ್ರೂಪ್ ಫೋಟೊ ಶೂಟ್ ಮಾಡಿಸುತ್ತಿರುವುದು ಅಕಾಲಿಕ. ಸಾಮಾನ್ಯವಾಗಿ ಚುನಾವಣೆಗೆ ಮುನ್ನ ಕೊನೇ ಅಧಿವೇಶನದ ವೇಳೆಯಲ್ಲಿ ನಡೆಸಲಾಗುತ್ತದೆ' ಎಂದು ಶಾಸಕ ಎಸ್. ಸುರೇಶ್ ಕುಮಾರ್ ಹೇಳಿದ್ದಾರೆ.

'ಒಂದೋ ಖಾದರ್ ಅವರಿಗೆ ಮಂತ್ರಿ ಸ್ಥಾನ ಸಿಗುವ ಸಾಧ್ಯತೆ ಇದೆ, ಇಲ್ಲಾ ಮುಖ್ಯಮಂತ್ರಿ ಬದಲಾಗಬಹುದು. ಇವುಗಳಲ್ಲಿ ನಿಜವಾದ ಕಾರಣ ಯಾವುದು' ಎಂದು ಅವರು ಪ್ರಶ್ನಿಸಿದ್ದಾರೆ.

ಶಿಕ್ಷಕರ ವರ್ಗಾವಣೆ: ಬದಲಾವಣೆಗೆ ಅಸ್ತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಾಲೆಗಳನ್ನು ಮೂರು ವರ್ಗಗಳಾಗಿ ವಿಂಗಡಿಸಿ, ತುರ್ತು ಸೇವಾ ಗುಂಪು ಎಂದು ಪರಿಗಣಿಸಿ ಶಿಕ್ಷಕರ ವರ್ಗಾವಣೆ ಸ್ವರೂಪದಲ್ಲಿ ಆಮೂಲಾಗ್ರ ಬದಲಾವಣೆಗೆ ಅವಕಾಶ ಕಲ್ಪಿಸುವ 'ಕರ್ನಾಟಕ ರಾಜ್ಯ ನಾಗರಿಕ ಸೇವೆಗಳು (ಶಿಕ್ಷಕರ ವರ್ಗಾವಣೆ ನಿಯಂತ್ರಣ) (ತಿದ್ದುಪಡಿ) ಮಸೂದೆ'ಗೆ ವಿಧಾನಸಭೆ ಮಂಗಳವಾರ ಅನುಮೋದನೆ ನೀಡಿತು.

ಮಸೂದೆಯನ್ನು ಪರ್ಯಾಲೋಚನೆಗೆ ಮಂಡಿಸಿದ ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ, ಅದರಲ್ಲಿರುವ ಪ್ರಮುಖ ಅಂಶಗಳ ಕುರಿತು ವಿವರಿಸಿದರು.

'ಕರ್ನಾಟಕ ಪಬ್ಲಿಕ್ ಶಾಲೆಗಳು, ಆದರ್ಶ ವಿದ್ಯಾಲಯ, ಪಿಎಂ ಶ್ರೀ ಶಾಲೆಗಳು ಎಂದು ಮೂರು ವರ್ಗಗಳಲ್ಲಿರುವ ಶಿಕ್ಷಕರು ಕನಿಷ್ಠ 12 ವರ್ಷ ಒಂದೇ ಕಡೆ ಕರ್ತವ್ಯ ನಿರ್ವಹಿಸಿದ ನಂತರ ಕೌನ್ಸೆಲಿಂಗ್ ಮೂಲಕ ವರ್ಗಾವಣೆ, ಬೋಧಕೇತರ ಹುದ್ದೆಗಳಿಗೆ ಶಿಕ್ಷಕರ ನೇಮಕಕ್ಕೆ ನಿರ್ಬಂಧ, ಗರ್ಭಿಣಿ ಅಥವಾ ಐದು ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಗುವಿರುವ ಶಿಕ್ಷಕಿಯರು ಬಯಸಿದ ಸ್ಥಳ ಆಯ್ಕೆಗೆ ಆದ್ಯತೆ, ಕಲ್ಯಾಣ ಕರ್ನಾಟಕ ಭಾಗದ ಜಿಲ್ಲೆಗಳಿಗೆ ನೇಮಕವಾದವರು ಕನಿಷ್ಠ 10 ವರ್ಷಗಳ ಸೇವೆ ಸಲ್ಲಿಸಿದ ನಂತರವೇ ಹೊರ ಜಿಲ್ಲೆಗಳಿಗೆ ವರ್ಗಾವಣೆಗೆ ಈ ಮಸೂದೆ ಅವಕಾಶ ನೀಡಲಿದೆ' ಎಂದರು.

ಮಕ್ಕಳೇ ಶೌಚಾಲಯ ಸ್ವಚ್ಛ ಮಾಡಲಿ: ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಸಿ.ಬಿ. ಸುರೇಶ್‌ಬಾಬು, 'ಡಿ' ಗ್ರೂಪ್ ನೌಕರರಿಲ್ಲದ ಶಾಲೆಗಳಲ್ಲಿ ಮಕ್ಕಳಿಂದ ಕಸ ಗುಡಿಸುವ ಕೆಲಸ ಮಾಡ ಲಾಗುತ್ತಿದೆ' ಎಂದರು. ಮಧ್ಯಪ್ರವೇಶಿಸಿದ ಸಭಾಧ್ಯಕ್ಷ ಯು. ಟಿ. ಖಾದರ್, 'ಅದರಲ್ಲಿ ತಪ್ಪೇನಿಲ್ಲ. ವಿದ್ಯಾರ್ಥಿಯಾಗಿದ್ದಾಗ ನಾವೇ ಸ್ವಚ್ಛ ಮಾಡುತ್ತಿದ್ದೆವು. ಸ್ವಚ್ಛ ಮಾಡಿದರೆ ಮಕ್ಕಳಿಗೂ ಗೊತ್ತಾಗುತ್ತದೆ' ಎಂದು ಸಮರ್ಥಿಸಿಕೊಂಡರು.

ಅದಕ್ಕೆ ಸುರೇಶ್ ಬಾಬು, 'ಹಾಗಾದರೆ ಆ ರೀತಿ ಕಾನೂನಾದರೂ ಮಾಡಿ. ಇಲ್ಲವಾದರೆ, ಪೋಷಕರಲ್ಲಿ ಗೊಂದಲ ಉಂಟಾಗುತ್ತದೆ' ಎಂದು ಸಲಹೆ ನೀಡಿದರು. 'ಶೌಚಾಲಯ ಸ್ವಚ್ಛ ಮಾಡಲು ಶಾಲಾ ಮಕ್ಕಳಿಗೆ ಅವಕಾಶ ಕೊಡಿ. ನಾವೆಲ್ಲಾ ಮಾಡಿ ಬಂದಿದ್ದೇವೆ. ಅವರೂ ಕಲಿಯಲಿ' ಎಂದು ಬಿಜೆಪಿಯ ಆರಗ ಜ್ಞಾನೇಂದ್ರ ಹೇಳಿದರು.

ಈ ವೇಳೆ ಖಾದರ್, 'ಈ ಬಗ್ಗೆ ಕಾನೂನು ಬದಲಾವಣೆ ಮಾಡಲು ಸಾಧ್ಯವೇ? ನೋಡಿ' ಎಂದು ಸಚಿವರಿಗೆ ಸಲಹೆ ನೀಡಿದರು. ಅದಕ್ಕೆ ಪ್ರತಿಕ್ರಿಯಿಸಿದ ಮಧು ಬಂಗಾರಪ್ಪ, 'ಮಕ್ಕಳ ಹಕ್ಕು ಇರುವುದರಿಂದ ಅದಕ್ಕೆ ಅನುಗುಣವಾಗಿ ನಿಯಮ ರೂಪಿಸಬೇಕಾಗುತ್ತದೆ. ಹೇಗೆ ಮಾಡುವುದು ಎಂಬ ಬಗ್ಗೆ ಅಭಿಪ್ರಾಯ ತಿಳಿಸಿದರೆ ಪರಿಶೀಲಿಸಬಹುದು' ಎಂದು ಸದಸ್ಯರಲ್ಲಿ ಮನವಿ ಮಾಡಿದರು.

ಶಾಲೆ, ಕಾಲೇಜುಗಳ ಜಾಗ ಇನ್ನು ಸರ್ಕಾರದ ಆಸ್ತಿ

ಸರ್ಕಾರಿ ಶಾಲೆ, ಪಿಯು ಕಾಲೇಜುಗಳು ಕಾರ್ಯನಿರ್ವಹಿಸುತ್ತಿರುವ ಜಾಗದ ದಾಖಲೆಗಳು ಶಿಕ್ಷಣ ಇಲಾಖೆ ಹೆಸರಿನಲ್ಲಿ ಇಲ್ಲದಿದ್ದರೂ ಅವುಗಳನ್ನು ಸರ್ಕಾರದ ಆಸ್ತಿಯಾಗಿ ಸಕ್ರಮಗೊಳಿಸಲು ಅವಕಾಶ ಕಲ್ಪಿಸುವ 'ಕರ್ನಾಟಕ ಸರ್ಕಾರಿ ಶೈಕ್ಷಣಿಕ ಸಂಸ್ಥೆಯ ಭೂಮಿಗಳ (ರಕ್ಷಣೆ ಮತ್ತು ಸಕ್ರಮಾತಿ) ಮಸೂದೆ' ವಿಧಾನಸಭೆಯಲ್ಲಿ ಮಂಗಳವಾರ ಅಂಗೀಕಾರಗೊಂಡಿತು.

ಮಸೂದೆಯನ್ನು ಪರ್ಯಾಲೋಚನೆಗೆ ಮಂಡಿಸಿದ ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ, 'ಸರ್ಕಾರಿ ಶಾಲೆ, ಕಾಲೇಜುಗಳು ಇರುವ ಜಮೀನುಗಳನ್ನು ಕೆಲವರು ದಾನ ನೀಡಿರುತ್ತಾರೆ. ಆದರೆ, ಆಗ ಇಲಾಖೆ ಹೆಸರಿಗೆ ಮಾಡಿಸಿಕೊಂಡಿರುವುದಿಲ್ಲ. ಅಂತಹ ಜಮೀನುಗಳಿಗೆ ದಾನ ಮಾಡಿದವರ ವಾರಸುದಾರರು ತಕರಾರು ಮಾಡುತ್ತಿರುವ ನಿದರ್ಶನಗಳಿವೆ. ಅಂತಹ ಆಸ್ತಿಗಳನ್ನೆಲ್ಲಾ ಸಂರಕ್ಷಿಸಿ ಸರ್ಕಾರಿ ಇಲಾಖೆ ಹೆಸರಿಗೆ ಮಾಡಿಕೊಳ್ಳಲು ಈ ಮಸೂದೆ ತರಲಾಗಿದೆ' ಎಂದು ವಿವರಿಸಿದರು.



ಮಧು ಬಂಗಾರಪ್ಪ

ಮಸೂದೆಯನ್ನು ಬೆಂಬಲಿಸಿದ ವಿರೋಧ ಪಕ್ಷದ ನಾಯಕ ಆರ್. ಅಶೋಕ, 'ಕಾಯ್ದೆಯನ್ನು ಕಟ್ಟುನಿಟ್ಟಾಗಿ ಜಾರಿ ಮಾಡಬೇಕು. ಕೆಲವರು ಶಾಲೆ, ಕಾಲೇಜು ಜಾಗವನ್ನು ಉಳುಮೆ ಮಾಡಿ ಸಾಗುವಳಿ ಪತ್ರಕ್ಕೆ ಕಾಯುತ್ತಿದ್ದಾರೆ. ಅಂತಹವರಿಗೆ ಅವಕಾಶ ಮಾಡಿಕೊಡಬೇಡಿ' ಎಂದರು.

ಮಸೂದೆಯಲ್ಲಿ ಏನಿದೆ: ರಾಜ್ಯದ ಯಾವುದೇ ಸ್ಥಿರಾಸ್ತಿ ಮೇಲೆ ಸರ್ಕಾರಿ ಶಾಲೆ, ಪಿಯು ಕಾಲೇಜುಗಳು ಕನಿಷ್ಠ 12 ವರ್ಷಗಳಿಂದ ಕಾರ್ಯನಿರ್ವಹಿಸಿದರೆ ಆ ಭೂಮಿಯು ಇನ್ನು ಮುಂದೆ ಸರ್ಕಾರಿ ಜಾಗ ಅಥವಾ ಸಂಬಂಧಪಟ್ಟ ಪ್ರಾಧಿಕಾರದ ಆಸ್ತಿಯಾಗಲಿದೆ. ಸ್ಥಿರಾಸ್ತಿಯ ಮೇಲೆ ಯಾವುದೇ ಋಣಭಾರ ಇರಲಿ, ಕ್ಲೇಮುಗಳಿರಲಿ ಅಥವಾ ಯಾರದ್ದೇ ಉತ್ತರಾಧಿಕಾರ ಇರಲಿ ಅವೆಲ್ಲವೂ ಮುಕ್ತಗೊಳ್ಳಲಿವೆ. ಯಾವುದೇ ವ್ಯಕ್ತಿಯು ಹಕ್ಕುಸ್ವಾಮ್ಯವನ್ನು ಕ್ಲೇಮು ಮಾಡಿ ನ್ಯಾಯಾಲಯದಲ್ಲಿ ದಾವೆ ಹೂಡುವಂತಿಲ್ಲ.

ಶಾಲಾ ಮಾನ್ಯತೆ: ಸಮಿತಿ ಅವಧಿ ವಿಸ್ತರಣೆ

ಬೆಂಗಳೂರು: ಖಾಸಗಿ ಹಾಗೂ ಅನುದಾನಿತ ಶಾಲೆಗಳ ಮಾನ್ಯತೆ ನವೀಕರಣ ನಿಯಮಗಳನ್ನು ಸಡಿಲಿಸಿ, ವಿನಾಯಿತಿ ನೀಡಲು ರಚಿಸಲಾಗಿದ್ದ ಪುಟ್ಟಣ್ಣ ಅಧ್ಯಕ್ಷತೆಯ ವಿಶೇಷ ಸದನ ಸಮಿತಿಯ ಅವಧಿಯನ್ನು ವಿಧಾನ ಪರಿಷತ್ ಮತ್ತೆ 6 ತಿಂಗಳು ವಿಸ್ತರಿಸಿತು.

2025-26ನೇ ಸಾಲಿಗೆ ಸರ್ಕಾರದಿಂದ ಮಾನ್ಯತೆ ಪಡೆದ ಖಾಸಗಿ ಅನುದಾನಿತ ಮತ್ತು ಅನುದಾನ ರಹಿತ ಪ್ರೌಢಶಾಲೆಗಳ ಮಾನ್ಯತೆ ನವೀಕರಣಕ್ಕಾಗಿ ಅರ್ಜಿಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಲು ಅವಕಾಶ ಕಲ್ಪಿಸಲಾಗಿತ್ತು. ಹೈಕೋರ್ಟ್ ಆದೇಶದಂತೆ ಶಾಲೆಗಳಿಗೆ ಅಗ್ನಿ, ಕಟ್ಟಡದ ಸುರಕ್ಷತೆ ಪ್ರಮಾಣಪತ್ರ ಹಾಗೂ ಭೂ ಪರಿವರ್ತನೆ ಕಡ್ಡಾಯಗೊಳಿಸಲಾಗಿತ್ತು.

'ಶಿಕ್ಷಣ ಇಲಾಖೆ ಶಾಲೆಗಳ ನವೀಕರಣಕ್ಕೆ 64 ಅಂಶಗಳನ್ನು ನಿಗದಿಪಡಿಸಿ, ದಾಖಲೆಗಳನ್ನು ಪಡೆಯುತ್ತಿದೆ. ಇದರಿಂದ, ಶಾಲೆಗಳ ನವೀಕರಣ ಪತ್ರಗಳನ್ನು ಪಡೆಯುವುದು ಕಷ್ಟವಾಗಿದೆ. ಖಾಸಗಿ ಶಿಕ್ಷಣ ಸಂಸ್ಥೆಗಳ ಮೇಲೆ ವಿಧಿಸುತ್ತಿರುವ ತೆರಿಗೆ ಕೈಬಿಡುವುದು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸಬೇಕು. ಕೆಲ ಷರತ್ತುಗಳನ್ನು ಸಡಿಲಿಸಬೇಕು' ಎಂದು ಸದಸ್ಯರು ಮಾಡಿದ್ದ ಮನವಿ ಕುರಿತು ಹಿಂದಿನ ಕಲಾಪಗಳಲ್ಲಿ ಚರ್ಚೆ ನಡೆಸಲಾಗಿತ್ತು. ಬಳಿಕ ಕಠಿಣ ನಿಯಮಗಳನ್ನು ಸಡಿಲಿಸಲು ಸಮಿತಿ ರಚಿಸಲಾಗಿತ್ತು.

ಮಾನ್ಯತೆ ನವೀಕರಣ ಮಾಡಿಕೊಳ್ಳದ ಅನುದಾನಿತ ಹಾಗೂ ಖಾಸಗಿ ಪ್ರೌಢಶಾಲೆಗಳಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ಹಾಜರಾಗುವ ವಿದ್ಯಾರ್ಥಿಗಳಿಗೆ ತೊಂದರೆ ಆಗದಂತೆ ಕ್ರಮ ಕೈಗೊಳ್ಳಲು ಸಮಿತಿಯು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿಗೆ ಸೂಚಿಸಿತ್ತು. ಸಮಿತಿಯ ಅವಧಿ ಇದೇ ಮಾರ್ಚ್ 16ಕ್ಕೆ ಮುಕ್ತಾಯವಾಗಿತ್ತು.

ಸಾಮಾಜಿಕ ಜಾಲತಾಣ ನಿರ್ಬಂಧಿಸಲು ಶಾಲೆಗಳಲ್ಲಿ ಜಾಗೃತಿ ಜತೆಗೆ ತರಬೇತಿ

ಡಿಜಿಟಲ್ ಸಾಧನ ಬಳಕೆಗೆ ಕರಡು ನೀತಿ ಸಿದ್ಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೊಬೈಲ್ ಮತ್ತು ಸಾಮಾಜಿಕ ಜಾಲತಾಣಗಳ ಅತಿಯಾದ ಬಳಕೆಯಿಂದ ಮಕ್ಕಳಲ್ಲಿ ಮಾನಸಿಕ ಅನಾರೋಗ್ಯ ಸಮಸ್ಯೆಗಳು ಹೆಚ್ಚುತ್ತಿರುವ ಕಾರಣ, ರಾಜ್ಯ ಸರ್ಕಾರವು ಮಕ್ಕಳ ಜವಾಬ್ದಾರಿಯುತ ಡಿಜಿಟಲ್ ಬಳಕೆಗೆ ಕರಡು ನೀತಿ ರೂಪಿಸಿದೆ.

ಡಿಜಿಟಲ್ ಸಾಧನಗಳ ಬಳಕೆ ಕುರಿತು ಜಾಗೃತಿ, ಶಿಕ್ಷಕರಿಗೆ ತರಬೇತಿ, ಡಿಜಿಟಲ್ ಕ್ಷೇಮ ಸಮಿತಿ ರಚನೆಯಂತಹ ಕ್ರಮಗಳನ್ನೂ ಸೂಚಿಸಲಾಗಿದೆ.

ಆರೋಗ್ಯ ಇಲಾಖೆ, ಶಿಕ್ಷಣ ಇಲಾಖೆ, ಕರ್ನಾಟಕ ರಾಜ್ಯ ಮಾನಸಿಕ ಆರೋಗ್ಯ ಪ್ರಾಧಿಕಾರ ಹಾಗೂ ನಿಮ್ಹಾನ್ಸ್ ತಜ್ಞರು ಪೋಷಕರ ಜತೆಗೆ ಸಮಾಲೋಚನೆ ನಡೆಸಿ, ಶಾಲಾ ಕಾಲೇಜು ವಿದ್ಯಾರ್ಥಿಗಳಿಗಾಗಿ ಕರಡು ನೀತಿ ರಚಿಸಿದ್ದಾರೆ. ಡಿಜಿಟಲ್ ಸಾಧನಗಳ ಬಳಕೆ ಮತ್ತು ಮಾನಸಿಕ ಅನಾರೋಗ್ಯ ಸಮಸ್ಯೆಗಳ ನಿರ್ವಹಣೆ ಬಗ್ಗೆ ಶಿಕ್ಷಣ ಸಂಸ್ಥೆಗಳು, ಶಿಕ್ಷಕರು ಹಾಗೂ ಪಾಲಕರು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಉಲ್ಲೇಖಿಸಲಾಗಿದೆ.



'ಮಾನಸಿಕ ಅನಾರೋಗ್ಯ ಸಮಸ್ಯೆಗಳು ಇತ್ತೀಚಿನ ವರ್ಷಗಳಲ್ಲಿ ಹೆಚ್ಚಳವಾಗುತ್ತಿವೆ. ಅತಿಯಾದ ಮತ್ತು ಅನಿಯಂತ್ರಿತ ತಂತ್ರಜ್ಞಾನ ಬಳಕೆಯು ಇದಕ್ಕೆ ಪ್ರಮುಖ ಕಾರಣವಾಗಿದೆ. ಅಧ್ಯಯನಗಳ ಪ್ರಕಾರ, ಶೇ 25ರಷ್ಟು ಹದಿಹರೆಯದವರು ಸಾಮಾಜಿಕ ಜಾಲತಾಣಗಳ ವ್ಯಸನಿಗಳಾಗಿದ್ದಾರೆ. ಅವರಲ್ಲಿ ಅನೇಕರು ಆತಂಕ, ಉದ್ವಿಗ್ನತೆ, ನಿದ್ರಾಹೀನತೆ ಹಾಗೂ ಏಕಾಗ್ರತೆ ಕೊರತೆಯಂತಹ ಸಮಸ್ಯೆ ಎದುರಿಸುತ್ತಿದ್ದಾರೆ. ಆದ್ದರಿಂದ ಡಿಜಿಟಲ್ ಸಾಧನಗಳ ಅತಿಯಾದ ಬಳಕೆ ಮತ್ತು ಅವುಗಳಿಂದ ಉಂಟಾಗುವ ಮಾನಸಿಕ ಸಮಸ್ಯೆಗಳನ್ನು ಪ್ರಾರಂಭಿಕ ಹಂತದಲ್ಲಿಯೇ ಗುರುತಿಸಬೇಕಿದೆ. ಮಕ್ಕಳಲ್ಲಿ ಆರೋಗ್ಯಕರ ಮತ್ತು ಸಮತೋಲಿತ ತಂತ್ರಜ್ಞಾನ ಅಭ್ಯಾಸ ಉತ್ತೇಜಿಸಬೇಕಿದೆ. ಹಾಗಾಗಿ, ಶಿಕ್ಷಕರು ಮತ್ತು ಪೋಷಕರ ತರಬೇತಿ ಕಾರ್ಯಕ್ರಮ ತುರ್ತು ಅಗತ್ಯ' ಎಂದು ಕರಡು ನೀತಿಯಲ್ಲಿ ತಿಳಿಸಲಾಗಿದೆ.

ಡಿಜಿಟಲ್ ಸಾಕ್ಷರತೆ: ಶಾಲಾ ಪಠ್ಯಕ್ರಮದಲ್ಲಿ ಡಿಜಿಟಲ್ ಸಾಕ್ಷರತೆ ಅಳವಡಿಕೆ ಬಗ್ಗೆಯೂ ಸೂಚಿಸಲಾಗಿದೆ. ಸಕಾರಾತ್ಮಕ ಡಿಜಿಟಲ್ ಅಭ್ಯಾಸ, ಆನ್‌ಲೈನ್ ಶಿಷ್ಟಾಚಾರ, ಅಂತರ್ಜಾಲ ತಾಣಗಳ ಸುರಕ್ಷಿತ ಬಳಕೆಯ ಬಗ್ಗೆ ವಯಸ್ಸಿಗೆ ಅನುಗುಣವಾಗಿ ತಿಳಿಸುವಿಕೆ, ವಿದ್ಯಾರ್ಥಿಗಳಲ್ಲಿನ ಆತಂಕ, ಒತ್ತಡ ಹಾಗೂ ಅಧ್ಯಯನ ಸಾಮರ್ಥ್ಯ ಕುಂಠಿತವಾಗುವ ಬಗ್ಗೆ ಜಾಗೃತಿ ಮೂಡಿಸುವಿಕೆಯಂತಹ ಕ್ರಮಗಳ ಬಗ್ಗೆ ಕರಡು ನೀತಿಯಲ್ಲಿ ಹೇಳಲಾಗಿದೆ.

ಪ್ರತಿಯೊಂದು ಶಾಲೆಯೂ ಡಿಜಿಟಲ್ ಸಾಧನಗಳ ಬಳಕೆ ಬಗ್ಗೆ ನೀತಿ ರೂಪಿಸಿ, ಜಾರಿಗೊಳಿಸಬೇಕೆಂದು ಸೂಚಿಸಲಾಗಿದೆ. ಡಿಜಿಟಲ್ ಸಾಧನಗಳ ಬಳಕೆ ಮೇಲೆ ನಿಗಾ ಇಡುವ ಜತೆಗೆ, ಶಾಲಾ ಕೆಲಸದ ಹೊರತಾಗಿ ಡಿಜಿಟಲ್ ಸಾಧನಗಳ ಬಳಕೆಯ ಅವಧಿಯನ್ನು ದಿನಕ್ಕೆ ಒಂದು ಗಂಟೆಗೆ ನಿಗದಿಪಡಿಸಬೇಕು ಎಂದು ಹೇಳಲಾಗಿದೆ. ವಿದ್ಯಾರ್ಥಿಗಳನ್ನು ವಾಟ್ಸ್‌ಆ್ಯಪ್ ನಂತಹ ಸಾಮಾಜಿಕ ಜಾಲತಾಣಗಳ ಮೂಲಕ ಸಂಪರ್ಕಿಸುವ ಬದಲು, ಮೊದಲಿನಂತೆ ದಿನಚರಿ ವ್ಯವಸ್ಥೆ (ಡೈರಿ) ಮೂಲಕ ಸಂಪರ್ಕಿಸಬೇಕು ಎಂದು ತಿಳಿಸಲಾಗಿದೆ.

ಪ್ರಮುಖ ನಿರ್ದೇಶನಗಳು

- ಪ್ರತಿ ಶಾಲೆಯಲ್ಲಿ ಡಿಜಿಟಲ್ ಕ್ಷೇಮ ಸಮಿತಿ ರಚನೆ ಮಾಡಬೇಕು. ಅದರಲ್ಲಿ ಪ್ರಾಂಶುಪಾಲರು ಅಥವಾ ಉಪ ಪ್ರಾಂಶುಪಾಲರು, ಮಾನಸಿಕ ಆರೋಗ್ಯ ವೃತ್ತಿಪರರು, ಶಿಕ್ಷಕರು, ಪೋಷಕ ಪ್ರತಿನಿಧಿಗಳು, ವಿದ್ಯಾರ್ಥಿ ಪ್ರತಿನಿಧಿಗಳು, ಸೈಬರ್ ಅಪರಾಧ ಪೊಲೀಸರು ಇರಬೇಕು
- ಮಕ್ಕಳಲ್ಲಿ ಕಾಣಿಸಿಕೊಳ್ಳುವ ಮಾನಸಿಕ ಅನಾರೋಗ್ಯ ಸಮಸ್ಯೆಗಳನ್ನು ಗುರುತಿಸಲು ಶಿಕ್ಷಕರಿಗೆ ತರಬೇತಿ ನೀಡಬೇಕು. ಅವರು ವಿದ್ಯಾರ್ಥಿಗಳಲ್ಲಿನ ಬದಲಾವಣೆ ಗುರುತಿಸಬೇಕು
- ಆನ್‌ಲೈನ್ ಕಿರುಕುಳ, ಬೆದರಿಕೆ, ಅಪಮಾನ, ಸಾಮಾಜಿಕ ಮಾಧ್ಯಮಗಳ ಮೂಲಕ ವದಂತಿ ಹರಡುವಿಕೆ ಬಗ್ಗೆ ನಿಗಾ ಇಡಬೇಕು. ಈ ಬಗ್ಗೆ ಹಿರಿಯರಿಗೆ, ಶಿಕ್ಷಕರಿಗೆ ತಿಳಿಸುವಂತೆ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಬೇಕು
- ಮಾನಸಿಕ ಅನಾರೋಗ್ಯ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಸಮಾಲೋಚನೆಗೆ ಟೆಲಿ ಮನಸ್ ಸಹಾಯವಾಣಿ (14416) ಸಂಪರ್ಕಿಸುವಂತೆ ಜಾಗೃತಿ ಮೂಡಿಸಬೇಕು
- ಸುರಕ್ಷಿತ ಮತ್ತು ಜವಾಬ್ದಾರಿಯುತವಾಗಿ ಡಿಜಿಟಲ್ ಸಾಧನಗಳ ಬಳಕೆ ಬಗ್ಗೆ ಶಿಕ್ಷಕರು, ಪೋಷಕರು ಮತ್ತು ವಿದ್ಯಾರ್ಥಿಗಳಿಗೆ ಕಡ್ಡಾಯವಾಗಿ ವಾರ್ಷಿಕ ತರಬೇತಿ ನೀಡಬೇಕು

ಮಳೆ ಕೊರತೆ: ಎದುರಿಸಲು ಸಿದ್ಧತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಈ ಮುಂಗಾರಿನಲ್ಲಿ ಮಳೆ ಕೊರತೆಯಾಗುವ ಸಂಭವವಿದ್ದು, ಬರದ ಸ್ಥಿತಿಯನ್ನು ಎದುರಿಸಲು ಮುಂಜಾಗ್ರತಾ ಕ್ರಮ ತೆಗೆದುಕೊಳ್ಳುವ ಬಗ್ಗೆ ಸರ್ಕಾರ ಚಿಂತನೆ ನಡೆಸಿದೆ.

ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರ ಅಧ್ಯಕ್ಷತೆಯ ಪ್ರಕೃತಿ ವಿಕೋಪಕ್ಕೆ ಸಂಬಂಧಿಸಿದ ಸಚಿವ ಸಂಪುಟ ಉಪ ಸಮಿತಿ ಸಭೆ ಮಂಗಳವಾರ ನಡೆಯಿತು.

ಪೂರ್ವ ಮುಂಗಾರಿನಲ್ಲಿ 17 ಜಿಲ್ಲೆಗಳಲ್ಲಿ ವಾಡಿಕೆಗಿಂತ ಅತ್ಯಧಿಕ ಮಳೆ, ಐದು ಜಿಲ್ಲೆಗಳಲ್ಲಿ ಅಧಿಕ, ಆರು ಜಿಲ್ಲೆಗಳಲ್ಲಿ ವಾಡಿಕೆಯಷ್ಟು ಮಳೆಯಾಗಿದ್ದರೆ, ಮೂರು ಜಿಲ್ಲೆಗಳಲ್ಲಿ ಮಳೆ ಕೊರತೆಯಾಗಿದೆ. ಮುಂಗಾರಿನಲ್ಲಿ ಜೂನ್–ಜುಲೈ ಅವಧಿಯಲ್ಲಿ ವಾಡಿಕೆಯಷ್ಟು ಮಳೆಯಾಗುವ ನಿರೀಕ್ಷೆ ಇದ್ದು, ನಂತರದ ತಿಂಗಳುಗಳಲ್ಲಿ ಕೊರತೆಯಾಗುವ ಸಂಭವವಿದೆ ಎಂಬ ವಿಷಯ ಸಭೆಯಲ್ಲಿ ಪ್ರಸ್ತಾಪವಾಗಿದೆ ಎಂದು ಮೂಲಗಳು ಮಾಹಿತಿ ನೀಡಿವೆ.

ಮಳೆ ಕೊರತೆಯಿಂದ ಉದ್ಭವಿಸಬಹುದಾದ ಪರಿಸ್ಥಿತಿಯನ್ನು ಎದುರಿಲು ಸಿದ್ಧತೆ ಮಾಡಿಕೊಳ್ಳಬೇಕಿದೆ. ಜಿಲ್ಲಾವಾರು ಬೆಳೆ ಆಕಸ್ಮಿಕ ಯೋಜನೆಗಳನ್ನು ರೂಪಿಸಬೇಕು ಮತ್ತು ಬರ ನಿರೋಧಕ ತಳಿಯ ಬೀಜಗಳ ಬಿತ್ತನೆಗೆ ಒತ್ತು ನೀಡಬೇಕು. ಜಲಾಶಯಗಳ ನೀರನ್ನು ಕುಡಿಯುವ ಉದ್ದೇಶಕ್ಕಾಗಿ ಆದ್ಯತೆ ಮೇರೆಗೆ ಕಾಯ್ದಿರಿಸಬೇಕು ಎಂಬ ಸಲಹೆ ಸಭೆಯಲ್ಲಿ ವ್ಯಕ್ತವಾಗಿದೆ ಎಂದೂ ಮೂಲಗಳು ಹೇಳಿವೆ.

ಪರಿಹಾರ ಕೋರಿ ಪತ್ರ: ಮಳೆಯಿಂದ ಹಾನಿಯಾದ ಬೆಳೆಗೆ, ಬೆಳೆ ಹೂಡುವಳಿ ಸಹಾಯಧನಕ್ಕಾಗಿ ₹614.90 ಕೋಟಿ ಮತ್ತು ಆಸ್ತಿ ಹಾನಿಗೆ ಪರಿಹಾರವಾಗಿ ₹1,521 ಕೋಟಿ ಕೋರಿ ಕೇಂದ್ರಕ್ಕೆ ಪತ್ರ ಬರೆಯಲಾಗಿದೆ. ಈ ಸಂಬಂಧ ಕೇಂದ್ರದ ತಂಡವು ರಾಜ್ಯಕ್ಕೆ ಬಂದು, ಪರಿಶೀಲನೆ ನಡೆಸಿದೆ. ಸಮುದ್ರ ಕೊರೆತ ತಡೆಗೆ ₹198.88 ಕೋಟಿ ಕೋರಿ ಕೇಂದ್ರಕ್ಕೆ ಪ್ರಸ್ತಾವ ಸಲ್ಲಿಸಲಾಗಿದೆ. 2025–26ರ ಅವಧಿಯಲ್ಲಿ ಮಲೆನಾಡು ಮತ್ತು ಕರಾವಳಿ ಭಾಗದಲ್ಲಿ ಭೂಕುಸಿತ ಉಪಶಮನ ಕಾಮಗಾರಿಗಳಿಗಾಗಿ ₹466.63 ಕೋಟಿ ವೆಚ್ಚದಲ್ಲಿ ಯೋಜನೆ ರೂಪಿಸಲಾಗಿದೆ ಎಂಬ ಮಾಹಿತಿಯನ್ನು ಸಭೆಯ ಮುಂದಿಡಲಾಯಿತು.

ಕುಡಿಯುವ ನೀರು: ರಾಜ್ಯದ 207 ತಾಲ್ಲೂಕುಗಳಲ್ಲಿ ಸಮಸ್ಯೆ ಸಂಭವ

ಈ ಬೇಸಿಗೆಯಲ್ಲಿ 207 ತಾಲ್ಲೂಕುಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಾಗುವ ಸಾಧ್ಯತೆ ಇದೆ. ಈ ಪೈಕಿ 60 ತಾಲ್ಲೂಕುಗಳಲ್ಲಿ ಈಗಾಗಲೇ ಕೊರತೆ ಇದೆ ಎಂಬ ಬಗ್ಗೆಯೂ ಸಭೆಯಲ್ಲಿ ಚರ್ಚೆ ನಡೆದಿದೆ.

ರಾಜ್ಯದ ಎಲ್ಲ ತಾಲ್ಲೂಕುಗಳಲ್ಲೂ ಕುಡಿಯುವ ನೀರಿಗೆ ತೊಂದರೆ ಆಗದೆ ಇರುವ ಹಾಗೆ ಕ್ರಮ ತೆಗೆದುಕೊಳ್ಳಬೇಕು ಎಂದು ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಉತ್ತರ ಕರ್ನಾಟಕದ ಭಾಗದಲ್ಲಿ ಬಿಸಿಗಾಳಿ ಬೀಸುವ ಅಪಾಯವಿದೆ. ಆ ಪರಿಸ್ಥಿತಿಯನ್ನು ನಿರ್ವಹಿಸಲು ಸಿದ್ಧತೆ ಮಾಡಿಕೊಳ್ಳಬೇಕು ಹಾಗೂ ಆ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಬೇಕು ಎಂದೂ ಸೂಚಿಸಲಾಗಿದೆ.

'ಇವ ನಮ್ಮವ' ಮಸೂದೆ ಅಂಗೀಕಾರ

ಬೆಂಗಳೂರು: ಮರ್ಯಾದೆಗೇಡು ಹತ್ಯೆಯಂತಹ ಅಮಾನವೀಯ ಕೃತ್ಯಗಳಿಗೆ ಕಡಿವಾಣ ಹಾಕುವ ಉದ್ದೇಶದ 'ಇವ ನಮ್ಮವ ಇವ ನಮ್ಮವ ಮಸೂದೆ'ಗೆ ಸುದೀರ್ಘ ಅವಧಿಯ ಚರ್ಚೆಯ ನಂತರ ವಿಧಾನ ಪರಿಷತ್ತು ಅಂಗೀಕಾರ ನೀಡಿತು.

ಕಾನೂನು ಸಚಿವ ಎಚ್.ಕೆ.ಪಾಟೀಲ ಅವರು ಮಂಗಳವಾರ ಪರಿಷತ್ತಿನ ಕಲಾಪದಲ್ಲಿ 'ಕರ್ನಾಟಕ ವಿವಾಹದಲ್ಲಿ ಆಯ್ಕೆಯ ಸ್ವಾತಂತ್ರ್ಯ ಹಾಗೂ ಮರ್ಯಾದೆ ಮತ್ತು ಸಂಪ್ರದಾಯದ ಹೆಸರಿನಲ್ಲಿ ಅಪರಾಧಗಳ ಪ್ರತಿಬಂಧಕ ಮತ್ತು ನಿಷೇಧ (ಇವ ನಮ್ಮವ ಇವ ನಮ್ಮವ) ಮಸೂದೆ-2026' ಅನ್ನು ಮಂಡಿಸಿದರು.

ಆಡಳಿತ ಮತ್ತು ವಿರೋಧ ಪಕ್ಷದ ಒಟ್ಟು 23 ಸದಸ್ಯರು ಮಸೂದೆಯಲ್ಲಿನ ಅಂಶಗಳ ಕುರಿತು 4 ಗಂಟೆ 25 ನಿಮಿಷ ಮಾತನಾಡಿ, ಮಸೂದೆಯನ್ನು ಸ್ವಾಗತಿಸಿದರು.

ಹೆಣ್ಣುಮಕ್ಕಳ ಮದುವೆಯ ಕನಿಷ್ಠ ವಯಸ್ಸನ್ನು 18 ವರ್ಷದಿಂದ 21 ವರ್ಷಕ್ಕೆ ಹೆಚ್ಚಿಸಬೇಕು, ಈ ಮಸೂದೆಯ ನಿಯಮಗಳಂತೆ ವಿವಾಹವಾಗಲು ಇಚ್ಛಿಸುವ ಜೋಡಿಗಳಿಗೆ ಆಪ್ತ ಸಮಾಲೋಚನೆ ನೀಡುವ ವ್ಯವಸ್ಥೆಯನ್ನು ಮಾಡಬೇಕು, ಶಿಕ್ಷೆ ಪ್ರಮಾಣವನ್ನು ಐದು ವರ್ಷದಿಂದ ಜೀವಾವಧಿಗೆ ಹೆಚ್ಚಿಸಬೇಕು ಎಂಬ ಸಲಹೆ ಚರ್ಚೆಯ ವೇಳೆ ವ್ಯಕ್ತವಾಯಿತು.

'ನಾನೇ ಕ್ಷೌರ ಮಾಡಿಕೊಳ್ಳುತ್ತೇನೆ': 'ನಮ್ಮೂರಿನಲ್ಲಿ ನಮ್ಮವರಿಗೆ ಕ್ಷೌರಿಕ ಕ್ಷೌರ ಮಾಡುತ್ತಿರಲಿಲ್ಲ. ನಮ್ಮಪ್ಪ ಮನೆಯಲ್ಲೇ ಕ್ಷೌರ ಮಾಡುವ ಸಾಮಗ್ರಿ ಇಟ್ಟುಕೊಂಡಿದ್ದರು. ಅಪ್ಪನೇ ನಮಗೆ ಕ್ಷೌರ ಮಾಡುತ್ತಿದ್ದರು. ಕಾಲೇಜು ದಿನಗಳಲ್ಲಿ ಒಮ್ಮೆ ಕ್ಷೌರದ ಅಂಗಡಿಗೆ ಹೋಗಿದ್ದೆ, ಜಾತಿ ಕಾರಣಕ್ಕೆ ಗದರಿಸಿ ಅಲ್ಲಿಂದ ಹೊರ ಕಳುಹಿಸಿದ್ದರು. ಅಂದಿನಿಂದ ಇಲ್ಲಿಯವರೆಗೂ ನಾನೇ ಕ್ಷೌರ ಮಾಡಿಕೊಳ್ಳುತ್ತಿದ್ದೇನೆ. ಮರ್ಯಾದೆಗೇಡು ಹತ್ಯೆ ತಡೆಗೆ ಮಸೂದೆ ರೂಪಿಸುವ ಸರ್ಕಾರದ ನಿರ್ಧಾರ ಒಳ್ಳೆಯ ನಡೆ' ಎಂದು ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಹೇಳಿದರು.

ಬಿಜೆಪಿಯ ಎಚ್.ವಿಶ್ವನಾಥ್, 'ಮಾಜಿ ಮುಖ್ಯಮಂತ್ರಿ ಸೇರಿದಂತೆ ಕೆಲವರು ಪೋಕ್ಸೊ ಕಾಯ್ದೆಯಲ್ಲಿ ಸಿಲುಕಿಕೊಂಡಿದ್ದಾರೆ. ಕಾಯ್ದೆಯನ್ನು ನಾವೇ ದುರ್ಬಲಗೊಳಿಸಿದ್ದೇವೆ. ಅದೇ ರೀತಿ ಮರ್ಯಾದೆಗೇಡು ಹತ್ಯೆ ಕಾಯ್ದೆಯೂ ಆಗಬಾರದು. ಈ ಕಾಯ್ದೆಯನ್ನು ಒಳ್ಳೆಯ ಉದ್ದೇಶಕ್ಕಾಗಿ ರೂಪಿಸಲಾಗಿದೆ. ಪಾಲನೆ ಆಗುವಂತೆ ನೋಡಿಕೊಳ್ಳಬೇಕು' ಎಂದರು.

ಬಿಪಿಎಲ್ ಆದಾಯ ಮಿತಿ: ₹3 ಲಕ್ಷಕ್ಕೆ ಏರಿಕೆ

ಬೆಂಗಳೂರು: ಬಿಪಿಎಲ್ ಕಾರ್ಡ್‌ದಾರರ ಆದಾಯ ಮಿತಿಯನ್ನು ₹3 ಲಕ್ಷಕ್ಕೆ ಏರಿಸುವ ವಿಚಾರ ಸರ್ಕಾರದ ಮುಂದಿದೆ ಎಂದು ಆಹಾರ ಸಚಿವ ಕೆ.ಎಚ್.ಮುನಿಯಪ್ಪ ತಿಳಿಸಿದರು.

ವಿಧಾನಸಭೆಯಲ್ಲಿ ಮಂಗಳವಾರ ಆದಾಯ ಮಿತಿ ಹೆಚ್ಚಿಸುವ ಕುರಿತಂತೆ ಅರ್ಧಗಂಟೆ ಚರ್ಚೆಗೆ ಉತ್ತರ ನೀಡಿದ ಅವರು, 'ಈಗ ಆದಾಯ ಮಿತಿ ವರ್ಷಕ್ಕೆ ₹1.20 ಲಕ್ಷ ಇದೆ. ₹3 ಲಕ್ಷಕ್ಕೆ ಏರಿಸುವುದರಿಂದ ಸಾಕಷ್ಟು ಜನರಿಗೆ ಪರಿಹಾರ ಸಿಗುತ್ತದೆ. ಆಡಳಿತ ಸುಧಾರಣಾ ಆಯೋಗವೂ ತನ್ನ ವರದಿಯಲ್ಲಿ ಈ ಕುರಿತು ಶಿಫಾರಸು ಮಾಡಿದೆ' ಎಂದರು.

'ಬೆಂಗಳೂರು ನಗರದಲ್ಲಿ ಬಡವರು, ವಿಧವೆಯರು, ಅಂಗವಿಲಕರ ಸಂಖ್ಯೆಯನ್ನು ನಿಖರವಾಗಿ ಸಂಗ್ರಹಿಸಲು ಮತ್ತೊಂದು ಸಮೀಕ್ಷೆ ನಡೆಸಿ 2 ತಿಂಗಳಲ್ಲಿ ವರದಿ ಪಡೆಯಲಾಗುವುದು. ಈಗಿರುವ ಮಾಹಿತಿ ಸರಿ ಇಲ್ಲದೇ ಇರುಬಹುದು. ಅಧಿಕಾರಿಗಳ ಜತೆ ಚರ್ಚೆ ನಡೆಸುತ್ತೇನೆ' ಎಂದೂ ಭರವಸೆ ನೀಡಿದರು.

ಅರ್ಹತೆ ಇಲ್ಲದವರನ್ನು ಬಿಪಿಎಲ್ ವ್ಯಾಪ್ತಿಯಿಂದ ಕೈಬಿಟ್ಟರೂ ಅರ್ಜಿಗಳು ಬರುವುದು ನಿಂತಿಲ್ಲ. 7.70 ಲಕ್ಷ ಪಡಿತರ ಚೀಟಿಗಳಲ್ಲಿ ಅನರ್ಹರನ್ನು ಪತ್ತೆ ಹಚ್ಚುವ ಕಾರ್ಯ ಶೇ 50ರಷ್ಟು ಮುಗಿದಿದೆ. ಅನರ್ಹಗೊಂಡವರನ್ನು ಎಪಿಎಲ್ ವ್ಯಾಪ್ತಿಗೆ ಒಳಪಡಿಸಲಾಗುವುದು. ಕೇಂದ್ರ ಸರ್ಕಾರದ ಮಾನದಂಡದ ಪ್ರಕಾರವೇ ಈ ಕಾರ್ಯ ಕೈಗೊಳ್ಳಲಾಗಿದೆ ಎಂದು ಮುನಿಯಪ್ಪ ವಿವರಿಸಿದರು.



ಕೆ.ಎಚ್. ಮುನಿಯಪ್ಪ

ವಿಷಯ ಪ್ರಸ್ತಾಪಿಸಿದ ಬಿಜೆಪಿಯ ಸಿ.ಎನ್. ಅಶ್ವತ್ಥನಾರಾಯಣ, 'ಜಿಬಿಎ ವ್ಯಾಪ್ತಿಯಲ್ಲಿ 1.50 ಕೋಟಿ ಜನ ಸಂಖ್ಯೆ ಇದೆ. ಆದರೆ 7.10 ಲಕ್ಷ ಕುಟುಂಬಗಳಿಗೆ ಮಾತ್ರ ಬಿಪಿಎಲ್ ಪಡಿತರ ಚೀಟಿ ವಿತರಿಸಲಾಗಿದೆ. ಆಹಾರ ಭದ್ರತಾ ಕಾಯ್ದೆಯ ಪ್ರಕಾರ ಒಟ್ಟು ಜನಸಂಖ್ಯೆಯ ಶೇ 50ರಷ್ಟು ಜನರಿಗೆ ಪಡಿತರ ಚೀಟಿ ನೀಡಬೇಕು ಎಂದಿದೆ. ಶೇ 15ರಷ್ಟು ಜನಕ್ಕೂ ಪಡಿತರ ಚೀಟಿ ಕೊಟ್ಟಿಲ್ಲ. ಆದ್ದರಿಂದ ನಗರ ಪ್ರದೇಶದ ಎಲ್ಲ ಬಡವರಿಗೂ ಬಿಪಿಎಲ್ ಪಡಿತರ ಚೀಟಿ ವಿತರಿಸಬೇಕು' ಎಂದು ಒತ್ತಾಯಿಸಿದರು.

'ಬೆಂಗಳೂರು ನಗರದ ಬಡವರು ಅತ್ಯಂತ ಸಂಕಷ್ಟಮಯ ಜೀವನ ನಡೆಸುತ್ತಿದ್ದಾರೆ. ಹೆಚ್ಚಿನವರಿಗೆ ಸ್ವಂತ ಮನೆ ಇಲ್ಲ, ನಿಶ್ಚಿತ ಉದ್ಯೋಗವೂ ಇಲ್ಲ. ದುಬಾರಿ ಎನಿಸಿರುವ ಬೆಂಗಳೂರಿನಲ್ಲಿ ಇವರ ಆದಾಯ ತಿಂಗಳಿಗೆ ₹20 ಸಾವಿರ ಮೀರುವುದಿಲ್ಲ. ಹೇಗೆ ಜೀವನ ನಡೆಸಬೇಕು. ಇವರ ಸ್ಥಿತಿ ಸುಧಾರಿಸಲು ಸಾಧ್ಯವಾಗದ ಕಾರಣಕ್ಕೆ ನಾವೆಲ್ಲ ನಾಚಿಕೆಪಟ್ಟುಕೊಳ್ಳಬೇಕಾಗಿದೆ' ಎಂದು ಹೇಳಿದರು.

‘ಮಾತುಕತೆ’ ನಡುವೆಯೂ ನಿಲ್ಲದ ಸಮರ

ದಾಳಿ ತೀವ್ರಗೊಳಿಸಿದ ಇಸ್ರೇಲ್–ಇರಾನ್; ಟೆಲ್ ಅವೀವ್‌ಗೆ ಅಪ್ಪಳಿಸಿದ ಕ್ಷಿಪಣಿ- ನಾಲ್ಕು ಕಟ್ಟಡಗಳಿಗೆ ಹಾನಿ

ದುಬೈ (ಎಪಿ): ಪಶ್ಚಿಮ ಏಷ್ಯಾ ಸಂಘರ್ಷ ಕೊನೆಗೊಳಿಸಲು ಮಾತುಕತೆ ಪ್ರಗತಿಯಲ್ಲಿದೆ ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಘೋಷಿಸಿದ್ದರೂ, ಯುದ್ಧ ಕೊನೆಗೊಳ್ಳುವ ಯಾವುದೇ ಲಕ್ಷಣಗಳು ಗೋಚರಿಸಿಲ್ಲ.

ಇರಾನ್ ಸೇನೆಯು ಇಸ್ರೇಲ್ ಮತ್ತು ಗಲ್ಫ್ ರಾಷ್ಟ್ರಗಳನ್ನು ಗುರಿಯಾಗಿಸಿಕೊಂಡು ಮಂಗಳವಾರ ಡ್ರೋನ್, ಕ್ಷಿಪಣಿಗಳನ್ನು ಹಾರಿಸಿದೆ. ಮತ್ತೊಂದೆಡೆ, ಇಸ್ರೇಲ್ ಸೇನೆಯು ಇರಾನ್‌ನ ಇಸ್ಫಹಾನ್ ನಗರ ಸೇರಿದಂತೆ ವಿವಿಧ ತಾಣಗಳನ್ನು ಗುರಿಯಾಗಿಸಿ ಭಾರಿ ವೈಮಾನಿಕ ದಾಳಿ ನಡೆಸಿದೆ.

ಹೊರ್ಮುಜ್ ಜಲಸಂಧಿಯನ್ನು ಹಡಗುಗಳ ಸಂಚಾರಕ್ಕೆ ಮುಕ್ತಗೊಳಿಸಲು ಇರಾನ್‌ಗೆ ನೀಡಿದ್ದ ಗಡುವನ್ನು ಟ್ರಂಪ್ ಅವರು ಸೋಮವಾರ ಐದು ದಿನಗಳವರೆಗೆ ವಿಸ್ತರಿಸಿದ್ದರು. ಇರಾನ್ ಜತೆ ‘ಉತ್ತಮ ಮಾತುಕತೆ’ ನಡೆಯುತ್ತಿದೆ ಎಂದೂ ಹೇಳಿದ್ದರು. ಆದರೆ ಮಾತುಕತೆಗೆ ಸಂಬಂಧಿಸಿದಂತೆ ಟ್ರಂಪ್ ಹೇಳಿಕೆ ಬಗ್ಗೆ ಗೊಂದಲ ಮುಂದುವರಿದಿದೆ. ‘ಅಮೆರಿಕದ ಜತೆ ಯಾವುದೇ ಮಾತುಕತೆ ನಡೆದಿಲ್ಲ’ ಎಂದು ಇರಾನ್ ಸಂಸತ್ತಿನ ಸ್ಪೀಕರ್ ಮೊಹಮ್ಮದ್ ಬಾಖಿರ್ ಖಾಲೀಬಾಫ್ ‘ಎಕ್ಸ್’ನಲ್ಲಿ ತಿಳಿಸಿದ್ದಾರೆ.

ಟ್ರಂಪ್ ಅವರ ವಿಶೇಷ ರಾಯಭಾರಿ ಸ್ಟೀವ್ ವಿಟ್ಕಾಫ್ ಅವರು ಇರಾನ್‌ನ ವಿದೇಶಾಂಗ ಸಚಿವ ಅಬ್ಬಾಸ್ ಅರಾಘ್ಚಿ ಜತೆ ಈಚೆಗೆ ‘ನೇರ ಮಾತುಕತೆ’ ನಡೆಸಿದ್ದಾರೆ ಎಂದು ‘ದಿ ನ್ಯೂಯಾರ್ಕ್ ಟೈಮ್ಸ್’ ವರದಿ ಮಾಡಿದೆ. ಆದರೆ ಎರಡೂ ಕಡೆಯವರು ಇದನ್ನು ದೃಢಪಡಿಸಿಲ್ಲ.

ಅಮೆರಿಕವು ಕದನ ವಿರಾಮವನ್ನು ಪರಿಗಣಿಸುತ್ತಿದ್ದರೂ, ಇರಾನ್ ಮತ್ತು ಲೆಬನಾನ್ ಮೇಲೆ ದಾಳಿ ಮುಂದುವರಿಯಲಿದೆ ಎಂದು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಹೇಳಿದ್ದಾರೆ. ‘ನಮಗೆ ಇನ್ನೂ ಹೆಚ್ಚಿನದನ್ನು ಮಾಡಬೇಕಾಗಿದೆ’ ಎಂದಿದ್ದಾರೆ.

ಇರಾನ್‌ನ ವಿದೇಶಾಂಗ ಸಚಿವರು ಅಜರ್‌ಬೈಜಾನ್, ಈಜಿಪ್ಟ್, ಒಮಾನ್, ಪಾಕಿಸ್ತಾನ, ರಷ್ಯಾ, ದಕ್ಷಿಣ ಕೊರಿಯಾ, ಟರ್ಕಿ ಮತ್ತು ತುರ್ಕಮೆನಿಸ್ತಾನದ ವಿದೇಶಾಂಗ ಸಚಿವರ ಜತೆ ಮಾತುಕತೆ ನಡೆಸಿದ್ದಾರೆ ಎಂದು ಅವರ ಕಚೇರಿ ತಿಳಿಸಿದೆ.

ಟೆಲ್ ಅವೀವ್‌ಗೆ ಅಪ್ಪಳಿಸಿದ ಕ್ಷಿಪಣಿ: ಟೆಲ್ ಅವೀವ್ ಸೇರಿದಂತೆ ಇಸ್ರೇಲ್‌ನ ನಗರಗಳನ್ನು ಗುರಿಯಾಗಿಸಿ ಮಂಗಳವಾರ ಬೆಳಿಗ್ಗೆ ಇರಾನ್ ಕ್ಷಿಪಣಿ ದಾಳಿ ನಡೆಸಿದೆ. ವಾಯು ರಕ್ಷಣಾ ವ್ಯವಸ್ಥೆಯನ್ನು ತಪ್ಪಿಸಿಕೊಂಡ ಕ್ಷಿಪಣಿಯೊಂದು ಟೆಲ್ ಅವೀವ್ ನಗರದ ಕೇಂದ್ರ ಭಾಗದ ರಸ್ತೆಗೆ ಅಪ್ಪಳಿಸಿದೆ. ಸ್ಫೋಟದ ತೀವ್ರತೆಗೆ ಸಮೀಪದ ಕಟ್ಟಡಗಳಿಗೆ ಹಾನಿಯಾಗಿದ್ದು, ನಾಲ್ಕು ಮಂದಿಗೆ ಸಣ್ಣಪುಟ್ಟ ಗಾಯಗಳಾಗಿವೆ.

ಮೂರರಿಂದ ನಾಲ್ಕು ಸಿಡಿತಲೆಗಳನ್ನು ಹೊಂದಿದ್ದ ಕ್ಲಸ್ಟರ್ ಕ್ಷಿಪಣಿಯಿಂದ ಈ ದಾಳಿ ನಡೆದಿದೆ. ಪ್ರತಿ ಸಿಡಿತಲೆಯಲ್ಲೂ ಸುಮಾರು 100 ಕೆ.ಜಿಯಷ್ಟು ಸ್ಫೋಟಕಗಳು ಇದ್ದವು ಎಂದು ಇಸ್ರೇಲ್‌ನ ಮಾಧ್ಯಮಗಳು ವರದಿ ಮಾಡಿವೆ.

ಕುವೈತ್‌ನಲ್ಲಿ ವಿದ್ಯುತ್ ತಂತಿಗಳ ಮೇಲೆ ಕ್ಷಿಪಣಿಯ ಅವಶೇಷ ಬಿದ್ದು, ಕೆಲಹೊತ್ತು ವಿದ್ಯುತ್ ಸಂಪರ್ಕ ಕಡಿತಗೊಂಡಿತ್ತು. ಪೂರ್ವ ಪ್ರಾಂತ್ಯದ ತೈಲ ಸಂಸ್ಕರಣಾ ಘಟಕಗಳನ್ನು ಗುರಿಯಾಗಿಸಿ ಇರಾನ್ ಹಾರಿಸಿದ 19 ಡ್ರೋನ್‌ಗಳನ್ನು ಹೊಡೆದುರುಳಿಸಲಾಗಿದೆ ಎಂದು ಸೌದಿ ಅರೇಬಿಯಾದ ರಕ್ಷಣಾ ಸಚಿವಾಲಯ ತಿಳಿಸಿದೆ.

ಷರೀಫ್- ಪೆಜೆಶ್ಕಿಯಾನ್ ಮಾತುಕತೆ: ಪಾಕಿಸ್ತಾನದ ಪ್ರಧಾನಿ ಶೆಹಬಾಜ್ ಷರೀಫ್ ಅವರು ಇರಾನ್ ಅಧ್ಯಕ್ಷ ಮಸೂದ್ ಪೆಜೆಶ್ಕಿಯಾನ್ ಜತೆ ಮಾತನಾಡಿದ್ದು, ಪಶ್ಚಿಮ ಏಷ್ಯಾದಲ್ಲಿ ಶಾಂತಿ ಸ್ಥಾಪಿಸಲು ಪಾಕಿಸ್ತಾನವು ತನ್ನಿಂದಾದ ಸಹಾಯ ಮಾಡಲಿದೆ ಎಂದು ಭರವಸೆ ನೀಡಿದ್ದಾರೆ. ‘ಯುದ್ಧ ಕೊನೆಗೊಳಿಸುವ ನಿಟ್ಟಿನಲ್ಲಿ ಮಾತುಕತೆಗೆ ವೇದಿಕೆ ಕಲ್ಪಿಸಲು ನಮ್ಮ ದೇಶ ಸಿದ್ಧ’ ಎಂದು ಷರೀಫ್ ಅವರು ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದಾರೆ.

ಅಮೆರಿಕದ ಸಂಧಾನಕಾರರಾದ ಸ್ಟೀವ್ ವಿಟ್ಕಾಫ್ ಮತ್ತು ಜರೆಡ್ ಕುಶ್ನರ್ ಅವರು ಈ ವಾರದಲ್ಲಿ ಇರಾನಿನ ಪ್ರತಿನಿಧಿಗಳ ಜತೆ ಪಾಕಿಸ್ತಾನದಲ್ಲಿ ಮಾತುಕತೆ ನಡೆಸಲಿದ್ದಾರೆ ಎಂದು ಅಮೆರಿಕದ ಆ್ಯಕ್ಸಿಯಸ್ ಮಾಧ್ಯಮ ವರದಿ ಮಾಡಿದೆ. ಅಮೆರಿಕದ ಉಪಾಧ್ಯಕ್ಷ ಜೆ.ಡಿ.ವ್ಯಾನ್ಸ್ ಅವರೂ ಮಾತುಕತೆಯಲ್ಲಿ ಪಾಲ್ಗೊಳ್ಳುವ ಸಾಧ್ಯತೆಯಿದೆ ಎಂದು ವರದಿ ತಿಳಿಸಿದೆ.

‘ದಾಳಿ: ಮೊದಲು ಸೂಚಿಸಿದ್ದು ಹೆಗ್ಸೆತ್’

ವಾಷಿಂಗ್ಟನ್ (ಪಿಟಿಐ): ‘ಇರಾನ್ ಮೇಲೆ ದಾಳಿ ನಡೆಸುವಂತೆ ಮೊದಲು ಸೂಚಿಸಿದ ವ್ಯಕ್ತಿ ಪೀಟ್ ಹೆಗ್ಸೆತ್’ ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ. ಆ ಮೂಲಕ ಪಶ್ಚಿಮ ಏಷ್ಯಾ ಸಂಘರ್ಷ ಆರಂಭವಾಗಲು ಅಮೆರಿಕದ ರಕ್ಷಣಾ ಕಾರ್ಯದರ್ಶಿ ‘ಕಾರಣ’ ಎಂದಿದ್ದಾರೆ.

ಟೆನೆಸ್ಸಿಯಲ್ಲಿ ನಡೆದ ಸಭೆಯಲ್ಲಿ ಮಾತನಾಡಿದ ಟ್ರಂಪ್, ‘ಇರಾನ್ ಮೇಲಿನ ದಾಳಿ ಬಗ್ಗೆ ಅಂತಿಮ ನಿರ್ಧಾರ ತೆಗೆದುಕೊಳ್ಳುವ ಮುನ್ನ ರಕ್ಷಣಾ ಕಾರ್ಯದರ್ಶಿ ಹೆಗ್ಸೆತ್ ಮತ್ತು ವಾಯುಪಡೆಯ ಹಿರಿಯ ಅಧಿಕಾರಿ ಡೇನಿಯಲ್ ಕೇನ್ ಒಳಗೊಂಡಂತೆ ಆಪ್ತರ ಜತೆ ಮಾತನಾಡಿದ್ದೆ’ ಎಂದಿದ್ದಾರೆ.

‘ಪೀಟ್ (ಹೆಗ್ಸೆತ್), ದಾಳಿ ನಡೆಸುವಂತೆ ಮೊದಲು ಸೂಚಿಸಿದ್ದು ನೀವು ಎಂದು ಭಾವಿಸುತ್ತೇನೆ. ಇರಾನ್ ಅಣ್ವಸ್ತ್ರ ಹೊಂದಲು ಬಿಡಲು ಸಾಧ್ಯವಿಲ್ಲ ಎಂದು ನೀವು ಹೇಳಿದ್ದೀರಿ’ ಎಂದು ಸಭೆಯಲ್ಲಿ ಹಾಜರಿದ್ದ ಹೆಗ್ಸೆತ್ ಅವರತ್ತ ತಿರುಗಿ ಟ್ರಂಪ್ ಹೇಳಿದ್ದಾರೆ.



ಇರಾನ್ ನಡೆಸಿದ ಕ್ಷಿಪಣಿ ದಾಳಿಯಲ್ಲಿ ಟೆಲ್ ಅವೀವ್‌ನಲ್ಲಿ ಉಂಟಾಗಿರುವ ಹಾನಿಯನ್ನು ಇಸ್ರೇಲ್ ತುರ್ತು ಸೇವೆಗಳ ಸಿಬ್ಬಂದಿ ಪರಿಶೀಲಿಸಿದರು ಎಎಫ್‌ಪಿ ಚಿತ್ರ

ದಿನದ ಬೆಳವಣಿಗೆ

- ಅಮೆರಿಕ–ಇರಾನ್ ಮಾತುಕತೆಗೆ ನಾವು ನೇರ ಮಧ್ಯಸ್ಥಿಕೆ ವಹಿಸಿಲ್ಲ ಎಂದು ಕತಾರ್ ವಿದೇಶಾಂಗ ಸಚಿವಾಲಯದ ವಕ್ತಾರರು ತಿಳಿಸಿದ್ದಾರೆ.
- ತಮ್ಮ ಸಶಸ್ತ್ರ ಪಡೆಗಳು ‘ಪೂರ್ಣ ಗೆಲುವು’ ಸಾಧಿಸುವವರೆಗೂ ಹೋರಾಡಲಿವೆ ಎಂದು ಇರಾನ್‌ನ ಉನ್ನತ ಮಿಲಿಟರಿ ಕಮಾಂಡ್‌ನ ವಕ್ತಾರ ಮೇಜರ್ ಜನರಲ್ ಅಲಿ ಅಬ್ದುಲ್ಲಾಹಿ ಅಲಿಯಾಬಾದಿ ಹೇಳಿದ್ದಾರೆ.
- ಯುದ್ಧ ಆರಂಭವಾದ ಬಳಿಕ ಇಸ್ರೇಲ್‌ನಲ್ಲಿ 16 ಮಂದಿ ಮೃತಪಟ್ಟಿದ್ದು, 4,500ಕ್ಕೂ ಅಧಿಕ ಮಂದಿ ಗಾಯಗೊಂಡಿದ್ದಾರೆ ಎಂದು ಇಸ್ರೇಲ್‌ನ ತುರ್ತು ವೈದ್ಯಕೀಯ ಸೇವೆಗಳ ಸಂಸ್ಥೆ ತಿಳಿಸಿದೆ.
- ಹಿಜ್ಬುಲ್ಲಾ ಬಂಡುಕೋರರ ತಾಣಗಳನ್ನು ಗುರಿಯಾಗಿಸಿ ಲೆಬನಾನ್‌ನ ಬೈರೂತ್ ಮೇಲೆ ನಡೆಸುತ್ತಿರುವ ದಾಳಿಯನ್ನು ಇಸ್ರೇಲ್ ಮುಂದುವರಿಸಿದ್ದು, ಮಂಗಳವಾರ ಇಬ್ಬರು ಮೃತಪಟ್ಟಿದ್ದಾರೆ.

‘ಭಾರತಕ್ಕೆ ಹೊರ್ಮುಜ್ ಮುಕ್ತ’

ಟೆಹರಾನ್ (ಎಪಿ): ಅಮೆರಿಕ ಹಾಗೂ ಮಿತ್ರದೇಶಗಳನ್ನು ಹೊರತುಪಡಿಸಿದ ರಾಷ್ಟ್ರಗಳ ಹಡಗುಗಳು ಹೊರ್ಮುಜ್ ಜಲಸಂಧಿ ಮೂಲಕ ಸಾಗಲು ಮುಕ್ತ ಅವಕಾಶ ಕಲ್ಪಿಸಲಾಗಿದೆ ಎಂದು ಅಂತರ-ರಾಷ್ಟ್ರೀಯ ಕಡಲ ಸಂಘಟನೆಗಳ ಸದಸ್ಯ-ರಾಷ್ಟ್ರಗಳಿಗೆ ಇರಾನ್ ತಿಳಿಸಿದೆ.

ಇದರಿಂದ, ಭಾರತಕ್ಕೆ ಕಚ್ಚಾತೈಲ, ಅನಿಲ ಪೂರೈಕೆಯೂ ಕೆಲವೇ ದಿನಗಳಲ್ಲಿ ಸಹಜಸ್ಥಿತಿಗೆ ಬರುವ ನಿರೀಕ್ಷೆಯಿದೆ.

ಇರಾನ್ ಅಧಿಕಾರಿಗಳ ಜೊತೆಗೆ ಸಂಪರ್ಕ ಸಾಧಿಸಿ, ತಮ್ಮ ಹಡಗುಗಳನ್ನು ಜಲಸಂಧಿ ಮೂಲಕ ಸಾಗುವಂತೆ ವ್ಯವಸ್ಥೆ ಮಾಡಬಹುದಾಗಿದೆ ಎಂದು ಅಧಿಕಾ-ರಿಯೊಬ್ಬರ ಹೇಳಿಕೆಯನ್ನು ಉಲ್ಲೇಖಿಸಿ ‘ಫೈನಾನ್ಷಿಯಲ್ ಟೈಮ್ಸ್’ ವರದಿ ಮಾಡಿದೆ.

> **ಇರಾನ್ ಜೊತೆಗೆ ಒಂದು ಬಗೆಯ ಒಪ್ಪಂದ ಮಾಡಿಕೊಂಡಿದ್ದು, ತೈಲ ಸಾಗಣೆ ಸುಗಮವಾಗಲಿದೆ**
> **ರಾಜೇಶ್ ಕುಮಾರ್ ಸಿನ್ಹಾ,** ಬಂದರು ಸಚಿವಾಲಯ ವಿಶೇಷ ಕಾರ್ಯದರ್ಶಿ

ಮೋದಿ–ಟ್ರಂಪ್ ಚರ್ಚೆ

ನವದೆಹಲಿ (ಪಿಟಿಐ): ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಮಂಗಳವಾರ ಕರೆ ಮಾಡಿ ಮಾತನಾಡಿದ್ದಾರೆ. ಈ ವೇಳೆ ಇಬ್ಬರು ನಾಯಕರು ಪಶ್ಚಿಮ ಏಷ್ಯಾ ಬಿಕ್ಕಟ್ಟಿನ ಬಗ್ಗೆ ಚರ್ಚಿಸಿದ್ದಾರೆ.

‘ಅಧ್ಯಕ್ಷ ಟ್ರಂಪ್ ಅವರು ಕರೆ ಮಾಡಿ ಮಾತನಾಡಿದರು. ಪಶ್ಚಿಮ ಏಷ್ಯಾ ಪರಿಸ್ಥಿತಿಯ ಬಗ್ಗೆ ಉಪಯುಕ್ತ ಅಭಿಪ್ರಾಯಗಳನ್ನು ಈ ವೇಳೆ ಹಂಚಿಕೊಂಡೆವು’ ಎಂದು ಮೋದಿ ಅವರು ಸಾಮಾಜಿಕ ಮಾಧ್ಯಮದಲ್ಲಿ ತಿಳಿಸಿದ್ದಾರೆ.

‘ಉದ್ವಿಗ್ನತೆಯನ್ನು ಆದಷ್ಟು ಬೇಗ ಕಡಿಮೆ ಮಾಡಲು ಮತ್ತು ಶಾಂತಿ ಪುನಃಸ್ಥಾಪಿಸಲು ಭಾರತ ಬಯಸುತ್ತದೆ. ಹೊರ್ಮುಜ್ ಜಲಸಂಧಿಯು ಎಲ್ಲ ಹಡಗುಗಳಿಗೆ ಮುಕ್ತ ಮತ್ತು ಸುರಕ್ಷಿತವಾಗಿರುವಂತೆ ನೋಡಿಕೊಳ್ಳುವುದು ಇಡೀ ಜಗತ್ತಿಗೆ ಅತ್ಯಗತ್ಯ. ಶಾಂತಿ ಮತ್ತು ಸ್ಥಿರತೆಯನ್ನು ಸಾಧಿಸುವ ನಿಟ್ಟಿನಲ್ಲಿ ಪರಸ್ಪರ ಜತೆಯಾಗಿ ಕೆಲಸ ಮಾಡಲು ನಾವು ಒಪ್ಪಿಕೊಂಡಿದ್ದೇವೆ’ ಎಂದು ಹೇಳಿದ್ದಾರೆ.

‘ಹೊರ್ಮುಜ್ ಜಲಸಂಧಿಯನ್ನು ಮುಕ್ತವಾಗಿಡುವುದರ ಅಗತ್ಯತೆ ಸೇರಿದಂತೆ ಪಶ್ಚಿಮ ಏಷ್ಯಾದ ಪರಿಸ್ಥಿತಿಯ ಬಗ್ಗೆ ಇಬ್ಬರು ನಾಯಕರು ಚರ್ಚಿಸಿದರು’ ಎಂದು ಭಾರತದಲ್ಲಿರುವ ಅಮೆರಿಕದ ರಾಯಭಾರಿ ಸೆರ್ಗಿಯೊ ಗೊರ್ ಸಾಮಾಜಿಕ ಮಾಧ್ಯಮದಲ್ಲಿ ತಿಳಿಸಿದ್ದಾರೆ.

ಇರಾನ್ ವಿಶೇಷ ಉಡುಗೊರೆ ನೀಡಿದೆ- ಟ್ರಂಪ್: ತೈಲ ಮತ್ತು ಅನಿಲಕ್ಕೆ ಸಂಬಂಧಿಸಿದಂತೆ ಇರಾನ್ ತಮಗೆ ವಿಶೇಷ ಉಡುಗೊರೆಯೊಂದನ್ನು ನೀಡಿದೆ ಎಂದಿರುವ ಟ್ರಂಪ್, ಅದರ ಕುರಿತು ಹೆಚ್ಚಿನ ಮಾಹಿತಿ ನೀಡಲು ನಿರಾಕರಿಸಿದ್ದಾರೆ.

‘ಭಯೋತ್ಪಾದನೆಗೆ ಅಮೆರಿಕ ಬೆಂಬಲ’

ಸೋಲ್ (ಎಪಿ): ‘ಅಮೆರಿಕವು ಭಯೋತ್ಪಾದನೆಗೆ ಬೆಂಬಲ ಹಾಗೂ ಪ್ರಾಯೋಜಕತ್ವ ನೀಡುತ್ತಿದೆ. ಅಮೆರಿಕದ ವಿರುದ್ಧ ಏಳುತ್ತಿರುವ ವಿರೋಧಗಳನ್ನು ಒಗ್ಗೂಡಿಸುವಲ್ಲಿ ನಮ್ಮ ದೇಶವು ಪ್ರಮುಖ ಪಾತ್ರವಹಿಸಲಿದೆ’ ಎಂದು ಉತ್ತರ ಕೊರಿಯಾದ ನಾಯಕ ಕಿಮ್ ಜಾಂಗ್ ಉನ್ ಸೋಮವಾರ ಹೇಳಿದರು. ಸಂಸತ್ತಿನಲ್ಲಿ ಮಾತನಾಡುವ ವೇಳೆ ಪಶ್ಚಿಮ ಏಷ್ಯಾದಲ್ಲಿನ ಬಿಕ್ಕಟ್ಟಿನ ಕುರಿತು ಕಿಮ್ ಪ್ರಸ್ತಾಪಿಸಿದರು. ಅಮೆರಿಕ ಅಧ್ಯಕ್ಷ ಟ್ರಂಪ್ ಅವರ ಹೆಸರನ್ನು ಉಲ್ಲೇಖಿಸಿಲ್ಲ.

ಉನ್ನತಾಧಿಕಾರ ಸಮಿತಿ ರಚನೆ

ಒಂದನೇ ಪುಟದಿಂದ...

‘ಪಶ್ಚಿಮ ಏಷ್ಯಾ ಸಂಘರ್ಷವು ಜಾಗತಿಕ ಮಟ್ಟದಲ್ಲಿ ಭಾರಿ ಇಂಧನ ಬಿಕ್ಕಟ್ಟು ಸೃಷ್ಟಿಸಿದೆ. ಬಿಕ್ಕಟ್ಟಿನ ಲಾಭ ಪಡೆಯಲು ದುಷ್ಕರ್ಮಿಗಳು ಪ್ರಯತ್ನಿಸುತ್ತಿದ್ದಾರೆ. ಎಲ್‌ಪಿಜಿ ಸಿಲಿಂಡರ್‌ಗಳ ಅಕ್ರಮ ದಾಸ್ತಾನು ಆಗಬಾರದು. ಅವುಗಳನ್ನು ಕಾಳಸಂತೆಯಲ್ಲಿ ಮಾರಾಟ ಮಾಡಲು ಅವಕಾಶ ಸಿಗಬಾರದು. ಆಯಾ ರಾಜ್ಯ ಸರ್ಕಾರಗಳು ಇದನ್ನು ಖಚಿತಪಡಿಸಿಕೊಳ್ಳಬೇಕು’ ಎಂದು ಪ್ರಧಾನಿ ಸೂಚಿಸಿದ್ದಾರೆ.

‘ಪಶ್ಚಿಮ ಏಷ್ಯಾ ಸಂಘರ್ಷದಿಂದ ದೇಶದಲ್ಲಿ ಉಂಟಾಗಿರುವ ಸಮಸ್ಯೆಗಳನ್ನು ಎದುರಿಸಲು ಕೇಂದ್ರ ಸರ್ಕಾರ ಈಗಾಗಲೇ ಅಂತರ್ ಸಚಿವಾಲಯಗಳ ಸಮಿತಿಗಳನ್ನು ರಚಿಸಿದೆ. ಈ ಸಮಿತಿಗಳು ಆಮದು–ರಫ್ತು ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲಿವೆ. ಹಣದುಬ್ಬರ ನಿಯಂತ್ರಿಸಲು, ಸುಸ್ಥಿರ ಆರ್ಥಿಕ ಬೆಳವಣಿಗೆ ದರ ಕಾಯ್ದುಕೊಳ್ಳಲು ಈ ಸಮಿತಿಗಳು ಕಾರ್ಯತಂತ್ರ ರೂಪಿಸಲಿವೆ’ ಎಂದು ಪ್ರಧಾನಿ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

‘ರೈತರಿಗೆ ಮುಂಗಾರು ಹಂಗಾಮಿನ ಕೃಷಿ ಚಟುವಟಿಕೆಗಳಿಗೆ ರಸಗೊಬ್ಬರ ಪೂರೈಕೆಯಲ್ಲಿ ಯಾವುದೇ ಸಮಸ್ಯೆಯಾಗದಂತೆ ಎಚ್ಚರ ವಹಿಸಲಾಗಿದೆ. ಲಭ್ಯವಿರುವ ಎಲ್ಲ ಮೂಲಗಳಿಂದ ಕಚ್ಚಾತೈಲ ಮತ್ತು ಅನಿಲ ಸಂಗ್ರಹಕ್ಕೆ ಆದ್ಯತೆ ನೀಡಲಾಗಿದೆ. ಯುದ್ಧದ ಪರಿಣಾಮಗಳ ಬಗ್ಗೆ ಸರ್ಕಾರವು ಜಾಗರೂಕವಾಗಿದೆ ಮತ್ತು ಪೂರ್ವಭಾವಿ ಕ್ರಮಗಳನ್ನು ಕೈಗೊಂಡಿದೆ’ ಎಂದು ರಾಜ್ಯಸಭೆಗೆ ತಿಳಿಸಿದ್ದಾರೆ.

ಕೊಲ್ಲಿ ದೇಶಗಳಲ್ಲಿ ಸುಮಾರು 1 ಕೋಟಿಯಷ್ಟು ಭಾರತೀಯರು ನೆಲೆಸಿದ್ದಾರೆ. ಇವರಲ್ಲಿ, ಪಶ್ಚಿಮ ಏಷ್ಯಾ ಸಂಘರ್ಷ ಆರಂಭಗೊಂಡ ನಂತರ ಸುಮಾರು 3.75 ಲಕ್ಷದಷ್ಟು ಜನರು ಭಾರತಕ್ಕೆ ಸುರಕ್ಷಿತವಾಗಿ ಮರಳಿದ್ದಾರೆ. 700 ವೈದ್ಯಕೀಯ ವಿದ್ಯಾರ್ಥಿಗಳು ಸೇರಿ ಇರಾನ್‌ನಿಂದ 1 ಸಾವಿರದಷ್ಟು ಭಾರತೀಯರು ವಾಪಸ್ ಬಂದಿದ್ದಾರೆ ಎಂದು ಪ್ರಧಾನಿ ಹೇಳಿದರು.

ಶಾಂತಿ ಮರುಸ್ಥಾಪನೆಗೆ ಬೆಂಬಲ

‘ಭಾರತವು ಮಾತುಕತೆ ಮತ್ತು ರಾಜತಾಂತ್ರಿಕತೆ ಮೂಲಕ ಪಶ್ಚಿಮ ಏಷ್ಯಾ ವಲಯದಲ್ಲಿ ಶಾಂತಿ ಮರುಸ್ಥಾಪನೆಯನ್ನು ಬಯಸುತ್ತದೆ’ ಎಂದು ಪ್ರಧಾನಿ ಹೇಳಿದ್ದಾರೆ.

‘ಯುದ್ಧವನ್ನು ಕೊನೆಗಾಣಿಸಿ, ಹೊರ್ಮುಜ್ ಜಲಸಂಧಿಯ ಮೂಲಕ ತೈಲನೌಕೆಗಳ ಮುಕ್ತ ಸಂಚಾರವನ್ನು ಭಾರತ ಎದುರು ನೋಡುತ್ತಿದೆ. ಇಸ್ರೇಲ್, ಇರಾನ್, ಅಮೆರಿಕ ಮತ್ತು ಕೊಲ್ಲಿ ದೇಶಗಳ ಮುಖಂಡರೊಂದಿಗೆ ನಿರಂತರ ಸಂಪರ್ಕದಲ್ಲಿದ್ದು, ಇದಕ್ಕೆ ಸಂಬಂಧಿಸಿದಂತೆ ನಡೆಯುತ್ತಿರುವ ಎಲ್ಲ ಶಾಂತಿಯುತ ಪ್ರಯತ್ನಗಳನ್ನು ದೇಶವು ಬೆಂಬಲಿಸಲಿದೆ’ ಎಂದು ಹೇಳಿದ್ದಾರೆ.

‘ದೇಶದ ಇಂಧನ ಭದ್ರತೆ ಬಗ್ಗೆ ಪ್ರತಿಕ್ರಿಯಿಸಿರುವ ಪ್ರಧಾನಿ, ‘ಕಳೆದ 11 ವರ್ಷಗಳಲ್ಲಿ 53 ಲಕ್ಷ ಮೆಟ್ರಿಕ್ ಟನ್‌ಗಳಷ್ಟು ತೈಲ ದಾಸ್ತಾನು ಮಾಡಿಕೊಳ್ಳಲಾಗಿದೆ. ಇದರ ಜತೆಗೆ, ಹೆಚ್ಚುವರಿಯಾಗಿ 65 ಲಕ್ಷ ಮೆಟ್ರಿಕ್ ಟನ್‌ನಷ್ಟು ತೈಲ ದಾಸ್ತಾನಿಗೆ ಪ್ರಯತ್ನಗಳು ನಡೆದಿವೆ’ ಎಂದು ರಾಜ್ಯಸಭೆಯಲ್ಲಿ ತಿಳಿಸಿದ್ದಾರೆ.

> **ಪಶ್ಚಿಮ ಏಷ್ಯಾ ಸಂಘರ್ಷ ಮಾತ್ರವಲ್ಲ, ಪ್ರತಿಯೊಂದು ಸವಾಲನ್ನೂ ತಾಳ್ಮೆ, ಸಂಯಮ ಮತ್ತು ಶಾಂತ ಮನಸ್ಸಿನಿಂದ ಎದುರಿಸಬೇಕು. ಹೊಸ ಸವಾಲಿಗೆ ಸನ್ನದ್ಧರಾಗಿರಬೇಕು**
> **ನರೇಂದ್ರ ಮೋದಿ**
> ಪ್ರಧಾನಿ

ಸರ್ವಪಕ್ಷಗಳ ಸಭೆ ಇಂದು

ಪ್ರಜಾವಾಣಿ ವಾರ್ತೆ

ನವದೆಹಲಿ: ಪಶ್ಚಿಮ ಏಷ್ಯಾ ಬಿಕ್ಕಟ್ಟಿನ ಕುರಿತು ಕೇಂದ್ರ ಸರ್ಕಾರ ಬುಧವಾರ ಸರ್ವ ಪಕ್ಷಗಳ ಸಭೆ ಕರೆದಿದೆ.

ಸಚಿವ ರಾಜನಾಥ ಸಿಂಗ್ ಅವರು ಅಧ್ಯಕ್ಷತೆ ವಹಿಸುವ ಸಾಧ್ಯತೆ ಇದೆ.

ಬುಧವಾರ ಸಂಜೆ 5ಕ್ಕೆ ಸಭೆ ನಡೆಯಲಿದ್ದು, ಸಭೆಯಲ್ಲಿ ಮಲ್ಲಿಕಾರ್ಜುನ ಖರ್ಗೆ ಸೇರಿ ವಿಪಕ್ಷದ ಇತರೆ ಪ್ರಮುಖ ನಾಯಕರು ಭಾಗವಹಿಸುವ ನಿರೀಕ್ಷೆ ಇದೆ.

‘ಕೇರಳದಲ್ಲಿ ಕಾರ್ಯಕ್ರಮ ನಿಗದಿ ಆಗಿರುವುದರಿಂದ ಸಭೆಗೆ ಹಾಜರಾಗುತ್ತಿಲ್ಲ’ ಎಂದು ರಾಹುಲ್ ಗಾಂಧಿ ಪತ್ರಕರ್ತರಿಗೆ ಮಂಗಳವಾರ ತಿಳಿಸಿದರು.

ವಿದೇಶಾಂಗ ಸಚಿವ ಎಸ್. ಜೈಶಂಕರ್ ಮತ್ತು ಪೆಟ್ರೋಲಿಯಂ ಸಚಿವ ಹರದೀಪ್ ಸಿಂಗ್ ಪುರಿ ಕೂಡ ಸಭೆಯಲ್ಲಿ ಭಾಗವಹಿಸಲಿದ್ದಾರೆ.

ಯುದ್ಧದ ಕುರಿತು ಸಂಸತ್ ಅಧಿವೇಶನದಲ್ಲಿ ಚರ್ಚೆ ನಡೆಸಬೇಕು ಎಂದು ವಿಪಕ್ಷಗಳು ಆಗ್ರಹಿಸಿದ್ದವು.

‘ಚರ್ಚೆ ನಡೆಯದಂತೆ ತಡೆಯುವ ಯತ್ನ’: ಪಶ್ಚಿಮ ಏಷ್ಯಾದಲ್ಲಿನ ಪರಿಸ್ಥಿತಿ ಕುರಿತು ಮತ್ತು ಭಾರತದ ಮೇಲೆ ಬಿಕ್ಕಟ್ಟು ಬೀರುವ ಪರಿಣಾಮ ಕುರಿತು ಕೇಂದ್ರ ಸರ್ಕಾರವು ವಿರೋಧ ಪಕ್ಷದ ನಾಯಕರಿಗೆ ಸಭೆಯಲ್ಲಿ ಮಾಹಿತಿ ನೀಡಲಿದೆ ಎಂದು ಮೂಲಗಳು ತಿಳಿಸಿವೆ.

‘ಸಂಸತ್ತಿನಲ್ಲಿ ಈ ಬಗ್ಗೆ ಚರ್ಚೆ ನಡೆಸಬೇಕು ಎಂಬುದು ವಿರೋಧ ಪಕ್ಷಗಳ ಆಗ್ರಹವಾಗಿದೆ. ಸಂಸತ್ತಿನಲ್ಲಿ ಚರ್ಚೆ ನಡೆಯದಂತೆ ತಡೆಯುವ ಉದ್ದೇಶದಿಂದಲೇ ಕೇಂದ್ರ ಸರ್ಕಾರವು ಸರ್ವ ಪಕ್ಷಗಳ ಸಭೆ ಕರೆದಿದೆ ಎನ್ನುವುದು ವಿರೋಧ ಪಕ್ಷಗಳ ನಾಯಕರು ಹೇಳಿದ್ದಾರೆ.

‘ಚರ್ಚೆ ನಡೆಸಿ: ಸಭೆ ಯಾಕೆ?’

ಸಂಸತ್ತಿನಲ್ಲಿ ಈ ವಿಚಾರದ ಕುರಿತು ಚರ್ಚೆಗೆ ಅವಕಾಶ ನೀಡುವ ಬದಲು ಕೇಂದ್ರ ಸರ್ಕಾರವು ಯಾವ ಕಾರಣಕ್ಕೆ ಸರ್ವ ಪಕ್ಷ ಸಭೆ ಕರೆದಿದೆ. ಎಷ್ಟು ದಿನಗಳವರೆಗೆ ಈ ಸರ್ಕಾರವು ಪ್ರಶ್ನೆಗಳಿಂದ ತಪ್ಪಿಸಿಕೊಳ್ಳಲಿದೆ? ರಾಜ್ಯಸಭೆಯಲ್ಲಿ ಪ್ರಧಾನಿ ಮೋದಿ ಅವರು ಮಾತನಾಡಿದ ಬಳಿಕ ಅವರಿಂದ ಸ್ಪಷ್ಟನೆ ಕೇಳಲೂ ಅವಕಾಶ ನೀಡಲಿಲ್ಲ

ಸಾಗರಿಕಾ ಘೋಷ್, ರಾಜ್ಯಸಭೆಯಲ್ಲಿ ಟಿಎಂಸಿ ಪಕ್ಷದ ಸದನದ ನಾಯಕಿ

ಕುರುಬರತ್ತ ಬಿಜೆಪಿ, ಲಿಂಗಾಯತರತ್ತ ಕಾಂಗ್ರೆಸ್ ಚಿತ್ತ

ನಾಯಕರ ಸೆಳೆಯಲು ಯತ್ನ

• ಬಸವರಾಜ ಹವಾಲ್ದಾರ

ಪ್ರಜಾಮತ ಜನತಂತ್ರದ ಹಬ್ಬ
ವಿಧಾನಸಭಾ ಉಪ ಚುನಾವಣೆ - 2026

ಬಾಗಲಕೋಟೆ: ಕಳೆದ ನಾಲ್ಕು ಚುನಾವಣೆಗಳಲ್ಲಿ ಬಾಗಲಕೋಟೆ ಕ್ಷೇತ್ರದಿಂದ ಬಿಜೆಪಿ ಅಭ್ಯರ್ಥಿಯಾಗಿ ವೀರಶೈವ ಲಿಂಗಾಯತ ಸಮುದಾಯದ ಮತ್ತು ಕಾಂಗ್ರೆಸ್‌ನಿಂದ ಕುರುಬ ಸಮುದಾಯದ ಅಭ್ಯರ್ಥಿ ಸ್ಪರ್ಧಿಸಿದ್ದಾರೆ. ಕುರುಬರ ಮತಗಳ ಸೆಳೆಯಲು ಬಿಜೆಪಿ, ಲಿಂಗಾಯತ ಮತಗಳ ಸೆಳೆಯಲು ಕಾಂಗ್ರೆಸ್ ತಂತ್ರ ಹೆಣೆಯುತ್ತಿವೆ.

ಬಿಜೆಪಿಯು ಕುರುಬ ಸಮುದಾಯದ ಮತಗಳನ್ನು ಸೆಳೆಯಲು ಆ ಸಮುದಾಯದ ನಾಯಕರನ್ನು ಸೆಳೆದುಕೊಳ್ಳುತ್ತಿದ್ದರೆ, ಕಾಂಗ್ರೆಸ್ ಲಿಂಗಾಯತ ಮತಗಳನ್ನು ಸೆಳೆಯಲು ಪಕ್ಷದೊಳಗಿರುವ ಲಿಂಗಾಯತ ನಾಯಕರನ್ನು ಹಿಡಿದಿಟ್ಟುಕೊಳ್ಳಲು ಮುಂದಾಗಿದೆ.

‘ಕಾಂಗ್ರೆಸ್ ಅಭ್ಯರ್ಥಿ ಕುರುಬ ಸಮುದಾಯದವರೇ ಆಗಿರುವ ಕಾರಣ ಆ ಸಮುದಾಯದ ಮತಗಳು ಬಿಜೆಪಿಗೆ ಹೆಚ್ಚಿನ ಪ್ರಮಾಣದಲ್ಲಿ ಬೀಳುವುದಿಲ್ಲ’ ಎಂಬುದು ಬಿಜೆಪಿ ನಾಯಕರ ಅನಿಸಿಕೆ. ಜೊತೆಗೆ ಕೆ.ಎಸ್.ಈಶ್ವರಪ್ಪ ಅವರೂ ಬಿಜೆಪಿಯಲ್ಲಿ ಇಲ್ಲ. ರಾಜ್ಯದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪ್ರಬಲ ನಾಯಕತ್ವ ಇರುವುದರಿಂದ ಕುರುಬರ ಮತ ಸೆಳೆಯುವುದು ಬಿಜೆಪಿಗೆ ಸವಾಲಿನ ಕೆಲಸ.

ಇದನ್ನು ಸರಿಪಡಿಸಿಕೊಳ್ಳಲು ಬಿಜೆಪಿ ನಾಯಕರು ಕುರುಬ ಸಮಾಜದ ಜಿಲ್ಲಾ ಘಟಕದ ಅಧ್ಯಕ್ಷ ಡಿ.ಬಿ.ಸಿದ್ದಾಪುರ ಮತ್ತು ಕಳೆದ ಚುನಾವಣೆಯಲ್ಲಿ ಜೆಡಿಎಸ್‌ನಿಂದ ಸ್ಪರ್ಧಿಸಿ 3,800ಕ್ಕೂ ಹೆಚ್ಚು ಮತಗಳನ್ನು ಗಳಿಸಿದ್ದ ಕುರುಬ ಸಮುದಾಯದ ಡಾ.ದೇವರಾಜ ಪಾಟೀಲ ಅವರನ್ನು ತಮ್ಮ ಪಕ್ಷಕ್ಕೆ ಸೇರ್ಪಡೆ ಮಾಡಿಕೊಂಡಿದ್ದಾರೆ.

‘ಮೊದಲು ಬಿಜೆಪಿಯಲ್ಲಿದ್ದೆ. ಎಚ್.ವೈ.ಮೇಟಿ ಜೊತೆಗಿನ ಉತ್ತಮ ಬಾಂಧವ್ಯದಿಂದ ರಾಜಕೀಯದಿಂದ ತಟಸ್ಥನಾದೆ. ಈಗ ಮತ್ತೆ ಬಿಜೆಪಿ ಸೇರಿ ಸಕ್ರಿಯನಾಗಿದ್ದೇನೆ’ ಎಂದು ಡಿ.ಬಿ. ಸಿದ್ದಾಪುರ ಹೇಳಿದರು.

ಲಿಂಗಾಯತ ಮತಕ್ಕೆ ಗಾಳ: ನಾಲ್ಕು ಚುನಾವಣೆಗಳಿಂದ ಬಿಜೆಪಿ ಅಭ್ಯರ್ಥಿಯಾಗಿ ವೀರಶೈವ ಲಿಂಗಾಯತ ಸಮುದಾಯದ ಅಭ್ಯರ್ಥಿ ಸ್ಪರ್ಧಿಸುತ್ತಿದ್ದಾರೆ. 2023ರ ಚುನಾವಣೆಯಲ್ಲಿ ಲಿಂಗಾಯತ ಮತಗಳನ್ನು ಸೆಳೆಯಲು ಕಾಂಗ್ರೆಸ್ ನಾಯಕರು ಬಸವೇಶ್ವರ ಸಹಕಾರಿ ಬ್ಯಾಂಕ್ ಅಧ್ಯಕ್ಷ ಪ್ರಕಾಶ ತಪಶೆಟ್ಟಿ ಅವರನ್ನು ಕಾಂಗ್ರೆಸ್ ಸೇರ್ಪಡೆ ಮಾಡಿಕೊಂಡಿದ್ದರು.

ತಪಶೆಟ್ಟಿ ಅವರು ‘ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರ’ದ ಅಧ್ಯಕ್ಷ ಸ್ಥಾನ ಕೊಡುವಂತೆ ಷರತ್ತು ಹಾಕಿದ್ದರಂತೆ. ನಂತರದಲ್ಲಿ ಎಚ್.ವೈ.ಮೇಟಿ ಅವರೇ ಅಧ್ಯಕ್ಷರಾಗಿದ್ದರು. ಉಪಚುನಾವಣೆ ವೇಳೆ ಅವರು ಬಿಜೆಪಿಗೆ ಮರಳುವುದನ್ನು ತಡೆಯಲು ಬಿಟಿಡಿಎ ಅಧ್ಯಕ್ಷ ಸ್ಥಾನ ನೀಡಲಾಗಿದೆ ಎನ್ನಲಾಗುತ್ತಿದೆ.

ಬಿಜೆಪಿಯಿಂದ ಉಚ್ಚಾಟಿಸಿದ್ದಕ್ಕೆ ಕೋಪಗೊಂಡಿದ್ದ ಮಲ್ಲಿಕಾರ್ಜುನ ಚರಂತಿಮಠ ಕಳೆದ ಬಾರಿ ಪಕ್ಷೇತರರಾಗಿ ಸ್ಪರ್ಧಿಸಿ 10 ಸಾವಿರಕ್ಕೂ ಹೆಚ್ಚು ಮತ ಗಳಿಸಿದ್ದರು. ನಂತರ ಲೋಕಸಭಾ ಚುನಾವಣೆ ವೇಳೆ ಕಾಂಗ್ರೆಸ್‌ಗೆ ಸೇರಿದ್ದರು. ಮರಳಿ ಬಿಜೆಪಿಗೆ ಸೇರುತ್ತಿರುವುದು ಗೊತ್ತಾಗುತ್ತಿದ್ದಂತೆಯೇ, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ಅವರ ಮನೆಗೆ ಭೇಟಿ ನೀಡಿ ಸಮಾಧಾನ ಮಾಡಿದ್ದಾರೆ.

‘ಆಸ್ತಿ ಮರೆಮಾಚಿದ ರಾಜೀವ್’

ತಿರುವನಂತಪುರ (ಪಿಟಿಐ): ಕೇರಳ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ರಾಜೀವ್ ಚಂದ್ರಶೇಖರ್ ಸಲ್ಲಿಸಿರುವ ಪ್ರಮಾಣಪತ್ರ ರಾಜಕೀಯ ವಿವಾದ ಭುಗಿಲೇಳುವಂತೆ ಮಾಡಿದೆ.



ಶಿವನ್‌ಕುಟ್ಟಿ

‘ರಾಜೀವ್ ಅವರು ವಿಧಾನಸಭಾ ಚುನಾವಣೆಗೆ ನಾಮಪತ್ರ ಸಲ್ಲಿಕೆ ವೇಳೆ ನೀಡಿದ್ದ ಪ್ರಮಾಣಪತ್ರದಲ್ಲಿ, ಬೆಂಗಳೂರಿನಲ್ಲಿರುವ ಕೋಟ್ಯಂತರ ರೂಪಾಯಿ ಮೌಲ್ಯದ ಆಸ್ತಿಯ ವಿವರಗಳನ್ನು ಮರೆಮಾಚಿದ್ದಾರೆ’ ಎಂದು ಆಡಳಿತಾರೂಢ ಸಿಪಿಎಂ ಮತ್ತು ವಿರೋಧ ಪಕ್ಷ ಕಾಂಗ್ರೆಸ್ ಆರೋಪಿಸಿವೆ. ಈ ಬಗ್ಗೆ ಚುನಾವಣಾ ಆಯೋಗಕ್ಕೆ ಕಾಂಗ್ರೆಸ್ ದೂರು ನೀಡಿದೆ.

ಈ ಆರೋಪದ ನಡುವೆಯೂ ನೇಮಂ ಕ್ಷೇತ್ರದ ಚುನಾವಣಾಧಿಕಾರಿಯು ರಾಜೀವ್ ಅವರ ನಾಮಪತ್ರವನ್ನು ಅಂಗೀಕರಿಸಿದ್ದಾರೆ. ಹೀಗಾಗಿ, ರಾಜೀವ್ ವಿರುದ್ಧ ಕಾನೂನು ಹೋರಾಟ ನಡೆಸುವುದಾಗಿ ಸಿಪಿಎಂ ಮತ್ತು ಕಾಂಗ್ರೆಸ್ ಘೋಷಿಸಿವೆ.

‘ರಾಜೀವ್ ಅವರು ಬೆಂಗಳೂರಿನಲ್ಲಿ ಐಷಾರಾಮಿ ಬಂಗಲೆ ಹೊಂದಿರುವ ಕುರಿತು ತೆರಿಗೆ ದಾಖಲೆಗಳಲ್ಲಿ ಬಹಿರಂಗವಾಗಿದೆ. ಆದರೂ ಆ ಆಸ್ತಿಯನ್ನು ಅಫಿಡವಿಟ್‌ನಲ್ಲಿ ಘೋಷಿಸಿಲ್ಲ. ಇದು ಪ್ರಜಾಪ್ರಭುತ್ವ ಪ್ರಕ್ರಿಯೆಯನ್ನು ಬುಡಮೇಲು ಮಾಡುವ ಉದ್ದೇಶಪೂರ್ವಕ ಪ್ರಯತ್ನವಾಗಿದೆ’ ಎಂದು ನೇಮಂ ಕ್ಷೇತ್ರದ ಸಿಪಿಎಂ ಅಭ್ಯರ್ಥಿ, ಶಿಕ್ಷಣ ಸಚಿವ ವಿ. ಶಿವನ್‌ಕುಟ್ಟಿ ಆರೋಪಿಸಿದ್ದಾರೆ.

‘ಹಿಂದಿನ ಲೋಕಸಭಾ ಚುನಾವಣೆ ಸಂದರ್ಭದಲ್ಲಿ ಇದೇ ಮನೆಯನ್ನು ಅಭ್ಯರ್ಥಿ ನಿವಾಸವೆಂದು ಘೋಷಿಸಲಾಗಿತ್ತು. ಈಗ ಆ ಆಸ್ತಿ ವಿವರ ಮರೆಮಾಚಿರುವುದು ಅನುಮಾನಕ್ಕೆ ಎಡೆಮಾಡಿಕೊಟ್ಟಿದೆ’ ಎಂದಿದ್ದಾರೆ.

‘ಚುನಾವಣಾ ಆಯೋಗದ ವೆಬ್‌ಸೈಟ್‌ನಲ್ಲಿ ಪ್ರಕಟವಾದ ಅಫಿಡವಿಟ್ ಮತ್ತು ಕರ್ನಾಟಕ ಸರ್ಕಾರದ ಆಸ್ತಿ ತೆರಿಗೆ ದಾಖಲೆಗಳ ನಡುವೆ ಸಾಕಷ್ಟು ವ್ಯತ್ಯಾಸಗಳಿವೆ’ ಎಂದು ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಮಣಕ್ಕಾಡ್ ಸುರೇಶ್ ಹೇಳಿದ್ದಾರೆ.

‘ರಾಜೀವ್ ಅವರು ತಮ್ಮ ₹200 ಕೋಟಿ ಮೌಲ್ಯದ ಆಸ್ತಿಯನ್ನು ಅಫಿಡವಿಟ್‌ನಲ್ಲಿ ಬಹಿರಂಗಪಡಿಸಿಲ್ಲ. ನಾಮಪತ್ರ ಪರಿಶೀಲನೆ ವೇಳೆ ಈ ಬಗ್ಗೆ ಆಕ್ಷೇಪ ವ್ಯಕ್ತಪಡಿಸುತ್ತೇವೆ. ಚುನಾವಣಾ ಆಯೋಗಕ್ಕೆ ಕಾಂಗ್ರೆಸ್ ದೂರು ನೀಡಿದ್ದು, ಸೂಕ್ತ ಕ್ರಮ ಕೈಗೊಳ್ಳುತ್ತದೆ ಎಂಬ ನಿರೀಕ್ಷೆ ಇದೆ’ ಎಂದು ನೇಮಂ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಕೆ.ಎಸ್. ಶಬರಿನಾಥನ್ ತಿಳಿಸಿದ್ದಾರೆ.

ಕೋರ್ಟ್ ಮೊರೆ ಹೋಗಿ: ಸವಾಲು

‘ನನ್ನ ವಿರುದ್ಧದ ಆರೋಪಗಳು ಆಧಾರರಹಿತ. ಇದನ್ನು ಸಾಬೀತುಪಡಿಸಲು ಕಾಂಗ್ರೆಸ್‌ಗೆ ‘ಬೆನ್ನು ಮೂಳೆ’ ಇದ್ದರೆ ನ್ಯಾಯಾಲಯದ ಮೊರೆ ಹೋಗಲಿ’ ಎಂದು ರಾಜೀವ್ ಚಂದ್ರಶೇಖರ್ ಸವಾಲು ಹಾಕಿದ್ದಾರೆ.

‘ಚುನಾವಣೆಯನ್ನು ಎದುರಿಸಲು ಕಾಂಗ್ರೆಸ್ ಸುಳ್ಳುಗಳನ್ನು ಆಶ್ರಯಿಸುತ್ತಿದೆ. ರಾಜ್ಯ ಸಚಿವ ಶಿವನ್‌ಕುಟ್ಟಿ ನನ್ನ ವಿರುದ್ಧ ಪದೇ ಪದೇ ವೈಯಕ್ತಿಕ ದಾಳಿ ನಡೆಸುತ್ತಿದ್ದಾರೆ. ಇದು ಹೊಸ ಆರೋಪವಲ್ಲ. ಪ್ರತಿ ಚುನಾವಣೆಯ ಸಮಯದಲ್ಲಿಯೂ ಅವರು ಇಂತಹ ಆರೋಪಗಳನ್ನು ಮಾಡುತ್ತಾರೆ. ಜನರು ವಿವಾದಗಳನ್ನು ಬಯಸುವುದಿಲ್ಲ. ಅವರಿಗೆ ಅಭಿವೃದ್ಧಿ ಮುಖ್ಯ’ ಎಂದು ಹೇಳಿದ್ದಾರೆ.



ರಾಜೀವ್

ಉಪ ಚುನಾವಣೆ: ಐವರ ನಾಮಪತ್ರ ತಿರಸ್ಕೃತ

ಪ್ರಜಾವಾಣಿ ವಾರ್ತೆ

ದಾವಣಗೆರೆ/ಬಾಗಲಕೋಟೆ: ಉಪ ಚುನಾವಣೆ ನಡೆಯುತ್ತಿರುವ ದಾವಣಗೆರೆ ದಕ್ಷಿಣ ಮತ್ತು ಬಾಗಲಕೋಟೆ ಕ್ಷೇತ್ರದಲ್ಲಿ ಮಂಗಳವಾರ ನಾಮಪತ್ರಗಳ ಪರಿಶೀಲನೆ ನಡೆದಿದ್ದು, ಐವರ ನಾಮಪತ್ರಗಳು ತಿರಸ್ಕೃತಗೊಂಡವು.

ದಾವಣಗೆರೆ ದಕ್ಷಿಣ ಕ್ಷೇತ್ರಕ್ಕೆ ಸಲ್ಲಿಕೆಯಾಗಿದ್ದ 45 ನಾಮಪತ್ರಗಳಲ್ಲಿ ಮೂವರ ನಾಮಪತ್ರಗಳು ತಿರಸ್ಕೃತಗೊಂಡಿವೆ. 36 ಅಭ್ಯರ್ಥಿಗಳ 42 ನಾಮಪತ್ರಗಳು ಕ್ರಮಬದ್ಧವಾಗಿವೆ.

ಬಿಜೆಪಿ ಹೆಸರಲ್ಲಿ ಯಶವಂತರಾವ್ ಜಾಧವ್, ಕಾಂಗ್ರೆಸ್ ಹೆಸರಲ್ಲಿ ಸಾದಿಕ್ ಪೈಲ್ವಾನ್, ಕರ್ನಾಟಕ ರಾಷ್ಟ್ರ ಸಮಿತಿ ಹೆಸರಲ್ಲಿ ಎಚ್.ಕೆ.ದಾವಲ್ ಸಾಬ್ ಸಲ್ಲಿಸಿದ್ದ ನಾಮಪತ್ರ ತಿರಸ್ಕೃತಗೊಂಡವು.

ಕಾಂಗ್ರೆಸ್ ಬಂಡಾಯ ಅಭ್ಯರ್ಥಿಯಾಗಿ ಸ್ಪರ್ಧಿಸುವುದಾಗಿ ಘೋಷಿಸಿರುವ ಸಾದಿಕ್ ಪೈಲ್ವಾನ್ ಅವರು ಪಕ್ಷೇತರರಾಗಿ ಸಲ್ಲಿಸಿದ್ದ ಮತ್ತೊಂದು ನಾಮಪತ್ರ ಊರ್ಜಿತವಾಗಿದೆ.

ಬಾಗಲಕೋಟೆ ವರದಿ: ‘ಬಾಗಲಕೋಟೆ ಕ್ಷೇತ್ರದಲ್ಲಿ ಪಕ್ಷೇತರ ಅಭ್ಯರ್ಥಿಗಳಾದ ಪರಶುರಾಮ ನೀಲನಾಯಕ ಮತ್ತು ಬಾಬುಷಾ ರೊಳ್ಳಿ ಅವರು ಸೂಕ್ತ ದಾಖಲೆ ಸಲ್ಲಿಸಿಲ್ಲ ಎಂದು ನಾಮಪತ್ರ ತಿರಸ್ಕೃತವಾಗಿವೆ.

16 ಮಂದಿ ನಾಮಪತ್ರ ಸಲ್ಲಿಸಿದ್ದರು. ಇಬ್ಬರ ನಾಮಪತ್ರ ತಿರಸ್ಕೃತವಾಗಿದ್ದು, 14 ಮಂದಿ ಕಣದಲ್ಲಿ ಉಳಿದಿದ್ದಾರೆ ಎಂದು ಚುನಾವಣಾಧಿಕಾರಿ ಸಂತೋಷ ಜಗಲಾಸರ ತಿಳಿಸಿದರು. ವಾಪಸು ಪಡೆಯಲು ಮಾರ್ಚ್ 26 ಕೊನೆ ದಿನ.

ಬಂಡಾಯ ಶೀಘ್ರ ಶಮನ: ಡಿಕೆಶಿ

ನವದೆಹಲಿ: ‘ದಾವಣಗೆರೆ ಉಪಚುನಾವಣೆಯಲ್ಲಿ ಬಂಡಾಯ ಅಭ್ಯರ್ಥಿಗಳಾಗಿ ನಾಮಪತ್ರ ಸಲ್ಲಿಸಿರುವವರು ನಮ್ಮವರೇ. ಅವರೊಂದಿಗೆ ಮಾತುಕತೆ ನಡೆಸಿ ಬಂಡಾಯ ಶಮನ ಮಾಡಲಾಗುವುದು’ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ತಿಳಿಸಿದರು.

ಮಂಗಳವಾರ ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ ಕುಟುಂಬ ರಾಜಕಾರಣದ ಬಗ್ಗೆ ಪ್ರತಿಕ್ರಿಯಿಸಿದ ಅವರು, ‘ಎಲ್ಲ ಪಕ್ಷಗಳಲ್ಲಿ ಕುಟುಂಬ ರಾಜಕಾರಣ ಇದೆ. ದಾವಣಗೆರೆಯಲ್ಲಿ ಮೊದಲಿನಿಂದಲೂ ಮೂರು ಜನರು ರಾಜಕಾರಣದಲ್ಲಿದ್ದರು. ನಾವೇ ಬಲವಂತ ಮಾಡಿ ಪ್ರಭಾ ಮಲ್ಲಿಕಾರ್ಜುನ ಅವರನ್ನು ಲೋಕಸಭೆ ಚುನಾವಣೆಗೆ ನಿಲ್ಲಿಸಿದೆವು. ಕಳೆದ ಐದಾರು ಬಾರಿಯಿಂದ ನಾವು ಅಲ್ಲಿ ಸೋಲುತ್ತಲೇ ಬಂದಿದ್ದೆವು. ಹೀಗಾಗಿ ನಾವು ಗೆಲ್ಲಬೇಕು ಎಂದು ಅವರನ್ನು ನಿಲ್ಲಿಸಿದೆವು. ಅವರು ಗೆದ್ದು ಸಂಸತ್ತಿನಲ್ಲಿ ಉತ್ತಮವಾಗಿ ಕೆಲಸ ಮಾಡುತ್ತಿದ್ದಾರೆ’ ಎಂದರು.

ಮತಾಂತರ: ಎಸ್‌ಸಿ ಸ್ಥಾನಮಾನ ನಷ್ಟ

ಒಂದನೇ ಪುಟದಿಂದ...

‘ಜಾತಿ ವ್ಯವಸ್ಥೆ ಕ್ರೈಸ್ತ ಧರ್ಮಕ್ಕೆ ವಿರುದ್ಧವಾದುದು. ಹೀಗಾಗಿ, ಕ್ರೈಸ್ತ ಧರ್ಮಕ್ಕೆ ಮತಾಂತರಗೊಂಡ ವ್ಯಕ್ತಿಯು ‘ಎಸ್‌ಸಿ, ಎಸ್‌ಟಿ ವಿರುದ್ಧ ದೌರ್ಜನ್ಯ ತಡೆ ಕಾಯ್ದೆ’ಯ ಅವಕಾಶಗಳಡಿ ಪರಿಹಾರ ಕೇಳುವುದನ್ನು ನಿರ್ಬಂಧಿಸಲಾಗಿದೆ’ ಎಂದು ಹೈಕೋರ್ಟ್ ಹೇಳಿತ್ತು.

ಈ ಆದೇಶ ಪ್ರಶ್ನಿಸಿ, ಪಾದ್ರಿ ಚಿಂತಾಡ ಆನಂದ ಅವರು ಸಲ್ಲಿಸಿದ್ದ ಮೇಲ್ಮನವಿಯ ವಿಚಾರಣೆಯನ್ನು ನ್ಯಾಯಮೂರ್ತಿಗಳಾದ ಪ್ರಶಾಂತ ಕುಮಾರ್ ಮಿಶ್ರಾ, ಎನ್.ವಿ. ಅಂಜಾರಿಯಾ ಹಾಗೂ ಮನಮೋಹನ್ ಅವರು ಇದ್ದ ಪೀಠ ನಡೆಸಿತು.

ಚಿಂತಾಡ ಆನಂದ ಅವರ ಮೇಲ್ಮನವಿಯನ್ನು ವಜಾಗೊಳಿಸುವ ಜೊತೆಗೆ, ಎಸ್‌ಸಿ, ಎಸ್‌ಟಿ ವಿರುದ್ಧ ದೌರ್ಜನ್ಯ ತಡೆ ಕಾಯ್ದೆಯ ಅವಕಾಶಗಳಡಿ ವ್ಯಕ್ತಿಯೊಬ್ಬರ ವಿರುದ್ಧ ಹೊರಿಸಿದ್ದ ಆರೋಪಗಳನ್ನು ನ್ಯಾಯಪೀಠ ರದ್ದು ಮಾಡಿದೆ.

ಈ ಪ್ರಕರಣದಲ್ಲಿ, ಮೇಲ್ಮನವಿದಾರ ಕ್ರೈಸ್ತ ಧರ್ಮದಿಂದ ಪುನಃ ತನ್ನ ಮೂಲ ಧರ್ಮಕ್ಕೆ ಮತಾಂತರಗೊಂಡಿಲ್ಲ ಅಥವಾ ಆತ ಸಮುದಾಯಕ್ಕೆ ಮರಳಿರುವುದಾಗಿ ಮಾದಿಗ ಸಮುದಾಯ ಒಪ್ಪಿಕೊಂಡಿಲ್ಲ ಎಂಬುದನ್ನು ಪೀಠ ಗಮನಿಸಿದೆ.

ಮೇಲ್ಮನವಿದಾರ ಕ್ರೈಸ್ತ ಧರ್ಮದಲ್ಲಿ ಶ್ರದ್ಧೆ-ನಂಬಿಕೆ ಹೊಂದಿದ್ದು, ಅದನ್ನು ಪಾಲನೆ ಮಾಡುತ್ತಿದ್ದಾರೆ. ದಶಕಕ್ಕೂ ಹೆಚ್ಚು ಕಾಲ ಪಾದ್ರಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಆಂಧ್ರಪ್ರದೇಶದ ಬಾಪಟ್ಲ ಜಿಲ್ಲೆಯ ಪಿಟ್ಟಲವಾನಿಪಾಲೆಂನಲ್ಲಿ ಪಾದ್ರಿಗಳ ಫೆಲೋಶಿಪ್‌ನ ಖಜಾಂಚಿಯೂ ಆಗಿದ್ದಾರೆ. ಗ್ರಾಮದ ಮನೆಗಳಲ್ಲಿ ಪ್ರತಿ ಭಾನುವಾರ ಪ್ರಾರ್ಥನಾ ಸಭೆಗಳನ್ನು ಆಯೋಜಿಸುತ್ತಿದ್ದಾರೆ. ಅವರ ಈ ಉದ್ಯೋಗ ಹಾಗೂ ವರ್ತನೆಯು ಮೇಲ್ಮನವಿದಾರ ಕ್ರೈಸ್ತ ಧರ್ಮದಲ್ಲಿ ನಂಬಿಕೆ ಹೊಂದಿರುವುದನ್ನು ಸಾರ್ವಜನಿಕವಾಗಿ ಘೋಷಿಸಿದಂತೆಯೆ ಆಗಿದೆ ಎಂದೂ ಪೀಠ ಹೇಳಿದೆ.

‘ಎಸ್‌ಟಿ ಸ್ಥಾನಮಾನ: ಮತಾಂತರವನ್ನಷ್ಟೆ ಪರಿಗಣಿಸಿ ನಿರ್ಧಾರ ಸಲ್ಲ’

1950ರ ಸಾಂವಿಧಾನಿಕ(ಪರಿಶಿಷ್ಟ ಪಂಗಡ) ಆದೇಶದ ಅನ್ವಯ ಒಬ್ಬ ವ್ಯಕ್ತಿ ಸರ್ಕಾರದ ಪ್ರಯೋಜನಗಳನ್ನು ಪಡೆಯಲು ಹೊಂದಿರಬೇಕಾದ ಅರ್ಹತೆಗಳ ಬಗ್ಗೆಯೂ ನ್ಯಾಯಪೀಠ ವಿವರಿಸಿದೆ.

‘ಒಂದು ವೇಳೆ ಪರಿಶಿಷ್ಟ ಪಂಗಡಕ್ಕೆ ಸೇರಿದ ವ್ಯಕ್ತಿಯು ಮತಾಂತರಗೊಂಡ ಬಳಿಕ ಅಥವಾ ದೀರ್ಘ ಕಾಲ ತನ್ನ ಬುಡಕಟ್ಟು ಸಂಪ್ರದಾಯಗಳನ್ನು ಪರಿತ್ಯಾಗ ಮಾಡಿದ್ದಲ್ಲಿ ಆತ/ಆಕೆಯ ಬುಡಕಟ್ಟು ಅಸ್ಮಿತೆ ಬಗ್ಗೆ ಸಂದೇಹ ಮೂಡಿದಲ್ಲಿ ಆ ವಿಷಯ ಕುರಿತು ವಿಚಾರಣೆ ವೇಳೆ ನಿರ್ಧರಿಸಬೇಕು’ ಎಂದು ಪೀಠ ಹೇಳಿದೆ.

‘ಒಂದು ವೇಳೆ ವ್ಯಕ್ತಿಯು ತನ್ನ ಬುಡಕಟ್ಟು ಸಮುದಾಯದ ಸಂಪ್ರದಾಯಗಳನ್ನು, ವಿಧಿಗಳನ್ನು ಸಂಪೂರ್ಣವಾಗಿ ಪರಿತ್ಯಾಗ ಮಾಡಿದ್ದಲ್ಲಿ ಹಾಗೂ ಮತಾಂತರವಾಗಿರುವ ಧರ್ಮವನ್ನು ಸಂಪೂರ್ಣವಾಗಿ ಪಾಲನೆ ಮಾಡುತ್ತಿದ್ದಲ್ಲಿ ಅಂಥ ವ್ಯಕ್ತಿಯು ಪರಿಶಿಷ್ಟ ಪಂಗಡಕ್ಕೆ ಸೇರಿದವರು ಎಂಬುದಾಗಿ ಪರಿಗಣಿಸಬಾರದು’ ಎಂದೂ ಹೇಳಿದೆ.

ವ್ಯಕ್ತಿಯ ಪರಿಶಿಷ್ಟ ಪಂಗಡ(ಎಸ್‌ಟಿ) ಸ್ಥಾನಮಾನವನ್ನು ಮತಾಂತರವನ್ನಷ್ಟೆ ಪರಿಗಣಿಸಿ ನಿರ್ಧರಿಸಲು ಸಾಧ್ಯ ಇಲ್ಲ ಎಂದು ಸ್ಪಷ್ಟಪಡಿಸಿದೆ.

8 ಗಂಟೆಗೂ ಮೊದಲು ರೈಲ್ವೆ ಟಿಕೆಟ್ ರದ್ದುಪಡಿಸಿದರೆ ಹಣ ಮರುಪಾವತಿ ಇಲ್ಲ

ನವದೆಹಲಿ (ಪಿಟಿಐ): ‘ರೈಲು ಹೊರಡುವ 8 ಗಂಟೆಗಳಿಗೂ ಮೊದಲು ಟಿಕೆಟ್ ರದ್ದುಪಡಿಸಿದರೆ, ಹಣ ಮರುಪಾವತಿ ಮಾಡುವುದಿಲ್ಲ. ಈಗ ಈ ಅವಧಿಯು ನಾಲ್ಕು ಗಂಟೆಯಷ್ಟಿದೆ’ ಎಂದು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ತಿಳಿಸಿದ್ದಾರೆ.

ರೈಲ್ವೆ ಕ್ಷೇತ್ರದಲ್ಲಿ ಹಲವು ಸುಧಾರಣೆಗಳ ಕುರಿತು ಮಂಗಳವಾರ ನಡೆಸಿದ ಪತ್ರಿಕಾಗೋಷ್ಠಿಯಲ್ಲಿ ಈ ಮಾಹಿತಿ ನೀಡಿದ್ದಾರೆ.

ಹಣ ಮರುಪಾವತಿ ರದ್ದತಿಯ ಕುರಿತಾದ ಹೊಸ ನಿಯಮವು ಏಪ್ರಿಲ್ 1ರಿಂದ 15ರ ಅವಧಿಯೊಳಗೆ ಜಾರಿಗೆ ಬರಲಿದೆ. ರೈಲು ಹೊರಡುವ 24 ಗಂಟೆಯಿಂದ 8 ಗಂಟೆಗೂ ಮೊದಲು ಟಿಕೆಟ್ ರದ್ದುಪಡಿಸಿದರೆ, ಶೇಕಡ 50ರಷ್ಟು ಹಣವನ್ನು ಮರುಪಾವತಿಸಲಾಗುತ್ತದೆ. ಪ್ರಸಕ್ತ ಈ ಸಮಯವು 12 ರಿಂದ 4 ಗಂಟೆಯವರೆಗೂ ಇದೆ.

‘72 ಗಂಟೆಯಿಂದ 24 ಗಂಟೆಗೂ ಮುಂಚೆ ಟಿಕೆಟ್ ರದ್ದುಪಡಿಸಿದರೆ, ಟಿಕೆಟ್‌ನ ಒಟ್ಟು ಮೊತ್ತದ ಶೇಕಡ 25ರಷ್ಟು ಹಣ ನೀಡಲಾಗುತ್ತದೆ. ಒಂದೊಮ್ಮೆ 72 ಗಂಟೆಗೂ ಮುಂಚಿತವಾಗಿ ಟಿಕೆಟ್ ರದ್ದುಪಡಿಸಿದರೆ, ಪ್ರತಿ ಪ್ರಯಾಣಿಕರಿಗೂ ಪೂರ್ಣ ಮೊತ್ತ ಪಾವತಿಸಲಾಗುವುದು’ ಎಂದು ವೈಷ್ಣವ್ ತಿಳಿಸಿದ್ದಾರೆ.

ಈಗಿರುವ ನೀತಿ ಪ್ರಕಾರ, 48 ಗಂಟೆಯಿಂದ 12 ಗಂಟೆಯವರೆಗೆ ಟಿಕೆಟ್ ರದ್ದುಪಡಿಸಿದರೆ, ಶೇಕಡ 25ರಷ್ಟು ಹಣವನ್ನು ಮರುಪಾವತಿಸಲಾಗುತ್ತದೆ. 48 ಗಂಟೆಗೂ ಮುಂಚಿತವಾಗಿ ಟಿಕೆಟ್ ರದ್ದುಪಡಿಸಿದರೆ ಪೂರ್ತಿ ಹಣ ನೀಡಲಾಗುತ್ತದೆ.

‘ಕೊನೆ ಹಂತದಲ್ಲಿ ಕಾಳಸಂತೆಯಲ್ಲಿ ಟಿಕೆಟ್ ಮಾರಾಟವನ್ನು ತಪ್ಪಿಸಲು ಈ ನಿಯಮವನ್ನು ಜಾರಿಗೆ ತರಲಾಗಿದೆ. ಮಂಗಳವಾರದಿಂದಲೇ ಈ ನಿಯಮವನ್ನು ಜಾರಿಗೆ ತರಲಾಗಿದೆ. ವಂದೇಭಾರತ್ ಹಾಗೂ ಅಮೃತ್ ಭಾರತ್–2 ರೈಲುಗಳಲ್ಲಿ ಈಗಾಗಲೇ ಈ ನಿಯಮವು ಜಾರಿಯಲ್ಲಿದೆ’ ಎಂದು ಅವರು ಸ್ಪಷ್ಟಪಡಿಸಿದ್ದಾರೆ.

ಟಿಕೆಟ್ ಮೇಲ್ದರ್ಜೆಗೆ ಅವಕಾಶ: ರೈಲು ಹೊರಡುವ 30 ನಿಮಿಷಕ್ಕೂ ಮುಂಚಿತವಾಗಿ ಕೌಂಟರ್‌ನಿಂದ ಪಡೆಯುವ ಟಿಕೆಟ್‌ನಲ್ಲಿ ಪ್ರಯಾಣ ಮೇಲ್ದರ್ಜೆಗೆ ಏರಿಸಲು ಅವಕಾಶ ಕಲ್ಪಿಸಲಾಗಿದೆ. ಈ ಹಿಂದೆ ಪ್ರಯಾಣದ ಚಾರ್ಟ್ ತಯಾರಿಗೂ ಮುನ್ನ ಮಾತ್ರ ಅವಕಾಶವಿತ್ತು.

ಬೋರ್ಡಿಂಗ್ ಪಾಯಿಂಟ್ ಬದಲಾವಣೆಗೂ ಅವಕಾಶ: ‘ರೈಲು ಹೊರಡುವ ಮುನ್ನ 30 ನಿಮಿಷ ಮುಂಚಿತವಾಗಿ ಪ್ರಯಾಣಿಕರು ತಾವು ಏರುವ ಹಾಗೂ ಇಳಿಯುವ ಜಾಗವನ್ನು ಬದಲಾಯಿಸಲು ಅವಕಾಶ ಕಲ್ಪಿಸಲಾಗಿದೆ.

‘ಕೋವಿಡ್ ದುರಂತ ಮರೆತ ಪ್ರಧಾನಿ’

ನವದೆಹಲಿ (ಪಿಟಿಐ): ‘ಪಶ್ಚಿಮ ಏಷ್ಯಾ ಸಂಘರ್ಷದಿಂದ ದೇಶದಲ್ಲಿ ಉಂಟಾಗಿರುವ ಬಿಕ್ಕಟ್ಟು ನಿಭಾಯಿಸಲು ಉನ್ನತಾಧಿಕಾರ ಸಮಿತಿಗಳನ್ನು ರಚಿಸಿರುವ ಪ್ರಧಾನಿ, ಈ ಸಮಿತಿಗಳನ್ನು ಕೋವಿಡ್ ಕಾಲದಲ್ಲಿ ಸರ್ಕಾರ ಮಾಡಿಕೊಂಡ ಸಿದ್ಧತೆಗಳ ಜತೆಗೆ ಹೋಲಿಸಿದ್ದಾರೆ. ಆದರೆ, ಕೋವಿಡ್‌ನಿಂದ ದೇಶ ಎದುರಿಸಿದ ನಿಜವಾದ ದುರಂತಗಳನ್ನು ಪ್ರಧಾನಿ ಮರೆತಿದ್ದಾರೆ’ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ವಾಗ್ದಾಳಿ ನಡೆಸಿದ್ದಾರೆ.

‘ಭಾರತದ ವಿದೇಶಾಂಗ ನೀತಿಯು ಮೋದಿ ಅವರ ವೈಯಕ್ತಿಕ ವಿದೇಶಿ ನೀತಿಯಾಗಿ ಬದಲಾಗಿದ್ದು, ಇದನ್ನು ಪ್ರತಿಯೊಬ್ಬರೂ ಸಾರ್ವತ್ರಿಕ ತಮಾಷೆಯಾಗಿ ಪರಿಗಣಿಸಿದ್ದಾರೆ’ ಎಂದು ರಾಹುಲ್ ಮಂಗಳವಾರ ಸಂಸತ್ ಆವರಣದ ಎದುರು ಸುದ್ದಿಗಾರರಿಗೆ ಪ್ರತಿಕ್ರಿಯಿಸಿದರು.

‘ಮೋದಿ ಏನು ಮಾಡುತ್ತಾರೆ, ಏನು ಮಾಡುವುದಿಲ್ಲ ಎನ್ನುವುದನ್ನು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಚೆನ್ನಾಗಿ ಅರಿತಿದ್ದಾರೆ. ಮೋದಿ ಅವರು ರಾಜಿಯಾಗಿದ್ದರೆ ಭಾರತದ ವಿದೇಶಾಂಗ ನೀತಿಯೂ ರಾಜಿಯಾಗಿದೆ ಎಂದರ್ಥ’ ಎಂದು ರಾಹುಲ್ ಹೇಳಿದರು.

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ



ಸುಭಾಷಿತ

ನಿನ್ನೆ ಎನ್ನುವುದು ಈ ದಿನದ ನೆನಪು; ನಾಳೆ ಎನ್ನುವುದು ಈ ದಿನದ ಕನಸು.

–ಖಲೀಲ್ ಗಿಬ್ರಾನ್

ಸಂಪಾದಕೀಯ

ಬೋಧಕೇತರ ಹುದ್ದೆಗೆ ನಿರ್ಬಂಧ ಶಾಲೆಗಳ ಸಬಲೀಕರಣದ ಯತ್ನ

ಬೋಧಕೇತರ ಹುದ್ದೆಗಳಿಗೆ ಶಿಕ್ಷಕರ ನಿಯೋಜನೆಯನ್ನು ಸಂಪೂರ್ಣವಾಗಿ ನಿಷೇಧಿಸುವ ಸರ್ಕಾರದ ನಿರ್ಧಾರ ಸಮಯೋಚಿತವಾದುದು ಹಾಗೂ ಶಿಕ್ಷಣ ವ್ಯವಸ್ಥೆಯನ್ನು ಹೆಚ್ಚು ಸಕ್ರಿಯಗೊಳಿಸುವ ದೃಷ್ಟಿಯಿಂದ ಅಗತ್ಯವಾಗಿರುವ ಕ್ರಮ. ಅನೇಕ ಸರ್ಕಾರಿ ಶಾಲೆಗಳು ಶಿಕ್ಷಕರ ಕೊರತೆಯಿಂದ ಬಳಲುತ್ತಿವೆ. ಖಾಸಗಿ ಶಾಲೆಗಳ ತೀವ್ರ ಸ್ಪರ್ಧೆಯಿಂದ ಕಳಾಹೀನವಾಗಿರುವ ಸರ್ಕಾರಿ ಶಾಲೆಗಳು ಎದುರಿಸುತ್ತಿರುವ ಸಮಸ್ಯೆಗಳಲ್ಲಿ ಶಿಕ್ಷಕರ ಕೊರತೆಯೂ ಒಂದಾಗಿದೆ. ಬೋಧಕೇತರ ಹುದ್ದೆಗಳಲ್ಲಿ ಶಿಕ್ಷಕರು ಕಾರ್ಯ ನಿರ್ವಹಿಸುತ್ತಿರುವುದು ಕೂಡ, ಶಾಲೆಗಳಲ್ಲಿನ ಶಿಕ್ಷಕರ ಕೊರತೆಗೆ ಕಾರಣಗಳಲ್ಲೊಂದಾಗಿದೆ. ಶಿಕ್ಷಕರನ್ನು ಶಾಲೆಗಳಲ್ಲಿಯೇ ಉಳಿಸುವುದರಿಂದಾಗಿ ಸರ್ಕಾರಿ ಶಾಲೆಗಳಲ್ಲಿನ ಬೋಧಕರ ಕೊರತೆ ಸ್ವಲ್ಪಮಟ್ಟಿಗಾದರೂ ಕಡಿಮೆ ಆಗಲಿದೆ, ಅದರಿಂದ ಮಕ್ಕಳಿಗೆ ಅನುಕೂಲ ಆಗಲಿದೆ. ಮಕ್ಕಳಿಗೆ ಪಾಠ ಮಾಡುವುದಕ್ಕಾಗಿ ನೇಮಕಗೊಂಡ ಶಿಕ್ಷಕರನ್ನು ಬೋಧನಾ ಚಟುವಟಿಕೆಗಳಲ್ಲಿ ಉಳಿಸುವುದು ನ್ಯಾಯ ಸಮ್ಮತವೂ ಹೌದು. ಸರ್ಕಾರಿ ಶಾಲೆಗಳಲ್ಲಿನ ಶಿಕ್ಷಕರ ಕೊರತೆ ನೀಗಿಸುವುದರ ಜೊತೆಗೆ, ಗುಣಮಟ್ಟದ ಶಿಕ್ಷಣವನ್ನು ಖಾತರಿಪಡಿಸುವುದೂ ಸೇರಿದಂತೆ ಹಲವು ಸುಧಾರಣೆಗಳನ್ನು ತರಲು ಶಿಕ್ಷಣ ಇಲಾಖೆ ಮುಂದಾಗಿದೆ. ಶಿಕ್ಷಕರ ವರ್ಗಾವಣೆ ಸ್ವರೂಪದಲ್ಲಿ ಆಮೂಲಾಗ್ರ ಬದಲಾವಣೆ ಒಳಗೊಂಡ ‘ಕರ್ನಾಟಕ ರಾಜ್ಯ ನಾಗರಿಕ ಸೇವೆಗಳು (ಶಿಕ್ಷಕರ ವರ್ಗಾವಣೆ ನಿಯಂತ್ರಣ) ತಿದ್ದುಪಡಿ ಮಸೂದೆ–2026’ ವಿಧಾನಸಭೆಯಲ್ಲಿ ಅಂಗೀಕಾರಗೊಂಡಿದೆ. ಈ ಉದ್ದೇಶಿತ ಸುಧಾರಣೆಗಳು ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯನ್ನು ಬಲಪಡಿಸುವ ನಿಟ್ಟಿನಲ್ಲಿನ ಗಮನಾರ್ಹ ಹೆಜ್ಜೆಗಳಾಗಿವೆ.



ಬೋಧಕೇತರ ಹುದ್ದೆಗಳಿಗೆ ಶಿಕ್ಷಕರನ್ನು ನಿಯೋಜನೆಗೊಳಿಸದೆ ಇರುವ ಕ್ರಮ, ಶಿಕ್ಷಣ ವ್ಯವಸ್ಥೆಯನ್ನು ಬಲಪಡಿಸುವ ಹಾಗೂ ವಿದ್ಯಾರ್ಥಿಗಳಿಗೆ ಅನುಕೂಲಕರವಾದ ನಡೆ.

ಶಿಕ್ಷಕರನ್ನು ಬೋಧಕೇತರ ಹುದ್ದೆಗಳಿಗೆ ನಿಯೋಜನೆ ಮಾಡುವುದನ್ನು ನಿರ್ಬಂಧಿಸಿದ ಮಾತ್ರಕ್ಕೆ ಸರ್ಕಾರಿ ಶಾಲೆಗಳಲ್ಲಿನ ಶಿಕ್ಷಕರ ಕೊರತೆಯ ಸಮಸ್ಯೆ ಬಗೆಹರಿಯುತ್ತದೆಂದು ನಿರೀಕ್ಷಿಸುವಂತಿಲ್ಲ. ಶಾಲೆಗಳಲ್ಲಿ ಬೋಧಿಸುವುದರ ಬದಲು, ಅನ್ಯಕಾರ್ಯ ನಿಮಿತ್ತ ಶಿಕ್ಷಣ ಇಲಾಖೆಯ ವಿವಿಧ ಹುದ್ದೆಗಳಿಗೆ ನಿಯೋಜನೆಗೊಳ್ಳುವ ಶಿಕ್ಷಕರ ಸಂಖ್ಯೆ ಸಣ್ಣ ಪ್ರಮಾಣದ್ದು. ಹಾಗಾಗಿ, ಇವರನ್ನು ಮತ್ತೆ ತರಗತಿಗಳಿಗೆ ಕರೆತರುವುದರಿಂದ ಶಾಲೆಗಳಿಗೆ ಹಾಗೂ ವಿದ್ಯಾರ್ಥಿಗಳಿಗೆ ಆಗುವ ಅನುಕೂಲದ ಪ್ರಮಾಣ ಸೀಮಿತ ಆದುದು. ಸರ್ಕಾರಿ ಶಾಲೆಗಳ ಸಬಲೀಕರಣದ ಬಗ್ಗೆ ಸರ್ಕಾರಕ್ಕೆ ನೈಜ ಕಾಳಜಿ ಇದ್ದಲ್ಲಿ, ಲಭ್ಯವಿರುವ ಶಿಕ್ಷಕರನ್ನು ಪೂರ್ಣ ಪ್ರಮಾಣದಲ್ಲಿ ಬೋಧನೆಗೆ ದೊರಕಿಸಿಕೊಡುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಬೇಕು. ಶೈಕ್ಷಣಿಕ ವರ್ಷವೊಂದರಲ್ಲಿ ಶಿಕ್ಷಕನೊಬ್ಬ ಕನಿಷ್ಠ 220 ದಿನಗಳ ಕಾಲವಾದರೂ ಮಕ್ಕಳಿಗೆ ಕಲಿಸಬೇಕಾಗಿದೆ. ಆದರೆ, ಈಗಿನ ಶೈಕ್ಷಣಿಕ ಕ್ರಮದಲ್ಲಿ ಶಿಕ್ಷಕರು ವಿದ್ಯಾರ್ಥಿಗಳಿಗೆ 100 ದಿನಗಳ ಸಮಯವನ್ನು ನೀಡುವುದೂ ಕಷ್ಟ ಎನ್ನುವಂತಾಗಿದೆ. ಜನಗಣತಿ, ವಿಕೋಪ ಸಂದರ್ಭ, ಚುನಾವಣೆ ಹೊರತುಪಡಿಸಿ ಬೇರೆ ಯಾವುದೇ ಕೆಲಸಗಳಿಗೆ ಶಿಕ್ಷಕರನ್ನು ಬಳಸುವಂತಿಲ್ಲ ಎಂದು ‘ಶಿಕ್ಷಣ ಹಕ್ಕು ಕಾಯ್ದೆ (ಆರ್‌ಟಿಇ) 2009’ರ 27ನೇ ವಿಧಿ ಸ್ಪಷ್ಟವಾಗಿ ಹೇಳುತ್ತದೆ. ಶಿಕ್ಷಕರ ಹೆಚ್ಚಿನ ಸಮಯ ತರಗತಿಗಳಲ್ಲಿನ ಬೋಧನೆಗೆ ದೊರೆಯುವಂತೆ ಮಾಡುವುದು ಈ ನಿಯಮದ ಉದ್ದೇಶ. ಆದರೆ, ಈ ಕರ್ತವ್ಯಗಳ ಹೊರತಾಗಿಯೂ ಶಿಕ್ಷಕರನ್ನು ಅನ್ಯ ಉದ್ದೇಶಗಳಿಗೆ ಬಳಸಲಾಗುತ್ತಿದೆ. ಚುನಾವಣಾ ಕಾರ್ಯ ಎನ್ನುವುದು ಮತದಾನ ದಿನದ ಕರ್ತವ್ಯಕ್ಕೆ ಸೀಮಿತವಾಗಿರುವುದರ ಬದಲು, ಮತದಾರರ ಪಟ್ಟಿ ತಯಾರಿಕೆ, ಪರಿಷ್ಕರಣೆಗೂ ವಿಸ್ತರಿಸಿಕೊಂಡಿರುವುದರಿಂದ ಶಿಕ್ಷಕರು ವರ್ಷದ ಬಹುತೇಕ ಸಮಯ ಅನ್ಯ ಇಲಾಖೆಗಳ ಸೇವೆಯಲ್ಲಿಯೇ ಹೆಚ್ಚಿನ ಸಮಯ ಕಳೆಯುವಂತಾಗಿದೆ. ಇದು, ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣ ಕಾಯ್ದೆಗೆ ವಿರುದ್ಧವಾದುದು.

ಮಕ್ಕಳಿಗೆ ಕಲಿಸುವ ಚಟುವಟಿಕೆಗಳಲ್ಲಿ ಶಿಕ್ಷಕರ ಸಂಪೂರ್ಣ ಸಾಮರ್ಥ್ಯ ವಿನಿಯೋಗ ಆಗುವಂತೆ ಸರ್ಕಾರ ಕ್ರಮ ಕೈಗೊಳ್ಳಬೇಕಾಗಿದೆ. ಬೋಧನೆಗಷ್ಟೇ ಸೀಮಿತಗೊಳ್ಳುವುದರಿಂದ ಶಿಕ್ಷಕರು ತಮ್ಮ ವೃತ್ತಿ ಕೌಶಲಗಳನ್ನು ಹೆಚ್ಚಿಸಿಕೊಳ್ಳುವುದೂ ಸಾಧ್ಯವಾಗುತ್ತದೆ. ಅನ್ಯ ಕಾರ್ಯಗಳ ಒತ್ತಡ ಇಲ್ಲದೆ ಹೋದಾಗ ಶಿಕ್ಷಕರು ಮುಕ್ತ ಮನಸ್ಸಿನಿಂದ ಬೋಧನೆಯಲ್ಲಿ ತೊಡಗಿಕೊಳ್ಳಬಹುದಾಗಿದೆ. ಶಿಕ್ಷಣ ಇಲಾಖೆಯ ಸಬಲೀಕರಣಕ್ಕಾಗಿ ಹೊಸ ಕಾನೂನುಗಳನ್ನು ತರುವ ಸರ್ಕಾರದ ಉದ್ದೇಶ ಒಳ್ಳೆಯದು. ಆದರೆ, ಅನುಷ್ಠಾನದಲ್ಲಿ ಇಚ್ಛಾಶಕ್ತಿ ತೋರದಿರುವುದರ ಮೂಲಕ ಪರಿಣಾಮಕಾರಿ ಕಾನೂನುಗಳನ್ನೂ ದುರ್ಬಲಗೊಳಿಸುವುದರಲ್ಲಿ ನಮ್ಮ ಆಡಳಿತಯಂತ್ರ ಪಳಗಿದೆ. ರಾಜಕೀಯ ಒತ್ತಡ, ಆಡಳಿತದ ಅನುಕೂಲಕ್ಕಾಗಿ ವಿನಾಯಿತಿಗಳು ಮತ್ತು ಅಸಮರ್ಪಕ ಮೇಲ್ವಿಚಾರಣೆಯಿಂದಾಗಿ ಕಾನೂನುಗಳು ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ಬರುತ್ತಿಲ್ಲ. ಪರಿಣಾಮಕಾರಿ ಕಾನೂನುಗಳ ಜೊತೆಗೆ, ರಾಜಕೀಯ ಇಚ್ಛಾಶಕ್ತಿಯೂ ಇದ್ದಾಗಷ್ಟೇ ಶಿಕ್ಷಣ ವ್ಯವಸ್ಥೆಯಲ್ಲಿ ಬದಲಾವಣೆ ಸಾಧ್ಯ.

ಚಾಟಿ

ಭ್ರಷ್ಟಾಚಾರದ ಮೂಲ!



ಯಾವ ದೇಶದಲ್ಲಿ ರಾಜಕೀಯ ನಾಯಕರು ಮತ್ತು ಧಾರ್ಮಿಕ ಪ್ರಮುಖರು ಶ್ರೀಮಂತರಾಗಿದ್ದು, ಜನಸಾಮಾನ್ಯರು ಬಡವರಾಗಿರುತ್ತಾರೋ, ಆ ದೇಶದಲ್ಲಿ ಭ್ರಷ್ಟಾಚಾರ ಕಾಲುಮುರಿದುಕೊಂಡು ಕುಳಿತಿರುತ್ತದೆ.

ಪ್ರವೀಣ್ ಎಂ. ಮಗದುಮ್, ಲೇಖಕ, ‘ಎಕ್ಸ್’ನಿಂದ

ಕಿಡಿನುಡಿ



ರಾಜ್ಯದ ಹಣಕಾಸು ಪರಿಸ್ಥಿತಿ ಚಿಂತಾಜನಕವಾಗಿದೆ. ಹೀಗಿರುವಾಗ ಹೈಕಮಾಂಡ್ ಮೆಚ್ಚಿಸಿ ಕುರ್ಚಿ ಉಳಿಸಿಕೊಳ್ಳಲು ಕೇರಳದ ವಯನಾಡು ಲೋಕಸಭಾ ಕ್ಷೇತ್ರಕ್ಕೆ ಸಿದ್ದರಾಮಯ್ಯನವರು ₹10 ಕೋಟಿ ಹೆಚ್ಚುವರಿ ನೆರವು ನೀಡಿದ್ದಾರೆ. ಅವರ ನಿರ್ಲಜ್ಜತೆ, ಭಂಡತನಕ್ಕೆ ಅವರೇ ಸಾಟಿ.

ಆರ್. ಅಶೋಕ, ವಿಧಾನಸಭಾ ವಿರೋಧ ಪಕ್ಷದ ನಾಯಕ

25 ವರ್ಷಗಳ ಹಿಂದೆ

ಭಾನುವಾರ, 25-3-2001

- **ಕಪಾಳಮೋಕ್ಷ ಪ್ರಕರಣ: ಜಿ.ಪಂ. ಸದಸ್ಯ ಬಂಧನ**

ತುಮಕೂರು, ಮಾರ್ಚ್ 24– ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಕೆ. ಜನಾರ್ಧನ ರಾವ್ ಅವರಿಗೆ ಕಪಾಳಮೋಕ್ಷ ನಡೆಸಿದ ಘಟನೆಯ ಆರೋಪಿ ಮತ್ತು ಜಿಲ್ಲಾ ಪಂಚಾಯಿತಿ ಸದಸ್ಯ ವೈ.ಎಚ್. ಹುಚ್ಚಯ್ಯ ಅವರನ್ನು ಇಂದು ಕುಣಿಗಲ್ ಪೊಲೀಸರು ಬಂಧಿಸಿದ್ದಾರೆ.

ನಿನ್ನೆ ರಾತ್ರಿ ಜನಾರ್ಧನ ರಾವ್ ಅವರು ನೀಡಿದ ದೂರಿನ ಮೇರೆಗೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆರ್. ಹಿತೇಂದ್ರ ಅವರ ಸೂಚನೆಯಂತೆ ಮೊಕದ್ದಮೆ ದಾಖಲಿಸಿಕೊಂಡಿರುವ ಪೊಲೀಸರು, ಇಂದು ರಾತ್ರಿ 8.30ರ ಸಮಯದಲ್ಲಿ ಹುಚ್ಚಯ್ಯ ಅವರನ್ನು ಬಂಧಿಸಿ ಜಾಮೀನಿನ ಮೇಲೆ ಬಿಡುಗಡೆ ಮಾಡಿದರು. ಹುಲಿಯೂರುದುರ್ಗ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬಿ.ಕೆ. ರಾಮಣ್ಣ ಅವರು ನೀಡಿದ ಜಾಮೀನಿನ ಮೇಲೆ ಹುಚ್ಚಯ್ಯ ಅವರನ್ನು ಬಿಡುಗಡೆ ಮಾಡಲಾಗಿದೆ ಎಂದು ಮೂಲಗಳು ತಿಳಿಸಿವೆ.

- **ರಕ್ಷಣಾ ಹಗರಣ: ತನಿಖೆಗೆ ವೆಂಕಟಸ್ವಾಮಿ ನೇಮಕ**

ನವದೆಹಲಿ, ಮಾರ್ಚ್ 24– ರಕ್ಷಣಾ ಸಾಮಗ್ರಿಗಳ ಖರೀದಿಯಲ್ಲಿನ ಭ್ರಷ್ಟಾಚಾರದ ಬಗ್ಗೆ ನ್ಯಾಯಾಂಗ ತನಿಖೆಗೆ ಕೇಂದ್ರ ಸರ್ಕಾರ ರಚಿಸಿರುವ ಏಕಸದಸ್ಯ ತನಿಖಾ ಆಯೋಗದ ಮುಖ್ಯಸ್ಥರಾಗಿ ನಿವೃತ್ತ ನ್ಯಾಯಾಧೀಶ ಕೆ. ವೆಂಕಟಸ್ವಾಮಿ ಅವರನ್ನು ನೇಮಕ ಮಾಡಲಾಗಿದೆ.

75 ವರ್ಷಗಳ ಹಿಂದೆ

ಭಾನುವಾರ, 25-3-1951

- **ನೀತಿ ಚಳವಳಿಗಾರರ ಕುರಿತು ನೆಹರೂ ಖಂಡನೆ**

ನವದೆಹಲಿ, ಮಾರ್ಚ್ 24– ವಿಶ್ವಸಂಸ್ಥೆಯ ಶೈಕ್ಷಣಿಕ, ವೈಜ್ಞಾನಿಕ ಮತ್ತು ಸಾಂಸ್ಕೃತಿಕ ಸಂಸ್ಥೆಯೊಡನೆ ಸಹಕಾರಕ್ಕಿರುವ ಭಾರತೀಯ ರಾಷ್ಟ್ರೀಯ ಸಮಿತಿಯ ದ್ವಿತೀಯ ಅಧಿವೇಶನವನ್ನು ಉದ್ಘಾಟಿಸುತ್ತ ಪ್ರಧಾನಿ ನೆಹರೂರವರು, ಇಂದು ನೈತಿಕ ಚಳವಳಿಗಾರರ ವಿರುದ್ಧ ಉಗ್ರವಾಗಿ ಮಾತನಾಡಿದರು.

ವಿಶ್ವದಲ್ಲಿ ಅನೇಕ ರಾಷ್ಟ್ರಗಳು ಉಳಿದವರನ್ನು ತಮ್ಮಂತೆ ರೂಪಿಸುವುದು ತಮ್ಮ ಕರ್ತವ್ಯವೆಂದು ತಿಳಿದಿರುವಂತೆ ತೋರುವುದೆಂದೂ, ಈ ಪ್ರವೃತ್ತಿಯನ್ನು ತಡೆಗಟ್ಟದಿದ್ದರೆ ಅಗಾಧ ಘರ್ಷಣೆಗಳು ಉದ್ಭವಿಸಿ ಮಾನವತೆಗೆ ಹೆಚ್ಚಿನ ವಿನಾಶ ತರುವುದೆಂದೂ ಪ್ರಧಾನಿ ನೆಹರೂ ಅವರು ನುಡಿದರು.

ಯುದ್ಧ ತಲ್ಲಣ, ವಚನ ಸಾಂತ್ವನ



ವಿಶ್ಲೇಷಣೆ

ಬಸವರಾಜ ಸಾದರ

ಯುದ್ಧೋನ್ಮಾದದ ಬೆಂಕಿ ಇಡೀ ಜಗತ್ತಿನಲ್ಲಿ ಇನ್ನಿಲ್ಲದ ತಲ್ಲಣಗಳನ್ನು ಉಂಟು ಮಾಡುತ್ತಿದೆ. ಇದು ಅಪಾರ ಪ್ರಮಾಣದ ಆರ್ಥಿಕತೆಯ ನಷ್ಟಕ್ಕೆ ಕಾರಣವಾಗುತ್ತಿದೆಯಲ್ಲದೆ, ಶತಮಾನಗಳಿಂದ ಕಟ್ಟುವ ಕೆಲಸದಲ್ಲಿ ತೊಡಗಿದ ಮಾನವನ ಶ್ರಮವನ್ನೂ ಮಣ್ಣುಪಾಲಾಗಿಸುತ್ತಿದೆ. ಇದೆಲ್ಲಕ್ಕಿಂತ ಹೆಚ್ಚು ನೋವಿನ ಸಂಗತಿಯೆಂದರೆ, ಯುದ್ಧಗಳಲ್ಲಿ ಅಮಾಯಕ ಜೀವಿಗಳ ಮಾರಣಹೋಮ ನಡೆಯುತ್ತಿರುವುದು.

ಮನುಷ್ಯತ್ವವನ್ನೇ ಮಾರಿಕೊಂಡವರು ನಡೆಸುತ್ತಿರುವ ಯುದ್ಧಗಳಲ್ಲಿ ಸುಖಾಸುಮ್ಮನೆ ಸಾಯುತ್ತಿರುವ ಅಸಂಖ್ಯ ಜನಸಾಮಾನ್ಯರ ಕರುಣಾಜನಕ ಕಥೆ ಹೇಳತೀರದ್ದು. ಯುದ್ಧಹಿಂಸಾರತಿಯ ದುಷ್ಟರು ಈ ರೀತಿ ಕೊಲ್ಲುವ ದುಸ್ಸಾಹಸಕ್ಕೆ ಇಳಿದಿರುವುದು ಯಾವ ಕಾರಣಕ್ಕಾಗಿ? ಇದರ ಹಿಂದಿರುವ ಮಾನಸಿಕ ಸ್ಥಿತಿ ಎಂಥದ್ದು? ಇಂಥ ಪ್ರಶ್ನೆಗಳು ಮನುಷ್ಯತ್ವವುಳ್ಳ ಯಾರನ್ನಾದರೂ ಕಾಡುತ್ತವೆ. ಜಗತ್ತಿನ ಎಲ್ಲ ವಿದ್ಯಮಾನಗಳನ್ನು ಮಾನವೀಯ ನೆಲೆಯಲ್ಲಿಯೇ ಪರೀಕ್ಷಿಸಿ, ‘ಸಕಲ ಜೀವಾತ್ಮರಿಗೆ ಲೇಸನ್ನೇ ಬಯಸಿದ’ ಕನ್ನಡದ ಶರಣರು ಈ ಬಗೆಯ ಕ್ರೌರ್ಯ, ಹಿಂಸೆಗಳನ್ನು 12ನೇ ಶತಮಾನದಷ್ಟು ಹಿಂದೆಯೇ ನೇರವಾಗಿ ಖಂಡಿಸಿದ್ದು ಗಮನಾರ್ಹ. ಅಹಿಂಸೆ ಕುರಿತಾದ ವಚನಮೌಲ್ಯಗಳು ಯಾವಕಾಲದ ಹಿಂಸೆ ಮತ್ತು ಯುದ್ಧಗಳಿಗಾದರೂ ನೈತಿಕಪಾಠ ಆಗುವಂತಿವೆ.

‘ಇರಿವುದು ಕಡಿವುದು ಕೊಲುವುದು ಮಲದೇಹಿಗಳಿಗಲ್ಲದೆ ನಿರ್ಮಲದೇಹಿಗಳಿಗುಂಟೆ? ಸಮಯ ಸಮುದ್ರದಂತಿರಬೇಕು. ತಪ್ಪನರಸಿ ಶಿಕ್ಷಿಸುವನ್ನಬರ ನರಧೂತಕುಲಕ್ಕೆ ಪರಶಿವ ರೂಪುಂಟೆ? ಆ ಹರವರಿಯ ನುಡಿದಡೆನಗೇನು?’ ಎಂಬ ಘಟ್ಟಿವಾಳಯ್ಯನ ವಚನದಲ್ಲಿ, ಹಿಂಸೆ ಯಾವ ಬಗೆಯದೇ ಇರಲಿ, ಅದರ ನಿರಾಕರಣೆಯೇ ಪ್ರಧಾನವಾಗಿ ಎದ್ದು ಕಾಣುತ್ತದೆ. ‘ಮಲದೇಹಿಗಳಲ್ಲಿ’ ಮಾತ್ರ ಇರಿಯುವ ಅಥವಾ ಕೊಲ್ಲುವ ಕ್ರೌರ್ಯವಿರಲು ಸಾಧ್ಯವೇ ಹೊರತು, ನಿರ್ಮಲದೇಹಿಗಳಲ್ಲಿ ಇರಲು ಸಾಧ್ಯವಿಲ್ಲ ಎಂದು ಹೇಳುವ ಆತನ ಮಾತಿನಲ್ಲಿ ಧ್ವನಿತವಾಗಿರುವುದು ಕೊಲ್ಲುವವರೆಲ್ಲರೂ ‘ಮಲದೇಹಿಗಳೇ’ ಎಂಬ ನಿಜಾರ್ಥ. ಈ ಮಾತನ್ನೇ ಆಧರಿಸಿ ಹೇಳುವುದಾದರೆ, ಈಗ ಯುದ್ಧ ಸಾರಿ, ಕೊಲ್ಲುವ ಕುಕೃತ್ಯಕ್ಕೆ ತೊಡಗಿರುವ ಎಲ್ಲರೂ ಕೊಳಕು ಮನಸ್ಸಿನವರೇ ಎಂದರ್ಥ. ಇಂಥ ಮಲದೇಹಿಗಳ ಮನಸ್ಸಿನಲ್ಲಿ ನಿರ್ಮಲ ಬುದ್ಧಿ ಬರಬೇಕೆಂಬ ಆಶಯದಿಂದಲೇ ಆತ ‘ಸಮಯ ಸಮುದ್ರದಂತಿರಬೇಕು’ ಎಂದಿದ್ದಾನೆ. ಮನುಷ್ಯಧರ್ಮ ಸಮುದ್ರದ ಹಾಗೆ ವಿಶಾಲ ಮನೋಭಾವದಿಂದ ಕೂಡಿದ್ದರೆ ಅದು ಯಾರನ್ನೂ ಕೊಲ್ಲುವ ಕೃತ್ಯಕ್ಕೆ ಇಳಿಯುವುದಿಲ್ಲ. ಹೀಗೆ, ಕೊಲ್ಲುವ ಹಿಂಸಾಪ್ರವೃತ್ತಿಯನ್ನು ಖಂಡಿಸುತ್ತಲೇ, ಧರ್ಮದ ದಾರಿಯಲ್ಲಿ ನಡೆಯಲು ಮಹತ್ವದ ಮಾರ್ಗವನ್ನು ಸೂಚಿಸುತ್ತಾರೆ ಶರಣರು.

ಯುದ್ಧಪಿಪಾಸು ರಕ್ಕಸರಿಗೆ ಹಿಂಸೆ ಅಥವಾ ಮನುಷ್ಯರ ಸಾವು ಗಣನೆಗೇ ಇರದ ಸಾಮಾನ್ಯ ಸಂಗತಿಗಳು. ರಷ್ಯಾ ಮತ್ತು ಉಕ್ರೇನ್ ಯುದ್ಧ ಆರಂಭವಾದ ಮೊದಲ ದಿನವೇ ರಷ್ಯಾದ ಕ್ಷಿಪಣಿಯೊಂದು ಉಕ್ರೇನಿನ ಹೆರಿಗೆ ಆಸ್ಪತ್ರೆಯ ಮೇಲೆ ಬಿತ್ತು.ಮಹಿಳೆಯೊಬ್ಬಳ ಪ್ರಸವದ ಸಂದರ್ಭದಲ್ಲೇ ಕ್ಷಿಪಣಿ ಎರಗಿತು. ಕೂಸು ಆಗತಾನೇ ತಾಯಿಯ ಗರ್ಭದಿಂದ ಅರ್ಧ ಮಾತ್ರ ಹೊರಬಂದಿತ್ತು; ಆ ಹಂತದಲ್ಲಿ ತಾಯಿಯ ಮೇಲೆಯೇ ಕ್ಷಿಪಣಿ ಬಿದ್ದ ಪರಿಣಾಮವಾಗಿ ಅವಳು ಕ್ಷಣದಲ್ಲೇ ಅಸು ನೀಗಿದಳು. ಅರ್ಧ ಹೊರಬಂದಿದ್ದ ಕೂಸು ಥರಗುಟ್ಟುತ್ತಲೇ ಭೂಮಿಗೆ ಬಂತು. ಆದರೆ ಬಹಳ ಹೊತ್ತು ಬದುಕಿ ಉಳಿಯಲಿಲ್ಲ. ಜಗತ್ತನ್ನು ಕಣ್ಣು ಬಿಟ್ಟು ನೋಡುವ ಮೊದಲೇ ಅದು ಇಹಲೋಕಕ್ಕೆ ವಿದಾಯ ಹೇಳಬೇಕಾಯ್ತು. ಹುಟ್ಟುತ್ತಲೇ ಸತ್ತ ಆ ಕೂಸು ಯುದ್ಧೋನ್ಮಾದಿಗಳ ಮನೆಯದಾಗಿರಲಿಲ್ಲ; ಬದಲಾಗಿ ಬೇರೆಯವರದಾಗಿತ್ತು. ಇದೇ ರೀತಿ ಇರಾನ್ ಮೇಲೆ ಯುದ್ಧ ಸಾರಿದ ಮೊದಲ ದಿನವೇ ಶಾಲಾ ವಸತಿನಿಲಯವೊಂದರ ಮೇಲೆ ಅಮೆರಿಕ ಬಾಂಬ್ ದಾಳಿ ನಡೆಸಿದ್ದರಿಂದಾಗಿ ಅಮಾಯಕ ಮಕ್ಕಳ ಮಾರಣಹೋಮ ನಡೆಯಿತು. ಇದಕ್ಕೆ ಅಮೆರಿಕವಾಗಲಿ, ಅಲ್ಲಿನ ಅಧಿಕಾರಿ ವರ್ಗ ಅಥವಾ ಯುದ್ಧರಾಕ್ಷಸನಾಗಲಿ ಕಿಂಚಿತ್ತೂ ಮರುಗಲಿಲ್ಲ. ಇಂಥ ಸಾವಿನ ಸಂಖ್ಯೆ ಈಗ ನಿರಂತರವಾಗಿ ಏರುತ್ತಲೇ ಇದೆ.

> ಹಿಂಸೆ ಹಾಗೂ ಕ್ರೌರ್ಯವನ್ನು ‘ಕನ್ನಡ ಪರಂಪರೆ’ ನಿರಂತರವಾಗಿ ವಿರೋಧಿಸಿದೆ. ವಚನ ಚಳವಳಿಯಂತೂ ಹಿಂಸೆಗೆ ಪರ್ಯಾಯವಾಗಿ ಜೀವಮೌಲ್ಯಗಳ ಅಗತ್ಯವನ್ನು ಪ್ರತಿಪಾದಿಸಿದೆ; ಅದನ್ನು ನಡೆಯಲ್ಲೂ ನುಡಿಯಲ್ಲೂ ಅನುಸರಿಸಿದೆ. ಅಹಿಂಸೆ ಕುರಿತಾದ ಶರಣರ ನಡೆ–ನುಡಿ ಯುದ್ಧಪೀಡಿತ ವರ್ತಮಾನಕ್ಕೂ ಪಾಠದಂತಿದೆ.

ಬೇರೆಯವರ ಸಾವಿಗೆ ಕಾರಣವಾಗುವ ಹಿಂಸಾಪ್ರವೃತ್ತಿಯ ವಿರುದ್ಧ ಶರಣರು ಮಾನವೀಯ ಕಳಕಳಿಯನ್ನು ವ್ಯಕ್ತಪಡಿಸಿದ್ದು, ಅವರ ಮನುಷ್ಯ ಪ್ರೀತಿಯ ದ್ಯೋತಕವಾಗಿದೆ. ‘ಜಾಲಗಾರನೊಬ್ಬ ಜಲವ ಹೊಕ್ಕು ಶೋಧಿಸಿ, ಹಲವು ಪ್ರಾಣಿಯ ಕೊಂದು ನಲಿದಾಡುವ. ತನ್ನ ಮನೆಯಲೊಂದು ಶಿಶು ಸತ್ತಡೆ ಮರುಗುವಂತೆ ಅವನೇಕೆ ಮರುಗನು? ಜಾಲಗಾರನ ದುಃಖ ಜಗಕೆಲ್ಲ ನಗೆಗೆಡೆ’ ಎಂದು ಮನುಷ್ಯನ ಹಿಂಸಾಪ್ರವೃತ್ತಿಯ ಹಿಂದಿರುವ ದ್ವಂದ್ವವನ್ನು ಪ್ರಶ್ನಿಸುತ್ತಾಳೆ ಅಕ್ಕಮಹಾದೇವಿ. ಒಬ್ಬ ಜಾಲಗಾರ ನೀರಲ್ಲಿ ಹೊಕ್ಕು, ಅನೇಕ ಜಲಚರ ಪ್ರಾಣಿಗಳನ್ನು ಹಿಡಿದು, ಕೊಂದು ಖುಷಿಪಡುತ್ತಾನೆ. ಪ್ರಾಣಿಗಳನ್ನು ಕೊಲ್ಲುವುದರಿಂದ ಆತನಿಗೆ ಲಾಭವಿದೆ. ಆದರೆ, ಅದೇ ಜಾಲಗಾರನ ಮನೆಯಲ್ಲಿ ಮಗು ಸತ್ತರೆ, ಆತನಿಗೆ ಅದೇ ರೀತಿಯ ಖುಷಿಯಾಗಲು ಸಾಧ್ಯವೆ? ತನ್ನ ಮಗು ಸತ್ತಾಗ ನೊಂದು ಮರುಗುವಂತೆ, ಜಲಚರಗಳನ್ನು ಕೊಂದಾಗ ಆತ ಮರುಗುತ್ತಾನೆಯೆ? ಎಂಬುದಿಲ್ಲಿ ಅಕ್ಕನ ಮುಖ್ಯ ಪ್ರಶ್ನೆ.

ತನ್ನವರು ಸತ್ತರೆ ದುಃಖಿಸುವ, ಬೇರೆಯವರು ಸತ್ತರೆ ಖುಷಿಪಡುವ ಮನುಷ್ಯನ ನೀಚ, ದ್ವಂದ್ವಪ್ರವೃತ್ತಿ ಮನುಕುಲಕ್ಕೆ ಮಾರಕವಾದದ್ದು. ವರ್ತಮಾನದ ಯುದ್ಧಗಳಲ್ಲಿ ಕ್ರಿಯಾಶೀಲವಾಗಿರುವುದು ಇಂಥ ತರತಮದ ಕ್ಷುದ್ರ ಪ್ರವೃತ್ತಿಯೇ. ಎಲ್ಲಿಯವರೆಗೆ ಬೇರೆಯವರ ಸಾವೂ ನಮ್ಮ ಮನೆಯ ಸಾವೇ ಎಂಬ ಮಾನವೀಯ ಸಂವೇದನೆ ಹುಟ್ಟುವುದಿಲ್ಲವೋ, ಅಲ್ಲಿಯವರೆಗೂ ಇಂಥ ಕ್ರೌರ್ಯ ನಡೆಯುತ್ತಲೇ ಇರುತ್ತದೆ. ಇಂಥ ಅಮಾನವೀಯ ಮತ್ತು ಕ್ರೌರ್ಯದ ನಡೆಯೇ ಜಗಕೆಲ್ಲ ನಗೆಗಡೆಯಾಗುತ್ತದೆ ಎನ್ನುತ್ತಾಳೆ ಅಕ್ಕ. ಇದು ಹಿಂಸೆಯನ್ನು ಕುರಿತ ಪ್ರತಿಭಟನೆ ಮಾತ್ರವಾಗಿರದೆ, ಮನುಷ್ಯತ್ವ ಮಾರಿಕೊಂಡ ರಾಕ್ಷಸರ ಅಂತಃಸಾಕ್ಷಿಯನ್ನೇ ಕೆಣಕುವಂಥ ಪ್ರಶ್ನೆ. ಯುದ್ಧ ಸಾರಿದವರೇ ನೇರವಾಗಿ ರಣರಂಗದಲ್ಲಿ ನಿಂತು ಹೋರಾಡಿದರೆ, ಅವರಿಗೆ ಸಾವಿನ ಹಿಂದಿನ ನೋವು ಅರ್ಥವಾಗಲು ಸಾಧ್ಯ. ಆದರೆ, ಯುದ್ಧ ಸಾರಿದವರು ಯುದ್ಧ ಮಾಡುತ್ತಾರೆಯೆ? ಇಲ್ಲ; ಅವರು ಯುದ್ಧ ಮಾಡಿಸುತ್ತಾರೆ, ಸಾವುಗಳಿಗೆ ಕಾರಣವಾಗುತ್ತಾರೆ.

ತಾವು ನಡೆಸುತ್ತಿರುವುದು ಹಿಂಸೆಯೆಂದು ತಿಳಿದೂ ಅದನ್ನೇ ಮಾಡುವುದು ಮನುಷ್ಯತ್ವ ಮಾರಿಕೊಂಡವರಿಂದ ಮಾತ್ರ ಸಾಧ್ಯ. ಇಂಥ ಹಿಂಸಾರತಿಗಳಿಗೂ ಶರಣರು ಸೂಕ್ತವಾದ ಪಾಠ ಕಲಿಸುತ್ತಾರೆ. ಬಸವಣ್ಣನವರ ಒಂದು ವಚನದಲ್ಲಿ ‘ಅರಿದರಿದು! ಸಮಗಾಣಿಸಬಾರದು, ತ್ರಾಸಿನ ಕಟ್ಟಳೆಯನಿಂತಿನಿತು ವೆಗ್ಗಳವಾದರೆ ಈಶ್ವರನೊಡೆಯಿಕ್ಕದೆ ಮಾಣುವನೆ? ಪಾತ್ರ ಅಪಾತ್ರವೆಂದು ಕಂಡರೆ ಶಿವನೆಂತು ಮೆಚ್ಚುವನು? ಜೀವ ಜೀವಾತ್ಮವ ಸರಿಯೆಂದು ಕಂಡರೆ ಸಮವೇದಿಸದಿಪ್ಪನೆ ಶಿವನು? ತನ್ನ ಮನದಲ್ಲಿ ಸರ್ವಜೀವದಯಾಪರಿಯಾದಲ್ಲಿ ಕೂಡಲಸಂಗಮದೇವನು ಕೈಲಾಸದಿಂದ ಬಂದು ಎತ್ತಿಕೊಳ್ಳದಿಪ್ಪನೆ?’ ಎಂದು ಹೇಳಿರುವುದು ಇದೇ ಅರ್ಥದಲ್ಲಿ. ಸಾವು–ನೋವು ತರುತ್ತದೆ ಎಂಬುದು ಗೊತ್ತಿದ್ದೂ, ಕೊಲ್ಲುವ ಕೃತ್ಯ ನಡೆಸುವವರನ್ನು ದೇವರು ಎಂದೂ ಕ್ಷಮಿಸಲಾರ ಎಂಬುದೇ ಅವರ ನಿಲುವು. ‘ತನ್ನಂತೆ ಪರರು’ ಎಂಬುದು ಮನುಷ್ಯರಾದವರು ರೂಢಿಸಿಕೊಳ್ಳಬೇಕಾದ ಸಮಾನತೆಯ ಪ್ರಜ್ಞೆ. ಇದರಲ್ಲಿ ತರತಮ ಮಾಡಿದರೆ ಸಮಾಜದಲ್ಲಿ ಸಮಾನತೆಯ ತೂಕವೇ ತಪ್ಪಿಹೋಗುತ್ತದೆ. ಎಲ್ಲ ಜೀವಿಗಳಲ್ಲೂ ಇರುವ ಜೀವಾತ್ಮನು ಒಂದೇ ಎಂಬ ಭಾವನೆಯಿಂದ ಹಾಗೂ ಎಲ್ಲರನ್ನೂ ದಯಾಪರವಾದ ದೃಷ್ಟಿಯಿಂದ ಕಂಡರೆ ಮಾತ್ರ ದೇವರು ಅಂಥವರನ್ನು ಒಪ್ಪಿಕೊಳ್ಳುತ್ತಾನೆ; ಅಪ್ಪಿಕೊಳ್ಳುತ್ತಾನೆ. ಇದು ಬಸವಣ್ಣನವರು ಪ್ರತಿಪಾದಿಸುವ ಅಹಿಂಸಾತತ್ತ್ವದ ಅತ್ಯಂತ ಖಚಿತ ನಿಲುವು. ಆದರೆ, ದೇವರು, ಧರ್ಮ, ಮಾನವೀಯತೆ, ತನ್ನಂತೆ ಪರರು, ನನಗಾದಂತೆ ಅವರಿಗೂ ನೋವಾಗುತ್ತದೆ ಎಂಬ ಭಾವನೆಗಳೇ ಇಲ್ಲದ ಹಿಂಸಾರತಿಪೀಡಿತ ಮನಸ್ಸುಗಳಿಗೆ ಮಾನವೀಯ ಮೌಲ್ಯಗಳ ಪರಿಚಯವಿರಲು ಸಾಧ್ಯವೆ?

ಶರಣರು ಹಿಂಸೆಯ ಬಗೆಗೆ ಹೇಳುವ ಅಂತಿಮ ಸತ್ಯದ ಮಾತುಗಳು ಇಡೀ ವಿಶ್ವದ ಜನರ ಮನಸ್ಸುಗಳನ್ನೇ ಪರಿವರ್ತಿಸುವಂತಿವೆ. ಬಸವಣ್ಣನವರ ‘ದಯವಿಲ್ಲದ ಧರ್ಮವದಾವುದಯ್ಯಾ? ದಯವೇ ಬೇಕು ಸಕಲ ಪ್ರಾಣಿಗಳೆಲ್ಲರಲ್ಲಿಯೂ; ದಯವೇ ಧರ್ಮದ ಮೂಲವಯ್ಯಾ ಕೂಡಲಸಂಗಯ್ಯನಂತಲ್ಲದೊಲ್ಲನಯ್ಯಾ’ ಎಂಬ ವಚನವೇ ಇದಕ್ಕೆ ಸಾಕ್ಷಿ. ಜಗತ್ತಿನಲ್ಲಿ ಸಾವಿರಾರು ಧರ್ಮಗಳಿರಬಹುದು. ಆದರೆ, ಅವುಗಳಲ್ಲಿ ದಯಾಗುಣವೇ ಇಲ್ಲದಿದ್ದರೆ ಅವು ಧರ್ಮಗಳಾಗಲಾರವು, ಮತ್ತು ಅಂಥ ಧರ್ಮಗಳು ಮತ್ತಾವ ಒಳಿತನ್ನೂ ಮಾಡಲಾರವು ಎಂಬುದು ಬಸವಣ್ಣನ ನಿಲುವು. ಒಂದು ಧರ್ಮದ ಮೂಲ ದಯೆಯೇ ಆಗಿರುತ್ತದೆ. ಆದರೆ, ಅದನ್ನೇ ಮಾರಿಕೊಂಡ ಅಹಂಕಾರಿಗಳು ಹಿಂಸಾಮಾರ್ಗ ಹಿಡಿದು ಎಲ್ಲರನ್ನೂ ಹಿಂಸಿಸುತ್ತ, ಕೊಲ್ಲುತ್ತ ಹೋಗುತ್ತಿದ್ದಾರೆ. ಈಗ ಯುದ್ಧ ಹೂಡಿರುವ ರಕ್ಕಸರು ನಡೆಯುತ್ತಿರುವುದು ಧರ್ಮದ ಮಾರ್ಗವೂ ಅಲ್ಲ, ದಯೆಯ ಮಾರ್ಗವೂ ಅಲ್ಲ. ಅಂಥವರಿಂದ ಜಗತ್ತಿನಲ್ಲಿ ಶಾಂತಿಯ ವಾತಾವರಣದ ನಿರ್ಮಾಣ ಸಾಧ್ಯವೆ? ಹೀಗಾಗುವುದರ ಒಟ್ಟಾರೆ ಪರಿಣಾಮವೇ ಸರ್ವನಾಶ. ‘ಮನುಷ್ಯ ಮನುಷ್ಯನನ್ನೇ ಅದೇನು ಮಾಡುತ್ತಿದ್ದಾನೆ’ ಎಂಬ ವರ್ಡ್ಸ್‌ವರ್ತ್‌ನ ಮಾತು ಈಗ ಯಾರಿಗಾದರೂ ಕೇಳುತ್ತಿದೆಯೆ?

ಯುದ್ಧದ ಕ್ರೌರ್ಯದಿಂದ ತತ್ತರಿಸುತ್ತಿರುವ ಮತ್ತು ಅಸಂಖ್ಯ ಜೀವಿಗಳ ಸಾವು ಸಂಭವಿಸುತ್ತಿರುವ ವರ್ತಮಾನದಲ್ಲಿ ಈಗ ಜಗತ್ತಿಗೆ ಉಳಿದಿರುವುದು ಶರಣರು ಪ್ರತಿಪಾದಿಸಿದ ದಯೆ ಮತ್ತು ಅಹಿಂಸೆಯ ಮಾರ್ಗವೊಂದೇ. ಯುದ್ಧ ಸಾರಿರುವ ಕ್ಷುದ್ರ ಮನಸ್ಸುಗಳಲ್ಲಿ ಶರಣರು ಪ್ರತಿಪಾದಿಸಿದ ದಯಾಗುಣ ಮತ್ತು ಧರ್ಮದ ಮೌಲ್ಯಗಳು ಜಾಗೃತವಾಗಬೇಕು.



ವಾಚಕರ ವಾಣಿ

ಕಾಲದ ಕಾವ್ಯ ಪ್ರಸ್ತುತಿಯ ಹೊಸ ಬಗೆ

ಲೇಖಕ ಚಂದನ್‌ಗೌಡ ಅವರು ಯೂಟ್ಯೂಬ್‌ನಲ್ಲಿ ಆರಂಭಿಸಿರುವ, ಹಂಪನಾ ಅವರ ಉಪನ್ಯಾಸಗಳ ‘ನಿಚ್ಚಂ ಪೊಸತು’ (ಪ್ರ.ವಾ., ಮಾರ್ಚ್ 24) ಬಹು ಉಪಯುಕ್ತವಾದ ಸರಣಿ ಕಾರ್ಯಕ್ರಮವಾಗಿದೆ. ಅಧ್ಯಾಪಕರು, ವಿದ್ಯಾರ್ಥಿಗಳು ತಾವು ಇರುವ ಕಡೆಯಲ್ಲೇ ಕೇಳಬಹುದಾದ ವಿಶಿಷ್ಟ ಕಾರ್ಯಕ್ರಮವಿದು. ಹಳಗನ್ನಡದ ಜೈನ ಕಾವ್ಯ ಮತ್ತು ಕವಿಗಳನ್ನು ಪರಿಚಯಿಸುತ್ತಿರುವ ಸರಣಿ ಉಪನ್ಯಾಸಗಳು ಓದುಗರನ್ನು ಪ್ರಭಾವಿಸುತ್ತವೆ. ಹಳಗನ್ನಡ ಓದಲು ತಿಣುಕುವವರಿಗೆ ಸುಲಭವಾಗಿ ಅರ್ಥವಾಗುತ್ತವೆ. ಓದಿನ ಧ್ಯಾನಕ್ಕಿಂತ ಕೇಳುವ ವ್ಯವಧಾನವು ತುಂಬಾ ಹೊತ್ತು ಜ್ಞಾಪಕದಲ್ಲಿರುತ್ತದೆ. ಹಳಗನ್ನಡವೆಂದರೆ ಅಸಡ್ಡೆ ತೋರುವ ಶೈಕ್ಷಣಿಕ ವಲಯದಲ್ಲಿ ಇಂತಹ ಸರಣಿ ಉಪನ್ಯಾಸಗಳು ಬೇಕಾಗಿವೆ. ಎಚ್.ಎಸ್. ರಾಘವೇಂದ್ರರಾವ್ ಅವರು ಕನ್ನಡದ ಮಹತ್ವದ ಲೇಖಕರ ಬಗ್ಗೆ ವಿಮರ್ಶಾ ನೆಲೆಯಲ್ಲಿ ವ್ಯಕ್ತಿ ಮತ್ತು ವ್ಯಕ್ತಿತ್ವಗಳಾಚೆ ಅವರ ಕೃತಿಗಳ ಮೂಲಕ ಹೊಸನೋಟವನ್ನೇ ಬೀರಿರುವ ಸರಣಿಯನ್ನೂ ಚಂದನ್ ರೂಪಿಸಿದ್ದಾರೆ.

ಶಿವರಾಜ್ ಬ್ಯಾಡರಹಳ್ಳಿ, ಬೆಂಗಳೂರು

ಕುಟುಂಬ ರಾಜಕೀಯವೆಂಬ ಅಂಟುಜಾಡ್ಯ

ಪ್ರತಿ ಚುನಾವಣೆಯಲ್ಲೂ ಬಿಜೆಪಿ, ಕಾಂಗ್ರೆಸ್ ಮತ್ತು ಜೆಡಿಎಸ್ ಪಕ್ಷಗಳ ಕುಟುಂಬ ರಾಜಕಾರಣದ ಅಸ್ತ್ರವನ್ನು ಪರಿಣಾಮಕಾರಿಯಾಗಿ ಝಳಪಿಸುತ್ತಾ ಬಂದಿವೆ. ದಾವಣಗೆರೆ ಮತ್ತು ಬಾಗಲಕೋಟೆ ಉಪಚುನಾವಣೆಯಲ್ಲೂ ಇದು ಮುಂದುವರಿದಿದೆ. ಈ ನಿಲುವು ಸಂವಿಧಾನದ ಸಮಾನತೆಯ ಆಶಯಕ್ಕೆ ವಿರುದ್ಧವಾದುದು. ವಂಶವಾದ, ಪರಿವಾರ ರಾಜಕಾರಣಕ್ಕೆ ಕೊನೆ ಎಂಬುದಿಲ್ಲ. ಲೋಕಸಭೆ ಮತ್ತು ವಿಧಾನಸಭೆಯ ಕೆಲವು ಕ್ಷೇತ್ರಗಳು ಇಂದಿಗೂ ಒಂದೇ ಕುಟುಂಬದ ಹಿಡಿತದಲ್ಲಿವೆ. ಪಕ್ಷದ ನಿಷ್ಠಾವಂತ ಕಾರ್ಯಕರ್ತರು ಆ ಕುಟುಂಬಗಳ ಸೇವೆಗಾಗಿ ಚಪ್ಪಲಿ ಸವೆಸುವುದು ನಡೆದಿದೆ. ಕುಟುಂಬ ರಾಜಕಾರಣವು ಪಕ್ಷಗಳಲ್ಲಿ ಸ್ವಾಭಾವಿಕವಾದುದು ಎಂದು ಸಮರ್ಥಿಸಿಕೊಳ್ಳುವ ಜನಪ್ರತಿನಿಧಿಗಳೂ ಇದ್ದಾರೆ. ಮತದಾರರು ಎಚ್ಚತ್ತುಕೊಳ್ಳದಿದ್ದರೆ ಈ ಅಂಟುಜಾಡ್ಯದ ನಿರ್ಮೂಲನೆ ಕಷ್ಟಸಾಧ್ಯ.

ಮಹೇಶ ಅಶೋಕ ಶಿಂಗೆ, ಚಿಕ್ಕೋಡಿ

ಅಶ್ಲೀಲ ವಿಡಿಯೊಗೆ ಕಡಿವಾಣ ಬೀಳಲಿ

‘ಲೈಂಗಿಕತೆಯಷ್ಟೇ ಅಲ್ಲ, ಎಲ್ಲವೂ ಸರಕು’ (ಪ್ರ.ವಾ., ಮಾರ್ಚ್ 23) ಸಕಾಲಿಕ ಬರಹ. ಸಾಮಾಜಿಕ ಮಾಧ್ಯಮದ ಮೂಲಕ ಅಶ್ಲೀಲತೆ ವ್ಯಾಪಕವಾಗಿ, ಬಹಳ ಸುಲಭವಾಗಿ ಮೊಬೈಲ್‌ಗಳ ಮೂಲಕ ಹರಡುತ್ತಿದೆ. ಇದು ಯುವಮನಸ್ಸುಗಳನ್ನು ಮುಕ್ತ ಲೈಂಗಿಕತೆಯತ್ತ ಪ್ರಚೋದಿಸುತ್ತಿದೆ. ನಾಗರಿಕತೆ ಬೆಳೆದಂತೆ ತನ್ನ ಲೈಂಗಿಕ ಕಾಮನೆಯನ್ನು ಹತೋಟಿಯಲ್ಲಿ ಇಟ್ಟುಕೊಳ್ಳಲು ಕಲಿತಿದ್ದ ಮಾನವ ಇಂದು ಪಶುವಿನಂತೆ ವರ್ತಿಸಲು, ಅದರಿಂದಾಗಿ ಹೆಣ್ಣುಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯಗಳು ಹೆಚ್ಚಲು ಇದೊಂದು ಮುಖ್ಯಕಾರಣ. ಅಶ್ಲೀಲ ವಿಡಿಯೊಗೆ ಕಡಿವಾಣ ಹಾಕಬೇಕಿದೆ.

ಸುಧಾ ಕೆ., ಬೆಂಗಳೂರು

ಭದ್ರತಾ ಸಿಬ್ಬಂದಿಗೆ ಕನ್ನಡದ ಅರಿವು ಇರಲಿ

ಮಾಲ್, ಸ್ಮಾರಕ, ರೈಲು ನಿಲ್ದಾಣ ಸೇರಿದಂತೆ ವಿವಿಧೆಡೆ ಕರ್ತವ್ಯ ನಿರ್ವಹಿಸುತ್ತಿರುವ ಭದ್ರತಾ ಸಿಬ್ಬಂದಿಯ ಪೈಕಿ ಬಹುತೇಕರಿಗೆ ಕನ್ನಡ ಭಾಷೆ ತಿಳಿದಿಲ್ಲ. ಸಾರ್ವಜನಿಕರು ಯಾವ ಭಾಷೆಯಲ್ಲಿ ಪ್ರಶ್ನಿಸಿದರೂ, ಅವರ ಪ್ರತಿಕ್ರಿಯೆ ಹಿಂದಿಗೆ ಸೀಮಿತವಾಗಿರುತ್ತದೆ. ಅಪಘಾತ, ಅನಾಹುತ ಅಥವಾ ಆರೋಗ್ಯ ಸಂಬಂಧಿತ ತುರ್ತುಪರಿಸ್ಥಿತಿಯಲ್ಲಿ ಸ್ಥಳೀಯರು ಸ್ಪಷ್ಟವಾಗಿ ಸಮಸ್ಯೆ ಬಗ್ಗೆ ವಿವರಿಸಿದರೂ ಅವರಿಗೆ ಅರ್ಥವಾಗದೇ ಸಮಯೋಚಿತ ನೆರವು ವಿಳಂಬವಾಗುವ ಸಂಭವವಿದೆ. ಭದ್ರತಾ ಸಿಬ್ಬಂದಿಯಿಂದ ಸಾಹಿತ್ಯಮಟ್ಟದ ಕನ್ನಡವನ್ನು ನಿರೀಕ್ಷಿಸುವುದು ಕಷ್ಟ. ಆದರೆ, ಕನಿಷ್ಠ ವ್ಯಾವಹಾರಿಕ ಕನ್ನಡದ ಅರಿವು ಅವರಿಗೆ ಇರಬೇಕಿದೆ. ಹಾಗಾಗಿ, ನೇಮಕಾತಿಯಲ್ಲಿ ಕನ್ನಡ ಜ್ಞಾನವನ್ನು ಕಡ್ಡಾಯಗೊಳಿಸಬೇಕಿದೆ.

ಎಂ.ಎಸ್. ಅಲ್ಲಮ ಪ್ರಭು, ಬೆಂಗಳೂರು

ಮಕ್ಕಳಿಂದ ವಾಹನ ಚಾಲನೆ: ಕ್ರಮ ಏಕಿಲ್ಲ?

ಎಸ್‌ಎಸ್‌ಎಲ್‌ಸಿ ಪರೀಕ್ಷಾ ಕೇಂದ್ರಗಳಿಗೆ ಬರುವ ಬಹುತೇಕ ವಿದ್ಯಾರ್ಥಿಗಳು ಸಮವಸ್ತ್ರ ಧರಿಸಿ ದ್ವಿಚಕ್ರವಾಹನ ಸವಾರಿ ಮಾಡಿಕೊಂಡು ಬರುತ್ತಿದ್ದಾರೆ. ಕೆಲವು ವಿದ್ಯಾರ್ಥಿಗಳಂತೂ ಪೋಷಕರನ್ನು ಹಿಂಬದಿಯಲ್ಲಿ ಕೂರಿಸಿಕೊಂಡು ವಾಹನ ಸವಾರಿ ಮಾಡಿಕೊಂಡು ಬರುತ್ತಾರೆ. ಇದು ನಿತ್ಯದ ಶಾಲಾ ದಿನಗಳಲ್ಲೂ ಕಾಣಬಹುದಾದ ಸಾಮಾನ್ಯ ದೃಶ್ಯ. ಮೋಟಾರು ವಾಹನ ಕಾಯ್ದೆ ಅನ್ವಯ 18 ವರ್ಷದ ಒಳಗಿನವರು ವಾಹನ ಚಲಾಯಿಸುವುದು ಶಿಕ್ಷಾರ್ಹ. ಆದರೂ, ಕಾನೂನಿನ ಉಲ್ಲಂಘನೆ ಮುಂದುವರಿದಿದೆ. ಇದರಿಂದ ಅಮಾಯಕರು ಅಪಘಾತಕ್ಕೆ ತುತ್ತಾಗುತ್ತಿದ್ದಾರೆ. ಸಂಬಂಧಿಸಿದ ಇಲಾಖೆಯು ಕಣ್ಮುಚ್ಚಿ ಕುಳಿತಿದೆ.

ಸುರೇಂದ್ರ ಪೈ, ಭಟ್ಕಳ

ನಕಲಿ ಪ್ರಮಾಣಪತ್ರ: ಅರ್ಹರಿಗೆ ಅನ್ಯಾಯ

ಸರ್ಕಾರಿ ಪ್ರಥಮದರ್ಜೆ ಕಾಲೇಜುಗಳ ಅತಿಥಿ ಉಪನ್ಯಾಸಕರ ಆಯ್ಕೆಗೆ ಸಂಬಂಧಿಸಿದಂತೆ ಪಿಎಚ್.ಡಿ., ನೆಟ್, ಕೆ–ಸೆಟ್, ಅಂಗವಿಕಲರ ಪ್ರಮಾಣಪತ್ರಗಳ ನೈಜತೆಯನ್ನು ಪರಿಶೀಲಿಸಿ ತಪ್ಪಿತಸ್ಥರ ವಿರುದ್ಧ ಕ್ರಮಕೈಗೊಳ್ಳುವುದಾಗಿ ಕಾಲೇಜು ಶಿಕ್ಷಣ ಇಲಾಖೆ ಹೇಳಿದೆ. ಅಂಗವಿಕಲರ ಕೋಟಾವನ್ನು ದುರುಪಯೋಗ ಪಡಿಸಿಕೊಂಡು ನೆಟ್, ಕೆ–ಸೆಟ್ ಪ್ರಮಾಣಪತ್ರ ಪಡೆದವರಿದ್ದಾರೆ. ಇಂತಹ ಅಭ್ಯರ್ಥಿಗಳು ಸಾಮಾನ್ಯ ಅಭ್ಯರ್ಥಿಯಂತೆ ನೈಜತೆ ತೋರಿಸುವ ಸಾಧ್ಯತೆ ಇದೆ. ಇವರು ಯಾವ ಕೋಟಾದಡಿ ಪ್ರಮಾಣಪತ್ರ ಪಡೆದಿದ್ದಾರೆಂದು ತನಿಖೆ ನಡೆಸಬೇಕಿದೆ. ಕೆಲವರು ವಾಮಮಾರ್ಗದ ಮೂಲಕ ಅಂಗವಿಕಲತೆಯ ನಕಲಿ ಪ್ರಮಾಣಪತ್ರ ಪಡೆದು ಎರಡು ಮೂರು ವರ್ಷ ಸೇವೆ ಸಲ್ಲಿಸಿದ್ದಾರೆ. ಈಗ ಅಂಗವಿಕಲ ಕೋಟಾ ತ್ಯಜಿಸಿ ಸೇವಾಹಿರಿತನದ ಮೇಲೆ ಆಯ್ಕೆಯಾಗುತ್ತಿದ್ದಾರೆ. ಈ ಬಗ್ಗೆ ಇಲಾಖೆಯು ತನಿಖೆ ನಡೆಸಬೇಕಿದೆ.

ದಾದಾಹಯಾತ್ ಬಾವಾಜಿ, ಹಂಪಿ

ಚುರುಮುರಿ



ಗ್ಯಾಸ್ ಪಥ್ಯ

• ಮಣ್ಣೆ ರಾಜು

ಟಿ.ವಿಯ ಲೈವ್ ಪ್ರೋಗ್ರಾಂನಲ್ಲಿ ಪ್ರತ್ಯಕ್ಷರಾಗಿ ಸಮಸ್ಯೆಗಳಿಗೆ ಪರಿಹಾರ ಸೂಚಿಸುವ ಗುರೂಜಿಯು ಸುಮಿಯ ಪಾಲಿನ ಪ್ರತ್ಯಕ್ಷ ದೇವರು! ಏನೇ ಕಷ್ಟಗಳಿದ್ದರೂ ಹೇಳಿಕೊಂಡು ಅವರಿಂದ ಪರಿಹಾರ ಪಡೆದುಕೊಳ್ಳುತ್ತಾಳೆ.

ಇವತ್ತೂ ಫೋನ್ ಮಾಡಿದ ಸುಮಿ, ‘ಗುರೂಜಿ, ಗ್ಯಾಸ್ ಸಿಲಿಂಡರ್ ಸಮಸ್ಯೆ, ಗ್ಯಾಸ್ ಇಲ್ಲದೆ ಸಂಸಾರ ಮಾಡೋದು ಹೇಗೆ ಅಂತ ಚಿಂತೆಯಾಗಿದೆ...’ ಎಂದು ದುಃಖ ತೋಡಿಕೊಂಡಳು.

‘ಕೊಲ್ಲಿ ಯುದ್ಧ ಮುಗಿಯುವವರೆಗೂ ಮನೆಯಲ್ಲಿ ಒಲೆ ಹಚ್ಚಬೇಡ ತಾಯಿ!’ ಎಂದರು.

‘ಒಲೆ ಹಚ್ಚದೆ ಅಡುಗೆ ಮಾಡೋದು ಹೇಗೆ ಗುರೂಜಿ, ಊಟವಿಲ್ಲದೆ ಬದುಕುವುದು ಹೇಗೆ?’

‘ಹಸು–ಎಮ್ಮೆ ಇಡ್ಲಿ, ದೋಸೆ, ಚಿತ್ರಾನ್ನ ತಿನ್ನುತ್ತವಾ? ಹುಲ್ಲು ತಿನ್ಕೊಂಡು ಆರೋಗ್ಯವಾಗಿ ಬಾಳ್ತಿಲ್ವಾ?’

‘ಹಸು ಹುಲ್ಲು ತಿನ್ನುತ್ತೆ, ಬೆಕ್ಕು ಇಲಿ ಹಿಡಿದು ತಿನ್ನುತ್ತೆ, ನಾಯಿ ಇನ್ನೇನೋ ತಿನ್ನುತ್ತೆ ಎಂದು ನಾವೂ ಹಾಗೆ ಮಾಡಲಾಗುತ್ತಾ ಗುರೂಜಿ?!’

‘ಗ್ಯಾಸ್ ಟ್ರಬಲ್ ಸಂದರ್ಭದಲ್ಲಿ ನಮಗೆ ಪ್ರಾಣಿ, ಪಕ್ಷಿಗಳ ಬದುಕು ಮಾದರಿಯಾಗಬೇಕು. ಪಕ್ಷಿಗಳು ಗೂಡಿನಲ್ಲಿ ಅಡುಗೆ ಮನೆ, ಬಾತ್ ರೂಮ್ ಕಟ್ಟಿಕೊಂಡಿರುತ್ತವೆಯೆ?’ ಗುರೂಜಿ ನಕ್ಕರು.

‘ನಾವು ಏನನ್ನು ತಿನ್ನಬೇಕು?’

‘ಗ್ಯಾಸ್ ಪ್ರಾಬ್ಲಮ್ ಬಗೆಹರಿಯುವವರೆಗೂ ಗೆಡ್ಡೆ–ಗೆಣಸು ತಿನ್ನಿ...’

‘ನಾಲಿಗೆ ರುಚಿ ಕೇಳುತ್ತದೆ ಗುರೂಜಿ!’

‘ನಾಲಿಗೆಯನ್ನು ಸೈಡಿಗಿಟ್ಟು, ಹಣ್ಣು, ಹಸಿ ತರಕಾರಿ, ಸೊಪ್ಪುಸೆದೆ ತಿನ್ನಿರಿ, ಆರೋಗ್ಯ, ಸೌಭಾಗ್ಯ ವೃದ್ಧಿಸುತ್ತದೆ’ ಎಂದರು.

ಅಷ್ಟರಲ್ಲಿ ಫೋನ್ ಸಂಪರ್ಕ ಕಡಿತವಾಯ್ತು.

‘ಇನ್ನೊಬ್ಬರು ಕಾಲರ್ ರೆಡಿಯಿದ್ದಾರೆ...’ ಎಂದ ನಿರೂಪಕಿ, ‘ಗುರೂಜಿ ಲೈನ್‌ನಲ್ಲಿದ್ದಾರೆ ಮಾತನಾಡಿ’ ಎಂದಳು.

‘ಹೇಳಿ ತಾಯಿ, ಏನು ಸಮಸ್ಯೆ?’ ಗುರೂಜಿ ಕೇಳಿದರು.

‘ತಾಯಿ ಅಲ್ಲಾರೀ, ನಿಮ್ಮ ಹೆಂಡ್ತಿ ಮಾತನಾಡ್ತಿದ್ದೀನಿ, ಆನ್‌ಲೈನ್‌ನಲ್ಲಿ ಸೌದೆಒಲೆ ಬುಕ್ ಮಾಡಿದ್ದೇನೆ, ಟಿ.ವಿ ಪ್ರೋಗ್ರಾಂ ಮುಗಿಸಿ ಬರ್ತಾ ಒಂದು ಹೊರೆ ಸೌದೆ ತನ್ನಿ...’ ಎಂದು ಹೇಳಿ ಗುರೂಜಿಯ ಹೆಂಡತಿ ಫೋನ್ ಕಟ್ ಮಾಡಿದರು.

ಸಂಗತ

ಮುಟ್ಟು: ಪೂರ್ವಗ್ರಹಗಳಿಗೆ ಕೊನೆಯೆಂದು?


ಹೆಣ್ಣನ್ನು ಹತ್ತಿಕ್ಕಲು ‘ಮುಟ್ಟು’ ಬಳಕೆಯಾಗುತ್ತಿದೆ. ಶಾಲೆ, ಉದ್ಯೋಗದ ಸ್ಥಳಗಳಲ್ಲಿ ಮಾತ್ರವಲ್ಲದೆ, ಮನೆಗಳಲ್ಲೂ ‘ಮುಟ್ಟು’ ಹೆಣ್ಣಿನ ಶೋಷಣೆಗೆ ಕಾರಣವಾಗಿದೆ.

• ಆಶಾ ಬಗ್ಗನಡು

ಭಾರತೀಯ ಸಮಾಜದ ಹಲವು ಸಮುದಾಯಗಳಲ್ಲಿನ ಮುಟ್ಟಿನ ಕುರಿತಾದ ಸಾಮಾಜಿಕ–ಸಾಂಸ್ಕೃತಿಕ ರೂಢಿಗಳು, ಕಳಂಕದ ಮನೋಭಾವ, ತಪ್ಪು ಕಲ್ಪನೆಗಳು ಮತ್ತು ನಿಷೇಧಗಳು ಹೆಣ್ಣುಮಕ್ಕಳ ಶೋಷಣೆಗೆ ಕಾರಣವಾಗುತ್ತಿವೆ. ಮುಟ್ಟಿನ ಬಗೆಗೆ ಇರುವ ಸಹಜವಾದ ಪರಿಕಲ್ಪನೆಯನ್ನು ಸರಳವಾಗಿ ಯಾವ ಜನಸಮುದಾಯವೂ ಪರಿಗಣಿಸುತ್ತಿಲ್ಲ.

ತುಮಕೂರು ಜಿಲ್ಲೆಯ ಗ್ರಾಮವೊಂದರಲ್ಲಿರುವ ದೇಗುಲದ ಸುತ್ತಮುತ್ತ ಮುಟ್ಟಿನ ಮೂರು ದಿನಗಳು ಹೆಣ್ಣುಮಕ್ಕಳು ಸುಳಿಯುವಂತಿಲ್ಲ. ಆ ಮೂರು ದಿನಗಳಲ್ಲಿ ದೇವಾಲಯದ ಸುತ್ತಮುತ್ತ ಅವರ ಓಡಾಟ ನಿಷಿದ್ಧ. ಈ ಕಟ್ಟಲೆಯನ್ನು ಮೀರಿ ದೇವಸ್ಥಾನವನ್ನು ಎಡತಾಕಿದರೆ ರಕ್ತಕಾರಿ ಸಾಯುತ್ತಾರೆಂಬ ನಂಬಿಕೆಯಿದೆ. ಹಾಗಾಗಿಯೇ ಮುಟ್ಟಿನ ಮೂರು ದಿನಗಳನ್ನು ಊರಿನ ಸುತ್ತಮುತ್ತಲಿನ ಹಳ್ಳಿಯ ಹೆಣ್ಣುಮಕ್ಕಳು ವ್ರತದಂತೆ ಪಾಲಿಸುತ್ತಾ ಬದುಕುತ್ತಿದ್ದಾರೆ. ಅದರಲ್ಲೂ ಕೂಲಿಕಾರ್ಮಿಕ ಹೆಣ್ಣುಮಕ್ಕಳು ಆ ದಿನಗಳಲ್ಲಿ ಸುತ್ತಮುತ್ತಲಿನ ಕೃಷಿ ಭೂಮಿಯಲ್ಲಿ ಕೆಲಸಕ್ಕೆ ಹೋಗುವುದಿಲ್ಲ. ದೇವಾಲಯದ ಹಾದಿಯಲ್ಲಿ ಸಂಚರಿಸಲೇಬೇಕಾದ ಅನಿವಾರ್ಯತೆ ಎದುರಾದರೆ ಉಸಿರು ಬಿಗಿಹಿಡಿದು ಮೌನವಾಗಿ ದಾಟಿ ನಿಟ್ಟುಸಿರಾಗುತ್ತಾರೆ.

ಎಂಟು ವರ್ಷಗಳ ಹಿಂದೆ ತುಮಕೂರು ಜಿಲ್ಲೆಯ ಗ್ರಾಮವೊಂದರಲ್ಲಿ ನಿರ್ಮಿಸಲಾದ ಕಸ್ತೂರ್ ಬಾ ಬಾಲಿಕಾ ನಿಲಯಕ್ಕೆ ಮುಟ್ಟಿನ ಮೌಢ್ಯದ ಕಾರಣದಿಂದ ವಿದ್ಯಾರ್ಥಿನಿಯರು ದಾಖಲಾಗದೆ, ವಿದ್ಯಾರ್ಥಿನಿಲಯ ಬಳಕೆ ಆಗದಿರುವ ವಿಚಾರ ಪತ್ರಿಕೆಯಲ್ಲಿ ವರದಿಯಾಗಿತ್ತು. ಕೂಡಲೇ ಇಂತಹದೊಂದು ಮೌಢ್ಯಾಚರಣೆಗೆ ಪ್ರತಿಕ್ರಿಯಿಸಿದ ಸರ್ಕಾರ, ಅಲ್ಲಿಯೇ ಪಕ್ಕದಲ್ಲಿರುವ ಬಾಲಕರ ಹಾಸ್ಟೆಲ್‌ಗೆ ಬಾಲಕಿಯರನ್ನು ಹಾಗೂ ಬಾಲಕಿಯರ ಹಾಸ್ಟೆಲ್‌ಗೆ ಬಾಲಕರನ್ನು ಸ್ಥಳಾಂತರಗೊಳಿಸುವ ಮೂಲಕ ಪರಿಹಾರ ಸೂಚಿಸಿತು. ಹತ್ತಾರು ವರ್ಷಗಳಿಂದ ಆ ಊರಿನಲ್ಲಿ ನಡೆದುಕೊಂಡು ಬರುತ್ತಿರುವ ಮುಟ್ಟಿನ ಕುರಿತಾದ ಮೌಢ್ಯಗಳನ್ನು ನಿವಾರಿಸಲು ಸರ್ಕಾರ ಪ್ರಯತ್ನಿಸಬೇಕಾಗಿತ್ತು. ಸುತ್ತಮುತ್ತಲಿನ ಊರಿನ ಹೆಣ್ಣು ಮಕ್ಕಳನ್ನು ಅಸ್ಪೃಶ್ಯರನ್ನಾಗಿಸಿ ಅವಮಾನಿಸುತ್ತಿರುವ, ಅವರ ಹಕ್ಕುಗಳನ್ನು ಕಸಿಯುತ್ತಿರುವ ಅಪಾಯದ ಬಗೆಗೆ ಗ್ರಾಮಸ್ಥರಲ್ಲಿ ಜಾಗೃತಿ ಮೂಡಿಸಲು ಸರ್ಕಾರ ಪ್ರಯತ್ನ ನಡೆಸಬೇಕಾಗಿತ್ತು. ಇದರ ಬದಲಾಗಿ, ಮುಟ್ಟಿನ ಕುರಿತಾದ ಮಡಿ ಮೈಲಿಗೆಗಳನ್ನು ಮುಂದುವರಿಸಿಕೊಂಡು ಹೋಗಿ ಎಂದು ಹೇಳುತ್ತಿರುವಂತೆ, ಹೆಣ್ಣುಮಕ್ಕಳ ವಸತಿನಿಲಯವನ್ನು ಸ್ಥಳಾಂತರಗೊಳಿಸಿರುವುದು ದಿಗ್ಭ್ರಮೆ ಮೂಡಿಸುತ್ತದೆ.



ಮುಟ್ಟಿನ ಕುರಿತಾದ ಸಮಾಜದಲ್ಲಿನ ಅಜ್ಞಾನವೇ ಇಂತಹ ಸಮಸ್ಯೆಗಳಿಗೆ ಮೂಲ ಕಾರಣ. ದೇಶದಾದ್ಯಂತ ಮುಟ್ಟಿನ ಸುತ್ತಲಿನ ನಿಷೇಧ ಮತ್ತು ತಪ್ಪುಕಲ್ಪನೆಗಳು ವ್ಯಾಪಕವಾಗಿವೆ. ಇವು ಸಾಮಾಜಿಕ, ಸಾಂಸ್ಕೃತಿಕ ಸಂದರ್ಭಗಳಲ್ಲಿ ಆಳವಾಗಿ ಬೇರೂರಿ, ಹೆಣ್ಣುಮಕ್ಕಳ ಶೋಷಣೆಗೆ ಕಾರಣವಾಗುತ್ತಿವೆ. ಮುಟ್ಟಿನ ಕುರಿತ ಪೂರ್ವಗ್ರಹಗಳು ಸಾರ್ವಜನಿಕ ಜೀವನದಲ್ಲಿ ಮಹಿಳೆಯರ ಭಾಗವಹಿಸುವಿಕೆಯನ್ನು ತಡೆದು, ತೀವ್ರ ಅಸಮಾನತೆಯನ್ನು ಸೃಷ್ಟಿಸುತ್ತಿವೆ. ಮುಟ್ಟಿನ ಬಗೆಗಿನ ಮೌಢ್ಯಗಳ ಕಾರಣದಿಂದಲೇ ಗ್ರಾಮೀಣ ಪ್ರದೇಶಗಳಲ್ಲಿನ ಹೆಣ್ಣುಮಕ್ಕಳಿಗೆ ಮುಟ್ಟಿನ ಮತ್ತು ಅದರ ನಿರ್ವಹಣೆಯ ಬಗ್ಗೆ ಮಾರ್ಗದರ್ಶನ ಇಲ್ಲದೆ ಮುಟ್ಟಿನ ಶಿಕ್ಷಣ, ಅರಿವನ್ನು ಮಿತಿಗೊಳಿಸುತ್ತಿದೆ.

ಕೆಲವು ಬುಡಕಟ್ಟು ಸಮುದಾಯಗಳಲ್ಲಿ ಊರಿನ ಹೊರಭಾಗಗಳಲ್ಲಿ ಮುಟ್ಟಾದವರನ್ನು ಪ್ರತ್ಯೇಕವಾಗಿ ಇರಿಸಲಾಗುತ್ತದೆ. ಮುಟ್ಟಿನ ಬಗೆಗಿನ ಇಂತಹ ಮೌಢ್ಯಾಚರಣೆಗಳು ಅವರ ದೇಹದ ಬಗೆಗೆ ಕೀಳರಿಮೆಯನ್ನು ಹುಟ್ಟಿಸುತ್ತಾ, ಅವರು ಪೂರ್ಣ ಸಾಮರ್ಥ್ಯ ತಲಪುವುದನ್ನು ತಡೆಯುತ್ತಿವೆ.

ಆರ್ಥಿಕವಾಗಿ ಹಿಂದುಳಿದಿರುವ ಹೆಣ್ಣುಮಕ್ಕಳಲ್ಲಿ ಮುಟ್ಟಿನ ನೈರ್ಮಲ್ಯ ಪರಿಕರಗಳ ಕೊರತೆಯು ಸೋಂಕು ಸಂಬಂಧಿ ಆರೋಗ್ಯ ಸಮಸ್ಯೆಗಳಿಗೆ ಕಾರಣವಾಗುತ್ತಾ, ಮಹಿಳೆಯರ ಯೋಗಕ್ಷೇಮವನ್ನು ಅಪಾಯಕ್ಕೆ ಸಿಲುಕಿಸುತ್ತಿದೆ. ಶಾಲೆಗಳಲ್ಲಿ ಮುಟ್ಟಿನ ನೈರ್ಮಲ್ಯ ಪರಿಕರಗಳು, ಶೌಚಾಲಯಗಳಂತಹ ಸಮಸ್ಯೆಗಳ ಕಾರಣ ಸುಮಾರು 2.3 ಕೋಟಿ ಹರೆಯದ ಹೆಣ್ಣುಮಕ್ಕಳು ಶಾಲೆಗಳಿಗೆ ಗೈರುಹಾಜರಾಗುತ್ತಿದ್ದಾರೆ. ‘ಯುಡೈಸ್’ ಅಂಕಿಅಂಶಗಳ ಪ್ರಕಾರ, ಪ್ರಾಥಮಿಕ ಹಂತಕ್ಕಿಂತ ಮಾಧ್ಯಮಿಕ ಮತ್ತು ಪ್ರೌಢಶಾಲೆಯ ಹಂತದಲ್ಲಿ ಹೆಣ್ಣುಮಕ್ಕಳ ದಾಖಲಾತಿ ಕಡಿಮೆ ಪ್ರಮಾಣದಲ್ಲಿದೆ. ಮಾಧ್ಯಮಿಕ ಹಂತದಲ್ಲಿ ಹೆಣ್ಣುಮಕ್ಕಳು ಶಾಲೆ ಬಿಡುವ ಪ್ರಮಾಣ ಶೇ 8.2ರಷ್ಟಿದೆ. ಮುಟ್ಟಿನ ಕುರಿತಾದ ಮೌಢ್ಯಗಳು ಹೆಣ್ಣುಮಕ್ಕಳ ಬಾಲ್ಯ ವಿವಾಹಕ್ಕೆ ಕಾರಣವಾಗುತ್ತಿವೆ.

ಕರ್ನಾಟಕದಲ್ಲಿ ಬಾಲ್ಯವಿವಾಹಕ್ಕೆ ಸಂಬಂಧಿಸಿದಂತೆ ಕಟ್ಟುನಿಟ್ಟಿನ ಕಾನೂನುಗಳಿವೆ. ಆದರೂ, ಕಳೆದ ಎರಡು ವರ್ಷಗಳಲ್ಲಿ 1,419 ಬಾಲ್ಯವಿವಾಹ ಪ್ರಕರಣಗಳು ಮತ್ತು ಕಳೆದ ಮೂರು ವರ್ಷಗಳಲ್ಲಿ 18 ವರ್ಷಕ್ಕಿಂತ ಕಡಿಮೆ ವಯಸ್ಸಿನ 80,813 ಬಾಲಕಿಯರು ಗರ್ಭಿಣಿಯರಾಗಿರುವ ಪ್ರಕರಣಗಳು ದಾಖಲಾಗಿವೆ. ಭಾರತದಲ್ಲಿ ಬಾಲ್ಯವಿವಾಹವು ಕಟ್ಟುನಿಟ್ಟಿನ ಕಾನೂನುಗಳು ಮತ್ತು ಯೋಜನೆಗಳ ಹೊರತಾಗಿಯೂ ಸಾಮಾಜಿಕ ಸಮಸ್ಯೆಯಾಗಿಯೇ ಉಳಿದಿದೆ.

ಇತ್ತೀಚೆಗೆ ಸುಪ್ರೀಂ ಕೋರ್ಟ್ ಮಹತ್ವದ ತೀರ್ಪನ್ನು ನೀಡಿದ್ದು, ಮುಟ್ಟಿನ ನೈರ್ಮಲ್ಯ–ಸೌಕರ್ಯಗಳು ಆರೋಗ್ಯದ ವಿಚಾರ ಮಾತ್ರವಲ್ಲ, ಅದೊಂದು ಸಾಂವಿಧಾನಿಕ ಹಕ್ಕು ಎಂದು ಹೇಳಿದೆ. ಮುಟ್ಟಿನ ಕುರಿತಾಗಿ ಇರುವ ಮೌಢ್ಯ ಹಾಗೂ ಕೀಳು ಭಾವನೆಯನ್ನು ತೊಡೆದುಹಾಕುವ ವಿಚಾರಕ್ಕೆ ಸುಪ್ರೀಂ ಕೋರ್ಟ್‌ನ ತೀರ್ಪು ಒತ್ತು ನೀಡಿದೆ. ಮುಟ್ಟಿನ ಮೌಢ್ಯಗಳು ಹೆಣ್ಣುಮಕ್ಕಳ ಘನತೆಯಿಂದ ಬದುಕುವ ಹಕ್ಕುಗಳನ್ನು ಕಸಿದುಕೊಂಡಿರುವಾಗ, ಸರ್ಕಾರ ಮುಟ್ಟಿನ ಕುರಿತಾದ ಮೌಢ್ಯಗಳ ವಿರುದ್ಧ ಜಾಗೃತಿ ಮೂಡಿಸಬೇಕಿದೆ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಮಹಿಳಾ ಮೀಸಲಾತಿ ತರಾತುರಿಯ ತಂತ್ರಗಾರಿಕೆ

ಲೋಕಸಭೆ, ವಿಧಾನಸಭೆಗಳಲ್ಲಿ ಶೇ 33ರಷ್ಟು ಪ್ರಾತಿನಿಧ್ಯ ಕಲ್ಪಿಸಲು ಕೇಂದ್ರದ ಚಿಂತನೆ

ಪ್ರಜಾವಾಣಿ ವಾರ್ತೆ

ಕೇಂದ್ರ ಸರ್ಕಾರವು ಮಹಿಳೆಯರಿಗೆ ಸಂಸತ್ತಿನಲ್ಲಿ ಮತ್ತು ವಿಧಾನಸಭೆಗಳಲ್ಲಿ ಮೀಸಲಾತಿ ದೊರಕಿಸಿಕೊಡುವ ದಿಸೆಯಲ್ಲಿ ಮಹತ್ವದ ಹೆಜ್ಜೆ ಹಾಕಲು ಮುಂದಾಗಿದೆ. ಲೋಕಸಭೆಯಲ್ಲಿ ಮತ್ತು ವಿಧಾನಸಭೆಗಳಲ್ಲಿ ಮಹಿಳೆಯರಿಗೆ ಶೇ 33ರಷ್ಟು ಮೀಸಲಾತಿ ನೀಡುವುದಕ್ಕಾಗಿ ಪ್ರಸ್ತುತ ನಡೆಯುತ್ತಿರುವ ಬಜೆಟ್ ಅಧಿವೇಶನದಲ್ಲಿಯೇ ಎರಡು ಮಸೂದೆಗಳನ್ನು ಮಂಡಿಸಲಿದೆ. ಲೋಕಸಭೆ ಮತ್ತು ವಿಧಾನಸಭಾ ಕ್ಷೇತ್ರಗಳ ಮರುವಿಂಗಡಣೆಯ ಜತೆಯಲ್ಲೇ ಮಹಿಳಾ ಮೀಸಲಾತಿ ಜಾರಿ ಮಾಡುವುದು ಕೇಂದ್ರ ಸರ್ಕಾರದ ಉದ್ದೇಶವಾಗಿದೆ ಎನ್ನಲಾಗುತ್ತಿದೆ.

ಲೋಕಸಭೆ ಮತ್ತು ರಾಜ್ಯ/ಕೇಂದ್ರಾಡಳಿತ ಪ್ರದೇಶಗಳ ವಿಧಾನಸಭೆಗಳಲ್ಲಿ ಮಹಿಳೆಯರಿಗೆ ಶೇ 33ರಷ್ಟು ಮೀಸಲಾತಿ ನೀಡಬೇಕು ಎನ್ನುವುದು ಬಹಳ ಹಳೆಯ ಬೇಡಿಕೆ. 2029ರ ಲೋಕಸಭಾ ಚುನಾವಣೆಯಲ್ಲೇ ಆ ಬೇಡಿಕೆ ಈಡೇರಿಸಲು ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರವು ಚಿಂತನೆ ನಡೆಸಿದ್ದು, ಅದಕ್ಕಾಗಿ ತಂತ್ರಗಾರಿಕೆಯಲ್ಲಿ ತೊಡಗಿದೆ. ನಾರಿ ಶಕ್ತಿ ವಂದನಾ ಅಧಿನಿಯಮಕ್ಕೆ (ಮಹಿಳಾ ಮೀಸಲಾತಿ ಕಾಯ್ದೆ) ತಿದ್ದುಪಡಿ ತರಲು ಸಂವಿಧಾನ ತಿದ್ದುಪಡಿ ಮಾಡುವ ಮಸೂದೆ, ಕ್ಷೇತ್ರ ಮರುವಿಂಗಡಣೆ ಕಾಯ್ದೆಯನ್ನು ತಿದ್ದುಪಡಿ ಮಾಡುವ ಮಸೂದೆಯನ್ನು ಈ ಅಧಿವೇಶನದಲ್ಲೇ ಕೇಂದ್ರವು ಸಂಸತ್‌ನಲ್ಲಿ ಮಂಡಿಸಲು ಬಯಸಿದೆ. ಒಂದು ವೇಳೆ ಸಾಧ್ಯವಾಗದಿದ್ದರೆ, ಅದಕ್ಕಾಗಿಯೇ ತುರ್ತಾಗಿ ವಿಶೇಷ ಅಧಿವೇಶನ ಕರೆಯುವುದಕ್ಕೂ ಅದು ಯೋಚಿಸಿದೆ ಎಂದು ವರದಿಯಾಗಿದೆ.

ಸಂವಿಧಾನಕ್ಕೆ 106ನೇ ತಿದ್ದುಪಡಿ ತಂದು ಮಹಿಳೆಯರಿಗೆ ಶೇ 33ರಷ್ಟು ಮೀಸಲಾತಿ ಕಲ್ಪಿಸುವ ಮಸೂದೆಯನ್ನು 2023ರಲ್ಲಿ ಸಂಸತ್ತು ಮೂರನೇ ಎರಡು ಬಹುಮತದೊಂದಿಗೆ ಅಂಗೀಕರಿಸಿತ್ತು. ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಸೆಪ್ಟೆಂಬರ್‌ನಲ್ಲಿ ಮಸೂದೆಗೆ ಅಂಕಿತ ಹಾಕಿದ್ದರು. 2027ರಲ್ಲಿ ನಡೆಯಲಿರುವ ಜನಗಣತಿ ಆಧಾರದಲ್ಲಿ ಮಹಿಳಾ ಮೀಸಲಾತಿ ಮತ್ತು ಕ್ಷೇತ್ರ ಮರುವಿಂಗಡಣೆ ನಡೆಸಲಾಗುವುದು ಎಂದು ಕೇಂದ್ರ ಸರ್ಕಾರ ಹೇಳಿತ್ತು. ಇನ್ನು ಆರಂಭವಾಗಲಿರುವ ಜನಗಣತಿಯ ಮಾಹಿತಿ ಪಡೆಯಲು 2030ರವರೆಗೆ ಕಾಯಬೇಕು. ಆದರೆ, 2029ರಲ್ಲಿ ಲೋಕಸಭಾ ಚುನಾವಣೆ ನಡೆಯಲಿದೆ. ಹೀಗಾಗಿ 2011ರ ಜನಗಣತಿಯ ದತ್ತಾಂಶದ ಆಧಾರದಲ್ಲಿಯೇ ಮಹಿಳಾ ಮೀಸಲಾತಿ ಕಾಯ್ದೆ ಜಾರಿ ಮಾಡುವುದು ಸರ್ಕಾರದ ಚಿಂತನೆ. ಆದರೆ, ಅದಕ್ಕಾಗಿ ಸಂವಿಧಾನ ತಿದ್ದುಪಡಿಯ ಅಗತ್ಯವಿದೆ.

ಮಹಿಳಾ ಮೀಸಲಾತಿಯು ರಾಜ್ಯಸಭೆ ಮತ್ತು ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳಲ್ಲಿನ ವಿಧಾನ ಪರಿಷತ್‌ಗೆ ಅನ್ವಯವಾಗುವುದಿಲ್ಲ.

ಈ ಮಸೂದೆಗಳು ಅಂಗೀಕಾರಗೊಂಡು ಕಾಯ್ದೆಗಳಾದರೆ, 2029ರ ಮಾರ್ಚ್ 31ರಿಂದ ಜಾರಿಗೆ ಬರಲಿವೆ. ಮುಂದಿನ ಲೋಕಸಭಾ ಚುನಾವಣೆ ಮತ್ತು ಒಡಿಶಾ, ಅರುಣಾಚಲ ಪ್ರದೇಶ, ಸಿಕ್ಕಿಂ ಮತ್ತು ಆಂಧ್ರಪ್ರದೇಶ ವಿಧಾನಸಭಾ ಚುನಾವಣೆಗಳಲ್ಲಿ ಕಾಯ್ದೆಗಳ ಪ್ರಯೋಜನ ಸಿಗಲಿದೆ.

ಕ್ಷೇತ್ರ ಮರುವಿಂಗಡಣೆ: ಮಹಿಳಾ ಮೀಸಲಾತಿ ಕಾಯ್ದೆ ಜಾರಿಗೊಳಿಸುವುದರ ಜತೆಯಲ್ಲೇ ಲೋಕಸಭೆ ಮತ್ತು ವಿಧಾನಸಭೆಗಳ ಕ್ಷೇತ್ರ ಮರುವಿಂಗಡಣೆ ಮಾಡುವುದು ಕೇಂದ್ರ ಸರ್ಕಾರದ ಚಿಂತನೆಯಾಗಿದೆ. ಅದನ್ನು ಕ್ಷೇತ್ರ ಮರುವಿಂಗಡಣೆ ಅಥವಾ ಗಡಿ ಆಯೋಗವು ಮಾಡುತ್ತದೆ. ಅದು 'ತಟಸ್ಥ' ಸಂಸ್ಥೆಯಾಗಿದ್ದು, ಅದರ ತೀರ್ಮಾನಗಳನ್ನು ಸುಪ್ರೀಂ ಕೋರ್ಟ್‌ನಲ್ಲಿಯೂ ಪ್ರಶ್ನಿಸಲಾಗುವುದಿಲ್ಲ.

ಈ ಹಿಂದಿನ ಕ್ಷೇತ್ರ ಮರುವಿಂಗಡಣೆಯ ಸಂದರ್ಭದಲ್ಲಿ, ಜನಸಂಖ್ಯೆಯನ್ನು ಆಧರಿಸಿ ಲೋಕಸಭೆ ಮತ್ತು ವಿಧಾನಭೆಗಳಲ್ಲಿ ಎಸ್‌ಸಿ, ಎಸ್‌ಟಿ ಮೀಸಲಾತಿ ಕಲ್ಪಿಸಲಾಗಿತ್ತು. ಮಹಿಳಾ ಮೀಸಲು ಕ್ಷೇತ್ರಗಳನ್ನು ಗುರುತಿಸಲೂ ಇದೇ ಮಾರ್ಗವನ್ನು ಅನುಸರಿಸುವ ಸಾಧ್ಯತೆ ಇದೆ. ಜತೆಗೆ, ಆವರ್ತನ ಪದ್ಧತಿಯ ಆಧಾರದಲ್ಲಿಯೂ ಮಹಿಳಾ ಮೀಸಲು ಕ್ಷೇತ್ರಗಳನ್ನು ನಿಗದಿಪಡಿಸಲು ಚಿಂತನೆ ನಡೆಸಲಾಗುತ್ತಿದೆ. ಮಹಿಳಾ ಮೀಸಲು ಸ್ಥಾನಗಳಲ್ಲಿ ಎಸ್‌ಸಿ, ಎಸ್‌ಟಿ ಮೀಸಲಾತಿ ಇರುತ್ತದೆ. ಆದರೆ, ಒಬಿಸಿ ಮೀಸಲಾತಿ ಇರುವುದಿಲ್ಲ ಎನ್ನಲಾಗುತ್ತಿದೆ. ಮಹಿಳಾ ಮೀಸಲಿನಲ್ಲಿ ಎಸ್‌ಸಿ, ಎಸ್‌ಟಿ, ಒಬಿಸಿ ಮಹಿಳೆಯರಿಗೆ ಒಳಮೀಸಲಾತಿ ಕಲ್ಪಿಸಬೇಕು ಎನ್ನುವುದು ಪ್ರಬಲ ಒತ್ತಾಯವಾಗಿತ್ತು. ಈ ಕಾರಣಕ್ಕೆ ಹಿಂದೆ ಹಲವು ಬಾರಿ ಸಂಸತ್‌ನಲ್ಲಿ ಮಸೂದೆ ಅಂಗೀಕಾರಗೊಂಡಿರಲಿಲ್ಲ.

ಆಧಾರ: ಪಿಟಿಐ, ಸುಪ್ರೀಂ ಕೋರ್ಟ್ ಅಬ್ಸರ್ವರ್, ಮಾಧ್ಯಮ ವರದಿಗಳು



ಕಲೆ: ಸಂತೋಷ್ ಸಸಿಹಿತ್ಲು

543 ಲೋಕಸಭೆಯ ಸದಸ್ಯರ ಸಂಖ್ಯೆ

75 ಲೋಕಸಭೆಯಲ್ಲಿ ಇರುವ ಹಾಲಿ ಮಹಿಳಾ ಸಂಸದರು

14% ಪ್ರಸ್ತುತ ಮಹಿಳಾ ಪ್ರಾತಿನಿಧ್ಯದ ಪ್ರಮಾಣ

ಕ್ಷೇತ್ರಗಳ ಸಂಖ್ಯೆ ಶೇ 50ರಷ್ಟು ಹೆಚ್ಚಳ

ಎರಡೂ ಕಾಯ್ದೆಗಳು ಜಾರಿಗೆ ಬಂದರೆ, ಪ್ರತಿ ರಾಜ್ಯದಲ್ಲಿ ಲೋಕಸಭೆಯ ಸ್ಥಾನಗಳ ಸಂಖ್ಯೆ ಶೇ 50ರಷ್ಟು ಹೆಚ್ಚಳವಾಗುತ್ತದೆ. ಅಂದರೆ, ಪ್ರಸ್ತುತ **543** ಸ್ಥಾನಗಳು **816**ಕ್ಕೆ ಏರಿಕೆಯಾಗುತ್ತವೆ. ಹೆಚ್ಚಳವಾದ **273** ಸ್ಥಾನಗಳನ್ನು ಮಹಿಳೆಯರಿಗೆ ಮೀಸಲಿಡಲಾಗುತ್ತದೆ. ಈ ಪ್ರಕಾರ, ಕರ್ನಾಟಕದಲ್ಲಿ ಪ್ರಸ್ತುತ **28** ಸ್ಥಾನಗಳಿದ್ದು, ಕಾಯ್ದೆ ಜಾರಿಯಾದರೆ ಅವುಗಳ ಸಂಖ್ಯೆ **42**ಕ್ಕೆ ಹೆಚ್ಚಲಿದೆ. ಹೆಚ್ಚುವರಿ **14** ಸ್ಥಾನಗಳು ಮಹಿಳೆಯರಿಗೆ ಮೀಸಲಾಗಲಿವೆ.

2026ರ ಜನಗಣತಿ ಆಧರಿಸಿ ಕ್ಷೇತ್ರ ಮರುವಿಂಗಡಣೆಯಾದರೆ, ಜನಸಂಖ್ಯೆ ನಿಯಂತ್ರಣಾ ಕ್ರಮಗಳನ್ನು ಯಶಸ್ವಿಯಾಗಿ ಜಾರಿಗೊಳಿಸಿದ ದಕ್ಷಿಣದ ರಾಜ್ಯಗಳಿಗೆ ಅನ್ಯಾಯವಾಗುತ್ತದೆ, ಉತ್ತರದ ಕೆಲವು ರಾಜ್ಯಗಳಲ್ಲಿ ಕ್ಷೇತ್ರಗಳ ಸಂಖ್ಯೆ ಭಾರಿ ಸಂಖ್ಯೆಯಲ್ಲಿ ಹೆಚ್ಚಾಗಲಿದೆ ಎನ್ನುವ ಆತಂಕ ಎದುರಾಗಿತ್ತು. ಆದರೆ, ಈಗ 2011ರ ಜನಸಂಖ್ಯೆ ಆಧರಿಸಿ ಕ್ಷೇತ್ರ ಮರುವಿಂಗಡಣೆ ಮಾಡಿದರೆ ಮತ್ತು ಅದರ ಆಧಾರದಲ್ಲಿ ಮಹಿಳಾ ಮೀಸಲಾತಿ ಕಲ್ಪಿಸಿದರೆ ದಕ್ಷಿಣ ರಾಜ್ಯಗಳ ಆತಂಕ ನಿವಾರಣೆಯಾಗುತ್ತದೆ ಎನ್ನುವ ವಿಶ್ಲೇಷಣೆ ಇದೆ.

ರಾಜಕೀಯ ಲೆಕ್ಕಾಚಾರ?

ನಾಲ್ಕು ರಾಜ್ಯ ಮತ್ತು ಒಂದು ಕೇಂದ್ರಾಡಳಿತ ಪ್ರದೇಶದಲ್ಲಿ ವಿಧಾನಸಭಾ ಚುನಾವಣೆ ಘೋಷಣೆಯಾಗಿರುವ ಹೊತ್ತಿನಲ್ಲಿ ಎರಡು ಮಸೂದೆಗಳನ್ನು ಮಂಡಿಸಲು ಕೇಂದ್ರ ಸರ್ಕಾರ ಹೊರಟಿರುವುದು ರಾಜಕೀಯ ವಲಯದಲ್ಲಿ ಚರ್ಚೆಗೆ ಕಾರಣವಾಗಿದೆ.

ವಿರೋಧ ಪಕ್ಷಗಳ ಮಹಿಳಾ ಸಂಸದರು ಪ್ರಸ್ತಾವವನ್ನು ಸ್ವಾಗತಿಸಿದ್ದಾರಾದರೂ, ಕಾಂಗ್ರೆಸ್ ಸೇರಿದಂತೆ ಇತರ ಪಕ್ಷಗಳ ಮುಖಂಡರು ಮಸೂದೆ ಮಂಡನೆಗೆ ಅಷ್ಟೊಂದು ತರಾತುರಿ ಯಾಕೆ ಎಂದು ಪ್ರಶ್ನಿಸಿದ್ದಾರೆ. ಪಶ್ಚಿಮ ಬಂಗಾಳ, ತಮಿಳುನಾಡು, ಕೇರಳ, ಅಸ್ಸಾಂ ಮತ್ತು ಪುದುಚೆರಿ ವಿಧಾನಸಭಾ ಚುನಾವಣೆಗಳಲ್ಲಿ ಲಾಭ ಪಡೆಯುವ ಬಿಜೆಪಿಯ ಲೆಕ್ಕಾಚಾರವೂ ಇದರ ಹಿಂದೆ ಇದೆ ಎಂದು ಅನುಮಾನ ವ್ಯಕ್ತಪಡಿಸಿವೆ.

ಮಹಿಳಾ ಮೀಸಲು ಕಾಯ್ದೆಗೆ ತಿದ್ದುಪಡಿ (ಸಂವಿಧಾನ ತಿದ್ದುಪಡಿ ಆಗಿರುವುದರಿಂದ) ತರಲು ಎರಡೂ ಸದನಗಳಲ್ಲಿ ಮೂರನೇ ಎರಡರಷ್ಟು ಬಹುಮತ ಬೇಕು. ಹಾಗಾಗಿ, ರಾಜಕೀಯ ಪಕ್ಷಗಳಲ್ಲಿ ಮಸೂದೆಯ ಬಗ್ಗೆ ಒಮ್ಮತ ಮೂಡಿಸಲು ಕೇಂದ್ರ ಸರ್ಕಾರ ಯತ್ನಿಸುತ್ತಿದೆ. ಇದರ ಭಾಗವಾಗಿ ಗೃಹಸಚಿವ ಅಮಿತ್ ಶಾ ಅವರು ಸೋಮವಾರ ಕಾಂಗ್ರೆಸ್ ಹೊರತುಪಡಿಸಿ ಇತರ ಕೆಲವು ವಿರೋಧ ಪಕ್ಷಗಳ ಸದನದ ನಾಯಕರೊಂದಿಗೆ ಚರ್ಚೆ ನಡೆಸಿದ್ದಾರೆ. ಮೀಸಲಾತಿಯನ್ನು ಯಾವ ರೀತಿ ಅನುಷ್ಠಾನಕ್ಕೆ ತರಲಾಗುತ್ತದೆ ಎಂಬುದನ್ನು ಸ್ಪಷ್ಟಪಡಿಸುವಂತೆ ವಿರೋಧ ಪಕ್ಷಗಳ ಹಲವು ನಾಯಕರು ಕೇಳಿದ್ದಾರೆ ಎಂದು ಹೇಳಲಾಗಿದೆ.

ಕಾಂಗ್ರೆಸ್‌ನೊಂದಿಗೆ ಅಮಿತ್ ಶಾ ಅವರು ಇನ್ನಷ್ಟೇ ಮಾತನಾಡಬೇಕಿದೆ. ಆದರೆ, ಈ ಬಗ್ಗೆ ಕಾಂಗ್ರೆಸ್ ನಾಯಕರೊಂದಿಗೆ ಚರ್ಚಿಸಲು ಸರ್ಕಾರ ಪ್ರತಿನಿಧಿಗಳನ್ನು ಕಳುಹಿಸಿದೆ ಎಂದು ವರದಿಯಾಗಿದೆ. ರಾಜ್ಯಸಭೆಯ ವಿರೋಧ ಪಕ್ಷದ ನಾಯಕ ಮತ್ತು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಈ ಬಗ್ಗೆ ಚರ್ಚಿಸಲು ಸರ್ವ ಪಕ್ಷ ಸಭೆಯನ್ನು ಕರೆಯುವಂತೆ ಒತ್ತಾಯಿಸಿದ್ದಾರೆ.

2027ರ ಜನಗಣತಿಯ ಆಧಾರದಲ್ಲಿ ಕ್ಷೇತ್ರ ಮರುವಿಂಗಡಣೆಯ ನಂತರ ಮೀಸಲಾತಿ ಜಾರಿ ಮಾಡುವುದಾಗಿ ಹೇಳಿದ್ದ ಸರ್ಕಾರ ಈಗ 2029 ಚುನಾವಣೆ ಹೊತ್ತಿಗೆ ಮೀಸಲಾತಿ ಜಾರಿಗೊಳಿಸಲು ಹೊರಟಿದೆ. ಅದಕ್ಕಾಗಿ 2011ರ ಜನಗಣತಿಯನ್ನೇ ಆಧಾರವಾಗಿಸಲು ಯೋಜಿಸಿದೆ. ಹೊಸ ಜನಗಣತಿಯ ನಂತರ ಕೇಳಿಬರಬಹುದಾದ ಹಿಂದುಳಿದ ವರ್ಗಗಳಿಗೆ ಇರುವ ಮೀಸಲಾತಿಯಲ್ಲಿ ಒಳ ಮೀಸಲಾತಿ ಕಲ್ಪಿಸುವ ಬೇಡಿಕೆಯಿಂದ ಉಂಟಾಗಬಹುದಾದ ಇಕ್ಕಟ್ಟಿನ ಪರಿಸ್ಥಿತಿಯನ್ನು ತಪ್ಪಿಸಲು ಕೇಂದ್ರ ಸರ್ಕಾರ ಈಗಲೇ ಮಸೂದೆ ಮಂಡಿಸಲು ಮುಂದಾಗಿರಬಹುದು ಎಂಬ ಅನುಮಾನವನ್ನೂ ವಿರೋಧ ಪಕ್ಷಗಳ ಕೆಲವು ನಾಯಕರು ವ್ಯಕ್ತಪಡಿಸಿದ್ದಾರೆ.

ಕಾಯ್ದೆಯ ಹಾದಿ

- ದೇಶದಲ್ಲಿ ಸ್ವಾತಂತ್ರ್ಯಪೂರ್ವದಲ್ಲೇ ರಾಜಕೀಯದಲ್ಲಿ ಮಹಿಳೆಯರಿಗೆ ಮೀಸಲಾತಿ ನೀಡಬೇಕು ಎಂಬ ಚರ್ಚೆ ನಡೆದಿತ್ತು. ಸ್ವಾತಂತ್ರ್ಯ ಸಿಕ್ಕ ನಂತರವೂ ಇದಕ್ಕಾಗಿ ಮಹಿಳೆಯರಿಂದ ಒತ್ತಡವಿತ್ತು. ಸ್ವಾತಂತ್ರ್ಯ ಹೋರಾಟಗಾರ್ತಿ ರೇಣುಕಾ ರೇ ಅವರು ಮಹಿಳೆಯರಿಗೂ ರಾಜಕೀಯ ಸ್ಥಾನಮಾನ ಸಿಗಲಿದೆ ಎಂದು ಆಶಿಸಿದ್ದರು. ಆದರೆ, ಹಲವು ದಶಕಗಳವರೆಗೆ ಇದು ಕನಸಾಗಿಯೇ ಉಳಿದಿತ್ತು
- ಭಾರತದಲ್ಲಿ ಮಹಿಳೆಯರ ಸ್ಥಿತಿಗತಿ ಅಧ್ಯಯನಕ್ಕಾಗಿ ರಚಿಸಲಾಗಿದ್ದ ಸಮಿತಿಯು 1974ರಲ್ಲಿ ಪಂಚಾಯಿತಿಗಳಲ್ಲಿ ಮತ್ತು ನಗರ ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳೆಯರಿಗೆ ಮೀಸಲಾತಿ ನೀಡಬೇಕು ಎಂದು ಶಿಫಾರಸು ಮಾಡಿತ್ತು
- ಎರಡು ದಶಕಗಳ ನಂತರ 1993ರಲ್ಲಿ ಪಂಚಾಯಿತಿ ಮತ್ತು ನಗರ ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳೆಯರಿಗೆ ಮೂರನೇ ಒಂದರಷ್ಟು ಸ್ಥಾನಗಳನ್ನು (ಶೇ 33) ಮೀಸಲಿಡುವ ಕುರಿತು ಸಂವಿಧಾನಕ್ಕೆ 73 ಮತ್ತು 74ನೇ ತಿದ್ದುಪಡಿಯನ್ನು ತರಲಾಯಿತು
- 1996 ಸೆಪ್ಟೆಂಬರ್ 12ರಂದು, ಅಂದರೆ ಸ್ವಾತಂತ್ರ್ಯ ಸಿಕ್ಕ 49 ವರ್ಷಗಳ ನಂತರ ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗಳಲ್ಲಿ ಮೀಸಲಾತಿ ಕಲ್ಪಿಸುವ ಕುರಿತು ಎಚ್‌.ಡಿ.ದೇವೇಗೌಡ ಸರ್ಕಾರ ಮೊದಲ ಬಾರಿಗೆ ಮಸೂದೆ ಮಂಡಿಸಿತು. ಆದರೆ, ಲೋಸಕಭೆ ವಿಸರ್ಜನೆ ಆದ ಕಾರಣದಿಂದ ಮಸೂದೆ ಬಿದ್ದು ಹೋಯಿತು
- 1998ರಿಂದ 2003ರ ನಡುವೆ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರ ಮೀಸಲಾತಿ ಮಸೂದೆಯನ್ನು ನಾಲ್ಕು ಸಲ ಸಂಸತ್ತಿನಲ್ಲಿ ಮಂಡಿಸಿತ್ತು. ಆದರೆ, ಪಕ್ಷಗಳ ನಡುವೆ ಒಮ್ಮತ ಮೂಡದೇ ಇದ್ದುದರಿಂದ ಅಂಗೀಕಾರವಾಗಿರಲಿಲ್ಲ.
- ನಂತರ ಅಧಿಕಾರಕ್ಕೆ ಬಂದ ಯುಪಿಎ ಸರ್ಕಾರ 2008ರಲ್ಲಿ ಮೊದಲಿಗೆ ರಾಜ್ಯಸಭೆಯಲ್ಲಿ ಮಸೂದೆ ಮಂಡಿಸಿತ್ತು. ಚರ್ಚೆಯ ಬಳಿಕ ಸಂಸದೀಯ ಸ್ಥಾಯಿ ಸಮಿತಿಗೆ ಮಸೂದೆಯನ್ನು ಒಪ್ಪಿಸಲಾಗಿತ್ತು, ಲೋಕಸಭೆಯ ಅವಧಿ ಮುಗಿಯುವರೆಗೂ ವರದಿ ಬಾರದೇ ಇದ್ದುದರಿಂದ ಮಸೂದೆ ಬಿದ್ದು ಹೋಯಿತು
- 2014, 2019ರ ಚುನಾವಣೆ ಸಂದರ್ಭದಲ್ಲಿ ಲೋಕಸಭೆ ಮತ್ತು ವಿಧಾನಸಭೆಗಳಲ್ಲಿ ಮಹಿಳೆಯರಿಗೆ ಶೇ 33ರಷ್ಟು ಮೀಸಲಾತಿ ಕಲ್ಪಿಸುವ ಭರವಸೆ ನೀಡಿದ್ದ ಬಿಜೆಪಿ ಈ ಬಗ್ಗೆ ನಿರ್ಧಾರ ಕೈಗೊಂಡಿರಲಿಲ್ಲ
- 2021ರಲ್ಲಿ ಭಾರತೀಯ ಮಹಿಳೆಯರ ರಾಷ್ಟ್ರೀಯ ಒಕ್ಕೂಟವು ಸುಪ್ರೀಂ ಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿತ್ತು. ಮೀಸಲಾತಿಯ ಮಸೂದೆಯನ್ನು ಮತ್ತೆ ಲೋಕಸಭೆಯಲ್ಲಿ ಮಂಡಿಸಲು ನಿರ್ದೇಶನ ನೀಡಬೇಕು ಎಂದು ಅದು ಮನವಿ ಮಾಡಿತ್ತು. ಸುಪ್ರೀಂ ಕೋರ್ಟ್ ಸರ್ಕಾರಕ್ಕೆ ಎರಡು ಬಾರಿ ಸೂಚನೆ ನೀಡಿದ್ದರೂ ಎರಡು ವರ್ಷ ಪ್ರತಿಕ್ರಿಯಿಸಿರಲಿಲ್ಲ
- 2023ರ ಆಗಸ್ಟ್‌ನಲ್ಲಿ ನಡೆದ ವಿಶೇಷ ಅಧಿವೇಶನದಲ್ಲಿ ಕೇಂದ್ರ ಸರ್ಕಾರ ಎರಡೂ ಸದನಗಳಲ್ಲಿ ನಾರಿ ಶಕ್ತಿ ವಂದನಾ ಮಸೂದೆಯನ್ನು ಮಂಡಿಸಿ ಅಂಗೀಕಾರ ಪಡೆದಿತ್ತು

ರಾಷ್ಟ್ರೀಯ

ಲಿಂಗತ್ವ ಅಲ್ಪಸಂಖ್ಯಾತರ ಹಕ್ಕುಗಳ ರಕ್ಷಣೆ ತಿದ್ದುಪಡಿ ಮಸೂದೆಗೆ ಅಸ್ತು

ನವದೆಹಲಿ (ಪಿಟಿಐ): ಲಿಂಗತ್ವ ಅಲ್ಪಸಂಖ್ಯಾತರ ಹಕ್ಕುಗಳ ರಕ್ಷಣೆ ತಿದ್ದುಪಡಿ ಮಸೂದೆಗೆ ಲೋಕಸಭೆಯು ಮಂಗಳವಾರ ಅನುಮೋದನೆ ನೀಡಿತು.

ಮಸೂದೆ ಬಗ್ಗೆ ಪ್ರತಿಕ್ರಿಯಿಸಿದ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವ ವೀರೇಂದ್ರ ಕುಮಾರ್ ಅವರು, 'ಲಿಂಗದ ಕಾರಣಕ್ಕಾಗಿಯೇ ಬಹಿಷ್ಕಾರದ ಶಿಕ್ಷೆಯನ್ನು ಎದುರಿಸುವವರನ್ನು ರಕ್ಷಿಸುವ ಉದ್ದೇಶವನ್ನು ಈ ಮಸೂದೆಯು ಹೊಂದಿದೆ' ಎಂದು ಹೇಳಿದರು.

'ಲಿಂಗತ್ವ ಅಲ್ಪಸಂಖ್ಯಾತರಿಗೆ ಕಾನೂನಾತ್ಮಕ ಮಾನ್ಯತೆ ಮತ್ತು ರಕ್ಷಣೆಯನ್ನೂ ಒದಗಿಸಲಿದೆ' ಎಂದು ಅವರು ಒತ್ತಿ ಹೇಳಿದರು.

2019ರ ಕಾನೂನು ಇಂಥವರ ವಿರುದ್ಧದ ದೌರ್ಜನ್ಯಕ್ಕೆ ಗರಿಷ್ಠ 2 ವರ್ಷ ಕಾರಾಗೃಹ ಶಿಕ್ಷೆ ನೀಡುವ ಅವಕಾಶ ನೀಡುತ್ತಿತ್ತು. ತಿದ್ದುಪಡಿ ಮಸೂದೆಯು ಗರಿಷ್ಠ 14 ವರ್ಷ ಜೈಲು ಶಿಕ್ಷೆ ಮತ್ತು ದಂಡವನ್ನು ವಿಧಿಸಲು ಅವಕಾಶ ನೀಡುತ್ತದೆ ಎಂದು ಹೇಳಿದರು.

ಪ್ರಸ್ತಾವಿತ ಮಸೂದೆಯು ಲಿಂಗತ್ವದ ಚಹರೆಗಳನ್ನು ನಿರ್ಣಯಿಸುವ ಹಕ್ಕನ್ನು ಕಸಿದುಕೊಳ್ಳಲಿದೆ. ಇದನ್ನು ಸ್ಥಾಯಿ ಸಮಿತಿಗೆ ಕಳುಹಿಸಬೇಕು ಎಂದು ವಿರೋಧ ಪಕ್ಷಗಳು ಒತ್ತಾಯಿಸಿವೆ.

'ಲಿಂಗತ್ವ ಅಲ್ಪಸಂಖ್ಯಾತರ ಮೇಲಿನ ದಾಳಿ'

ನವದೆಹಲಿ (ಪಿಟಿಐ): 'ಲಿಂಗತ್ವ ಅಲ್ಪಸಂಖ್ಯಾತರ ಹಕ್ಕುಗಳ ರಕ್ಷಣೆ ತಿದ್ದುಪಡಿ ಮಸೂದೆ 2026' ಲಿಂಗತ್ವ ಅಲ್ಪಸಂಖ್ಯಾತರ ಸಾಂವಿಧಾನಿಕ ಹಕ್ಕುಗಳು ಹಾಗೂ ಅಸ್ಮಿತೆಯ ಮೇಲೆ ಮಾಡಿದ ನಿರ್ಲಜ್ಜ ದಾಳಿಯಾಗಿದೆ' ಎಂದು ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಆರೋಪಿಸಿದ್ದಾರೆ.



ರಾಹುಲ್ ಗಾಂಧಿ

'ಈ ಮಸೂದೆಯು ಪ್ರತಿಗಾಮಿಯಾಗಿದ್ದು, ಇದಕ್ಕೆ ಕಾಂಗ್ರೆಸ್‌ನ ತೀವ್ರ ವಿರೋಧವಿದೆ' ಎಂದು ಹೇಳಿದ್ದಾರೆ.

'ಈ ಮಸೂದೆಯು ಸುಪ್ರೀಂ ಕೋರ್ಟ್ ತೀರ್ಪನ್ನು ಉಲ್ಲಂಘಿಸುತ್ತದೆ. ಲಿಂಗತ್ವ ಅಲ್ಪಸಂಖ್ಯಾತರ ಸ್ವಯಂ ಗುರುತಿಸಿಕೊಳ್ಳುವ ಹಾಗೂ ಘೋಷಿಸಿಕೊಳ್ಳುವ ಅವಕಾಶವನ್ನು ಕಸಿದುಕೊಳ್ಳುತ್ತದೆ. ದೇಶದಾದ್ಯಂತ ಸಮುದಾಯಗಳ ವೈವಿಧ್ಯಮಯ ಸಾಂಸ್ಕೃತಿಕ ಅಸ್ಮಿತೆಗಳನ್ನು ಅಳಿಸಿಹಾಕುತ್ತದೆ. ಲಿಂಗತ್ವ ಅಲ್ಪಸಂಖ್ಯಾತರು ವೈದ್ಯಕೀಯ ಮಂಡಳಿಯಿಂದ ಅಮಾನವೀಯ ಪರೀಕ್ಷೆಗಳಿಗೆ ಒಳಗಾಗುವಂತೆ ಒತ್ತಾಯಿಸುತ್ತದೆ. ಸುರಕ್ಷತಾ ಕ್ರಮಗಳಿಲ್ಲದೆ ಕಠಿಣ ಹಿಂಸೆ, ವಿಚಾರಣೆಗೆ ಒಳಪಡಿಸಲಿದೆ' ಎಂದು ಹೇಳಿದ್ದಾರೆ.

'ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವು ಸಂವಿಧಾನವನ್ನು ಉಲ್ಲಂಘಿಸುತ್ತಿದೆ. ತನ್ನ ಸಂಕುಚಿತ ಆಲೋಚನೆಗಳನ್ನು ಅನುಸರಿಸುವ ಮೂಲಕ, ಲಿಂಗತ್ವ ಅಲ್ಪಸಂಖ್ಯಾತರನ್ನು ಗೌರವಿಸುವ ಭಾರತದ ಶ್ರೀಮಂತ ಪರಂಪರೆಯನ್ನು ನಾಶಪಡಿಸುತ್ತಿದೆ' ಎಂದು ಆರೋಪಿಸಿದ್ದಾರೆ.

ಹಣಕಾಸು ಆಯೋಗದ ಅನುದಾನಕ್ಕೆ ಜಿ.ಪಂ, ತಾ.ಪಂ. ಅನರ್ಹ: ಕೇಂದ್ರ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕದಲ್ಲಿ ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿಗಳು 15ನೇ ಹಣಕಾಸು ಆಯೋಗದ 2025–26ನೇ ಸಾಲಿನ ಅನುದಾನ ಪಡೆಯಲು ಅನರ್ಹವಾಗಿವೆ ಎಂದು ಕೇಂದ್ರ ಪಂಚಾಯತ್‌ರಾಜ್ ಸಚಿವ ರಾಜೀವ್ ರಂಜನ್ ಸಿಂಗ್ ತಿಳಿಸಿದ್ದಾರೆ.

ಲೋಕಸಭೆಯಲ್ಲಿ ಮಂಗಳವಾರ ಪ್ರಶ್ನೋತ್ತರ ಅವಧಿಯಲ್ಲಿ ಉಡುಪಿ–ಚಿಕ್ಕಮಗಳೂರು ಸಂಸದ ಕೋಟ ಶ್ರೀನಿವಾಸ ಪೂಜಾರಿ ಪ್ರಶ್ನೆಗೆ ಲಿಖಿತ ಉತ್ತರ ನೀಡಿದ ಅವರು, 'ಜಿಲ್ಲಾ ಹಾಗೂ ತಾಲ್ಲೂಕು ಪಂಚಾಯಿತಿಗಳಿಗೆ 2021ರ ಫೆಬ್ರುವರಿಯಿಂದ ಚುನಾವಣೆ ನಡೆಸದಿರುವುದೇ ಇದಕ್ಕೆ ಕಾರಣ' ಎಂದಿದ್ದಾರೆ.

2020–21ರಿಂದ 2024–25ರ ವರೆಗಿನ ಹಣಕಾಸು ಆಯೋಗದ ಗ್ರಾಮೀಣ ಸ್ಥಳೀಯ ಸಂಸ್ಥೆಗಳ ಅನುದಾನದ ಎಲ್ಲ ಕಂತುಗಳನ್ನು ರಾಜ್ಯದ ಅರ್ಹ ಗ್ರಾಮ ಪಂಚಾಯಿತಿಗಳಿಗೆ ಬಿಡುಗಡೆ ಮಾಡಲಾಗಿದೆ. ಆದರೆ, 2025–26ನೇ ಸಾಲಿನ ಎರಡು ಕಂತುಗಳನ್ನು ರಾಜ್ಯಕ್ಕೆ ಕೊಟ್ಟಿಲ್ಲ. ಕೇಂದ್ರ ಬಿಡುಗಡೆ ಮಾಡಿರುವ ಮೊತ್ತವನ್ನು ಸಕಾಲಕ್ಕೆ ಪಂಚಾಯಿತಿಗಳಿಗೆ ರಾಜ್ಯ ಸರ್ಕಾರ ವರ್ಗಾವಣೆ ಮಾಡಿರಲಿಲ್ಲ. ಜತೆಗೆ, ವಿಳಂಬದ ದಂಡವನ್ನೂ ಪಾವತಿಸಿರಲಿಲ್ಲ' ಎಂದು ಹೇಳಿದ್ದಾರೆ.

ಹಣಕಾಸು ಆಯೋಗದ ಅನುದಾನಗಳ ಬಳಕೆಗಾಗಿ ಕಾರ್ಯಾಚರಣೆ ಮಾರ್ಗಸೂಚಿಯನ್ನು 2021ರಲ್ಲಿ ಹೊರಡಿಸಲಾಗಿತ್ತು. ಇದರ ಪ್ರಕಾರ, ಪ್ರತಿ ಹಣಕಾಸು ವರ್ಷದಲ್ಲಿ ಎರಡು ಕಂತುಗಳಲ್ಲಿ ರಾಜ್ಯಗಳಿಗೆ ಅನುದಾನ ಬಿಡುಗಡೆ ಮಾಡಲಾಗುತ್ತದೆ. ಪ್ರತಿ ಕಂತಿನ ಬಿಡುಗಡೆಗೆ ಮುನ್ನ ಹಿಂದಿನ ಕಂತಿನ ಅನುದಾನ ವರ್ಗಾವಣೆ ಪ್ರಮಾಣಪತ್ರ ಸಲ್ಲಿಸಬೇಕಾಗುತ್ತದೆ. ಈ ಬಗ್ಗೆ ರಾಜ್ಯ ಸರ್ಕಾರ ಪ್ರತ್ಯೇಕವಾಗಿ ನಿರಕ್ಷೇಪಣಾ ಪ್ರಮಾಣಪತ್ರ ಸಲ್ಲಿಸುವ ಅಗತ್ಯ ಇಲ್ಲ ಎಂದು ಅವರು ಸ್ಪಷ್ಟಪಡಿಸಿದ್ದಾರೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಸಮುದ್ರದಲ್ಲಿ ಹಡಗೊಂದು ಸಂಚರಿಸುತ್ತಿರುವ ವಿಡಿಯೊವೊಂದು ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ. 'ಇದು ಬ್ರಿಟನ್‌ನ ರಾಯಲ್ ನೌಕಾಪಡೆಯ ಜಲಾಂತರ್ಗಾಮಿ ನೌಕೆಯಾಗಿದೆ; ಪರಮಾಣು ಸಾಮರ್ಥ್ಯ ಹೊಂದಿರುವ ಈ ನೌಕೆಯು ಅರಬ್ಬಿ ಸಮುದ್ರ ಪ್ರವೇಶಿಸಿದೆ. ಅಗತ್ಯ ಬಿದ್ದರೆ, ಕೆಳಮಟ್ಟದ ಕ್ಷಿಪಣಿ ದಾಳಿಗೆ ಇವು ಸಜ್ಜಾಗಿವೆ. ಬ್ರಿಟನ್ ಇದುವರೆಗೂ ನೇರವಾಗಿ ಯುದ್ಧ ಪ್ರವೇಶ ಮಾಡಿಲ್ಲ ಎಂದು ಪ್ರಧಾನಿ ಕೀರ್ ಸ್ಟಾರ್ಮರ್ ಹೇಳಿದ್ದರು. ಆದರೆ, ಬ್ರಿಟನ್ ಈಗಾಗಲೇ ಇರಾನ್ ಯುದ್ಧವನ್ನು ಪ್ರವೇಶಿಸಿದೆ' ಎಂದು ಪೋಸ್ಟ್ ಅನ್ನು ಹಂಚಿಕೊಳ್ಳುತ್ತಿರುವವರು ಪ್ರತಿಪಾದಿಸುತ್ತಿದ್ದಾರೆ. ಆದರೆ, ಇದು ಸುಳ್ಳು ಸುದ್ದಿ.



ವಿಡಿಯೊದಲ್ಲಿ 'ಜಿಬಿಸಿ ನ್ಯೂಸ್' ಎನ್ನುವ ಲೋಗೋ ಇದೆ. ಅದರ ಮೂಲವನ್ನು ಹುಡುಕಿದಾಗ ಜಿಬ್ರಾಲ್ಟರ್ ಬ್ರಾಡ್‌ಕಾಸ್ಟಿಂಗ್ ಕಾರ್ಪೊರೇಷನ್‌ನಲ್ಲಿ (ಜಿಬಿಸಿ) 2026ರ ಜನವರಿ 20ರಂದು ವಿಡಿಯೊವೊಂದು ಪೋಸ್ಟ್ ಆಗಿರುವುದು ಕಂಡಿತು. ಜಿಬ್ರಾಲ್ಟರ್ ಬ್ರಿಟಿಷ್ ಸಾಗರೋತ್ತರ ಪ್ರದೇಶವಾಗಿದ್ದು, ಸ್ಪೇನ್‌ನ ಗಡಿಭಾಗದಲ್ಲಿದೆ. ಬ್ರಿಟನ್‌ನ ರಾಯಲ್ ನೌಕಾಪಡೆಯ ಎಚ್‌ಎಂಎಸ್ ಅನ್‌ಸನ್ ಜಿಬ್ರಾಲ್ಟರ್‌ನಲ್ಲಿ ಸಂಚರಿಸುತ್ತಿರುವ ವಿಡಿಯೊ ಎಂದು ಪೋಸ್ಟ್‌ನಲ್ಲಿ ಉಲ್ಲೇಖಿಸಲಾಗಿದೆ. ಪೋಸ್ಟ್‌ನಲ್ಲಿದ್ದ ವಿಡಿಯೊ ಮತ್ತು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವ ವಿಡಿಯೊ ಬಹುತೇಕ ಒಂದೇ. ಇಸ್ರೇಲ್–ಇರಾನ್ ಯುದ್ಧ ಆರಂಭವಾಗಿದ್ದು 2026ರ ಫೆಬ್ರುವರಿ 28ರಂದು. ಅಂದರೆ, ಯುದ್ಧ ಆರಂಭವಾಗುವುದಕ್ಕೂ ಮುಂಚೆಯೇ ವಿಡಿಯೊ ಪೋಸ್ಟ್ ಮಾಡಲಾಗಿದೆ. ಹಳೆಯ ಪೋಸ್ಟ್ ಹಂಚಿಕೊಳ್ಳುವ ಮೂಲಕ ಸುಳ್ಳು ಪ್ರತಿಪಾದನೆ ಮಾಡಲಾಗುತ್ತಿದೆ ಎಂದು ಬೂಮ್ ಫ್ಯಾಕ್ಟ್ ಚೆಕ್ ವರದಿ ಪ್ರಕಟಿಸಿದೆ.

ನುಡಿ ಬೆಳಗು

ರೂಢಿ ಮಾತು



ವಾಸುದೇವ ನಾಡಿಗ್


ಅದೊಂದು ವಿಚಿತ್ರ ಸನ್ನಿವೇಶ. ಜನ ಓಡಾಡುವ ದಡದ ರಸ್ತೆಗೆ ಚೇಳೊಂದು ಬಂದು ಬಿದ್ದಿತ್ತು. ಸಾಧುವೊಬ್ಬ ಅದನ್ನು ಉಳಿಸಲು ಬೆರಳುಗಳಿಂದ ಹಿಡಿದು ಕೊಳಕ್ಕೆ ಬಿಡಲು ಮುಂದಾದ. ಹಿಡಿದುಕೊಳ್ಳುವುದೇ ತಡ ಅದು ಕೊಂಡಿಯಿಂದ ಕುಟುಕುತ್ತಿತ್ತು. ಸಾಧು ಬಿಡಲಿಲ್ಲ. ಮತ್ತೆ ಹಿಡಿದುಕೊಂಡ, ಮತ್ತೆ ಉಳಿಸಲು ಪ್ರಯತ್ನಪಟ್ಟ. ನೋಡುವ ಜನ ಕಿರುಚಿಕೊಂಡರು. ಹತ್ತಾರು ಸಲ ಇದೇ ಪ್ರಯತ್ನ. ಅದೇ ಕುಟುಕುವ ಏಟು. ರಕ್ತ ನೋವು ವೇದನೆ. ಜನರೆಲ್ಲ ಸಾರಿ ಸಾರಿ ಹೇಳಿದರು, 'ಚೇಳನ್ನು ಮತ್ತೆ ಮತ್ತೆ ಹಿಡಿಯಬೇಡಿ. ಅದು ಕಚ್ಚುತ್ತದೆ, ವಿಷಕಾರಿ' ಎಂದೆಲ್ಲ ಸಂಕಟದಿಂದ ಹೇಳಿದರು. ಸಾಧು ಕೇಳಲಿಲ್ಲ. ಕೊನೆಗೆ ಹೇಗೋ ಚೇಳನ್ನು ನೀರಿನೊಳಕ್ಕೆ ಬಿಟ್ಟನು. ಜನರ ಪ್ರಶ್ನೆ ಒಂದೇ. ಚೇಳು ಮತ್ತೆ ಮತ್ತೆ ಕಚ್ಚಿದರೂ ಸಾಧು ಏಕೆ ಪ್ರಯತ್ನ ಬಿಡಲೊಲ್ಲ ಅಂತ. ಸಾಧು ನಗುತ್ತ ಉತ್ತರ ಕೊಟ್ಟ, 'ಕುಟುಕುವುದು ಚೇಳಿಗೆ ರೂಢಿ ಸಹಜ ಸ್ವಭಾವ. ಬಿಡದೆ ಅದನ್ನು ಮತ್ತೆ ಮತ್ತೆ ಎತ್ತಿಕೊಂಡು ಪ್ರಾಣ ಉಳಿಸಲು ಮುಂದಾಗುವುದು ನನ್ನ ರೂಢಿ ಸಹಜ ಸ್ವಭಾವ'. ಸ್ವಭಾವ ರೂಢಿಗಳೇ ಹೀಗೆ. ಕುಟುಕುವುದು ಚೇಳಿಗೆ ರೂಢಿ ಮತ್ತು ಕಾಪಾಡುವುದು ಸಾಧುವಿಗೆ ರೂಢಿ. ಚೇಳಿಗೆ ಏನು ಗೊತ್ತು? ಅದಕ್ಕೆ ಸ್ವರಕ್ಷಣೆ ಎಂದರೆ ವಿಷಯುಕ್ತ ಕೊಂಡಿಯಿಂದ ಕುಟುಕುವುದು ಅಷ್ಟೇ. ಸಾಧುವಿಗೆ ನೋವನ್ನು ಸಹಿಸಿ ಇನ್ನಷ್ಟು ಮಾಗುವುದು. ಜನ ಸಾಮಾನ್ಯರಿಗೆ ಈ ಎರಡು ಸಂಗತಿ ಒಂದು ವಿಸ್ಮಯ.

ಪುರಾಣಗಳಲ್ಲಿ ಹಲವು ನಿದರ್ಶನಗಳಿವೆ. ರೂಢಿಗಳು ಇನ್ನೊಬ್ಬರಿಗೆ ಹಾನಿ ನೋವುಂಟು ಮಾಡಿದರೂ ಆ ರೂಢಿಯನ್ನು ಪರಿಗಣಿಸದ ಪಾತ್ರಗಳಿವೆ. ಶಿಶುಪಾಲನಿಗೆ ಕೃಷ್ಣನನ್ನು ಜರೆಯುವುದೇ ರೂಢಿ, ಪ್ರಹ್ಲಾದನಿಗೆ ವಿಷ್ಣುವನ್ನು ಜಪಿಸುವುದೇ ರೂಢಿ. ಶಕುನಿಗೆ ಕುತಂತ್ರಗಳ ರಚಿಸುವುದೇ ರೂಢಿ, ವಿಭೀಷಣನಿಗೆ ಸಜ್ಜನಿಕೆಯೇ ರೂಢಿ, ಅವರವರ ರೂಢಿಗಳೇ ಅವರವರ ನಡತೆ ಮತ್ತು ಬಾಳನ್ನು ರೂಪಿಸುತ್ತಿರುವಾಗ ಅವೇ ಅವರವರ ಯೋಚನೆಗಳಾಗಿ ನಿರ್ಮಾಣವಾಗುತ್ತವೆ. ಕುಟುಕುವವರು ಚೇಳಾಗಿ. ಕಾಪಾಡುವವರು ಸಾಧುಗಳಾಗಿ ಜೀವನದಲ್ಲಿ ನೆಲೆಯೂರುತ್ತಾರೆ. ಅಚ್ಚರಿಯೆಂದರೆ ಕೆಲವು ರೂಢಿಗಳೇ ಅನೇಕರಿಗೆ ಅನನ್ಯ ಅಸ್ತಿತ್ವ ಮತ್ತು ಮನ್ನಣೆಯನ್ನು ತಂದುಕೊಡುತ್ತವೆ. ಕೂತಲ್ಲಿ ನಿಂತಲ್ಲಿ ತಾಳ ತಂತಿ ಜಪಿಸುವವ ಖ್ಯಾತ ಸಂಗೀತಗಾರ ಆಗಬಲ್ಲ. ಅಲ್ಲಲ್ಲಿ ಸಾಲುಗಳನ್ನು ಬರೆಯಬಲ್ಲವರು ಕವಿ ಲೇಖಕರಾಗಬಲ್ಲರು. ಗೆರೆ ಎಳೆಯುವ ರೂಢಿಯೇ ಮುಂದೆ ಬಹುದೊಡ್ಡ ಕಲಾವಿದರನ್ನಾಗಿಸಬಹುದು. ರೂಢಿಗತ ಸಂಗತಿಗಳೇ ಬಾಳನು ಬೆಳಗಲೂ ಬಲ್ಲದು, ಕೊಲ್ಲಲೂ ಬಹುದು. ಹಾಸುಹೊಕ್ಕಾಗಿ ಬಿಡುವ ರೂಢಿಗಳೇ ಗುಣಾತ್ಮಕವಾದ ಹವ್ಯಾಸವಾದವರ ಕತೆಗಳೇ ಚೆಂದ.

ಪ್ರಾಣ ಭಯ ಮತ್ತು ಸ್ವರಕ್ಷಣೆಗಾಗಿ ಇನ್ನೊಬ್ಬರನ್ನು ಕೊಲ್ಲುವ, ನೋಯಿಸುವ ಮಾರ್ಗದಲ್ಲಿ ಸಹನೆ ಮತ್ತು ಅನುಕಂಪಕ್ಕೆ ಆಸ್ಪದವೇ ಇಲ್ಲ. ಬೋಧಿಸುವುದು ಸಂತೈಸುವುದು ರೂಢಿಯಾಗಿದ್ದ ಬುದ್ಧ, ನೋವು ಕೊಡುವ ಜನರ ರೂಢಿಗಳ ಬಗ್ಗೆ ಕಿಡಿಕಾರಲಿಲ್ಲ. ಅಂಗುಲಿ ಮಾಲಾನಂತಹ ಕ್ರೂರಿಯೂ ಮೊಣಕಾಲೂರಿದ. ದೋಚುವುದು ಮತ್ತು ಯುದ್ಧ ಸಾರುವುದೇ ರೂಢಿಯಾದ ದೇಶಕ್ಕೆ ಶಾಂತಿ ಮಾತುಕತೆ ಹಾಸ್ಯಾಸ್ಪದ. ಎಷ್ಟಾದರೂ ನಿಂದಿಸಲಿ ಬೆದರಿಸಲಿ ವಿದ್ಯಾರ್ಥಿಗಳಿಗೆ ಬುದ್ಧಿ ಹೇಳುವುದನ್ನೇ ರೂಢಿ ಮಾಡಿಕೊಂಡ ಶಿಕ್ಷಕ ಸದ್ಯ ಕಹಿಯನ್ನೇ ಉಣಬಡಿಸಿದರೂ ನಾಳೆ ಸಿಹಿಯಾದ ಭವಿಷ್ಯಕ್ಕೆ ನಾಂದಿಯಾಗುವುದೆಂಬ ನಂಬಿಕೆ ಆದರ್ಶಗಳನ್ನು ಇನ್ನೂ ಜೀವಂತವಾಗಿ ಉಳಿಸಿದೆ. ❖

ಪದಬಂಧ 6353

ವಿದ್ಯಾ ವಿನಯ್



ಎಡದಿಂದ ಬಲಕ್ಕೆ
4.ಪುಟ ಇಲ್ಲಿದೆ (2)
5.ಚಂದವಾಗಿ ತೇಯ್ದಿರುವ ಶ್ರೀಗಂಧ (3)
6.ಮಂದಿಗೆಲ್ಲಾ ತಿಳಿದಿರುವುದು (5)
9.ಮಜದಲ್ಲಿರುವ ಚಕ್ರವರ್ತಿ (4)
11.ಕಲೆಯಲ್ಲಿರುವ ಗುರಾಣಿ ಕಾಣಿಸಿತೇ? (4)
12.ಸಿಹಿಯಲ್ಲದ ಸ್ಮರಣೆ (5)
15.ಆಗಸದಲ್ಲಿ ಹಾರುವ ಲೋಹದ ಹಕ್ಕಿ (3)
16.ಪರಾಜಿತನ ಹತ್ತಿರ ನಡೆದ ಒಪ್ಪಂದ (2)

ಮೇಲಿಂದ ಕೆಳಕ್ಕೆ
1.ಅಜವನ್ನು ಹಿಡಿದಿರುವ ತಮ್ಮ! (3)
2.ಅವನಿರುವ ಭೂಮಿ (3)
3.ಮೆಲುವಾಗಿ ಬೀಸುವ ಗಾಳಿ (5)
7.ನೀರಿನಿಂದಾದ ಅನಿಲ (5)
8.ತಪ್ಪಾಗಿ ಭಾವಿಸುವಿಕೆ (5)
10.ವಿಷಯವನ್ನು ಮರೆ ಮಾಚಿ ಹೇಳುವ ಮಾತು (5)
13.ತಂತ್ರಕ್ಕೊಂದು ಪರ್ಯಾಯ ಪದ (3)
14.ರುಜುವಾತನ್ನು ಹೀಗೆನ್ನಿ (3)

6352ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಬದುಕು 3.ಮತ್ಸರ 4.ತೂಣೀರ 6.ಕುಡಿ 7.ನಭ 11.ಯಮ 13.ಮನ 14.ತಿದಂವ 15.ವಾಸನೆ 16.ಟಪಾಲು

ಮೇಲಿಂದ ಕೆಳಕ್ಕೆ: 1.ಬರಖಾಸ್ತು 2.ಕುತೂಹಲ 3.ಮಡಿ 5.ರನ 6.ಕುಟಿಲೋಪಾಯ 8.ಭವಬಂಧನ 9.ತಟವಟ 10.ಅಹವಾಲು 12.ಮತಿ 13.ಮನೆ

ಸುಡೊಕು 6737

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

2	8			7			4	
		4	6		8	7		9
7				1		8		
					4	6	7	
6		1	7		2			4
								1
				6		5		
	3	6	2		5			7
8		5		4			6	

6736 ಸುಡೊಕು

4	8	1	6	9	7	5	2	3
6	7	5	3	2	4	9	1	8
3	9	2	1	8	5	4	7	6
9	6	4	8	1	3	2	5	7
7	5	3	4	6	2	1	8	9
2	1	8	7	5	9	3	6	4
1	2	7	9	4	6	8	3	5
5	3	9	2	7	8	6	4	1
8	4	6	5	3	1	7	9	2

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

25 ಮಾರ್ಚ್ 2026 ಬುಧವಾರ, ಶ್ರೀ ಪರಾಭವ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ಚೈತ್ರ ಶುಕ್ಲ ಸಪ್ತಮಿ ಗಂ. 13-51 ನಕ್ಷತ್ರ: ಮೃಗಶಿರ ಗಂ. 17-34 ಯೋಗ: ಆಯುಷ್ಮಾನ್ ಗಂ. 9-02 ನಂತರ ಸೌಭಾಗ್ಯ ಗಂ 27-10 ಕರಣ: ವಣಿಜ ಗಂ. 13-51 ಮೀನ ಮಾಸದ 11 ನೇ ದಿನ. ಮಳೆ ನಕ್ಷತ್ರ : ಉತ್ತರಾಭಾದ್ರ 2 ನೇ ಪಾದ. ರಾಹುಕಾಲ : ಮಧ್ಯಾಹ್ನ 12-00 - 01-30 ಸೂರ್ಯೋದಯ : 06-35 ಸೂರ್ಯಾಸ್ತ : 06-38, ಮುಸ್ಲಿಂ ದಿನಾಂಕ : 5 ಶವ್ವಾಲ್, ಅದೃಷ್ಟ ಸಂಖ್ಯೆ : 3, 11

ಮೇಷ: ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ಅವಲೋಕಿಸಿಕೊಂಡು ಕನಸುಗಳನ್ನು ಸಾಕಾರಗೊಳಿಸುವುದಕ್ಕೆ ಅವಿಶ್ರಾಂತವಾಗಿ ದುಡಿಯುವಿರಿ. ಕುಟುಂಬದ ಸಹಕಾರ ಸಿಗುತ್ತದೆ.

ವೃಷಭ: ವೈದ್ಯರಿಗೆ ಬಿಡುವಿಲ್ಲದ ಅಭ್ಯಾಸದ ಜೊತೆಗೆ ಉನ್ನತ ಜವಾಬ್ದಾರಿ ಸಿಗಲಿದೆ. ಸ್ಥಾನ- ಮಾನ ಹಾಗೂ ಇತರರು ನಿಮ್ಮ ಮೇಲೆ ಇಟ್ಟಿರುವ ಗೌರವವನ್ನು ಗಮನದಲ್ಲಿ ಇಟ್ಟುಕೊಳ್ಳಿ.

ಮಿಥುನ: ಎಲ್ಲಾ ರೀತಿಯ ದವಸ ಧಾನ್ಯ ಹಾಗೂ ಮಸಾಲ ಸಾಮಗ್ರಿಗಳ ರಫ್ತು ವ್ಯಾಪಾರಿಗಳು ಮತ್ತು ಏಜೆಂಟರಿಗೆ ಅನುಕೂಲವಾಗುವುದು. ಹಣಕಾಸಿನ ಬಗ್ಗೆ ಚಿಂತಿಸುವ ಅಗತ್ಯವಿಲ್ಲ.

ಕರ್ಕಾಟಕ: ಬಂಡವಾಳ ಹೂಡಿಕೆ, ಷೇರು ಖರೀದಿ ವಿಚಾರಗಳತ್ತ ಆಸಕ್ತಿ ಹೆಚ್ಚಲಿದೆ. ಕಾರ್ಖಾನೆಯಲ್ಲಿ ರಾತ್ರಿ ಪಾಳಿ ಕೆಲಸವನ್ನು ಬದಲಾಯಿಸಿ ಕೊಳ್ಳುವ ಪ್ರಯತ್ನವನ್ನು ನಡೆಸಬಹುದು.

ಸಿಂಹ: ಪ್ರಮುಖ ನಿರ್ಧಾರಗಳನ್ನು ಆತುರವಾಗಿ ತೆಗೆದುಕೊಳ್ಳುವ ಸನ್ನಿವೇಶಕ್ಕೆ ಸಿಕ್ಕಿಕೊಂಡ ಸಮಯ ಬರಬಹುದು. ಚಾಣಾಕ್ಷತೆ ಮೆರೆಯುವಿರಿ. ಈಶ್ವರ ಆರಾಧನೆ ಶುಭ ತರಲಿದೆ.

ಕನ್ಯಾ: ಕತ್ತಲೆಯ ಪ್ರಪಂಚದಲ್ಲಿರುವ ಜೀವನಕ್ಕೆ ದೂರದಲ್ಲೊಂದು ಸುಜ್ಯೋತಿ ಕಾಣಲಿದೆ. ವ್ಯಾಪಾರಕ್ಕೆ ಸಂಬಂಧಿತ ವಿಷಯಗಳನ್ನು ನಾನಾ ಮೂಲಗಳಿಂದ ಮಾಹಿತಿ ಸಂಗ್ರಹಿಸಿ. ಆದಾಯ ವೃದ್ಧಿಯಾಗುತ್ತದೆ.

ತುಲಾ: ರಾಜಕಾರಣಿಗಳು ಉತ್ತಮ ಭಾಷಣ ನಡೆಸಿ ಜನರ ಮನಗೆಲ್ಲುವ ಅವಕಾಶವಿದೆ. ಯಾವುದೇ ವಾದಗಳು ಕಾರ್ಯಕ್ಕೆ ಅಡ್ಡಿ ಮಾಡದಂತೆ ಗಮನಹರಿಸಿ.

ವೃಶ್ಚಿಕ: ಕೈಗೊಳ್ಳಲಿರುವ ನಿರ್ಧಾರಗಳು ನಿಮ್ಮ ಮನೆಯವರಿಗೆ ಅಗತ್ಯವಾಗಿ ತಿಳಿದಿರಲಿ. ಸಾಲ ಕೊಡುವಾಗ ಸರಿಯಾಗಿ ಯೋಚಿಸಿ. ಕರಕುಶಲದಂಥ ವ್ಯಕ್ತಿಗಳಿಗೆ ಹೊಸ ಅವಕಾಶಗಳು ಸಿಗಲಿವೆ.

ಧನು: ಸಗಟು ವ್ಯಾಪಾರಿಗಳಿಗೆ ಅಧಿಕ ಲಾಭ. ವ್ಯವಹಾರಕ್ಕೆ ಸಹಾಯವಾಗುವಂಥ ವಾಹನ ಖರೀದಿಯ ಬಗ್ಗೆ ಗಮನಹರಿಸಿ. ತಾಳಿದವನು ಬಾಳಿಯಾನು ಎಂಬಂತೆ ದುಡುಕದೇ ಸಮಾಧಾನದಿಂದ ವ್ಯವಹರಿಸಿ.

ಮಕರ: ಅನವಶ್ಯಕ ತಿರುಗಾಟವಿದ್ದರೂ ರಿಯಲ್ ಎಸ್ಟೇಟ್ ಏಜೆಂಟರಿಗೆ ಉತ್ತಮ ಆದಾಯ ಬರುವುದು. ದೈಹಿಕವಾಗಿ ಬಲಾಢ್ಯರಾಗಿದ್ದರೂ ಮಾನಸಿಕವಾಗಿ ದೊಡ್ಡ ಹೊಡೆತಬೀಳುವ ಸಂಭವವಿದೆ.


ಕುಂಭ: ಮಿತ್ರರಲ್ಲಿ ಸ್ನೇಹವೂ ಬಂಧುಗಳಲ್ಲಿ ಸಂಬಂಧವೂ ಉಳಿಸಿಕೊಂಡು ಹೋಗುವುದು ಇಹಕ್ಕೂ ಪರಕ್ಕೂ ಒಳಿತು ಉಂಟುಮಾಡುತ್ತದೆ. ಕಚೇರಿಯ ಕೆಲಸಗಳನ್ನು ಪೂರೈಸಿಕೊಳ್ಳುವ ಅಭ್ಯಾಸವನ್ನು ಮಾಡಿಕೊಳ್ಳಿ.

ಮೀನ: ತುಂಬ ವಿಶ್ವಾಸವಿರುವಂಥ ವ್ಯಕ್ತಿಗಳು ಅಥವಾ ಸಂಬಂಧಿಗಳು ಮನೆಗೆ ಆಗಮಿಸುವಂಥ ಸಾಧ್ಯತೆಗಳಿವೆ. ಗಳಿಕೆಯ ಬಗ್ಗೆ ಚಿಂತಿಸಬೇಡಿ, ಕೆಲಸದಲ್ಲಿ ಅಸ್ತಿತ್ವವನ್ನು ಕಾಪಾಡಿಕೊಳ್ಳಿ.

ಗುಂಡಣ್ಣ



ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ:	22,512
ಇಂದಿನ ಅಂತ್ಯ:	22,912
ದಿನದ ಗರಿಷ್ಠ:	23,057
	399

ಮೊಟ್ಟೆ ಧಾರಣೆ (ಎನ್‌ಇಸಿಸಿ)

ಬೆಂಗಳೂರು	
100 ಕ್ಕೆ	₹445
12 ಕ್ಕೆ	₹66
ಮೈಸೂರು: 100 ಕ್ಕೆ	₹447

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹212
ಆರ್‌ಎಸ್‌ಎಸ್-5	₹206
ಗುಡ್ ಲಾಟ್	₹188

ರಾಮನಗರ ರೇಷ್ಮೆಗೂಡು


ಮಿಶ್ರತಳಿ(ಸಿ.ಬಿ)	₹466-766
ದ್ವಿತಳಿ (ಬಿ.ವಿ)	₹370-891

ಮುದ್ರೆಮನೆ ಕಾಫಿ

ಎಪಿ	₹23750
ಎಸಿ	₹13580
ಆರ್‌ಪಿ	₹18650
ಆರ್‌ಸಿ	₹10050

ಟ್ರಂಪ್ ಮಾತಿಗೆ ಷೇರುಪೇಟೆ ಚೇತರಿಕೆ

ಹೂಡಿಕೆದಾರರ ಸಂಪತ್ತು ₹7.56 ಲಕ್ಷ ಕೋಟಿಯಷ್ಟು ವೃದ್ಧಿ



ಮುಖ್ಯಾಂಶಗಳು

- ಸೆನ್ಸೆಕ್ಸ್ 1,372, ನಿಫ್ಟಿ 399 ಅಂಶ ಏರಿಕೆ
- ರೂಪಾಯಿ 23 ಪೈಸೆ ಇಳಿದು 93.76ಕ್ಕೆ ನಿಂತ ಕರೆನ್ಸಿ ಮೌಲ್ಯ
- ಬ್ರೆಂಟ್ ಕಚ್ಚಾ ತೈಲ ದರ ಶೇ 2ರಷ್ಟು ಏರಿಕೆ

ಮುಂಬೈ (ಪಿಟಿಐ): ಇರಾನ್‌ನ ಇಂಧನ ಮೂಲಸೌಕರ್ಯಗಳ ಮೇಲೆ ದಾಳಿ ನಡೆಸುವುದನ್ನು ಐದು ದಿನಗಳ ಮಟ್ಟಿಗೆ ಮುಂದೂಡಲಾಗಿದೆ ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಹೇಳಿದ ಪರಿಣಾಮವಾಗಿ ದೇಶದ ಷೇರುಪೇಟೆಗಳಲ್ಲಿ ಮಂಗಳವಾರ ತೇಜಿ ವಹಿವಾಟು ನಡೆಯಿತು.

ಏಷ್ಯಾದ ಇತರ ಮಾರುಕಟ್ಟೆಗಳಲ್ಲಿಯೂ ಹೂಡಿಕೆದಾರರು ಉತ್ಸಾಹದಿಂದ ಷೇರುಗಳನ್ನು ಖರೀದಿಸಿದರು. ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ 1,372 ಅಂಶ ಏರಿಕೆ ಕಂಡಿತು. ರಾಷ್ಟ್ರೀಯ ಷೇರುಪೇಟೆ ಸಂವೇದಿ ಸೂಚ್ಯಂಕ ನಿಫ್ಟಿ 399 ಅಂಶ ಏರಿಕೆ ದಾಖಲಿಸಿತು.

'ಅಮೆರಿಕ ಮತ್ತು ಇರಾನ್ ನಡುವಿನ ಸಂಘರ್ಷದ ತೀವ್ರತೆಯು ಕಡಿಮೆ ಆಗಬಹುದು ಎಂಬ ಆರಂಭಿಕ ಸೂಚನೆಗಳು ಹೂಡಿಕೆದಾರರಲ್ಲಿ ಒಂದಿಷ್ಟು ವಿಶ್ವಾಸ ಮೂಡಿಸಿದವು. ಇದರಿಂದಾಗಿ ಸೂಚ್ಯಂಕಗಳು ಚೇತರಿಕೆ ಕಂಡವು' ಎಂದು ಲಿವ್‌ಲಾಂಗ್ ವೆಲ್ತ್ ಸಂಸ್ಥೆಯ ಸಂಶೋಧನಾ ವಿಶ್ಲೇಷಕ ಹರಿಪ್ರಸಾದ್ ಕೆ. ಹೇಳಿದ್ದಾರೆ.

'ಇದನ್ನು ಮಾರುಕಟ್ಟೆಯ ಗತಿಯನ್ನು ಬದಲಿಸುವ ಏರಿಕೆ ಎಂಬುದಕ್ಕಿಂತಲೂ, ಹೂಡಿಕೆದಾರರು ಗುಣಮಟ್ಟದ ಷೇರುಗಳನ್ನು ಒಳ್ಳೆಯ ಬೆಲೆಗೆ ಖರೀದಿಸಿರುವುದರ ಸೂಚಕ ಎಂಬಂತೆ ಕಾಣಬೇಕು' ಎಂದು ಹರಿಪ್ರಸಾದ್ ತಿಳಿಸಿದ್ದಾರೆ.

'ದೇಶಿ ಮಾರುಕಟ್ಟೆಗಳಲ್ಲಿ ಸಮಾಧಾನಕರ ಏರಿಕೆ ಮಂಗಳವಾರ ಕಂಡುಬಂತು... ಆದರೆ ಹೊರ್ಮುಜ್ ಜಲಸಂಧಿಗೆ ಸಂಬಂಧಿಸಿದಂತೆ ಹೂಡಿಕೆದಾರರು ಹೆಚ್ಚಿನ ಸ್ಪಷ್ಟತೆಗೆ ಕಾಯುತ್ತಿದ್ದಾರೆ' ಎಂದು ಜಿಯೋಜಿತ್ ಇನ್ವೆಸ್ಟ್‌ಮೆಂಟ್ಸ್ ಲಿಮಿಟೆಡ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಮಂಗಳವಾರದ ವಹಿವಾಟಿನಲ್ಲಿ ಹೂಡಿಕೆದಾರರ ಸಂಪತ್ತಿನ ಮೌಲ್ಯವು ₹7.56 ಲಕ್ಷ ಕೋಟಿಯಷ್ಟು ಹೆಚ್ಚಳ ಕಂಡಿದೆ.

'ಇರಾನ್ ವಿರುದ್ಧ ದಾಳಿಯನ್ನು ಮುಂದೂಡಿರುವ ಬಗ್ಗೆ ಟ್ರಂಪ್ ಅವರು ಹೇಳಿಕೆ ನೀಡಿದ ನಂತರದಲ್ಲಿ ಕಚ್ಚಾ ತೈಲದ ಬೆಲೆಯು ಶೇ 11ಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಇಳಿಕೆ ಕಂಡಿತು. ಇದು ಮಾರುಕಟ್ಟೆಯಲ್ಲಿ ಆಶಾವಾದ ಮೂಡುವಂತೆ ಮಾಡಿತು' ಎಂದು ಲೆಮನ್ ಮಾರ್ಕೆಟ್ಸ್ ಡೆಸ್ಕ್‌ನ ಸಂಶೋಧನಾ ವಿಶ್ಲೇಷಕ ಗೌರವ್ ಗರ್ಗ್ ಹೇಳಿದ್ದಾರೆ.

ಪ್ರಶ್ನೋತ್ತರ



ಪ್ರಮೋದ ಶ್ರೀಕಾಂತ ದೈತೋಟ

ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ವೆಂಕಟ ಶಿವ, ಬೆಂಗಳೂರು

• ಪ್ರಶ್ನೆ: ನಾನು ಕಳೆದ ಕೆಲವು ತಿಂಗಳಿನಿಂದ ಎಫ್‌ಆ್ಯಂಡ್‌ಒ ವ್ಯವಹಾರದಲ್ಲಿ ತೊಡಗಿದ್ದೇನೆ. ಕಡಿಮೆ ಬಂಡವಾಳ ಸಾಕಾಗುವ ಆಪ್ಷನ್‌ಗಳನ್ನು ಖರೀದಿಸುತ್ತಿದ್ದೇನೆ. ಮಾರುಕಟ್ಟೆಯ ಗತಿಯ ಅನುಸಾರ ಸಹಜವಾಗಿ ಬೆಲೆ ಏರಿಳಿತ ಕಂಡಿದ್ದೇನೆ. ಕಾಲ್ ಆಪ್ಷನ್ ಮೌಲ್ಯ ದಿನ ಕಳೆದಂತೆ ಕುಸಿಯುತ್ತಾ ಹೋಗುತ್ತದೆ. ಇದು ಬಹುತೇಕ ಸಂದರ್ಭಗಳಲ್ಲಿ ನಷ್ಟವನ್ನುಂಟು ಮಾಡಿದೆ. ಆದರೆ ಕೆಲವು ಸಂದರ್ಭಗಳಲ್ಲಿ ಹೆಚ್ಚಿನ ಲಾಭವನ್ನೂ ಮಾಡಿಕೊಟ್ಟಿದೆ. ಇದನ್ನು ತಿಂಗಳ ಮೊದಲ ಹಂತದಲ್ಲಿ ಖರೀದಿಸುವುದು ಉತ್ತಮ ಎಂದು ಕೆಲವರು ಹೇಳುತ್ತಾರೆ. ಆದರೆ ಆ ಸಮಯದಲ್ಲಿ ಇದರ ಮೌಲ್ಯ ತುಂಬಾ ಹೆಚ್ಚಿರುತ್ತದೆ. ಹಾಗಾಗಿ ನಷ್ಟ ಹೆಚ್ಚಾಗಬಹುದು ಎಂಬುದು ನನ್ನ ಊಹೆ. ತಿಂಗಳ ಕೊನೆಯಲ್ಲಿ ಖರೀದಿಸಿದರೆ ಬೆಲೆ ಕಡಿಮೆ ಇರುತ್ತದೆ, ಆದರೆ ಕುಸಿತವೂ ಹಾಗೆಯೇ ಮುಂದುವರಿಯುತ್ತದೆ. ನಾನು ಖಾಸಗಿ ಉದ್ಯೋಗದಲ್ಲಿದ್ದೇನೆ. ತಿಂಗಳ ಸಂಬಳದ ತುಸು ಮೊತ್ತವನ್ನು ಈ ವ್ಯವಹಾರಕ್ಕೆ ತೊಡಗಿಸುತ್ತಿದ್ದೇನೆ. ಈಗಿನ ಸನ್ನಿವೇಶದಲ್ಲಿ ನಾವು ಲಾಭ ಗಳಿಸುವುದು ಮರೀಚಿಕೆ ಎಂದು ತೋರುತ್ತಿದೆ. ಕೆಲವೊಮ್ಮೆ ಬ್ರೋಕರೇಜ್ ಮೊತ್ತವೇ ಬಂದ ಲಾಭವನ್ನು ಸರಿದೂಗಿಸಿಬಿಡುತ್ತದೆ. ನನ್ನ ಲಾಭ ಹೆಚ್ಚಿಸಲು ಯಾವ ಕ್ರಮ ಅನುಸರಿಸಬೇಕು?

ಉತ್ತರ: ನಿಮ್ಮ ಈ ಸಮಸ್ಯೆ ಟ್ರೇಡಿಂಗ್ ಮಾಡುವ ಬಹುತೇಕರ ಸಮಸ್ಯೆ. ಇಂದು ಅನೇಕ ಸಣ್ಣ ಹೂಡಿಕೆದಾರರು ಎದುರಿಸುತ್ತಿರುವ ಸ್ಥಿತಿಯನ್ನು 'ಸೆಬಿ' ನಡೆಸಿದ ಅಧ್ಯಯನ ಆಧರಿಸಿ ಉಲ್ಲೇಖಿಸಲಾಗಿದೆ. ಡೆರಿವೇಟಿವ್ ವಿಭಾಗದಲ್ಲಿ ಶೇ 90ಕ್ಕಿಂತ ಅಧಿಕ ಮಂದಿ ಸಣ್ಣ ಹೂಡಿಕೆದಾರರು ತಮ್ಮ ಬಂಡವಾಳ ಕಳೆದುಕೊಂಡಿರುವುದು ಎಲ್ಲರಿಗೂ ಒಂದು ಎಚ್ಚರಿಕೆಯ ಕರೆಗಂಟೆ. ಇದನ್ನು ವೈಯಕ್ತಿಕವಾಗಿ ನಾವು ಸವಾಲಾಗಿ ಸ್ವೀಕರಿಸಿ ಯಶಸ್ಸು ಕಾಣಬೇಕಾದರೆ ಎಚ್ಚರಿಕೆ, ಅಧ್ಯಯನ ಹಾಗೂ ಬುದ್ಧಿವಂತಿಕೆ ಬೇಕು.

ಈ ಕ್ಷೇತ್ರದಲ್ಲಿ ಪಳಗಿದ ಸಾಂಸ್ಥಿಕ ಹೂಡಿಕೆದಾರರ ರೀತಿ ಸಣ್ಣ ಹೂಡಿಕೆದಾರರು ಅನುಭವ ಹೊಂದಿಲ್ಲ, ಪ್ರತಿ ಬಾರಿ ತಮ್ಮ ಹಣವನ್ನು ಲಾಟರಿ ವ್ಯವಹಾರದ ರೀತಿ ಅದೃಷ್ಟ ಪರೀಕ್ಷೆಗೆ ಒಳಪಡಿಸುವುದು, ಹೆಚ್ಚಿನ ಆಸೆ, ಅತಿಯಾದ ವಹಿವಾಟು, ಯಾವುದೇ ರೀತಿಯ ನಿಯಮ ಪಾಲಿಸದಿರುವುದು, ತಮ್ಮ ಸೋಲು-ಗೆಲುವಿನ ಅನುಭವ ದಾಖಲಿಸದೆ ಪ್ರತಿದಿನ ವ್ಯವಹರಿಸುವುದು ಇತ್ಯಾದಿ ಇದಕ್ಕೆ ಕಾರಣ.

ನಾವು ಅಗತ್ಯವಾಗಿ ಮಾಡಬೇಕಾಗಿರುವುದು ಈ ಆಪ್ಷನ್‌ಗಳ ಮೌಲ್ಯದಲ್ಲಿ ಆಗುವ ಬದಲಾವಣೆಗೆ ಕಾರಣವಾಗುವ ವಿವಿಧ ಅಂಶಗಳ ಬಗ್ಗೆ ತಿಳಿವಳಿಕೆ ಹೊಂದುವುದು. ಒಂದೇ ಮಟ್ಟದ ಸ್ಟ್ರೈಕ್ ಮೌಲ್ಯ ಇರುವ ಆಪ್ಷನ್‌ಗಳು ಕೆಲವೊಮ್ಮೆ ತುಂಬಾ ದುಬಾರಿಯಾಗಿಯೂ ಇನ್ನು ಕೆಲವೊಮ್ಮೆ ತೀರಾ ಅಗ್ಗಕ್ಕೂ ಸಿಗಬಹುದು. ಇದಕ್ಕೆ ಕಾರಣವಾಗುವ ಮಾರುಕಟ್ಟೆ ಅಂಶಗಳಾದ ಸಂವೇದನಾಂಶಗಳನ್ನು (ಗ್ರೀಕ್ಸ್) ಗುರುತಿಸಿ, ಖರೀದಿ ಮತ್ತು ಮಾರಾಟ ಮಾಡುವುದರಿಂದ ಬಹುತೇಕ ಸಮಸ್ಯೆಗಳನ್ನು ನಿವಾರಿಸಬಹುದು.

ಆದರೆ ಇಂತಹ ವ್ಯವಹಾರಕ್ಕೆ ಬೇಕಾಗಿರುವುದು ಸೂಕ್ಷ್ಮವಾಗಿ ಮಾರುಕಟ್ಟೆಯನ್ನು ಗಮನಿಸಬೇಕಾದ ಸ್ವಭಾವ. ಮಾರುಕಟ್ಟೆ ಗತಿ (ಏರಿಳಿತ), ಆಪ್ಷನ್ ಮೌಲ್ಯದ ಮೇಲೆ ಯಾವ ರೀತಿಯ ಪರಿಣಾಮ ಬೀರಬಹುದು ಎನ್ನುವ ಅರಿವೂ ಇರಬೇಕು. ಇದಕ್ಕೆಲ್ಲ ತರಬೇತಿಯ ಅಗತ್ಯ ಇರುತ್ತದೆ. ನಮ್ಮ ಸೀಮಿತ ತಿಳಿವಳಿಕೆಯ ಚೌಕಟ್ಟಿನಲ್ಲಿ ವ್ಯವಹರಿಸಿ ನಷ್ಟ ಅನುಭವಿಸುವುದಕ್ಕಿಂತ, ಈ ವ್ಯವಹಾರವನ್ನು ಒಂದು ಅಧ್ಯಯನಶೀಲ ಪ್ರವೃತ್ತಿಯಿಂದ ನೋಡಬೇಕು. ಆಪ್ಷನ್ ಮೌಲ್ಯ ದಿನೇ ದಿನೇ ಕುಸಿಯಲು ಕಾರಣ ಸಮಯದ ಜೊತೆ ನಾವು ಖರೀದಿಸಿದ ಸ್ಟ್ರೈಕ್ ಬೆಲೆಯ ಗುರಿ ತಲಪಲು ಅಸಾಧ್ಯವಾದ ಸನ್ನಿವೇಶ ಎದುರಾದಾಗ ಅದು ತನ್ನ ಆಂತರಿಕ ಮೌಲ್ಯ ಗಳಿಸುವಲ್ಲಿ ವಿಫಲವಾಗುತ್ತದೆ. ಇದು ನಾವು ಕೊಟ್ಟ ಪ್ರೀಮಿಯಂ ಇನ್ನಷ್ಟು ಕುಸಿಯುವಂತೆ ಮಾಡುತ್ತದೆ.

ಆಪ್ಷನ್ ಖರೀದಿದಾರನ ದೃಷ್ಟಿಯಿಂದ ನೋಡಿದರೆ, ಆತನಿಗಿರುವ ಅತಿ ದೊಡ್ಡ ಅಪಾಯವೆಂದರೆ ಆತನ ತಪ್ಪಾದ ಊಹೆ. ಇದರಿಂದ ಕಾಲ ಕ್ಷಯಿಸಿದಂತೆ ಪ್ರೀಮಿಯಂ ಕೂಡಾ ಸಂಪೂರ್ಣವಾಗಿ ನಷ್ಟವಾಗುತ್ತದೆ. ಅಂದರೆ ಮಾರುಕಟ್ಟೆ ನಿರೀಕ್ಷಿತ ದಿಕ್ಕಿನಲ್ಲಿ ಚಲಿಸದಿದ್ದರೆ, ಅಥವಾ ಖರೀದಿಸಿದ ಸ್ಟ್ರೈಕ್ ಬೆಲೆಗೆ ಅನುಗುಣವಾಗಿ ನಿರೀಕ್ಷಿತ ವೇಗದಲ್ಲಿ ಚಲಿಸದಿದ್ದರೆ, ಖರೀದಿಸಿದ ಆಪ್ಷನ್ ಮೌಲ್ಯ ಅಪಾರ ಪ್ರಮಾಣದಲ್ಲಿ ಕಡಿಮೆಯಾಗುತ್ತದೆ. ಹೀಗಾಗಿ ಪ್ರೀಮಿಯಂ ಮಟ್ಟಗಳು ಕೂಡ ಮಾರುಕಟ್ಟೆ ಚಂಚಲತೆ ಎನ್ನುವ ಅಂಶದ ಮೇಲೆ ಅವಲಂಬಿತವಾಗಿರುತ್ತವೆ. ಜಾಗತಿಕ ಆರ್ಥಿಕ ಪರಿಸ್ಥಿತಿ, ಉದ್ಯಮ ಕ್ಷೇತ್ರದ ಬೆಳವಣಿಗೆ, ಕಂಪನಿಯ ವಿಶೇಷ ಸುದ್ದಿಗಳು, ಅಥವಾ ಯುದ್ಧದಂತಹ ಅಂತರರಾಷ್ಟ್ರೀಯ ಘಟನೆಗಳು ಮಾರುಕಟ್ಟೆಯಲ್ಲಿ ಭಯ ಅಥವಾ ಅನಿಶ್ಚಿತತೆಯನ್ನು ಉಂಟುಮಾಡಿದಾಗ ಈ ಚಂಚಲತೆ ಹೆಚ್ಚುತ್ತದೆ. ಮಾರುಕಟ್ಟೆಯನ್ನು ಬಾಧಿಸುವ ಈ ಸುದ್ದಿಗಳ ಪರಿಣಾಮ, ಆಪ್ಷನ್ ಮಾರಾಟ ಮಾಡುವವರು ಖರೀದಿಸುವವರಿಗೆ ಹೆಚ್ಚಿನ ಪ್ರೀಮಿಯಂ ನೀಡುವಂತೆ ಒತ್ತಾಯಿಸಬಹುದು. ಹೀಗಾಗಿ ಮೌಲ್ಯದಲ್ಲಿ ಕ್ಷಿಪ್ರವಾಗಿ ಏರಿತ ಆಗುತ್ತದೆ. ಇದರ ಪರಿಣಾಮ ಅನುಭವ ಇಲ್ಲದ ಮಂದಿ ಹಣ ಕಳೆದುಕೊಳ್ಳುವ ಸಾಧ್ಯತೆಯೇ ಹೆಚ್ಚು. ಆದರೆ ಪರಿಸ್ಥಿತಿ ಸ್ಥಿರವಾದಾಗ ಅಥವಾ ಅಪಾಯದ ವಾತಾವರಣ ಕಡಿಮೆಯಾದಾಗ ಚಂಚಲತೆ ಕುಗ್ಗುತ್ತದೆ; ಇದರಿಂದ ಆಪ್ಷನ್ ಪ್ರೀಮಿಯಂ ಕೂಡ ತ್ವರಿತವಾಗಿ ಕುಸಿಯಬಹುದು. ಈ ಕಾರಣದಿಂದಾಗಿ ಕೆಲವೊಮ್ಮೆ ಊಹೆ ಸರಿಯಾಗಿದ್ದರೂ ಖರೀದಿದಾರರಿಗೆ ನಿರೀಕ್ಷಿತ ಲಾಭ ಸಿಗುವುದಿಲ್ಲ.

ಆದ್ದರಿಂದ ಆಪ್ಷನ್ ವ್ಯವಹಾರವನ್ನು ಮಾಡುವುದೇ ಆದರೆ, ಅದನ್ನು ಅದೃಷ್ಟದ ಆಟವೆಂದು ಪರಿಗಣಿಸದೆ ಇತರ ವ್ಯವಹಾರಗಳಂತೆ ಗಂಭೀರವಾಗಿ ಪರಿಗಣಿಸಬೇಕು. ಮೇಲೆ ತಿಳಿಸಿದ ಮಾಹಿತಿಯಲ್ಲದೆ, ಆರಂಭಿಕ ಹಂತದಲ್ಲಿ ನೇರವಾಗಿ ಹಣ ಹೂಡುವ ಮೊದಲು ಬ್ರೋಕರ್ ಜಾಲತಾಣದಲ್ಲಿ ಇರುವ ಪೇಪರ್ ಟ್ರೇಡಿಂಗ್ ಸೌಲಭ್ಯದ ಮೂಲಕ ಅಭ್ಯಾಸ ಮಾಡುವುದು ಉತ್ತಮ. ಈ ರೀತಿ ಮಾಡಿದ ಪ್ರತಿ ಟ್ರೇಡ್ ನಂತರ ಲಾಭ ಏಕೆ ಬಂದಿದೆ, ನಷ್ಟ ಏಕೆ ಸಂಭವಿಸಿದೆ ಎಂಬುದನ್ನು ವಿಶ್ಲೇಷಿಸುವ ಅಭ್ಯಾಸ ಬೆಳೆಸಿಕೊಳ್ಳಬೇಕು. ಕೆಲವೊಮ್ಮೆ ಹತ್ತು ವ್ಯವಹಾರಗಳಲ್ಲಿ ಅಷ್ಟರಲ್ಲೂ ಲಾಭವಾದರೂ, ಅದರ ಹಿಂದಿನ ಕಾರಣ ಅರ್ಥಮಾಡಿಕೊಳ್ಳದಿದ್ದರೆ ಅದು ದೀರ್ಘಾವಧಿಯಲ್ಲಿ ನಿಮಗೆ ನಿರ್ಧಾರ ಕೈಗೊಳ್ಳುವಲ್ಲಿ ನೆರವಾಗಲಾರದು. ಷೇರು ಮಾರುಕಟ್ಟೆ ಅಥವಾ ಡೆರಿವೇಟಿವ್ ವ್ಯವಹಾರದಲ್ಲಿ ಲಾಭವು ಅದೃಷ್ಟದಿಂದ ಬರುವುದಿಲ್ಲ; ಪೂರಕ ಮಾಹಿತಿ, ಅನುಭವ, ನಿಯಮಿತ ಶಿಸ್ತಿನ ಅಭ್ಯಾಸ ಮತ್ತು ಅಪಾಯ ನಿರ್ವಹಣೆಯ ಸಮತೋಲನದಿಂದ ಮಾತ್ರ ಸ್ಥಿರ ಯಶಸ್ಸು ಸಾಧ್ಯವಾಗುತ್ತದೆ.

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-560001.
ಇ-ಮೇಲ್: businessdesk@prajavani.co.in

'ಜೆಪ್ಟೊ'ದಲ್ಲಿ ನಂತರ ಪಾವತಿ ಸೌಲಭ್ಯ

zepto

ನವದೆಹಲಿ (ಪಿಟಿಐ): ಮನೆಬಳಕೆ ಉತ್ಪನ್ನ, ದಿನಸಿ ಸಾಮಗ್ರಿಗಳನ್ನು ಗ್ರಾಹಕರ ಬಳಿಗೆ ತ್ವರಿತವಾಗಿ ತಲುಪಿಸುವ ಜೆಪ್ಟೊ, ಬಿಲ್ ಮೊತ್ತವನ್ನು ನಂತರದಲ್ಲಿ ಪಾವತಿಸುವ ಸೌಲಭ್ಯ ಕಲ್ಪಿಸಿದೆ.

ಉತ್ಪನ್ನಗಳನ್ನು ತ್ವರಿತವಾಗಿ ಗ್ರಾಹಕರಿಗೆ ತಲುಪಿಸುವ ಕ್ವಿಕ್-ಕಾಮರ್ಸ್ ವಲಯವು ಖರೀದಿ ಸಂದರ್ಭದಲ್ಲಿ ಗ್ರಾಹಕರು ಎದುರಿಸುವ ಸಮಸ್ಯೆಗಳನ್ನು ಪರಿಹರಿಸುವ ಹಾಗೂ ಗ್ರಾಹಕರಿಗೆ ಹೆಚ್ಚು ಜಾಣ್ಮೆಯಿಂದ ಸೇವೆ ಒದಗಿಸುವ ಕಡೆಗೂ ವಿಸ್ತರಿಸುತ್ತಿದೆ ಎಂದು ಕಂಪನಿ ಹೇಳಿದೆ.

'ಪೇ ಲೇಟರ್' (ನಂತರದಲ್ಲಿ ಪಾವತಿ ಮಾಡುವುದು) ಸೌಲಭ್ಯವು ಗ್ರಾಹಕರಿಗೆ 15 ದಿನಗಳ ಬಡ್ಡಿರಹಿತ ಪಾವತಿ ಅವಕಾಶ ಒದಗಿಸಲಿದೆ. ಇದು ಜೆಪ್ಟೊ ಆ್ಯಪ್ ಮೂಲಕವೇ ಲಭ್ಯವಾಗಲಿದೆ. ಇದನ್ನು ಬಳಸಿ ಗ್ರಾಹಕರು ₹10 ಸಾವಿರದವರೆಗಿನ ಉತ್ಪನ್ನಗಳನ್ನು ಖರೀದಿಸಬಹುದು.

'ಇದು ಈಗ ಒಂದಿಷ್ಟು ಗ್ರಾಹಕರಿಗೆ ಲಭ್ಯವಾಗಿದೆ. ಇದು ಶೀಘ್ರದಲ್ಲಿಯೇ ಎಲ್ಲರಿಗೂ ಲಭ್ಯವಾಗುವಂತೆ ಮಾಡಲಾಗುವುದು' ಎಂದು ಜೆಪ್ಟೊ ಸಹ ಸಂಸ್ಥಾಪಕ ಕೈವಲ್ಯ ವೊಹ್ರಾ ಹೇಳಿದ್ದಾರೆ.

ಐಪಿಒಗೆ ದಾಖಲೆ ಸಲ್ಲಿಸಿದ ಮಣಿಪಾಲ್ ಹೆಲ್ತ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾರ್ವಜನಿಕರಿಗೆ ಷೇರು ಮಾರಾಟ (ಐಪಿಒ) ಮಾಡುವ ಮೂಲಕ ₹8 ಸಾವಿರ ಕೋಟಿ ಬಂಡವಾಳ ಸಂಗ್ರಹಿಸಲು ಮಣಿಪಾಲ್ ಹೆಲ್ತ್ ಎಂಟರ್‌ಪ್ರೈಸಸ್ ಲಿಮಿಟೆಡ್ ಮುಂದಾಗಿದೆ. ಕಂಪನಿಯು ದೇಶದ ಆರೋಗ್ಯಸೇವಾ ವಲಯದಲ್ಲಿ ಮುಂಚೂಣಿ ಸ್ಥಾನ ಹೊಂದಿದೆ.

ಐಪಿಒ ಕುರಿತ ಕರಡು ದಾಖಲೆಗಳನ್ನು (ಡಿಎಚ್‌ಆರ್‌ಪಿ) ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಗೆ (ಸೆಬಿ) ಕಂಪನಿ ಸಲ್ಲಿಸಿದೆ.

ಆಫರ್ ಫಾರ್ ಸೇಲ್ (ಒಎಫ್‌ಎಸ್) ಮೂಲಕ 4.32 ಕೋಟಿ ಈಕ್ವಿಟಿ ಷೇರುಗಳನ್ನು ಮಾರಾಟ ಮಾಡಲಾಗುವುದು. ಪ್ರತಿ ಷೇರಿನ ಮುಖಬೆಲೆ ₹2 ಇರಲಿದೆ. ಈ ಐಪಿಒ ಹಂಚಿಕೆಯಿಂದ ಬರುವ ಬಂಡವಾಳವನ್ನು ಸಾಲ ಮರುಪಾವತಿ, ಮುಂಗಡ ಪಾವತಿ ಮಾಡಲು ಸೇರಿದಂತೆ ಕಂಪನಿಯ ಬೆಳವಣಿಗೆಯ ಉದ್ದೇಶಕ್ಕೆ ಬಳಸಿಕೊಳ್ಳಲಾಗುವುದು ಎಂದು ಕಂಪನಿ ಪ್ರಕಟಣೆಯಲ್ಲಿ ತಿಳಿಸಿದೆ.

ಕಂಪನಿಯು ದೇಶದ 14 ರಾಜ್ಯಗಳು ಹಾಗೂ ಒಂದು ಕೇಂದ್ರಾಡಳಿತ ಪ್ರದೇಶದಲ್ಲಿ ಆಸ್ಪತ್ರೆಗಳನ್ನು ಹೊಂದಿದೆ.

ಮುಂಬೈ ಧಾರಣೆ (ಶೇಂಗಾ)

24-03-2026	
ಜಾವಾ 70/80(ಹೊಸ)	11400-11500
ಜಾವಾ 80/90(ಹೊಸ)	10700-10800
ದಪ್ಪ ಮಧ್ಯಪ್ರದೇಶ (ಹೊಸ)	8400-8500
ದಪ್ಪ ಗುಜರಾತ್ (ಹೊಸ)	9700-9800
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1780 (1790)
ಒಂದು ವಾರದ ಡೆಲಿವರಿ	1775 (1785)
ಪಾಮ್ ವಾರದ ಡೆಲಿವರಿ	1438 (1438)
ಸೂರ್ಯಕಾಂತಿ ಎಣ್ಣೆ ಕಚ್ಚಾ	1595 (1600)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,38,700 (1,41,000)
ಬೆಳ್ಳಿ ಕೆ.ಜಿಗೆ	2,25,000 (2,25,000)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಅಡಿಕೆ ಧಾರಣೆ

ಸಾಗರ		ಗೊರಬಲು	19100-38099	ಹೊಸ	26000-46000
ಬಿಳಿಗೋಟು	31211-32660	**ಶಿರಸಿ**		**ಯಲ್ಲಾಪುರ**	
ಚಾಲಿ	38969 -42899	ಬೆಟ್ಟೆ	40799-50611	ಆಪಿ	62395-65699
ಕೋಕ	31999-31999	ಬಿಳಿಗೋಟು	28200-40799	ಬಿಳಿಗೋಟು	15612-42311
ರಾಶಿ	50670-50670	ಚಾಲಿ	44899-48599	ಚಾಲಿ	39009-49301
ಶಿವಮೊಗ್ಗ		ಕೆಂಪುಗೋಟು	29211-37218	ಕೋಕ	12909-34599
ಸರಕು	54859-92550	ರಾಶಿ	50509-53898	ಕೆಂಪುಗೋಟು	16000-39799
ಬೆಟ್ಟೆ	52109-63109	**ಪುತ್ತೂರು**		ರಾಶಿ	49719-58690
ರಾಶಿ	47666-54409	ಕೋಕ	20000-33500	ತಟ್ಟಿಬೆಟ್ಟೆ	38972-51315

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)

ಶೇಂಗಾ (ರಿಫೈನ್ಡ್)	₹1770 (1760)
ಸೋಯಾ (ರಿಫೈನ್ಡ್)	₹1550 (1505)
ಸೂರ್ಯಕಾಂತಿ (ರಿಫೈನ್ಡ್)	₹1730 (1735)
ಪಾಮೋಲಿನ್	₹1440 (1445)

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹19000-19000
ದಾವಣಗೆರೆ	₹12095-12095

ಸ್ವಿಗ್ಗಿಯಿಂದ ಪ್ಲ್ಯಾಟ್‌ಫಾರ್ಮ್ ಶುಲ್ಕ ಹೆಚ್ಚಳ

ನವದೆಹಲಿ (ಪಿಟಿಐ): ಹೋಟೆಲ್‌ಗಳಿಂದ ಊಟ, ತಿಂಡಿ-ತಿನಿಸುಗಳನ್ನು ಗ್ರಾಹಕರ ಮನೆ ಬಾಗಿಲಿಗೆ ತಲುಪಿಸುವ ಸ್ವಿಗ್ಗಿ ಕಂಪನಿಯು ತನ್ನ ಪ್ಲ್ಯಾಟ್‌ಫಾರ್ಮ್ ಶುಲ್ಕವನ್ನು ₹17.58ಕ್ಕೆ ಹೆಚ್ಚಿಸಿದೆ. ಪ್ರತಿಸ್ಪರ್ಧಿ ಕಂಪನಿಯಾದ ಜೊಮಾಟೊ ಈಚೆಗೆ ತನ್ನ ಪ್ಲ್ಯಾಟ್‌ಫಾರ್ಮ್ ಶುಲ್ಕ ಹೆಚ್ಚಳ ಮಾಡಿದೆ.

ಸ್ವಿಗ್ಗಿ ಕಂಪನಿಯು ಕಳೆದ ವರ್ಷದ ಸೆಪ್ಟೆಂಬರ್‌ನಲ್ಲಿಯೂ ಶುಲ್ಕ ಹೆಚ್ಚಳ ಮಾಡಿತ್ತು. ಕಂಪನಿಯ ಈಗಿನ ಪ್ಲ್ಯಾಟ್‌ಫಾರ್ಮ್ ಶುಲ್ಕ ₹17.58 ಜಿಎಸ್‌ಟಿಯನ್ನು ಕೂಡ ಒಳಗೊಂಡಿದೆ.

ಕಂಪನಿಗಳು ತಮ್ಮ ಕಾರ್ಯಾಚರಣೆ ವೆಚ್ಚ, ತಂತ್ರಜ್ಞಾನ ನಿರ್ವಹಣಾ ವೆಚ್ಚ, ಗ್ರಾಹಕ ಸೇವೆಗಳಿಗೆ ಆಗುವ ವೆಚ್ಚವನ್ನು ನಿಭಾಯಿಸಲು ಪ್ಲ್ಯಾಟ್‌ಫಾರ್ಮ್ ಶುಲ್ಕವನ್ನು ವಿಧಿಸುತ್ತವೆ. ಇದಲ್ಲದೆ ಗ್ರಾಹಕರು ರೆಸ್ಟೊರೆಂಟ್ ಶುಲ್ಕ ಹಾಗೂ ಮನೆಗೆ ತಲುಪಿಸಿದ್ದಕ್ಕೆ ಪ್ರತ್ಯೇಕ ಶುಲ್ಕವನ್ನು ಪಾವತಿಸಬೇಕಾಗುತ್ತದೆ.



ರಾಧಾ ಭಗವತಿ

ಏ.3ಕ್ಕೆ 'ನಾನು ಕರುಣಾಕರ' ತೆರೆಗೆ

ಆರ್ಯನ್ ತೇಜಸ್ ನಟಿಸಿ, ನಿರ್ದೇಶಿಸಿರುವ 'ನಾನು ಕರುಣಾಕರ' ಚಿತ್ರದ ಟ್ರೇಲರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಅಪ್ಪ–ಮಗನ ಬಾಂಧವ್ಯದ ಕಥೆ ಹೊಂದಿರುವ ಚಿತ್ರ ಏ.3ರಂದು ತೆರೆಗೆ ಬರಲಿದೆ.

'ನಾನು ರಂಗಭೂಮಿ ಹಿನ್ನೆಲೆಯಿಂದ ಬಂದವನು. ಈ ಹಿಂದೆ 'ಪಾರ್ಕ್ ರೋಡ್ 100 ರೂಪಾಯಿ' ಚಿತ್ರ ನಿರ್ದೇಶಿಸಿದ್ದೆ. ಇದು ಎರಡನೆ ಚಿತ್ರ. ಪ್ರತಿಯೊಬ್ಬರ ಜೀವನಕ್ಕೂ ಬೆಸೆದುಕೊಳ್ಳುವಂಥ ಕಥೆಯಿದೆ. ಅಪ್ಪ ಮಗನ ಬಾಂಧವ್ಯದ ಜತೆಗೆ ಗಂಡ ಹೆಂಡತಿಯ ಸಂಬಂಧದ ಸುತ್ತ ಕಥೆ ಸಾಗುತ್ತದೆ. ಸಂಪೂರ್ಣ ಕೌಟುಂಬಿಕ ಕಥಾಹಂದರ ಹೊಂದಿರುವ ಹಾಸ್ಯಮಯ ಚಿತ್ರ' ಎಂದರು ನಿರ್ದೇಶಕ.

ನಮನ್ ನಾರಾಯಣ್, ವೈಭವ್ ಸುರೇಶ್ ಬಂಡವಾಳ ಹೂಡಿದ್ದಾರೆ. ರಾಧಾ ಭಗವತಿ ಚಿತ್ರದ ನಾಯಕಿ. ಮಾಸ್ಟರ್ ಭವೀಶ್, ಕರಿಸುಬ್ಬು, ಎಂ.ಕೆ. ಮಠ, ಬಿ.ಎಂ. ವೆಂಕಟೇಶ ಮುಂತಾದವರು ಚಿತ್ರದಲ್ಲಿದ್ದಾರೆ. ಮೈಸೂರು, ಮೇಲುಕೋಟೆ ಹಾಗೂ ಬೆಂಗಳೂರಿನ ಸುತ್ತಮುತ್ತ ಚಿತ್ರೀಕರಿಸಲಾಗಿದೆ.

ಸಿನಿ ಸಮ್ಮಾನಕ್ಕೆ ಸಿನಿಮಾಗಳ ಆಹ್ವಾನ



4ನೇ ಆವೃತ್ತಿ

ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ

'ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ'-ಇದು ಚಂದನವನದ ಪ್ರತಿಭೆಗಳನ್ನು ಗುರುತಿಸುವ ಹಾಗೂ ನಮ್ಮ ಶ್ರೀಮಂತ ಸಿನಿಮಾ ಪರಂಪರೆಯನ್ನು ಆಚರಿಸುವ, ಸಂಭ್ರಮಿಸುವ, ಬೆಸೆಯುವ ವೇದಿಕೆ. ಇಂತಹ ವೇದಿಕೆ ಇದೀಗ ನಾಲ್ಕನೇ ಆವೃತ್ತಿಯನ್ನು ಆಯೋಜಿಸಲು ಸಜ್ಜಾಗುತ್ತಿದೆ.

ಅಸಾಧಾರಣ ಪ್ರತಿಭೆಗಳನ್ನು ಪ್ರಶಂಸಿಸಿ, ಕನ್ನಡ ಚಿತ್ರರಂಗದ ಬೆಳವಣಿಗೆಗೆ ಉತ್ತೇಜನ ನೀಡುತ್ತಾ ಕಳೆದ ಮೂರು ಆವೃತ್ತಿಗಳಲ್ಲಿ ಎಲ್ಲರೂ ಮೆಚ್ಚುವಂತಹ ವರ್ಣರಂಜಿತ, ಅದ್ದೂರಿ, ಅರ್ಥಗರ್ಭಿತ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ನಾಲ್ಕನೇ ಆವೃತ್ತಿಗೆ 2025ರಲ್ಲಿ ತೆರೆಕಂಡ ಸಿನಿಮಾಗಳನ್ನು ಪರಿಗಣಿಸಲಾಗುವುದು. ಈ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡುವ ಮೂಲಕ ಚಿತ್ರತಂಡಗಳು ನೋಂದಣಿ ಮಾಡಿಕೊಂಡು ಸಿನಿಮಾಗಳನ್ನು ಸಲ್ಲಿಸಬಹುದಾಗಿದೆ. ನೋಂದಣಿಗೆ ಏಪ್ರಿಲ್ 10 ಕೊನೆಯ ದಿನ. ಒಟ್ಟು 26 ವಿಭಾಗಗಳಲ್ಲಿ ಪ್ರಶಸ್ತಿಗಳು ಇರಲಿವೆ.




ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನದ ಮೂರನೇ ಆವೃತ್ತಿ ಕಾರ್ಯಕ್ರಮದಲ್ಲಿ ನಟಿ ರಾಧಿಕಾ ನಾರಾಯಣ್ ತಂಡದಿಂದ ನೃತ್ಯ

ಸೆಟ್ಟೇರಿದ ರಾಜವರ್ಧನ್ ಹೊಸ ಚಿತ್ರ

ರಾಜವರ್ಧನ್ ನಾಯಕನಾಗಿ ನಟಿಸುತ್ತಿರುವ ಇನ್ನೂ ಹೆಸರಿಡದ ಚಿತ್ರವೊಂದು ಇತ್ತೀಚೆಗಷ್ಟೇ ಸೆಟ್ಟೇರಿದೆ. ಪ್ಯಾನ್ ಇಂಡಿಯಾ ಮಟ್ಟದ ಸಿನಿಮಾ ಇದಾಗಿದ್ದು, ಕನ್ನಡ, ತಮಿಳು ಸೇರಿದಂತೆ ಹಲವು ಭಾಷೆಗಳಲ್ಲಿ ನಿರ್ಮಾಣಗೊಳ್ಳಲಿದೆ.

'ನಿರ್ದೇಶಕ ಸೇರಿದಂತೆ ಚಿತ್ರತಂಡದ ಬಗ್ಗೆ ಶೀಘ್ರದಲ್ಲಿಯೇ ಸಂಪೂರ್ಣ ಮಾಹಿತಿ ನೀಡುತ್ತೇವೆ. ಇತ್ತೀಚೆಗಷ್ಟೇ ಬೆಂಗಳೂರಿನಲ್ಲಿಯೇ ಸಿನಿಮಾ ಮುಹೂರ್ತ ನೆರವೇರಿದೆ. ಏಪ್ರಿಲ್‌ನಿಂದ ಚಿತ್ರೀಕರಣ ಪ್ರಾರಂಭವಾಗಲಿದೆ. ಕಳೆದ ನಾಲ್ಕು ವರ್ಷಗಳಿಂದ ಒಂದು ತಂಡ ಈ ಚಿತ್ರಕ್ಕಾಗಿ ಕೆಲಸ ಮಾಡಿದೆ. ನನ್ನ ವೃತ್ತಿಜೀವನಕ್ಕೆ ಹೊಸ ತಿರುವು ನೀಡುವ ಚಿತ್ರ ಇದಾಗಲಿದೆ ಎಂದು ಭಾವಿಸಿರುವೆ' ಎನ್ನುತ್ತಾರೆ ರಾಜವರ್ಧನ್.

'ಬಿಚ್ಚುಗತ್ತಿ' ಚಿತ್ರದಿಂದ 'ಗಜರಾಮ'ವರೆಗೂ ಮಾಡಿರುವ ಎಲ್ಲಾ ಸಿನಿಮಾಗಳು ಒಂದೊಂದು ಬಗೆಯಲ್ಲಿ ಪಾಠ ಹೇಳಿಕೊಟ್ಟಿವೆ. ನಮ್ಮದೇ ನಿರ್ಮಾಣ ಸಂಸ್ಥೆಯಿಂದ 'ಜಾವಾ' ಚಿತ್ರ ಸೆಟ್ಟೇರಿದೆ. ಅದರಲ್ಲಿ ರಾಗಿಣಿ ಜತೆ ನಟಿಸುತ್ತಿದ್ದೇನೆ. ಈ ಚಿತ್ರವನ್ನು ಹಲವು ಭಾಷೆಗಳಲ್ಲಿ ನಿರ್ಮಾಣ ಮಾಡುತ್ತಿದ್ದೇವೆ. ಬೇರೆ ಭಾಷೆಯ ನಿರ್ಮಾಣ ಸಂಸ್ಥೆಯಾಗಿರುವುದರಿಂದ ಅವರ ಕಡೆಯಿಂದಲೇ ಉಳಿದ ಮಾಹಿತಿಗಳು ಅಧಿಕೃತವಾಗಿ ಲಭ್ಯವಾಗಲಿದೆ' ಎಂದರು.



ರಾಜವರ್ಧನ್

'ಶಿಲ್ಪಾ ಶ್ರೀನಿವಾಸ್'ನಲ್ಲಿ ಅಭಿಜಿತ್



ಅಭಿಜಿತ್

ಹಾರರ್, ಥ್ರಿಲ್ಲರ್ ಕಥಾಹಂದರ ಹೊಂದಿರುವ 'ಶಿಲ್ಪಾ ಶ್ರೀನಿವಾಸ್' ಚಿತ್ರದಲ್ಲಿ ನಟ ಅಭಿಜಿತ್ ವಿಶೇಷ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ರಾಜೀವ್ ಕೃಷ್ಣ ನಿರ್ದೇಶನದ ಚಿತ್ರ ಬಹುತೇಕ ಚಿತ್ರೀಕರಣ ಮುಗಿಸಿ ಪೋಸ್ಟ್ ಪ್ರೊಡಕ್ಷನ್ ಹಂತದಲ್ಲಿದೆ.

'ಸಿನಿಮಾ ಉದ್ಯಮದಲ್ಲಿನ ಹುಳುಕು, ತೊಡಕುಗಳನ್ನು ಎತ್ತಿ ತೋರಿಸುವ ಕಥಾವಸ್ತುವನ್ನು ಈ ಚಿತ್ರ ಒಳಗೊಂಡಿದೆ. ಸೆನ್ಸಾರ್ ಹಂತದಲ್ಲಿ ಸಿನಿಮಾದಲ್ಲೊಂದು ವಿಶೇಷ ಹಾಡು ಬೇಕು ಅನ್ನಿಸಿತು. ಹೀಗಾಗಿ ಚಿತ್ರದಲ್ಲಿ ಒಂದು ಹಾಡು ಸೇರಿಸಿದ್ದು, ಅದರಲ್ಲಿ ಅಭಿಜಿತ್ ಹೆಜ್ಜೆ ಹಾಕಿದ್ದಾರೆ. 'ಈ ಸಿನಿಮಾ ಅಂತೀವಲ್ಲಾ ಅದು ದೊಡ್ಡ...' ಎಂಬ ಹಾಡಿಗೆ ಪ್ರತಾಪ್ ಭಟ್ ಅವರ ಸಾಹಿತ್ಯವಿದೆ. ಅನಿರುದ್ಧ ಶಾಸ್ತ್ರಿ ಸಂಗೀತ ಸಂಯೋಜಿಸಿ, ಹಾಡಿದ್ದಾರೆ. ಚಿತ್ರದ ಉಳಿದೆಲ್ಲ ಕೆಲಸಗಳು ಮುಗಿದಿದ್ದು, ಮೇ ತಿಂಗಳ ಕೊನೆಯಲ್ಲಿ ಚಿತ್ರವನ್ನು ಬಿಡುಗಡೆ ಮಾಡುವ ಯೋಜನೆಯಿದೆ' ಎಂದರು ನಿರ್ದೇಶಕ.

ಈ ಹಿಂದೆ 'ಉಪೇಂದ್ರ' ಚಿತ್ರ ನಿರ್ಮಾಣ ಮಾಡಿದ್ದ ಶಿಲ್ಪಾ ಶ್ರೀನಿವಾಸ್ ತಮ್ಮದೇ ಹೆಸರಿನ ಶೀರ್ಷಿಕೆ ಹೊಂದಿರುವ ಚಿತ್ರದ ಪ್ರಮುಖ ಪಾತ್ರಕ್ಕೆ ಬಣ್ಣ ಹಚ್ಚಿದ್ದಾರೆ. ಸ್ನೇಹಾಲಯಂ ಕ್ರಿಯೇಷನ್ಸ್ ಚಿತ್ರವನ್ನು ನಿರ್ಮಾಣ ಮಾಡುತ್ತಿದೆ. ಶೋಭರಾಜ್, ನಾಗೇಂದ್ರ ಅರಸ್, ಶಂಖನಾದ ಆಂಜಿನಪ್ಪ, ಅನ್ನಪೂರ್ಣ ಮುಂತಾದವರು ಚಿತ್ರದಲ್ಲಿದ್ದಾರೆ. ಪ್ರಮೋದ್ ಭಾರತೀಯ ಛಾಯಾಚಿತ್ರಗ್ರಹಣ, ಡಿ.ಮಲ್ಲಿ ಸಂಕಲನವಿದೆ.



ಚಿತ್ರದ ಪೋಸ್ಟರ್

ಮಹಿಳಾ ಮೀಸಲಾತಿ ಕಾಯ್ದೆ ಅನುಷ್ಠಾನ • ಚರ್ಚೆ– ವಿರೋಧ ಪಕ್ಷಗಳ ಒತ್ತಾಯ

ಸರ್ವಪಕ್ಷ ಸಭೆ: ಕೇಂದ್ರ ಸರ್ಕಾರಕ್ಕೆ ಪತ್ರ

ನವದೆಹಲಿ(ಪಿಟಿಐ): ಸಂಸತ್ ಮತ್ತು ವಿಧಾನಸಭೆಗಳಲ್ಲಿ ಮಹಿಳೆಯರಿಗೆ ಮೀಸಲಾತಿ ಕಲ್ಪಿಸುವ ಕಾನೂನು ಅನುಷ್ಠಾನಕ್ಕೆ ಸಂಬಂಧಿಸಿದ ಪ್ರಕ್ರಿಯೆಗಳ ಕುರಿತು ವ್ಯಾಪಕ ಚರ್ಚೆ ಅಗತ್ಯ ಇದೆ. ಇದಕ್ಕಾಗಿ ಸರ್ವಪಕ್ಷಗಳ ಸಭೆ ಕರೆಯುವಂತೆ ಹಲವು ವಿರೋಧ ಪಕ್ಷಗಳು ಕೇಂದ್ರ ಸರ್ಕಾರವನ್ನು ಮಂಗಳವಾರ ಒತ್ತಾಯಿಸಿವೆ.

ಈ ಕುರಿತು ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಅವರಿಗೆ ವಿರೋಧ ಪಕ್ಷಗಳ ನಾಯಕರು ಪತ್ರ ಬರೆದಿದ್ದಾರೆ. ಐದು ರಾಜ್ಯಗಳ ವಿಧಾಸಭೆಗಳಿಗೆ ನಡೆಯಲಿರುವ ಚುನಾವಣೆಯು ಏಪ್ರಿಲ್‌ನಲ್ಲಿ ಪೂರ್ಣಗೊಳ್ಳಲಿದ್ದು, ಆ ನಂತರ ಸರ್ವಪಕ್ಷ ಸಭೆ ನಡೆಸಬೇಕು ಎಂದು ಪತ್ರದಲ್ಲಿ ವಿವರಿಸಿದ್ದಾರೆ.

ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಲೆಟರ್‌ಹೆಡ್‌ನಲ್ಲಿ ಈ ಪತ್ರ ಬರೆಯಲಾಗಿದ್ದು, ಟಿಎಂಸಿ ಹೊರತುಪಡಿಸಿ ಇತರ ಹಲವು ವಿರೋಧ ಪಕ್ಷಗಳ ನಾಯಕರು ಸಹಿ ಹಾಕಿದ್ದಾರೆ. ಕಾಂಗ್ರೆಸ್ ಮುಖಂಡ ಜೈರಾಮ್ ರಮೇಶ್ ಅವರು ಈ ಪತ್ರವನ್ನು ಸಂಸತ್ ಭವನದಲ್ಲಿ ಸಚಿವ ರಿಜಿಜು ಅವರಿಗೆ ಸಲ್ಲಿಸಿದ್ದಾರೆ.

ಲೋಕಸಭಾ ಹಾಗೂ ವಿಧಾನಸಭಾ ಕ್ಷೇತ್ರಗಳ ಮರುವಿಂಗಡಣೆ ಪ್ರಕ್ರಿಯೆ ಪೂರ್ಣಗೊಳ್ಳುವುದಕ್ಕೂ ಮೊದಲೇ ಮಹಿಳಾ ಮೀಸಲಾತಿಗೆ ಸಂಬಂಧಿಸಿದ ಕಾಯ್ದೆಯನ್ನು ಜಾರಿಗೊಳಿಸಲು ಯೋಜಿಸಲಾಗಿದೆ ಎಂದು ಕೇಂದ್ರ ಸರ್ಕಾರ ಹೇಳಿದೆ. ಇದರ ಬೆನ್ನಲ್ಲೇ, ವಿರೋಧ ಪಕ್ಷಗಳು ಕೇಂದ್ರಕ್ಕೆ ಪತ್ರ ಬರೆದಿವೆ.

'ನಾರಿ ವಂದನಾ ಅಧಿನಿಯಮ–2023 ಜಾರಿ ಕುರಿತು ಚರ್ಚಿಸಲು ಪ್ರಧಾನಿ ನರೇಂದ್ರ ಮೋದಿ ಅಧ್ಯಕ್ಷತೆಯಲ್ಲಿ ಸರ್ವಪಕ್ಷ ಸಭೆ ಕರೆಯುವಂತೆ ಕೋರಿ ಮಾರ್ಚ್ 16ರಂದು ನಿಮಗೆ ಪತ್ರ ಬರೆಯಲಾಗಿತ್ತು. 2023ರ ಸೆಪ್ಟೆಂಬರ್‌ನಲ್ಲಿ ನಾರಿ ಶಕ್ತಿ ವಂದನಾ ಮಸೂದೆಯನ್ನು ಅಂಗೀಕರಿಸಲಾಗಿತ್ತು. ಈಗ ಈ ಮಸೂದೆಗೆ ಇನ್ನಷ್ಟು ತಿದ್ದುಪಡಿ ತರುವುದಕ್ಕೆ ಸರ್ಕಾರ ಯೋಜಿಸಿದೆ. ಹೀಗಾಗಿ, ಈ ಎಲ್ಲ ವಿಚಾರಗಳ ಬಗ್ಗೆ ಚರ್ಚೆ ಅಗತ್ಯ' ಎಂದು ಸಚಿವ ರಿಜಿಜು ಅವರಿಗೆ ಬರೆದ ಪತ್ರದಲ್ಲಿ ಹೇಳಲಾಗಿದೆ.

ಸಭೆಯಲ್ಲಿ ನಿರ್ಧಾರ: ರಾಜ್ಯಸಭೆಯಲ್ಲಿ ವಿರೋಧ ಪಕ್ಷದ ನಾಯಕರಾಗಿರುವ ಮಲ್ಲಿಕಾರ್ಜುನ ಖರ್ಗೆ ಅವರ ಕಚೇರಿಯಲ್ಲಿ ಮಂಗಳವಾರ ಬೆಳಿಗ್ಗೆ ನಡೆದ ವಿಪಕ್ಷಗಳ ನಾಯಕರ ಸಭೆಯಲ್ಲಿ ಕೇಂದ್ರ ಸರ್ಕಾರಕ್ಕೆ ಪತ್ರ ಬರೆಯುವ ನಿರ್ಧಾರ ತೆಗೆದುಕೊಳ್ಳಲಾಯಿತು.

ಮಲ್ಲಿಕಾರ್ಜುನ ಖರ್ಗೆ, ಸಮಾಜವಾದಿ ಪಕ್ಷದ ರಾಮಗೋಪಾಲ್ ಯಾದವ್, ಎಎಪಿ ನಾಯಕ ಸಂಜಯ ಸಿಂಗ್, ಶಿವಸೇನಾದ(ಯುಬಿಟಿ) ಸಂಜಯ ರಾವುತ್, ಅರವಿಂದ ಸಾವಂತ್, ಸಿಪಿಎಂನ ಜಾನ್ ಬ್ರಿಟ್ಟಾಸ್, ಸಿಪಿಐನ ಪಿ.ಸಂತೋಷಕುಮಾರ್, ಎನ್‌ಸಿಪಿ(ಎಸ್‌ಪಿ)ಯ ಸುಪ್ರಿಯಾ ಸುಳೆ ಹಾಗೂ ಫೌಜಿಯಾ ಖಾನ್, ಜೆಎಂಎಂನ ಮಹುವಾ ಮಾಜಿ, ಜೋಬಾ ಮಾಜಿ, ಆರ್‌ಎಸ್‌ಪಿಯ ಎನ್.ಕೆ.ಪ್ರೇಮಚಂದ್ರನ್, ವಿಸಿಕೆ ನಾಯಕ ಟಿ.ತೊಲಕೊಪ್ಪಿಯನ್, ಐಯುಎಂಎಲ್‌ನ ಇ.ಟಿ.ಮೊಹಮ್ಮದ್ ಬಶೀರ್ ಪತ್ರಕ್ಕೆ ಸಹಿ ಹಾಕಿದ್ದಾರೆ.

ಕ್ಷೇತ್ರ ಮರುವಿಂಗಡಣೆಗೂ ಮೊದಲೇ ಜಾರಿಗೆ ಚಿಂತನೆ

ಲೋಕಸಭೆ ಹಾಗೂ ವಿಧಾನಸಭಾ ಕ್ಷೇತ್ರಗಳ ಮರುವಿಂಗಡಣೆ ಪ್ರಕ್ರಿಯೆ ಪೂರ್ಣಗೊಳ್ಳುವುದಕ್ಕೂ ಮೊದಲೇ ಮಹಿಳಾ ಮೀಸಲಾತಿಗೆ ಸಂಬಂಧಿಸಿದ ಕಾಯ್ದೆಯನ್ನು ಜಾರಿಗೊಳಿಸಲು ಕೇಂದ್ರ ಸರ್ಕಾರ ಮುಂದಾಗಿದೆ ಎಂದು ಮೂಲಗಳು ಹೇಳಿವೆ.

ಹೀಗಾಗಿ, ಈ ವಿಚಾರಕ್ಕೆ ಸಂಬಂಧಿಸಿದ ಎರಡು ಮಸೂದೆಗಳನ್ನು ಪ್ರಸಕ್ತ ಬಜೆಟ್ ಅಧಿವೇಶನದಲ್ಲಿ ಮಂಡಿಸಿ, ಅಂಗೀಕರಿಸಲು ಕೇಂದ್ರ ಸರ್ಕಾರ ಯೋಜಿಸಿದೆ. ನಾರಿ ಶಕ್ತಿ ವಂದನಾ ಅಧಿನಿಯಮ(ಮಹಿಳಾ ಮೀಸಲಾತಿ ಕಾಯ್ದೆ ಎಂದೂ ಕರೆಯಲಾಗುತ್ತದೆ) ತಿದ್ದುಪಡಿ ಮಸೂದೆ ಹಾಗೂ ಕ್ಷೇತ್ರ ಮರುವಿಂಗಡಣೆ ಕಾಯ್ದೆ ತಿದ್ದುಪಡಿಗೆ ಸಂಬಂಧಿಸಿದ ಮಸೂದೆಯನ್ನು ಮಂಡಿಸಲಾಗುತ್ತದೆ.

ಈ ವಿಚಾರವಾಗಿ ಒಮ್ಮತ ಮೂಡಿಸುವ ಪ್ರಯತ್ನದ ಭಾಗವಾಗಿ, ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಎನ್‌ಡಿಎ ಅಂಗಪಕ್ಷಗಳ ನಾಯಕರು ಹಾಗೂ ಕಾಂಗ್ರೆಸ್ ಹೊರತುಪಡಿಸಿ ಇತರ ವಿಪಕ್ಷಗಳ ಸಭಾ ನಾಯಕರೊಂದಿಗೆ ಪ್ರತ್ಯೇಕ ಸಭೆಗಳನ್ನು ನಡೆಸಿದ್ದಾರೆ.

ಪಿ.ವಿ.ಮಿಥುನ್ ರೆಡ್ಡಿ (ವೈಎಸ್‌ಆರ್‌ಸಿಪಿ), ಡಿಂಪಲ್ ಯಾದವ್(ಎಸ್‌ಪಿ), ಸುಪ್ರಿಯಾ ಸುಳೆ (ಎನ್‌ಸಿಪಿ–ಎಸ್‌ಪಿ), ಮನೋಜ್ ಝಾ(ಆರ್‌ಜೆಡಿ) ಹಾಗೂ ಅಸಾದುದ್ದೀನ್ ಒವೈಸಿ(ಎಐಎಂಐಎಂ) ಸೇರಿ ಹಲವು ವಿಪಕ್ಷ ನಾಯಕರು ಸಭೆಯಲ್ಲಿ ಪಾಲ್ಗೊಂಡಿದ್ದರು. ಶಾ ಅವರು ಕಾಂಗ್ರೆಸ್ ನಾಯಕರೊಂದಿಗೆ ಬರುವ ದಿನಗಳಲ್ಲಿ ಸಮಾಲೋಚನೆ ನಡೆಸುವ ಸಾಧ್ಯತೆ ಇದೆ. ಆದರೆ, ಇದೇ ಅಧಿವೇಶನದಲ್ಲಿ ಈ ಮಸೂದೆಯನ್ನು ಮಂಡಿಸುವ ಸಾಧ್ಯತೆಗಳು ಕಡಿಮೆ ಎಂದು ಮೂಲಗಳು ತಿಳಿಸಿವೆ.

ಕೇಂದ್ರದ ನಡೆ ಸ್ವಾಗತಿಸಿದ ಸಂಸದೆಯರು

ಮಹಿಳೆಯರಿಗೆ ಲೋಕಸಭೆ ಮತ್ತು ವಿಧಾನಸಭೆಗಳಲ್ಲಿ ಮೀಸಲಾತಿ ಕಲ್ಪಿಸುವ ಮಸೂದೆಯನ್ನು ಅಧಿವೇಶನದಲ್ಲಿ ಮಂಡಿಸುವ ಕೇಂದ್ರ ಸರ್ಕಾರದ ಉದ್ದೇಶವನ್ನು ವಿವಿಧ ಪಕ್ಷಗಳ ಸಂಸದೆಯರು ಮಂಗಳವಾರ ಸ್ವಾಗತಿಸಿದ್ದಾರೆ.

'ಆಡಳಿತದಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆಯನ್ನು ಈ ಕ್ರಮವು ಮತ್ತಷ್ಟು ಬಲಪಡಿಸಲಿದ್ದು, ದೇಶದ ಅಭಿವೃದ್ಧಿಗೆ ವೇಗ ನೀಡಲಿದೆ' ಎಂದು ಹೇಳಿರುವ ಜೆಡಿಯು ಸಂಸದೆ ಲವ್ಲಿ ಆನಂದ, ಬಿಜೆಪಿ ಸಂಸದೆ ಕಮಲ್ಜೀತ್ ಸೆಹ್ರಾವತ್ ಹಾಗೂ ಸಮಾಜವಾದಿ ಪಕ್ಷದ ಇಕ್ರಾ ಹಸನ್ ಅವರು ಕೇಂದ್ರದ ನಡೆಯನ್ನು ಸ್ವಾಗತಿಸಿದ್ದಾರೆ.

ರಾಜ್ಯದ ಪ್ರಿಯಾಂಕಾಗೆ ಸ್ವರ್ಣ

ಒಳಾಂಗಣ ಅಥ್ಲೆಟಿಕ್ಸ್: ಪೋಲ್‌ವಾಲ್ಟ್‌ನಲ್ಲಿ ಭರಣಿಕಾ ದಾಖಲೆ

ಪ್ರಜಾವಾಣಿ ವಾರ್ತೆ/ಪಿಟಿಐ

ಭುವನೇಶ್ವರ: ಕರ್ನಾಟಕದ ದೂರ ಅಂತರದ ಓಟಗಾರ್ತಿ ಪ್ರಿಯಾಂಕಾ ಸಿ. ಅವರು ಇದೇ ಮೊದಲ ಬಾರಿ ನಡೆಯುತ್ತಿರುವ ರಾಷ್ಟ್ರೀಯ ಒಳಾಂಗಣ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ನಲ್ಲಿ ಮಂಗಳವಾರ ಮಹಿಳೆಯರ 3,000 ಮೀ. ಓಟದಲ್ಲಿ ಚಿನ್ನ ಗೆದ್ದರು. ಪುರುಷರ 60 ಮೀ. ಹರ್ಡಲ್ಸ್‌ನಲ್ಲಿ ಚಿನ್ನದ ಪದಕ ಕರ್ನಾಟಕದ ಕೃಷಿಕ್ ಎಂ. ಅವರ ಪಾಲಾಯಿತು.

ಪ್ರಿಯಾಂಕಾ 9ನಿ.42.05ಸೆ.ಗಳಲ್ಲಿ ಗುರಿತಲುಪಿದರು. ಇದು ಈ ಕೂಟದ ಮೊದಲ ದಿನ ಮಹಿಳಾ ವಿಭಾಗದಲ್ಲಿ ಇತ್ಯರ್ಥಗೊಂಡ ಮೊದಲ ಚಿನ್ನ ಎನಿಸಿತು. ಗುಜರಾತ್‌ನ ಕಾಜಲ್ ಕಾಂಡ್ವಾಡೆ (9:44.01) ಬೆಳ್ಳಿ ಗೆದ್ದರೆ, ಒಡಿಶಾದ ಸುಮಿತಾ ಟಿಗ್ಗಾ (10:22.30) ಕಂಚಿನ ಪದಕ ತಮ್ಮದಾಗಿಸಿಕೊಂಡರು.

60 ಮೀ. ಹರ್ಡಲ್ಸ್ ಓಟವನ್ನು ಕೃಷಿಕ್ 7.71 ಸೆ.ಗಳಲ್ಲಿ ಪೂರೈಸಿದರು. ರಿಲಯನ್ಸ್‌ನ ಪಿ. ರತೀಶ್ (7.84 ಸೆ.) ಮತ್ತು ಮುಹಮ್ಮದ್ ಲಝಾನ್ (ಜೆಎಸ್‌ಡಬ್ಲ್ಯು) ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನ ಪಡೆದರು.

ಪುರುಷರ 800 ಮೀ. ಓಟದಲ್ಲಿ ವಾಯುಪಡೆಯ ಮೊಹಮ್ಮದ್ ಅಫ್ಸಲ್ ನಿರೀಕ್ಷೆಯಂತೆ 1ನಿ.47.86 ಸೆ.ಗಳಲ್ಲಿ ಓಟ ಪೂರೈಸಿ ಮೊದಲಿಗರಾದರು. ಕರ್ನಾಟಕದ ಕಲ್ಯಾಣ್ ಜೆ.ಆರ್. (1:53.98) ಮತ್ತು ಪಶ್ಚಿಮ ಬಂಗಾಳದ ಸಯನ್ ಕರ್ಮಾಕರ್ (1:56.98) ಕ್ರಮವಾಗಿ ಬೆಳ್ಳಿ ಮತ್ತು ಕಂಚಿನ ಪದಕ ಗೆದ್ದರು.

ಮಹಿಳೆಯರ ವಿಭಾಗದ ಶಾಟ್‌ಪಟ್ ಸ್ಪರ್ಧೆಯಲ್ಲಿ ಕರ್ನಾಟಕದ ಮಯೂರಿ ಅರಾದೆ (9.15 ಮೀ.) ಬೆಳ್ಳಿ ಗೆದ್ದರು. ಪಟಿಯಾಲಾದ ರಾಷ್ಟ್ರೀಯ ಶ್ರೇಷ್ಠತಾ ಕೇಂದ್ರದ ರೇಖಾ (15.63 ಮೀ.) ಚಿನ್ನದ ಪದಕ ಗೆದ್ದುಕೊಂಡರು.

ಪೋಲ್‌ವಾಲ್ಟ್‌ನಲ್ಲಿ ಭರಣಿಕಾ ದಾಖಲೆ: ತಮಿಳುನಾಡಿನ ಅನುಭವಿ ಅಥ್ಲೀಟ್ ಭರಣಿಕಾ ಇಳಂಗೋವನ್ ಅವರು ಮಹಿಳೆಯರ ಪೋಲ್‌ವಾಲ್ಟ್ ಸ್ಪರ್ಧೆಯಲ್ಲಿ ನೂತನ ದಾಖಲೆ ಸ್ಥಾಪಿಸಿದರು.

29 ವರ್ಷ ವಯಸ್ಸಿನ ಭರಣಿಕಾ 4.22 ಮೀ. ಎತ್ತರ ಜಿಗಿದರು. ಅವರು ಮೂರು ಬಾರಿಯ ರಾಷ್ಟ್ರೀಯ ಚಾಂಪಿಯನ್ (ಹೊರಾಂಗಣ) ಆಗಿದ್ದಾರೆ. ಈ ಹಿಂದಿನ ಹೊರಾಂಗಣ ರಾಷ್ಟ್ರೀಯ ದಾಖಲೆ 4.21 ಮೀ. ಆಗಿದ್ದು, ಅದನ್ನು 2022ರಲ್ಲಿ ರೋಸಿ ಮೀನಾ ಪೌಲ್‌ರಾಜ್ ಸ್ಥಾಪಿಸಿದ್ದರು.

ದೇಶದಲ್ಲಿ ಇದೇ ಮೊದಲ ಬಾರಿ ರಾಷ್ಟ್ರೀಯ ಒಳಾಂಗಣ ಕೂಟ ನಡೆಯುತ್ತಿರುವ ಕಾರಣ ಒಳಾಂಗಣ ಕೂಟಗಳ ದಾಖಲೆ ಅಧಿಕೃತವಾಗಿ ಲಭ್ಯವಿಲ್ಲ.

ಕೇರಳದ ಬ್ಲೆಸ್ಸಿ ಕುಂಜುಮೋನ್ (3.95 ಮೀ.) ಮತ್ತು ಮರಿಯಾ ಜೈಸನ್ (3.80 ಮೀ.) ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನ ಪಡೆದರು.

ಫಲಿತಾಂಶಗಳು:

ಪುರುಷರು: ಶಾಟ್‌ಪಟ್: ರವಿಕುಮಾರ್ (ಬಿಎಸ್‌ಎಫ್)–1, ಅದೀಶ್ ಜಿ. (ಉತ್ತರಾಖಂಡ)–2, ಬಾಲಾಜಿ (ತಮಿಳುನಾಡು)–3, ದೂರ: 17.17 ಮೀ.

ಲಾಂಗ್‌ಜಂಪ್: ಸರುನ್ ಪಾಯಸಿಂಗ್ (ಒಡಿಶಾ)–1, ಪ್ರವೀಣ್ ಚಿತ್ರವೇಲ್ (ಜೆಎಸ್‌ಡಬ್ಲ್ಯು)–2, ಡೇವಿಡ್ ಪಿ. (ರಾಜಸ್ಥಾನ)–3, ದೂರ: 7.80 ಮೀ.

20 ವರ್ಷದೊಳಗಿನವರು:

ಶಾಟ್‌ಪಟ್: ಓಂಕಾರ್ ನಂದಾ (ಒಡಿಶಾ)–1, ಸಾಯಿ ಕಿರಣ್ (ಎನ್‌ಸಿಒಪಿ)–2, ಹರ್ಷಿತ್ ಗೆಹಲೋತ್ (ಜೆಎಸ್‌ಡಬ್ಲ್ಯು)–3, ದೂರ: 17.77 ಮೀ.

ಮಹಿಳೆಯರು: 3000 ಮೀ. ಓಟ: ಪ್ರಿಯಾಂಕ ಸಿ. (ಕರ್ನಾಟಕ)–1, ಕಾಜಲ್ ಕಾಂಡ್ವಾಡೆ (ಗುಜರಾತ್)–2, ಸುಷ್ಮಿತಾ ಟಿಗ್ಗಾ (ಒಡಿಶಾ)–3, ಕಾಲ: 9ನಿ42.05 ಸೆ.

ಶಾಟ್‌ಪಟ್: ಡೊನಾ ಮರಿಯಾ ಡೊನಿ (ಕೇರಳ)–1, ಖುಷ್ಬೂ(ಹರಿಯಾಣ)–2, ಅಕ್ಷಯಾ ಜಿ.ಆರ್. (ತಮಿಳುನಾಡು)–3, ದೂರ: 13.35 ಮೀ.



ಚಿನ್ನ ಗೆದ್ದ ಕರ್ನಾಟಕದ ಪ್ರಿಯಾಂಕಾ ಸಿ. (ಎಡ) ಹಾಗೂ ಬೆಳ್ಳಿ ಜಯಿಸಿದ ಗುಜರಾತ್‌ನ ಕಾಜಲ್ ಕಾಂಡ್ವಾಡೆ

ದಕ್ಷಿಣ ಆಫ್ರಿಕಾ ಪ್ರವಾಸ: ಭಾರತ ಟಿ20 ತಂಡದಲ್ಲಿ ಅನುಷ್ಕಾ ಹೊಸಮುಖ



ನವದೆಹಲಿ (ಪಿಟಿಐ): ಮಧ್ಯಪ್ರದೇಶದ ಬ್ಯಾಟರ್ ಅನುಷ್ಕಾ ಶರ್ಮಾ ಅವರು ಐದು ಪಂದ್ಯಗಳ ಟಿ20 ಕ್ರಿಕೆಟ್ ಸರಣಿಯನ್ನು ಆಡಲು ದಕ್ಷಿಣ ಆಫ್ರಿಕಾ ಪ್ರವಾಸ ಕೈಗೊಳ್ಳುವ ಭಾರತ ಮಹಿಳಾ ತಂಡಕ್ಕೆ ಮೊದಲ ಬಾರಿ ಆಯ್ಕೆಯಾಗಿದ್ದಾರೆ.

ಏಪ್ರಿಲ್ 17ರಂದು ಪ್ರವಾಸ ಆರಂಭವಾಗಲಿದೆ. ಡರ್ಬನ್, ಜೊಹಾನೆಸ್‌ಬರ್ಗ್ ಮತ್ತು ಬೆನೋನಿಯಲ್ಲಿ ಪಂದ್ಯಗಳು ನಡೆಯಲಿವೆ. ಇಂಗ್ಲೆಂಡ್– ವೇಲ್ಸ್‌ನಲ್ಲಿ ಜೂನ್–ಜುಲೈನಲ್ಲಿ ನಡೆಯಲಿರುವ ಮಹಿಳಾ ಟಿ20 ವಿಶ್ವಕಪ್ ಟೂರ್ನಿಗೆ ಸಿದ್ಧತೆಯಾಗಿ ಈ ಸರಣಿ ಹಮ್ಮಿಕೊಳ್ಳಲಾಗಿದೆ.

2026ರ ಡಬ್ಲ್ಯುಪಿಎಲ್‌ನಲ್ಲಿ ಗುಜರಾತ್ ಜೈಂಟ್ಸ್ ತಂಡದಲ್ಲಿ ಅವಕಾಶ ಗಳಿಸಿದ್ದ ಅನುಷ್ಕಾ ಗಮನಾರ್ಹ ಯಶಸ್ಸು ಗಳಿಸಿದ್ದರು. ಬ್ಯಾಂಕಾಕ್‌ನಲ್ಲಿ ನಡೆದ ರೈಸಿಂಗ್ ಸ್ಟಾರ್ ಆಫ್ ಏಷ್ಯಾ ಕಪ್ ಟೂರ್ನಿಯಲ್ಲಿ ಪಾಲ್ಗೊಂಡಿದ್ದ ಭಾರತ ಎ ತಂಡದಲ್ಲೂ 22 ವರ್ಷ ವಯಸ್ಸಿನ ಆಟಗಾರ್ತಿ ಸ್ಥಾನ ಪಡೆದಿದ್ದರು.

ಆಸ್ಟ್ರೇಲಿಯಾ ಪ್ರವಾಸದಲ್ಲಿ ಟಿ20 ಸರಣಿ ಗೆದ್ದಿದ್ದ ತಂಡದಿಂದ ಸ್ನೇಹ ರಾಣಾ, ಅಮನ್ಜೋತ್ ಕೌರ್, ಜಿ.ಕಮಲಿನಿ ಮತ್ತು ವೈಷ್ಣವಿ ಶರ್ಮಾ ಅವರನ್ನು ಕೈಬಿಡಲಾಗಿದೆ. ಹರ್ಮನ್‌ಪ್ರೀತ್ ಕೌರ್ ನೇತೃತ್ವದ ತಂಡದಲ್ಲಿ ವೇಗದ ಬೌಲರ್ ಕಶ್ವಿ ಗೌತಮ್ ಸಹ ಅವಕಾಶ ಪಡೆದಿದ್ದಾರೆ. ಕಶ್ವೀ ಈ ಹಿಂದೆ ಟೆಸ್ಟ್ ಮತ್ತು ಏಕದಿನ ಪಂದ್ಯಗಳಲ್ಲಿ ಆಡಿದ್ದರು.

15 ಮಂದಿಯ ತಂಡ ಹೀಗಿದೆ: ಹರ್ಮನ್‌ಪ್ರೀತ್ ಕೌರ್ (ನಾಯಕಿ), ಸ್ಮೃತಿ ಮಂಧಾನ (ಉಪ ನಾಯಕಿ), ಶಫಾಲಿ ವರ್ಮಾ, ಜೆಮಿಮಾ ರಾಡ್ರಿಗಸ್, ದೀಪ್ತಿ ಶರ್ಮಾ, ರಿಚಾ ಘೋಷ್ (ವಿಕೆಟ್ ಕೀಪರ್), ಅರುಂಧತಿ ರೆಡ್ಡಿ, ರೇಣುಕಾ ಠಾಕೂರ್, ಕ್ರಾಂತಿ ಗೌಡ್, ಶ್ರೀಚರಣಿ, ಶ್ರೇಯಾಂಕಾ ಪಾಟೀಲ, ಕಶ್ವೀ ಗೌತಮ್, ಭಾರತಿ ಫೂಲ್ಮಲಿ, ಉಮಾ ಚೆಟ್ರಿ (ವಿಕೆಟ್ ಕೀಪರ್) ಮತ್ತು ಅನುಷ್ಕಾ ಶರ್ಮಾ.

ವಿಲಿಯಮ್ಸ್ ಪದಾರ್ಪಣೆ ಸಾಧ್ಯತೆ



ನವದೆಹಲಿ (ಪಿಟಿಐ): ಆಸ್ಟ್ರೇಲಿಯಾ ಸಂಜಾತ ರಯಾನ್ ವಿಲಿಯಮ್ಸ್ ಅವರ ಬಹುನಿರೀಕ್ಷಿತ ಭಾರತ ತಂಡದ ಪದಾರ್ಪಣೆ ಈಗ ಸಾಕಾರಗೊಳ್ಳುವ ಹಾದಿಯಲ್ಲಿದೆ. ಕೊಚ್ಚಿಯಲ್ಲಿ ಇದೇ 31ರಂದು ಹಾಂಗ್‌ಕಾಂಗ್ ವಿರುದ್ಧ ನಡೆಯಲಿರುವ ಎಎಫ್‌ಸಿ ಏಷ್ಯನ್ ಕಪ್ 2027ರ ಅರ್ಹತಾ ಪಂದ್ಯಕ್ಕೆ ಪ್ರಕಟಿಸಲಾಗಿರುವ ಭಾರತ ತಂಡದಲ್ಲಿ ವಿಲಿಯಮ್ಸ್ ಸ್ಥಾನ ಪಡೆದಿದ್ದಾರೆ.

31 ವರ್ಷದ ಫಾರ್ವರ್ಡ್ ಆಟಗಾರನಿಗೆ ಭಾರತ ತಂಡದ ಪರ ಆಡಲು ಫಿಫಾ ಫೆಬ್ರುವರಿಯಲ್ಲಿ ಅನುಮತಿ ನೀಡಿದೆ. ಇದರಿಂದ ಅವರು ಅಂತರ ರಾಷ್ಟ್ರೀಯ ಮಟ್ಟದಲ್ಲಿ ಭಾರತ ತಂಡವನ್ನು ಪ್ರತಿನಿಧಿಸಲು ಇದ್ದ ತಾಂತ್ರಿಕ ಅಡೆತಡೆಗಳು ನಿವಾರಣೆಯಾಗಿವೆ.

ಅವರು ಆಡುವ ಅವಕಾಶ ಪಡೆದಲ್ಲಿ ಭಾರತ ತಂಡಕ್ಕೆ ಆಡಿದ ಎರಡನೇ ವಿದೇಶಿ ಸಂಜಾತ ಆಟಗಾರ ಎನಿಸಲಿದ್ದಾರೆ. ಜಪಾನ್‌ನಲ್ಲಿ ಜನಿಸಿದ್ದ ಅರಾಟಾ ಇಝುಮಿ ಈ ಹಿಂದೆ 2013 –2014ರ ಅವಧಿಯಲ್ಲಿ ಭಾರತ ತಂಡವನ್ನು ಪ್ರತಿನಿಧಿಸಿದ್ದರು. 1993ರಲ್ಲಿ ಪರ್ತ್‌ನಲ್ಲಿ ಜನಿಸಿದ ವಿಲಿಯಮ್ಸ್ ಅವರು 2012ರಲ್ಲಿ ಆಸ್ಟ್ರೇಲಿಯಾ ಯುವ ತಂಡಕ್ಕೆ ಆಡುವ ಮೂಲಕ ಅಂತರರಾಷ್ಟ್ರೀಯ ಮಟ್ಟದಲ್ಲಿ ಪದಾರ್ಪಣೆ ಮಾಡಿದ್ದರು.

ತಂಡ: ಗೋಲ್‌ಕೀಪರ್ಸ್: ಅಲ್ಬಿನೊ ಗೋಮ್ಸ್, ಗುರುಪ್ರೀತ್ ಸಿಂಗ್ ಸಂಧು, ವಿಶಾಲ್ ಕೈತ್. ಡಿಫೆಂಡರ್ಸ್: ಅಭಿಷೇಕ್ ಸಿಂಗ್, ಆಕಾಶ್ ಮಿಶ್ರಾ, ಅನ್ವರ್ ಅಲಿ, ಬಿಜೊಯ್ ವರ್ಗೀಸ್, ನಿಖಿಲ್ ಪೂಜಾರಿ, ರಾಹುಲ್ ಭೆಕೆ, ರೋಷನ್ ಸಿಂಗ್ ನವ್ರೊಮ್, ಸಂದೇಶ್ ಜಿಂಗಾನ್. ಮಿಡ್‌ಫೀಲ್ಡರ್ಸ್: ಆಶಿಖ್ ಕುರುಣಿಯಾನ್, ದಾನಿಶ್ ಫರೂಕ್ ಭಟ್, ಜೀಕ್ಸನ್ ಸಿಂಗ್, ಲಾಲೆಂಗ್‌ಮವಿಯಾ ರಾಲ್ಟೆ, ಸಹಲ್ ಅಬ್ದುಲ್ ಸಮದ್. ಫಾರ್ವರ್ಡ್ಸ್: ಎಡ್ಮಂಡ್ ಲಾಲ್ರಿಂಡಿಕ, ಫರೂಖ್ ಚೌಧರಿ, ಲಲಿಯನ್‌ಝುವಲಾ ಛಾಂಗ್ಟೆ, ಲಿಸ್ಟನ್ ಕೊಲಾಕೊ, ಮನ್ವೀರ್ ಸಿಂಗ್, ರಹೀಮ್ ಅಲಿ, ರಯಾನ್ ವಿಲಿಯಮ್ಸ್. ಹೆಡ್ ಕೋಚ್: ಖಾಲಿದ್ ಜಮಿಲ್.

ಆದಿತ್ಯ ಬಿರ್ಲಾ ಒಕ್ಕೂಟದ ತೆಕ್ಕೆಗೆ ಆರ್‌ಸಿಬಿ

ಸುಮಾರು ₹16,706 ಕೋಟಿ ಮೊತ್ತಕ್ಕೆ ಮಾರಾಟವಾದ ಐಪಿಎಲ್ ಫ್ರ್ಯಾಂಚೈಸಿ

ಬೆಂಗಳೂರು (ಪಿಟಿಐ): ಆದಿತ್ಯ ಬಿರ್ಲಾ ಸಮೂಹ (ಎಬಿಜಿ) ನೇತೃತ್ವದ ಒಕ್ಕೂಟವು (ಕನ್ಸೋರ್ಷಿಯಂ) ಸುಮಾರು ₹16,706 ಕೋಟಿ ಮೊತ್ತಕ್ಕೆ ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ಫ್ರ್ಯಾಂಚೈಸಿಯನ್ನು ಖರೀದಿಸಿದೆ.

ವಿರಾಲ್ ಪಟೇಲ್ ಸಿಇಒ ಆಗಿರುವ ಬ್ಲ್ಯಾಕ್‌ಸ್ಟೋನ್ ಇಕ್ವಿಟಿ ಫರ್ಮ್, ಅಮೆರಿಕದ ಹೂಡಿಕೆದಾರ ಡೇವಿಡ್ ಬ್ಲಿಟ್ಜರ್ ಒಡೆತನದ ಬೋಲ್ಟ್ ವೆಂಚರ್ಸ್ ಮತ್ತು ಟೈಮ್ಸ್ ಆಫ್ ಇಂಡಿಯಾ ಮಾಧ್ಯಮ ಸಮೂಹವು ಈ ಒಕ್ಕೂಟದ ಇತರ ಪಾಲುದಾರರಾಗಿವೆ.



ಆರ್‌ಸಿಬಿಯ ಶೇ 100 ರಷ್ಟು ಪಾಲನ್ನು ಖರೀದಿ ಮಾಡಲು ಒಕ್ಕೂಟವು ಯುನೈಟೆಡ್ ಸ್ಪಿರಿಟ್ಸ್ ಲಿಮಿಟೆಡ್ (ಯುಎಸ್‌ಎಲ್) ಜೊತೆ ಒಪ್ಪಂದ ಮಾಡಿಕೊಂಡಿತು. ಇದರಲ್ಲಿ ಪುರುಷರ ಮತ್ತು ಮಹಿಳಾ ತಂಡಗಳೂ ಸೇರಿಕೊಂಡಿವೆ ಎಂದು ಈ ಬೆಳವಣಿಗೆಯನ್ನು ಅನುಸರಿಸುತ್ತಿರುವ ಮೂಲವೊಂದು ಪಿಟಿಐಗೆ ತಿಳಿಸಿದೆ.


ಯುನೈಟೆಡ್ ಸ್ಪಿರಿಟ್ಸ್ ಲಿಮಿಟೆಡ್, ಲಂಡನ್ ಮೂಲದ ಯುಕೆ–ಡಿಯಾಜಿಯೊದ ಅಂಗಸಂಸ್ಥೆಯಾಗಿದೆ. ತಮ್ಮ ವಹಿವಾಟು ಯೋಜನೆಯ ಕೇಂದ್ರ ಭಾಗವಾಗಿಲ್ಲದ ಕಾರಣ ಆರ್‌ಸಿಬಿ ಫ್ರ್ಯಾಂಚೈಸಿಯಿಂದ ಹಿಂದೆಸರಿಯಲು ಯುಎಸ್‌ಎಲ್ ಉದ್ದೇಶಿಸಿತ್ತು.

ಮಾರಾಟ ಒಪ್ಪಂದದ ಪ್ರಕಾರ ಆದಿತ್ಯ ಬಿರ್ಲಾ ಸಮೂಹದ ಆರ್ಯಮನ್ ವಿಕ್ರಮ್ ಬಿರ್ಲಾ ಅವರು ಆರ್‌ಸಿಬಿಯ ನೂತನ ಚೇರ್ಮನ್ ಆಗಲಿದ್ದಾರೆ. ಟೈಮ್ಸ್ ಆಫ್ ಇಂಡಿಯಾದ ಸತ್ಯನ್ ಗಜ್ವಾನಿ ಅವರು ಡೆಪ್ಯೂಟಿ ಚೇರ್ಮನ್ ಆಗಲಿದ್ದಾರೆ.

ಆದರೆ ಬಿಸಿಸಿಐ, ಐಪಿಎಲ್ ಆಡಳಿತ ಮಂಡಳಿ ಮತ್ತು ಮಹಿಳಾ ವಿಭಾಗದ ಡಬ್ಲ್ಯುಪಿಎಲ್ ಮತ್ತು ಭಾರತ ಸ್ಪರ್ಧಾ ಆಯೋಗದಿಂದ ಈ ಒಪ್ಪಂದಕ್ಕೆ ಅನುಮೋದನೆ ಪ್ರಕ್ರಿಯೆ ಇನ್ನೂ ಬಾಕಿ ಉಳಿದಿದೆ.

ಸೊಮಾನಿ ಸಮೂಹಕ್ಕೆ ಆರ್‌ಆರ್

ನವದೆಹಲಿ (ಪಿಟಿಐ): ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯಲ್ಲಿ ಆಡುವ ರಾಜಸ್ಥಾನ ರಾಯಲ್ಸ್ ತಂಡವನ್ನು ಕಾಲ್ ಸೊಮಾನಿ ಸಮೂಹದ ಒಕ್ಕೂಟವು ₹15,290 ಕೋಟಿಗೆ ಖರೀದಿಸಿತು.



2008ರಲ್ಲಿ ಐಪಿಎಲ್ ಆರಂಭವಾದಾಗ ಇದ್ದ ಎಂಟು ತಂಡಗಳಲ್ಲಿ ರಾಜಸ್ಥಾನ ಕೂಡ ಒಂದಾಗಿದೆ. ಅಲ್ಲಿಂದ ಇಲ್ಲಿಯವರೆಗೆ ಬೃಹತ್ ಪ್ರಮಾಣದಲ್ಲಿ ಮೌಲ್ಯ ವೃದ್ಧಿಸಿಕೊಂಡಿದೆ.

ಸೊಮಾನಿ ಸಮೂಹದ ಒಕ್ಕೂಟದಲ್ಲಿ ವಾಲ್‌ಮಾರ್ಟ್ ಬಳಗದ ರಾಬ್ ವಾಲ್ಟನ್ ಮತ್ತು ಫೋರ್ಡ್ ಮೋಟಾರ್ ಕಂಪೆನಿಯ ಹ್ಯಾಂಪ್ ಕುಟುಂಬ ಸಹಭಾಗಿತ್ವ ಹೊಂದಿವೆ.

ಸೊಮಾನಿ ಅವರು ತಂತ್ರಜ್ಞಾನ ಕ್ಷೇತ್ರದ ನವೋದ್ಯಮಿಯಾಗಿದ್ದಾರೆ. ಇಂಟ್ರಾಎಡ್ಜ್ (ಟೆಕ್ನಾಲಜಿ ಸರ್ವಿಸಸ್ ಮತ್ತು ಸಲ್ಯೂಷನ್ಸ್), ಟ್ರುಯೊ ಡಾಟ್ ಎಐ (ಡಾಟಾ ಪ್ರೈವೆಸಿ ರೈಟ್ಸ್ ಮತ್ತು ಎಐ ಗವರ್ನೆನ್ಸ್) ಹಾಗೂ ಅಕಾಡೆಮಿಯನ್ (ಎಡ್‌ಟೆಕ್ ಸರ್ವಿಸಸ್) ಸಂಸ್ಥಾಪಕರಾಗಿದ್ದಾರೆ.

ರಾಜಸ್ಥಾನ ರಾಯಲ್ಸ್ ತಂಡವನ್ನು ಖರೀದಿಸಲು ಇನ್ನೂ ಕೆಲವು ದೊಡ್ಡ ಉದ್ಯಮ ಸಂಸ್ಥೆಗಳು ಪೈಪೋಟಿ ನಡೆಸಿದ್ದವು. ಟೈಮ್ಸ್ ಇಂಟರ್‌ನೆಟ್ ನೇತೃತ್ವದ ಒಕ್ಕೂಟ, ಆದಿತ್ಯ ಬಿರ್ಲಾ ಸಮೂಹ, ಮಿತ್ತಲ್ ಕುಟುಂಬದ ನೇತೃತ್ವದ ಅರ್ಸೆಲರ್ ಮಿತ್ತಲ್ ಸಿ.ಇ.ಒ ಆದಿತ್ಯ ಮಿತ್ತಲ್ ಸ್ಪರ್ಧೆಯಲ್ಲಿದ್ದರು.

ಸೊಮಾನಿ ರಾಜಸ್ಥಾನ ರಾಯಲ್ಸ್ ಖರೀದಿಗೆ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯು ಇನ್ನಷ್ಟೇ ಅನುಮೋದನೆ ನೀಡಬೇಕಿದೆ. ಪ್ರಸ್ತುತ ಐಪಿಎಲ್ ಟೂರ್ನಿ ನಂತರ ಬಿಸಿಸಿಐ ಅನುಮೋದನೆ ನೀಡುವ ಸಾಧ್ಯತೆ ಇದೆ.

‘ಕೆಲವು ವರ್ಷಗಳ ಹಿಂದೆ ಹೊಸದಾಗಿ ಸೇರ್ಪಡೆಯಾದ ಲಖನೌ ಸೂಪರ್ ಜೈಂಟ್ಸ್ ಮೌಲ್ಯಕ್ಕೆ ಹೋಲಿಸಿದರೆ ರಾಜಸ್ಥಾನ ಪಡೆದಿರುವುದು ಬಹುದೊಡ್ಡ ಮೊತ್ತ. ಇದು ಅದ್ಭುತ ಬೆಳವಣಿಗೆ’ ಎಂದು ಐಪಿಎಲ್ ಅಧಿಕಾರಿಯೊಬ್ಬರು ಹೇಳಿದರು. ಲಖನೌ ತಂಡವು 2021ರಲ್ಲಿ ₹ 7000 ಕೋಟಿಗೆ ಬಿಡ್ ಆಗಿತ್ತು. ರಾಜಸ್ಥಾನ ತಂಡ 2008ರಲ್ಲಿ ಎಮರ್ಜಿಂಗ್ ಮೀಡಿಯಾ ಕಂಪೆನಿಗೆ ₹630 ಕೋಟಿಗೆ ಮಾರಾಟವಾಗಿತ್ತು.



ಆರ್‌ಸಿಬಿ ತಂಡದ ವಿಕೆಟ್‌ಕೀಪರ್ ಜಿತೇಶ್ ಶರ್ಮಾ ಅವರು ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಮಂಗಳವಾರ ಅಭ್ಯಾಸ ನಡೆಸಿದರು ಚಿತ್ರ: ಆರ್‌ಸಿಬಿ ‘ಎಕ್ಸ್’ ಖಾತೆ

‘ಜನದಟ್ಟಣೆ ನಿರ್ವಹಣೆ ವ್ಯವಸ್ಥೆಗೆ ₹7 ಕೋಟಿ ಖರ್ಚು’

ಬೆಂಗಳೂರು: ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಜನದಟ್ಟಣೆ ನಿರ್ವಹಣೆ ಮೂಲಸೌಲಭ್ಯಗಳನ್ನು ಅಭಿವೃದ್ಧಿಪಡಿಸಲು ಸುಮಾರು ಏಳು ಕೋಟಿ ರೂಪಾಯಿಗಳನ್ನು ವಿನಿಯೋಗಿಸಲಾಗಿದೆ ಎಂದು ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಸಿಇಒ ರಾಜೇಶ್ ಮೆನನ್ ಹೇಳಿದರು.

‘ಪ್ರೇಕ್ಷಕರ ಸುರಕ್ಷತೆ ನಮ್ಮ ಮೊದಲ ಆದ್ಯತೆ. ಅದಕ್ಕಾಗಿ ಕ್ರೀಡಾಂಗಣದಲ್ಲಿ ಅತ್ಯಾಧುನಿಕ ಮೂಲಸೌಲಭ್ಯಗಳನ್ನು ಅಭಿವೃದ್ಧಿಪಡಿಸಲಾಗಿದೆ. 350 ಕೃತಕ ಬುದ್ಧಿಮತ್ತೆ (ಎ.ಐ) ಆಧಾರಿತ ಸಿ.ಸಿ.ಟಿ.ವಿ ಕ್ಯಾಮೆರಾಗಳನ್ನು ಅಳವಡಿಸಲಾಗಿದೆ. ಮೈದಾನದ ಒಳಗೆ, ಹೊರಗೆ ಮತ್ತು ಸುತ್ತಮುತ್ತಲಿನ ಪ್ರದೇಶದ ಚಲನವಲನಗಳನ್ನು ಈ ಕ್ಯಾಮೆರಾಗಳು ದಾಖಲಿಸಲಿವೆ. ಝೂರ್ವಿಸ್ ಎ.ಐ ಟೂಲ್ ಮೂಲಕ ಇವು ಕಾರ್ಯನಿರ್ವಹಿಸುತ್ತವೆ. ಸಣ್ಣಪುಟ್ಟ ಮಾಹಿತಿಗಳ ಅಲರ್ಟ್ ಕೊಡಬಲ್ಲ ಸಾಮರ್ಥ್ಯ ಹೊಂದಿವೆ. ಅಲ್ಲದೇ ಬ್ಯಾಗೇಜ್ ಸ್ಕ್ಯಾನರ್‌ಗಳು ಮತ್ತು ಕಮಾಂಡ್ ಸೆಂಟರ್‌ಗಳನ್ನು ನಿರ್ವಹಿಸಲಾಗುತ್ತಿದೆ’ ಎಂದು ಮಂಗಳವಾರ ಸುದ್ದಿಗಾರರಿಗೆ ತಿಳಿಸಿದರು.

‘ಸಿ.ಸಿ.ಟಿ.ವಿ ವ್ಯವಸ್ಥೆಯು ಪ್ರತಿಕ್ಷಣದ ಮಾಹಿತಿಯನ್ನು ಒದಗಿಸುತ್ತದೆ. ಮೈದಾನದಲ್ಲಿ ನಡೆಯುವ ಪ್ರತಿಯೊಂದು ಬೆಳವಣಿಗೆ ಪೊಲೀಸ್ ಆಯುಕ್ತರ ಕಚೇರಿಯಲ್ಲಿರುವ ಮಾನಿಟರ್‌ನಲ್ಲಿಯೂ ಕಾಣಿಸಿಕೊಳ್ಳಲಿದೆ. ಏಕಕಾಲಕ್ಕೆ ಪೊಲೀಸ್ ಕಚೇರಿಗೂ ಮಾಹಿತಿ ಲಭ್ಯವಾಗಲಿದೆ’ ಎಂದರು.

‘ಬಿಸಿಸಿಐ, ಕೆಎಸ್‌ಸಿಎ ಮತ್ತು ಆರ್‌ಸಿಬಿ ಮಧ್ಯೆ ಹೊಸ ಒಪ್ಪಂದವಾಗಿದೆ. ಅದರ ಅನ್ವಯ ಕೆಎಸ್‌ಸಿಎ ಕೂಡ ಫ್ರ್ಯಾಂಚೈಸಿಯೊಂದಿಗೆ ಮುಖ್ಯ ಆಯೋಜಕ ಸಂಸ್ಥೆಯಾಗಲಿದೆ. ಎರಡೂ ಸಂಸ್ಥೆಗಳೂ ಸೇರಿ ಮಾರ್ಗಸೂಚಿ ಮತ್ತು ಶಿಷ್ಟಾಚಾರಗಳನ್ನು ಜಾರಿಗೊಳಿಸುತ್ತವೆ. ಸರ್ಕಾರವು ನೀಡಿರುವ ಮಾರ್ಗಸೂಚಿಯ ಪಾಲನೆಯನ್ನು ಮಾಡುವುದು ಉಭಯ ಸಂಸ್ಥೆಗಳ ಹೊಣೆಯಾಗಿದೆ’ ಎಂದು ಹೇಳಿದರು.

‘ಚಿನ್ನಸ್ವಾಮಿ ಕ್ರೀಡಾಂಗಣದ ಪಂದ್ಯಗಳಲ್ಲಿ 11 ಆಸನ ಖಾಲಿ ಬಿಡುತ್ತೇವೆ’

ಬೆಂಗಳೂರು: ಹೋದ ವರ್ಷ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ವಿಜಯೋತ್ಸವ ಸಂದರ್ಭದಲ್ಲಿ ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಸಂಭವಿಸಿದ್ದ ಕಾಲ್ತುಳಿತದಲ್ಲಿ 11 ಅಭಿಮಾನಿಗಳು ಸಾವಿಗೀಡಾಗಿದ್ದರು. ಅವರ ಗೌರವಾರ್ಥ ಈ ವರ್ಷ ನಡೆಯಲಿರುವ ಪಂದ್ಯಗಳಲ್ಲಿ 11 ಆಸನಗಳನ್ನು ಖಾಲಿ ಉಳಿಸಲಾಗುವುದು ಎಂದು ಆರ್‌ಸಿಬಿ ಪ್ರಕಟಿಸಿದೆ.

ಹೋದವರ್ಷದ ಜೂನ್ 4ರಂದು ಕಾಲ್ತುಳಿತ ಘಟನೆ ನಡೆದಿತ್ತು. ಅದರಿಂದಾಗಿ ವಿಜಯೋತ್ಸವ ನಿರ್ವಹಣೆಯ ಬಗ್ಗೆ ಆರ್‌ಸಿಬಿಯು ಬಹಳಷ್ಟು ಟೀಕೆಗಳನ್ನು ಎದುರಿಸಿತ್ತು. ಅಲ್ಲಿಂದ ಇಲ್ಲಿಯವರೆಗೆ ಈ ಕ್ರೀಡಾಂಗಣದಲ್ಲಿ ಯಾವುದೇ ಪಂದ್ಯಗಳ ಆಯೋಜನೆಗೂ ರಾಜ್ಯ ಸರ್ಕಾರ ಅನುಮತಿ ನೀಡಿರಲಿಲ್ಲ. ನ್ಯಾಯಮೂರ್ತಿ ಮೈಕೆಲ್ ಡಿ ಕುನ್ಹಾ ನೇತೃತ್ವದ ನಿಯೋಗವು ಕ್ರೀಡಾಂಗಣದಲ್ಲಿ ಕೆಲವು ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಬೇಕು ಮತ್ತು ನವೀಕರಣ ಮಾಡಬೇಕು ಎಂಬ ಶಿಫಾರಸು ಮಾಡಿತ್ತು. ಅದರ ಪ್ರಕಾರ ಈಚೆಗೆ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯು ಪ್ರವೇಶದ್ವಾರ, ಸ್ಟ್ಯಾಂಡ್‌ಗಳ ನವೀಕರಣ ಕಾರ್ಯ ಕೈಗೊಂಡಿತ್ತು. ಕೆಲವು ದಿನಗಳ ಹಿಂದೆ ಸರ್ಕಾರವು ಇಲ್ಲಿ ಐಪಿಎಲ್ ಪಂದ್ಯಗಳನ್ನು ನಡೆಸಲು ಅನುಮತಿ ನೀಡಿತ್ತು.

‘ಆ ದುರ್ಘಟನೆಯಲ್ಲಿ ಅಗಲಿದವರು ಸದಾ ನಮ್ಮೊಂದಿಗೆ ಇದ್ದಾರೆ ಎಂಬ ಭಾವನೆ ನಮಗಿದೆ. ಅವರ ಗೌರವಾರ್ಥ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಪಂದ್ಯಗಳು ನಡೆಯುವ ಸಂದರ್ಭದಲ್ಲಿ 11 ಆಸನಗಳನ್ನು ಖಾಲಿ ಬಿಡಲಾಗುವುದು. ಪಂದ್ಯದ ಆರಂಭಕ್ಕೆ ಮುನ್ನ ನಡೆಯುವ ಅಭ್ಯಾಸದ ಸಂದರ್ಭದಲ್ಲಿ ಆರ್‌ಸಿಬಿ ಆಟಗಾರರೆಲ್ಲರೂ 11 ಸಂಖ್ಯೆಯ ಜೆರ್ಸಿ ಧರಿಸುವರು. ತಮ್ಮ ತೋಳಿಗೆ ಕಪ್ಪುಪಟ್ಟಿ ಧರಿಸಿ ಆಡುವರು’ ಎಂದು ಆರ್‌ಸಿಬಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ರಾಜೇಶ್ ಮೆನನ್ ಮಂಗಳವಾರ ನಡೆದ ಸುದ್ದಿಗೋಷ್ಠಿಯಲ್ಲಿ ಹೇಳಿದರು.

ಇದೇ 28ರಂದು ಉದ್ಘಾಟನೆ ಪಂದ್ಯವು ಇಲ್ಲಿ ನಡೆಯಲಿದೆ. ಆರ್‌ಸಿಬಿ ತಂಡವು ಸನ್‌ರೈಸರ್ಸ್ ಹೈದರಾಬಾದ್ ಎದುರು ಕಣಕ್ಕಿಳಿಯಲಿದೆ. ಏಪ್ರಿಲ್ 5ರಂದು ಚೆನ್ನೈ ಸೂಪರ್ ಕಿಂಗ್ಸ್ ತಂಡದ ಎದುರು ಪಂದ್ಯ ನಡೆಯಲಿದೆ.

‘ನಮ್ಮ ತಂಡವು ಈ ಸಲ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಐದು ಪಂದ್ಯಗಳನ್ನು (ಲೀಗ್ ಹಂತ) ಆಡಲಿದೆ. ಇನ್ನೆರಡು ಪಂದ್ಯಗಳನ್ನು ರಾಯಪುರದ ಶಹೀದ್ ವೀರ್ ನಾರಾಯಣ್ ಸಿಂಗ್ ಅಂತರರಾಷ್ಟ್ರೀಯ ಕ್ರಿಕೆಟ್ ಕ್ರೀಡಾಂಗಣದಲ್ಲಿ ಆಡಲಿದೆ. ಬೆಂಗಳೂರಿನಲ್ಲಿ ಪಂದ್ಯಗಳ ಆಯೋಜನೆಗೆ ಅನುಮತಿ ಸಿಗುವುದು ಅನಿಶ್ಚಿತವಾಗಿದ್ದ ಕಾರಣ, ಮುಂಚಿತವಾಗಿ ರಾಯಪುರದಲ್ಲಿ ಪಂದ್ಯಗಳನ್ನು ನಡೆಸಲು ಯೋಜಿಸಿದ್ದೆವು. ಅಲ್ಲಿಯ ಸರ್ಕಾರವೂ ಬಹಳಷ್ಟು ಬೆಂಬಲ ನೀಡಿದೆ’ ಎಂದು ಮೆನನ್ ಹೇಳಿದರು. ‘ಈ ವರ್ಷ ಅನ್‌ಬಾಕ್ಸ್ ಕಾರ್ಯಕ್ರಮ ಆಯೋಜಿಸುವುದಿಲ್ಲ. ಉದ್ಘಾಟನೆ ಕಾರ್ಯಕ್ರಮಗಳು ನಡೆಯಲಿವೆ’ ಎಂದರು.

‘ಕಾಲ್ತುಳಿತದ ಘಟನೆಯ ನಂತರ ಯಾವುದೇ ಸುದ್ದಿಗೋಷ್ಠಿ ಅಥವಾ ಸಾರ್ವಜನಿಕ ಪ್ರಕಟಣೆಗಳನ್ನು ನೀಡಲಿಲ್ಲ. ಅದಕ್ಕೆ ಪ್ರಕರಣ ಕೋರ್ಟ್‌ನಲ್ಲಿದ್ದದ್ದೇ ಕಾರಣ’ ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

ಘಟನೆಯ ಬಗ್ಗೆ ಫ್ರ್ಯಾಂಚೈಸಿಯು ಆಂತರಿಕ ತನಿಖೆ ನಡೆಸುವ ಬಗ್ಗೆ ಕ್ರಮ ತೆಗೆದುಕೊಂಡಿತ್ತೇ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಮೆನನ್, ‘ಇಲ್ಲ. ಸರ್ಕಾರದ ನಾಲ್ಕು ಇಲಾಖೆಗಳು ತನಿಖೆ ನಡೆಸಿದ್ದವು. ಅವರಿಗೆ ನಾವು ಪೂರ್ಣ ಸಹಕಾರ ನೀಡಿದ್ದೇವೆ’ ಎಂದರು.


ಆರ್‌ಸಿಬಿಗೆ ಯಶ್ ದಯಾಳ್ ಅಲಭ್ಯ

ಹೋದ ವರ್ಷದ ಐಪಿಎಲ್‌ನಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಚಾಂಪಿಯನ್ ಆಗುವಲ್ಲಿ ಮಹತ್ವದ ಕಾಣಿಕೆ ನೀಡಿದ್ದ ಎಡಗೈ ವೇಗಿ ಯಶ್ ದಯಾಳ್ ಈ ಸಲ ಕಣಕ್ಕಿಳಿಯುತ್ತಿಲ್ಲ. ‘ಪೋಕ್ಸೊ ಪ್ರಕರಣ’ದ ಆರೋಪ ಎದುರಿಸುತ್ತಿರುವ ಯಶ್ ಅವರು ‘ವೈಯಕ್ತಿಕ ಕಾರಣ’ಗಳಿಂದಾಗಿ ಈ ಸಲದ ಟೂರ್ನಿಯಲ್ಲಿ ಆಡುವುದಿಲ್ಲ. ಆದರೆ ಅವರು ಈಗಲೂ ತಮ್ಮ ತಂಡದ ಭಾಗವಾಗಿದ್ದಾರೆ ಎಂದು ಆರ್‌ಸಿಬಿಯ ನಿರ್ದೇಶಕ ಮೊ ಬೊಬಾಟ್ ಹೇಳಿದ್ದಾರೆ.



ಉತ್ತರ ಪ್ರದೇಶದ 28 ವರ್ಷದ ಯಶ್ ಅವರು ಲೈಂಗಿಕ ದೌರ್ಜನ್ಯ ಎಸಗಿದ್ದಾಗಿ ಇಬ್ಬರು ಮಹಿಳೆಯರು ಕೆಲವು ತಿಂಗಳ ಹಿಂದೆ ದೂರು ನೀಡಿದ್ದರು. ಅದರಲ್ಲಿ ಒಬ್ಬರು ಅಪ್ರಾಪ್ತ ವಯಸ್ಸಿನವರಾಗಿದ್ದರು. ಜೈಪುರ ಪೊಲೀಸ್ ಠಾಣೆಯಲ್ಲಿ ಯಶ್ ಮೇಲೆ ಪೋಕ್ಸೊ (ಲೈಂಗಿಕ ದೌರ್ಜನ್ಯದಿಂದ ಮಕ್ಕಳ ರಕ್ಷಣೆ ಕಾಯಿದೆ) ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ. ಹೋದ ಜುಲೈನಲ್ಲಿ ಎಫ್‌ಐಆರ್ ಕೂಡ ಹಾಕಲಾಗಿದೆ. ಸದ್ಯ ಅವರು ಜಾಮೀನಿನ ಮೇಲೆ ಹೊರಗಿದ್ದಾರೆ. ಕಳೆದ ತಿಂಗಳು ಅವರು ಡಿಜಿಟಲ್ ಇನ್‌ಫ್ಲುಯೆನ್ಸರ್ ಶ್ವೇತಾ ಪುಂಡೀರ ಅವರನ್ನು ಮದುವೆಯಾಗಿದ್ದಾಗಿ ವರದಿಯಾಗಿತ್ತು. ಆರ್‌ಸಿಬಿ ವಿಜಯದಿಂದ ಇಲ್ಲಿಯವರೆಗೂ ಯಶ್ ಅವರು ಯಾವುದೇ ಕ್ರಿಕೆಟ್ ಪಂದ್ಯದಲ್ಲಿಯೂ ಆಡಿಲ್ಲ.

‘ಯಶ್ ಅವರು ಈ ಬಾರಿ ಟೂರ್ನಿಯಲ್ಲಿ ಆಡದಿದ್ದರೂ, ತಂಡದ ಭಾಗವಾಗಿ ಉಳಿಯಲಿದ್ದಾರೆ. ಅವರ ಗುತ್ತಿಗೆ ಮುಂದುವರಿಯಲಿದೆ’ ಎಂದು ಬೊಬಾಟ್ ಸುದ್ದಿಗೋಷ್ಠಿಯಲ್ಲಿ ಸ್ಪಷ್ಟಪಡಿಸಿದರು.



ಅದ್ಭುತ ಪುನರ್ಮಿಲನ ಸಂಗೀತ ಕಚೇರಿಯೊಂದಿಗೆ ಕೊರಿಯನ್ ಮೆಗಾಸ್ಟಾರ್‌ಗಳು ವೈಭವಯುತವಾಗಿ ಪುನರಾಗಮನ ಮಾಡಿದ್ದಾರೆ!

4 ನಿಮಿಷಗಳಲ್ಲಿ ಟಿಕೆಟ್ ಮಾರಾಟ

ಬೆಂಗಳೂರು: ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಟಿಕೆಟ್‌ಗಳು ‘ಬಿಸಿ ದೋಸೆ’ಗಿಂತಲೂ ಬೇಗ ಮಾರಾಟವಾಗುತ್ತವೆ ಎಂಬುದು ಮತ್ತೊಮ್ಮೆ ಸಾಬೀತಾಯಿತು. ಇದೇ 28ರಂದು ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯಲಿರುವ ಆರ್‌ಸಿಬಿ ಮತ್ತು ಸನ್‌ರೈಸರ್ಸ್ ಹೈದರಾಬಾದ್ ತಂಡಗಳ ನಡುವಣ ಪಂದ್ಯದ ಟಿಕೆಟ್ ಆನ್‌ಲೈನ್‌ನಲ್ಲಿ ಕೇವಲ ನಾಲ್ಕು ನಿಮಿಷಗಳಲ್ಲಿ ಬಿಕರಿಯಾದವು.

ಮಂಗಳವಾರ ಸಂಜೆ 4 ಗಂಟೆಗೆ ಆರ್‌ಸಿಬಿಯ ಅಧಿಕೃತ ವೆಬ್‌ಸೈಟ್ ಮತ್ತು ಮೊಬೈಲ್ ಆ್ಯಪ್ ಮೂಲಕ ಮಾರಾಟ ಆರಂಭವಾಯಿತು. ಆದರೆ ಕೇವಲ ನಾಲ್ಕು ನಿಮಿಷಗಳಲ್ಲಿಯೇ ಟಿಕೆಟ್‌ಗಳು ‘ಸೋಲ್ಡ್’ ಎಂಬ ಸಂದೇಶ ಬಂದಿತು.

ಹೋದ ವರ್ಷ ಟೂರ್ನಿಯ 18ನೇ ಆವೃತ್ತಿಯಲ್ಲಿ ಆರ್‌ಸಿಬಿ ಚಾಂಪಿಯನ್ ಆಗಿತ್ತು. 17 ವರ್ಷಗಳಿಂದ ಪ್ರಶಸ್ತಿಗಾಗಿ ಕಾದಿದ್ದ ಅಭಿಮಾನಿಗಳು ಸಂಭ್ರಮಿಸಿದ್ದರು.

‘ನಾವು ಬಹಳ ಕಾತುರದಿಂದ ಕಾಯುತ್ತಿದ್ದೆವು. ಹಲವು ತಿಂಗಳ ನಂತರ ಮತ್ತೆ ನೆಚ್ಚಿನ ತಂಡವನ್ನು ಆಡುವುದನ್ನು ನೋಡಲು ಖುಷಿಯಾಗುತ್ತಿದೆ’ ಎಂದು ‘ನಮ್ಮ ಟೀಮ್ ಆರ್‌ಸಿಬಿ’ ಅಭಿಮಾನಿಗಳ ಗುಂಪಿನ ಪ್ರೀತಮ್ ಕರಿಗಾರ್ ಹೇಳಿದರು.

‘ಕೆಲವೇ ಕ್ಷಣಗಳಲ್ಲಿ ಟಿಕೆಟ್‌ಗಳು ಖರ್ಚಾಗಿವೆ. ನಾವು ಉದ್ಘಾಟನೆ ಕಾರ್ಯಕ್ರಮ ಮತ್ತು ಪಂದ್ಯವನ್ನು ನೋಡಲು ಕಾತರದಿಂದ ಕಾಯುತ್ತಿದ್ದೆವು. ಪ್ರತಿ ಬಾರಿ ಆರ್‌ಸಿಬಿಯು ಫ್ಯಾನ್ ಗ್ರೂಪ್‌ಗಳಿಗೆ ಒಂದಿಷ್ಟು ಟಿಕೆಟ್‌ಗಳನ್ನು ನೀಡುತ್ತಿತ್ತು. ಆದರೆ ಈ ಬಾರಿ ನಮಗೆ ಸಿಕ್ಕಿಲ್ಲ’ ಎಂದು ‘ಆರ್‌ಸಿಬಿ ಫ್ಯಾನ್ ಆರ್ಮಿ’ಯ ಆದಿತ್ಯ ಭಾರದ್ವಾಜ್ ಹೇಳಿದರು.

ಆರ್‌ಸಿಬಿ ಟಿಕೆಟ್ ಲಭಿಸದ ಬಗ್ಗೆ ಸಾಮಾಜಿಕ ಜಾಲತಾಣಗಳಲ್ಲಿ ಹಲವರು ಬೇಸರ ವ್ಯಕ್ತಪಡಿಸಿದ್ದಾರೆ.

ಆನ್‌ಲೈನ್ ಟಿಕೆಟ್– ಕ್ಯೂಆರ್ ಕೋಡ್

ಈ ಸಲ ಪೇಪರ್ ಟಿಕೆಟ್‌ಗಳು ಇರುವುದಿಲ್ಲ. ಎಂ ಟಿಕೆಟ್ ನೀಡಲಾಗುವುದು. ಮೊಬೈಲ್ ಮೂಲಕ ಕ್ಯೂಆರ್ ಕೋಡ್ ಟಿಕೆಟ್ ಲಭ್ಯವಾಗಲಿವೆ. ಅವುಗಳನ್ನು ಪ್ರವೇಶ ದ್ವಾರಗಳಲ್ಲಿ ಸ್ಕ್ಯಾನ್ ಮಾಡಿದರೆ ಪ್ರವೇಶ ದೊರೆಯುತ್ತದೆ.



ಎಂ–ಟಿಕೆಟ್ ಮಾದರಿ

ಕ್ರೀಡಾಂಗಣದ ಪ್ರವೇಶದ್ವಾರಗಳು ತೆರೆಯುವ ಐದು ತಾಸು ಮೊದಲು ಈ ಕ್ಯೂಆರ್ ಕೋಡ್‌ಗಳು ಕಾರ್ಯೋನ್ಮುಖವಾಗುತ್ತವೆ.

‘ಪಂದ್ಯದ ಟಿಕೆಟ್‌ಗಳನ್ನು ಆರ್‌ಸಿಬಿ ವೆಬ್‌ಸೈಟ್ ಅಥವಾ ಮೊಬೈಲ್ ಆ್ಯಪ್ ಮೂಲಕ ಮಾತ್ರ ಮಾರಾಟ ಮಾಡಲಾಗುತ್ತಿದೆ. ಇದೇ ಟಿಕೆಟ್‌ನಲ್ಲಿ ಕ್ರೀಡಾಂಗಣದವರೆಗೆ ಮೆಟ್ರೊ ಮೂಲಕ ಉಚಿತವಾಗಿ ಬರಬಹುದು. ಎಂ.ಜಿ. ರಸ್ತೆ ಮತ್ತು ಕಬ್ಬನ್ ಪಾರ್ಕ್ ಮೆಟ್ರೊ ನಿಲ್ದಾಣಗಳಲ್ಲಿ ಇಳಿಯುವ ವ್ಯವಸ್ಥೆ ಇದೆ. ಪಂದ್ಯದ ದಿನ ಹೆಚ್ಚುವರಿ ರೈಲುಗಳ ಸೇವೆ ಇರಲಿದೆ. ಪ್ರೇಕ್ಷಕರು ಅದಷ್ಟು ತಮ್ಮ ವಾಹನಗಳ ಬದಲಿಗೆ ಮೆಟ್ರೊ ಬಳಸಿದರೆ ಹೆಚ್ಚು ಅನುಕೂಲ’ ಎಂದು ಪೊಲೀಸ್ ಆಯುಕ್ತ ಸಿಮಂತ್ ಕುಮಾರ್ ಸಿಂಗ್ ಹೇಳಿದ್ದಾರೆ.

‘ವಾಹನ ನಿಲುಗಡೆಗಾಗಿ ಗರುಡಾ ಮಾಲ್, ಫ್ರೀಡಂ ಪಾರ್ಕ್, ಸೇಂಟ್ ಜೋಸೆಫ್ ಇಂಡಿಯನ್ ಹೈಸ್ಕೂಲ್ ನಲ್ಲಿ ವ್ಯವಸ್ಥೆ ಕಲ್ಪಿಸಲಾಗಿದೆ. ಟಿಕೆಟ್ ಖರೀದಿಸುವ ಸಂದರ್ಭದಲ್ಲಿಯೇ ಪಾರ್ಕಿಂಗ್ ಸ್ಥಳವನ್ನೂ ಕಾದಿರಿಸುವ ವ್ಯವಸ್ಥೆ ಇದೆ. ವಾಹನ ನಿಲುಗಡೆ ಸ್ಥಳದಿಂದ ಮೈದಾನದವರೆಗೆ ಶಟಲ್ ಸರ್ವಿಸ್ ವಾಹನಗಳು ಇರುತ್ತವೆ’ ಎಂದೂ ತಿಳಿಸಿದ್ದಾರೆ.

ಚಿಟಿಕೆ ಸುದ್ದಿ

ಐಪಿಎಲ್‌ನಿಂದ ಹಿಂದೆಸರಿದ ಡಕೆಟ್

ಲಂಡನ್ (ಪಿಟಿಐ): ಇಂಗ್ಲೆಂಡ್‌ನ ಬ್ಯಾಟರ್ ಬೆನ್ ಡಕೆಟ್ ಅವರು ಐಪಿಎಲ್‌ನಿಂದ ಹಿಂದೆಸರಿದಿದ್ದಾರೆ. ಇದರಿಂದಾಗಿ ಅವರಿಗೆ ಎರಡು ವರ್ಷ ಲೀಗ್ ನಿಷೇಧ ಮತ್ತು ಆಕ್ಷನ್‌ನಲ್ಲಿ ಪಾಲ್ಗೊಳ್ಳುವುದಕ್ಕೆ ನಿರ್ಬಂಧದ ಭೀತಿ ಎದುರಾಗಿದೆ.




ಎಡಗೈ ಬ್ಯಾಟರ್ ಡಕೆಟ್ ₹2 ಕೋಟಿ ಮೊತ್ತಕ್ಕೆ ಡೆಲ್ಲಿ ಕ್ಯಾಪಿಟಲ್ಸ್ ಪಾಲಾಗಿದ್ದರು. ‘ಇದು ಕಠಿಣ ನಿರ್ಧಾರ. ದೆಹಲಿಗೆ ಬರಲಾಗದ್ದಕ್ಕೆ ಕ್ಷಮೆಕೇಳಬಯಸುತ್ತೇನೆ’ ಎಂದು ಡಕೆಟ್ ಮಂಗಳವಾರ ‘ಟೆಲಿಗ್ರಾಫ್ ಸ್ಪೋರ್ಟ್’ಗೆ ತಿಳಿಸಿದ್ದಾರೆ.

ಕೆಕೆಆರ್‌ಗೆ ರಿಂಕು ಉಪನಾಯಕ: ಬಿರುಸಿನ ಆಟವಾಡುವ ರಿಂಕು ಸಿಂಗ್ ಅವರನ್ನು ಮೂರು ಬಾರಿಯ ಚಾಂಪಿಯನ್ ಕೋಲ್ಕತ್ತ ನೈಟ್ ರೈಡರ್ಸ್ ತಂಡವು ಉಪನಾಯಕನಾಗಿ ನೇಮಕ ಮಾಡಿದೆ. ಅನುಭವಿ ಬ್ಯಾಟರ್ ಅಜಿಂಕ್ಯ ರಹಾನೆ ನಾಯಕರಾಗಿದ್ದಾರೆ.

ಬಿಎಫ್‌ಸಿ ತಂಡಕ್ಕೆ ಪೆಪ್ ಮುನೋಝ್ ನೂತನ ಕೋಚ್

ಬೆಂಗಳೂರು: ಬೆಂಗಳೂರು ಫುಟ್‌ಬಾಲ್ ಕ್ಲಬ್ (ಬಿಎಫ್‌ಸಿ) ಫ್ರ್ಯಾಂಚೈಸಿಯು ಸ್ಪೇನ್‌ನ ಪೆಪ್ ಮುನೋಝ್ ಅವರನ್ನು ತಂಡದ ಮುಖ್ಯಕೋಚ್ ಆಗಿ ನೇಮಕ ಮಾಡಿದೆ. ಈ ಬಗ್ಗೆ ಶೀಘ್ರದಲ್ಲಿಯೇ ಅಧಿಕೃತವಾಗಿ ಘೋಷಿಸಲಿದೆ ಎಂದು ವರದಿಯಾಗಿದೆ.



ಬಾರ್ಸಿಲೋನಾ ಫುಟ್‌ಬಾಲ್ ಅಕಾಡೆಮಿಯಲ್ಲಿ ಕೋಚ್ ಆಗಿರುವ 46 ವರ್ಷ ವಯಸ್ಸಿನ ಮುನೋಝ್ ಅವರು ಏ.4ರಂದು ಎಫ್‌ಸಿ ಗೋವಾ ವಿರುದ್ಧದ ಪಂದ್ಯಕ್ಕೂ ಮೊದಲು ತಂಡವನ್ನು ಸೇರಿಕೊಳ್ಳಲಿದ್ದಾರೆ.

ಈ ಹಿಂದೆ ಮುಖ್ಯಕೋಚ್ ಆಗಿದ್ದ ಜೆರಾರ್ಡ್ ಝೂರ್ಗೋಝಾ ಅವರು 2025ರ ನವೆಂಬರ್‌ನಲ್ಲಿ ರಾಜೀನಾಮೆ ನೀಡಿದ್ದರು. ಹೀಗಾಗಿ, ಮ್ಯಾನೇಜರ್ ರೆನೆಡಿ ಸಿಂಗ್ ಅವರೇ ಕೋಚ್ ಹೊಣೆಯನ್ನೂ ಹೊತ್ತಿದ್ದರು.

‘ರೆನೆಡಿ ಅವರು ಮ್ಯಾನೇಜರ್ ಆಗಿ ಮುಂದುವರಿಯಲಿದ್ದಾರೆ. ದೀರ್ಘಾವಧಿಗೆ ತಂಡವನ್ನು ಕಟ್ಟುವ ಉದ್ದೇಶದಿಂದ ಮುನೋಝ್ ಅವರನ್ನು ಕೋಚ್ ಆಗಿ ನೇಮಕ ಮಾಡಿಕೊಳ್ಳಲಾಗಿದೆ’ ಎಂದು ಬಿಎಫ್‌ಸಿಯ ಅಧಿಕಾರಿಯೊಬ್ಬರು ತಿಳಿಸಿದರು.

ಐಪಿಎಲ್: ನಾಯಕರ ಜತೆ ಬಿಸಿಸಿಐ ಸಭೆ ಇಂದು

ಮುಂಬೈ (ಪಿಟಿಐ): ಇಂಪ್ಯಾಕ್ಟ್ ಪ್ಲೇಯರ್ ನಿಯಮ ಹಾಗೂ ನೀತಿಸಂಹಿತೆಯ ಬಗ್ಗೆ ಚರ್ಚಿಸಲು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯು (ಬಿಸಿಸಿಐ) ಇಂಡಿಯನ್ ಪ್ರೀಮಿಯರ್ ಲೀಗ್‌ನಲ್ಲಿ ಆಡುವ ಎಲ್ಲ 10 ತಂಡಗಳ ನಾಯಕರ ಸಭೆಯನ್ನು ಬುಧವಾರ ಕರೆದಿದೆ.



19ನೇ ಆವೃತ್ತಿಯ ಐಪಿಎಲ್ ಟೂರ್ನಿಯು ಇದೇ 28ರಂದು ಆರಂಭಗೊಳ್ಳಲಿದ್ದು, ಇದಕ್ಕೆ ಪೂರ್ವಭಾವಿಯಾಗಿ ಈ ಸಭೆ ನಡೆಯಲಿದೆ. ಭಾರತದ ಮ್ಯಾಚ್ ರೆಫರಿ ಪ್ಯಾನೆಲ್ ಮುಖ್ಯಸ್ಥ ಜಾವಗಲ್ ಶ್ರೀನಾಥ್ ಹಾಗೂ ಅಂಪೈರ್ಸ್ ಪ್ಯಾನೆಲ್ ಮುಖ್ಯಸ್ಥ ನಿತಿನ್ ಮೆನನ್ ಅವರು ಸಭೆಯಲ್ಲಿ ಮಾರ್ಗದರ್ಶನ ನೀಡಲಿದ್ದಾರೆ.

‘ಈ ಬಾರಿಯ ಐಪಿಎಲ್‌ನಲ್ಲಿ ಹೊಸ ನಿಯಮಗಳೇನೂ ಜಾರಿಯಾಗುತ್ತಿಲ್ಲ. ಆದರೆ, ಕೆಲ ತಂಡಗಳ ನಾಯಕರು ಹಾಗೂ ಕೋಚ್‌ಗಳು ಮೊದಲ ಬಾರಿ ಜವಾಬ್ದಾರಿ ಹೊತ್ತಿದ್ದಾರೆ. ಹೀಗಾಗಿ, ಟೂರ್ನಿಯ ನಿಯಮಗಳ ಬಗ್ಗೆ ಅವರಿಗೆ ತಿಳಿಸುವುದು ನಮ್ಮ ಜವಾಬ್ದಾರಿ ಆಗಿದೆ’ ಎಂದು ಬಿಸಿಸಿಐ ಅಧಿಕಾರಿಯೊಬ್ಬರು ತಿಳಿಸಿದರು.



